ಶುಕ್ರವಾರ, ಸೆಪ್ಟೆಂಬರ್ 3, 2021 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಳೂವರೆ ತಿಂಗಳು ಕಳೆದರೂ ಶೇ 50ಕ್ಕಿಂತ ಕಡಿಮೆ ಸಾಧನೆ

ಲಸಿಕೆ: 9 ಜಿಲ್ಲೆಗಳು ಹಿಂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಯಲ್ಲಿ ರಾಜ್ಯದ 9 ಜಿಲ್ಲೆಗಳು ಹಿಂದೆ ಬಿದ್ದಿದ್ದು, ಲಸಿಕಾ ಅಭಿಯಾನ ಪ್ರಾರಂಭವಾಗಿ ಏಳೂವರೆ ತಿಂಗಳು ಕಳೆದರೂ ಶೇ 50ರಷ್ಟು ಗುರಿ ಸಾಧನೆ ಸಾಕಾರವಾಗಿಲ್ಲ.

ಕಳೆದ ಜ.16ರಿಂದ ರಾಜ್ಯದಲ್ಲಿ ಲಸಿಕಾ ಅಭಿಯಾನ ಆರಂಭವಾಗಿದೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಎರಡು ವಾರಗಳಿಂದ ಲಸಿಕೆ ವಿತರಣೆಗೆ ವೇಗ ನೀಡಲಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿ ಬುಧವಾರ 15 ಲಕ್ಷ ಹಾಗೂ ಉಳಿದ ದಿನ 6 ಲಕ್ಷ ಡೋಸ್‌ಗಳನ್ನು ವಿತರಿಸುವ ಗುರಿಯನ್ನು ಆರೋಗ್ಯ ಇಲಾಖೆ ಹಾಕಿಕೊಂಡಿದೆ. ಕಳೆದ ಒಂದು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 3 ಲಕ್ಷ ಡೋಸ್‌ಗಳನ್ನು ವಿತರಿಸಲಾಗಿದೆ. ಇಷ್ಟಾಗಿಯೂ ಕಲಬುರ್ಗಿ, ಹಾವೇರಿ ಸೇರಿದಂತೆ ಕೆಲವೊಂದು ಜಿಲ್ಲೆಗಳು ಲಸಿಕೆ ವಿತರಣೆಯಲ್ಲಿ ಹಿಂದುಳಿದಿವೆ.

4 ಜಿಲ್ಲೆಗಳಲ್ಲಿ ಉತ್ತಮ ಸಾಧನೆ

ಈವರೆಗೆ ಲಸಿಕೆ ವಿತರಣೆಯನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದ್ದು, ಬೆಂಗಳೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಶೇ 70ಕ್ಕೂ ಅಧಿಕ ಸಾಧನೆಯಾಗಿದೆ. ಉಡುಪಿಯಲ್ಲಿ ಶೇ 78.72, ಕೊಡಗಿನಲ್ಲಿ ಶೇ 77.38, ಬೆಂಗಳೂರಿನಲ್ಲಿ ಶೇ 75.92 ಹಾಗೂ ರಾಮನಗರದಲ್ಲಿ ಶೇ 72.99ರಷ್ಟು ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಈವರೆಗೆ ಶೇ 50.01ರಷ್ಟು ಮಂದಿ ಮಾತ್ರ ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ ಶೇ 16.2ರಷ್ಟು ಮಂದಿ ಎರಡನೇ ಡೋಸ್ ಲಸಿಕೆ ಪೂರ್ಣಗೊಳಿಸಿದ್ದಾರೆ. ಈವರೆಗೆ 4.38 ಕೋಟಿ ಡೋಸ್ ಲಸಿಕೆಯನ್ನು ವಿತರಿಸಲಾಗಿದೆ. 3.30 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದರೇ, 1.07 ಕೋಟಿ ಮಂದಿ ಎರಡನೆ ಡೋಸ್ ಲಸಿಕೆಯನ್ನು ಪಡೆದಿದ್ದಾರೆ.

21 ಜಿಲ್ಲೆಗಳಲ್ಲಿ ಶೇ 50ಕ್ಕೂ ಅಧಿಕ: ಕಲಬುರ್ಗಿಯಲ್ಲಿ ಶೇ 36.53, ರಾಯಚೂರಿನಲ್ಲಿ ಶೇ 38.60, ಯಾದಗಿರಿಯಲ್ಲಿ ಶೇ 41.74, ವಿಜಯಪುರದಲ್ಲಿ ಶೇ 43.24, ಬಳ್ಳಾರಿಯಲ್ಲಿ ಶೇ 44.95, ಹಾವೇರಿಯಲ್ಲಿ ಶೇ 46.45, ಕೊಪ್ಪಳದಲ್ಲಿ ಶೇ 47.79, ಬಾಗಲಕೋಟೆಯಲ್ಲಿ ಶೇ 48.47 ಹಾಗೂ ಬೀದರ್‌ನಲ್ಲಿ ಶೇ 48.62ರಷ್ಟು ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಉಳಿದ 21 ಜಿಲ್ಲೆಗಳಲ್ಲಿ ಶೇ 50ಕ್ಕಿಂತ ಅಧಿಕ ಸಾಧನೆಯಾಗಿದೆ.

'ವರ್ಷಾಂತ್ಯದೊಳಗೆ ಎಲ್ಲರಿಗೂ ಲಸಿಕೆ ಒದಗಿಸುವ ಗುರಿಯನ್ನು ಹಾಕಿಕೊಳ್ಳಲಾಗಿದ್ದು, ಲಸಿಕಾ ಮೇಳವನ್ನು ನಡೆಸಲಾಗುತ್ತಿದೆ. 5 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಪ್ರತಿನಿತ್ಯ ಲಸಿಕೆಯನ್ನು ನೀಡಲಾಗುತ್ತಿದೆ. ಜನಸಂಖ್ಯೆಯ ಆಧಾರದಲ್ಲಿ ಜಿಲ್ಲೆಗಳಿಗೆ ಲಸಿಕೆಯನ್ನು ಹಂಚಿಕೆ ಮಾಡಲಾಗುತ್ತಿದೆ. ಎರಡನೇ ಡೋಸ್‌ಗೆ ಆದ್ಯತೆ ನೀಡಲಾಗಿದ್ದು, ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಲಸಿಕೆ ಬಗ್ಗೆ ಜಾಗೃತಿ ಕೊರತೆಯಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ–ಅಂಶಗಳು

2.18 ಕೋಟಿ
18ರಿಂದ 44 ವರ್ಷದವರಿಗೆ ವಿತರಿಸಿದ ಡೋಸ್‌ಗಳು

1.31 ಕೋಟಿ
45ರಿಂದ 60 ವರ್ಷದವರಿಗೆ ವಿತರಿಸಿದ ಡೋಸ್‌ಗಳು

88.89 ಲಕ್ಷ
60 ವರ್ಷ ಮೇಲ್ಪಟ್ಟವರಿಗೆ ವಿತರಿಸಿದ ಡೋಸ್‌ಗಳು

'ಇನ್ಫೊಸಿಸ್ ಸ್ಪ್ರಿಂಗ್‌ಬೋರ್ಡ್' ಆ್ಯಪ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025ರ ವೇಳೆಗೆ 1 ಕೋಟಿಗೂ ಅಧಿಕ ವಿದ್ಯಾರ್ಥಿಗಳಿಗೆ ಡಿಜಿಟಲ್ ಮರುಕೌಶಲ ಉಪಕ್ರಮಗಳನ್ನು ವಿಸ್ತರಿಸಲು ಮುಂದಾಗಿರುವ ಇನ್ಫೊಸಿಸ್ ಸಂಸ್ಥೆ, ಇದಕ್ಕಾಗಿ 'ಇನ್ಫೊಸಿಸ್ ಸ್ಪ್ರಿಂಗ್‌ಬೋರ್ಡ್' ಆ್ಯಪ್ ಬಿಡುಗಡೆಗೊಳಿಸಿದೆ.

'ಈ ಆ್ಯಪ್ ಮೂಲಕ 6ನೇ ತರಗತಿಯಿಂದಲೇ ಮಕ್ಕಳಿಗೆ ಜೀವನ ಕೌಶಲಗಳನ್ನು ಕಲಿಸಲಾಗುತ್ತದೆ. ಔಪಚಾರಿಕ ಶಿಕ್ಷಣದ ಜೊತೆಗೆ ಶಾಲಾ, ಕಾಲೇಜು ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ವಯಸ್ಕರಿಗೆ ಡಿಜಿಟಲ್ ಮರುಕೌಶಲ ಕಲಿಸುವುದೂ ಇದರ ಉದ್ದೇಶ. ಕೋರ್ಸೆರಾ ಮತ್ತು ಲರ್ನ್‌ಶಿಪ್ ಸಹಯೋಗದೊಂದಿಗೆ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಆನ್‌ಲೈನ್ ಮೂಲಕ ಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ತಿಳಿಯಲಾಗುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರಗಳನ್ನೂ ನೀಡಲಾಗುತ್ತದೆ. ಮಕ್ಕಳ ಪ್ರಾಯೋಗಿಕ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಈ ಆ್ಯಪ್ ಪ್ಲೇ ಸ್ಟೋರ್ ಹಾಗೂ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿದೆ' ಎಂದು ಹೇಳಲಾಗಿದೆ.

ಮೋದಿ–ಬೈಡನ್ ಭೇಟಿ ರಾಜತಾಂತ್ರಿಕರ ಮಟ್ಟದ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಭೇಟಿ ಮತ್ತು ಕ್ವಾಡ್ ಶೃಂಗಸಭೆ ಕುರಿತಂತೆ ಭಾರತ ಮತ್ತು ಅಮೆರಿಕದ ಹಿರಿಯ ರಾಜತಾಂತ್ರಿಕರು ಗುರುವಾರ ಚರ್ಚೆ ನಡೆಸಿದರು.

ಈ ಮಾಸಾಂತ್ಯದ ವೇಳೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ಅವರು ನ್ಯೂಯಾರ್ಕ್‌ಗೆ ಭೇಟಿ ನೀಡುವ ಕಾರ್ಯಕ್ರಮವಿದೆ.

ಪ್ರವಾಸದ ಅವಧಿಯಲ್ಲಿಯೇ ವಾಷಿಂಗ್ಟನ್ ಡಿ.ಸಿಗೂ ಭೇಟಿ ನೀಡುವುದು ಹಾಗೂ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ಉಭಯದ ದೇಶಗಳ ನಡುವೆ ಬಾಂಧವ್ಯ ವೃದ್ಧಿಗೆ ದ್ವಿಪಕ್ಷೀಯ ಮಾತುಕತೆಯನ್ನು ಆಯೋಜಿಸಲು ಭಾರತ ಚಿಂತನೆ ನಡೆಸಿದೆ. ಇನ್ನೊಂದೆಡೆ ಜೋಬೈಡನ್ ಅವರು ಪ್ರಧಾನಿ ಮೋದಿ, ಆಸ್ಟ್ರೇಲಿಯದ ಪ್ರಧಾನಿ ಸ್ಕಾಟ್ ಮಾರಿಸನ್, ಜಪಾನ್ ಪ್ರಧಾನಿ ಯೋಶಿಹಿಡೆ ಸುಗಾ ಅವರನ್ನು ಒಳಗೊಂಡು ಕ್ವಾಡ್ ಸಭೆ ಆಯೋಜಿಸಲು ಚಿಂತನೆ ನಡೆಸಿದ್ದಾರೆ.

ಅರ್ಹ ಪಾಲಿಸಿಗಳಿಗೆ ಲೇಟ್ ಫೀನಲ್ಲಿ ರಿಯಾಯಿತಿ ಇದೆ*

ಬರಬೇಕಾಗಿರುವ ಒಟ್ಟು ಪ್ರೀಮಿಯಮ್	% ಲೇಟ್ ಫೀ ರಿಯಾಯಿತಿ	ಗರಿಷ್ಠ ರಿಯಾಯಿತಿ ಮಿತಿ
₹1,00,000ದ ವರೆಗೆ	20%	₹2,000
₹1,00,001 ರಿಂದ ₹3,00,000ದ ವರೆಗೆ	25%	₹2,500
₹3,00,001 ಮತ್ತು ಅದಕ್ಕೂ ಮೀರಿ	30%	₹3,000

*ಟರ್ಮ್ ಅಶ್ಯೂರೆನ್ಸ್, ಮಲ್ಟಿಪಲ್ ರಿಸ್ಕ್ ಪಾಲಿಸಿಗಳು ಇತ್ಯಾದಿ ಹೈ ರಿಸ್ಕ್ ಪ್ಲಾನ್‌ಗಳಿಗೆ ಅನ್ವಯಿಸುವುದಿಲ್ಲ.
**ಸಂದಾಯ ಮಾಡಿಲ್ಲದ ಪ್ರಥಮ ಪ್ರೀಮಿಯಮ್‌ನ ತಾರೀಖಿನಿಂದ 5 ವರ್ಷಗಳ ಒಳಗೆ ಪಾಲಿಸಿಗಳನ್ನು ಪುನರುಜ್ಜೀವನಗೊಳಿಸಬಹುದು.

**ಷರತ್ತು ಮತ್ತು ನಿಬಂಧನೆಗಳು ಅನ್ವಯ.

ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ಭೇಟಿ ನೀಡಿ www.licindia.in ಗೆ

ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ | ಕಾಲ್ ಸೆಂಟರ್ ಸೇವೆಗಳು (022) 6827 6827 | ಡೌನ್‌ಲೋಡ್ ಮಾಡಿ ಎಲ್ಐಸಿಯ ಮೊಬೈಲ್ ಆಪ್ "MyLIC"

ನಮ್ಮೊಂದಿಗೆ ಸೇರಿಕೊಳ್ಳಿ: LIC India Forever

IRDAI Regn No.: 512

ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ!

ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೊಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ. ಅಪಾಯ ಅಶಂಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA

ಜೀವನದ ಜೊತೆಗೂ, ಜೀವನದ ಬಳಿಕವೂ.

LIC / MUD / 2021 -22 / 25 / Kan

ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದ್ದರೂ 71 ಸಾಂತ್ವನ ಕೇಂದ್ರಗಳು ಸ್ಥಗಿತ

ಮಹಿಳೆಯರಿಗೆ 'ಸಾಂತ್ವನ' ಇಲ್ಲ

• ಗುರು ಪಿ.ಎಸ್.

ಬೆಂಗಳೂರು: ಕೋವಿಡ್‌ನಿಂದ ಸೃಷ್ಟಿಯಾದ ಆರ್ಥಿಕ ಬಿಕ್ಕಟ್ಟು ಮತ್ತು ಪರ್ಯಾಯ ಕಾರ್ಯಕ್ರಮಗಳಿವೆ ಎಂಬ ಕಾರಣ ಮುಂದೊಡ್ಡಿ 71 ಸಾಂತ್ವನ ಕೇಂದ್ರಗಳನ್ನು ರಾಜ್ಯ ಸರ್ಕಾರ ಮುಚ್ಚಿದೆ. ಹೆಚ್ಚು ಜನಸಂಖ್ಯೆ ಇರುವ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚು ವರದಿಯಾಗುವ ರಾಜಧಾನಿ ಬೆಂಗಳೂರಿನಲ್ಲಿ ಈಗ ಒಂದೂ ಸಾಂತ್ವನ ಕೇಂದ್ರವಿಲ್ಲ !

ನೊಂದ ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ, ಆರ್ಥಿಕ ನೆರವು, ಶಿಕ್ಷಣ, ಉದ್ಯೋಗ ಮತ್ತು ಉಚಿತ ಕಾನೂನು ಸಾಂತ್ವನ ಯೋಜನೆಯಡಿ ನೆರವು ದೊರೆಯುತ್ತಿತ್ತು. ಆದರೆ, ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿಯೇ ಮಹಿಳೆಯರು ಈ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂಬ ದೂರು ರಾಜ್ಯ ಮಹಿಳಾ ಸಾಂತ್ವನ ಕೇಂದ್ರಗಳ ಒಕ್ಕೂಟದ್ದು.

'ಮಹಿಳೆಯರ ಮೇಲಾಗುತ್ತಿರುವ ಎಲ್ಲ ರೀತಿಯ ದೌರ್ಜನ್ಯಗಳನ್ನು ನಿಯಂತ್ರಿಸಲು ರಾಜ್ಯದಲ್ಲಿ 2000–01ನೇ ಸಾಲಿನಲ್ಲಿ ರಾಜ್ಯದಾದ್ಯಂತ ಸಾಂತ್ವನ ಕೇಂದ್ರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭಿಸಿತ್ತು. 2021ರ ಏಪ್ರಿಲ್ 1ರಿಂದ 71 ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿದೆ. ಬೆಂಗಳೂರಿನಲ್ಲಿ ಒಂದೇ ಒಂದು ಕೇಂದ್ರ ಕಾರ್ಯನಿರ್ವಹಿಸುತ್ತಿಲ್ಲ' ಎಂದು ಒಕ್ಕೂಟದ ಕಾರ್ಯದರ್ಶಿ ಎಂ. ಭೀಮಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಕೇಂದ್ರಗಳನ್ನು ಮುಂದುವರಿಸುವಂತೆ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಲಾಗಿತ್ತು. ಈ ಕುರಿತು ಶಿಫಾರಸು ಕಳಿಸುವಂತೆ ಇಲಾಖೆಗೆ ಅವರು ಸೂಚನೆ ನೀಡಿದ್ದರು. ಇಲಾಖೆಯ ವರದಿ ಆಧಾರದ ಮೇಲೆ ಈ ಕೇಂದ್ರಗಳನ್ನು ಮುಂದುವರಿಸುವಂತೆ ಸೂಚನೆ ನೀಡಿದ್ದರೂ, ಆರ್ಥಿಕ ಇಲಾಖೆಯು ಈವರೆಗೆ ಅನುಮೋದನೆ ನೀಡಿಲ್ಲ' ಎಂದರು.

'ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಂದಿಗೆ ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಒಂದು ಕೇಂದ್ರಕ್ಕೆ ಸರ್ಕಾರವು ತಿಂಗಳಿಗೆ ₹50 ಸಾವಿರ ಮಾತ್ರ ನೀಡುತ್ತದೆ. ಕೇಂದ್ರದ ಬಾಡಿಗೆ, ಸಿಬ್ಬಂದಿ ವೇತನ ಎಲ್ಲ ಇದೇ ಮೊತ್ತದಲ್ಲಿ ಸರಿದೂಗಿಸಬೇಕು. ಒಬ್ಬರು ಆಪ್ತ ಸಮಾಲೋಚಕರಿಗೆ ₹15 ಸಾವಿರ, ಮೂವರು ಸಾಮಾಜಿಕ ಕಾರ್ಯಕರ್ತರಿಗೆ ತಲಾ ₹10 ಸಾವಿರ ವೇತನ ಇರುತ್ತದೆ.

71 ಕೇಂದ್ರಗಳಿಗೆ ತಿಂಗಳಿಗೆ ₹50 ಸಾವಿರ ನೀಡುವುದು ಸರ್ಕಾರಕ್ಕೆ ದೊಡ್ಡ ಹೊರೆಯೇನಲ್ಲ' ಎಂದು ಅವರು ಹೇಳಿದರು.

ತಕ್ಷಣಕ್ಕೆ ಪರಿಹಾರ ಸಿಗಲ್ಲ: 'ಕೇಂದ್ರ ಸರ್ಕಾರದ ಸಖಿ, ಸ್ವಾಧಾರ, ಉಜ್ವಲ ಯೋಜನೆಗಳು ಕೂಡ ಸಾಂತ್ವನ ಯೋಜನೆಗಳನ್ನೇ ಹೋಲುತ್ತಿದ್ದು, ಕಾರ್ಯಕ್ರಮಗಳ ಪುನರಾವರ್ತನೆ ಆಗುತ್ತಿದೆ ಎಂಬ ಕಾರಣವನ್ನು ರಾಜ್ಯ ಸರ್ಕಾರ ಹೇಳುತ್ತಿದೆ. ರಾಜ್ಯದಲ್ಲಿ ಆರೇಳು ವರ್ಷಗಳಿಂದ 'ಗೆಳತಿ' ಹೆಸರಿನಲ್ಲಿ ಸಖಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಆಗಲೂ ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು' ಎಂದು ಒಕ್ಕೂಟ ಹೇಳಿದೆ.

'ನೊಂದ ಮಹಿಳೆಯರ ಸಮಸ್ಯೆಗೆ ಸಖಿ ಕೇಂದ್ರಗಳಿಗಿಂತ ಸಾಂತ್ವನ ಕೇಂದ್ರಗಳೇ ತಕ್ಷಣವೇ ಸ್ಪಂದಿಸುತ್ತವೆ. ಇನ್ನು, ಕೇಂದ್ರ ಸರ್ಕಾರದ ಯೋಜನೆಯ ಕೌಟುಂಬಿಕ ಸಲಹಾ ಕೇಂದ್ರಗಳು ಇವೆ. ಆದರೆ, ಸಾಂತ್ವನ ಯೋಜನೆಗಳಲ್ಲಿನ ಯಾವ ಸೌಲಭ್ಯವೂ ಇಲ್ಲಿರುವುದಿಲ್ಲ. ಸಾಂತ್ವನ ಕೇಂದ್ರಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಿದರೆ, ಕೇಂದ್ರದ ಕೌಟುಂಬಿಕ ಸಲಹಾ ಕೇಂದ್ರಗಳು ಹಗಲಿನ ವೇಳೆ ಮಾತ್ರ ಕಾರ್ಯನಿರ್ವಹಿಸುತ್ತವೆ' ಎಂದು ಒಕ್ಕೂಟದ ಅಧ್ಯಕ್ಷರಾದ ಡಾ. ವಿಜಯ ಹೇಳಿದರು.

'ಬೆಂಗಳೂರಿನಲ್ಲಿ 1.40 ಕೋಟಿಗೂ ಹೆಚ್ಚು ಜನ ವಾಸಿಸುತ್ತಿದ್ದಾರೆ. ಕನಿಷ್ಠ 25ರಿಂದ 35 ಆಪ್ತ ಸಮಾಲೋಚಕರ ಅವಶ್ಯಕತೆ ಇಲ್ಲಿದೆ. ವರದಕ್ಷಿಣೆ ಕಿರುಕುಳ, ಮಹಿಳೆಯ ಕಳ್ಳಸಾಕಾಣಿಕೆ, ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಿರುವುದು ಸರಿಯಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಅಂಕಿ–ಅಂಶಗಳು

194 ರಾಜ್ಯದಲ್ಲಿದ್ದ ಸಾಂತ್ವನ ಕೇಂದ್ರಗಳ ಸಂಖ್ಯೆ

123 ಈಗ ಇರುವ ಕೇಂದ್ರಗಳು

800 ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರ ಅಂದಾಜು ಸಂಖ್ಯೆ

300 71 ಕೇಂದ್ರಗಳ ಸ್ಥಗಿತದಿಂದ ಕೆಲಸ ಕಳೆದುಕೊಂಡವರು

'ವರದಿ ಕಳಿಸಿದರೆ ಪುನರಾರಂಭಕ್ಕೆ ಕ್ರಮ'

'ಆರ್ಥಿಕವಾಗಿ ಹೊರೆಯಾಗುತ್ತದೆ ಎಂಬ ಕಾರಣಕ್ಕೆ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಿಲ್ಲ. ಸಾಂತ್ವನ ಯೋಜನೆಯ ಮಾದರಿಯಲ್ಲಿಯೇ ಕೇಂದ್ರದ ಹಲವು ಯೋಜನೆಗಳು ಈಗಾಗಲೇ ಜಾರಿಯಲ್ಲಿವೆ. ಪುನರಾವರ್ತನೆ ಬೇಡ ಉದ್ದೇಶದಿಂದ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಡಾ. ಕೆ.ಎನ್. ಅನುರಾಧ ಹೇಳಿದರು.

'ಜಿಲ್ಲಾ ಕೇಂದ್ರಗಳಲ್ಲಿನ ಸಾಂತ್ವನ ಕೇಂದ್ರಗಳನ್ನು ಮಾತ್ರ ಸ್ಥಗಿತಗೊಳಿಸಲಾಗಿದೆ. ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಸೇರಿದಂತೆ ಆಯಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಭೆ ನಡೆಸಿ, ಸಂಬಂಧಪಟ್ಟ ಜಿಲ್ಲೆಯಲ್ಲಿ ಇಂತಹ ಸಾಂತ್ವನ ಕೇಂದ್ರಗಳ ಅಗತ್ಯವಿದೆ ಎಂದು ಸಭೆಯ ನಡಾವಳಿ ಸಹಿತ ವರದಿ ಕಳುಹಿಸಿದರೆ ಸಾಂತ್ವನ ಕೇಂದ್ರಗಳ ಪುನರಾರಂಭಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಪ್ರಜಾವಾಣಿ ವಿಶೇಷ

ಎಸ್‌ಸಿ, ಎಸ್‌ಟಿ ಜಾತಿ ಪ್ರಮಾಣಪತ್ರ ಪದೇಪದೇ ಪರಿಶೀಲನೆ ಸಲ್ಲದು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ನೀಡಲಾಗುವ ಜಾತಿ ಪ್ರಮಾಣಪತ್ರಗಳನ್ನು ಪದೇ ಪದೇ ಪರಿಶೀಲನೆಗೊಳಪಡಿಸುವುದು ಅವರಿಗೆ ಹಾನಿಕಾರಕರ. ವಿತರಿಸುವ ಪ್ರಮಾಣಪತ್ರಗಳು ಮೊದಲೇ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಒಳಪಟ್ಟಿರಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು.

ನಕಲಿ ಪ್ರಮಾಣಪತ್ರವನ್ನು ಪತ್ತೆ ಹಚ್ಚುವುದು ಪರಿಶೀಲನಾ ಸಮಿತಿಯ ಉದ್ದೇಶ. ಆದರೆ, ಮತ್ತೆ ಮತ್ತೆ ಪರಿಶೀಲನೆ ನಡೆಸುವುದು ಆ ಸಮುದಾಯದ ಜನರಿಗೆ ಹಾನಿಕಾರಕವಾಗಲಿದೆ. ಸಮರ್ಪಕ ಪರಿಶೀಲನೆಯಿಲ್ಲದೇ ವಿತರಿಸಲಾದ ಪ್ರಕರಣಗಳಲ್ಲಿ ಮಾತ್ರವೇ ಮರುಪರಿಶೀಲನೆ ನಡೆಸಬೇಕು ಎಂದು ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ನೇತೃತ್ವದ ಪೀಠ ಹೇಳಿತು.

ತಾವು ಪರಿಶಿಷ್ಟ ಜಾತಿಗೆ ಸೇರುವ ವಲ್ಲುವನ್ ಸಮುದಾಯಕ್ಕೆ ಸೇರಿದವರು ಎಂದು 1982ರಲ್ಲಿ ನೀಡಲಾಗಿದ್ದ ಪ್ರಮಾಣಪತ್ರವನ್ನು ರದ್ದುಗೊಳಿಸಿದ್ದ ಚೆನ್ನೈನ ಜಿಲ್ಲಾ ಕಣ್ಗಾವಲು ಸಮಿತಿಯ ಆದೇಶವನ್ನು ಪ್ರಶ್ನಿಸಿ ಜೆ.ಚಿತ್ರಾ ಎಂಬುವರು ಸಲ್ಲಿಸಿದ್ದ ಮನವಿಯನ್ನು ಪೀಠವು ವಿಚಾರಣೆಗೆ ಪರಿಗಣಿಸಿತು.

ಅರ್ಜಿದಾರರು ಅಕೌಂಟೆಂಟ್ ಜನರಲ್ ಕಚೇರಿಗೆ ಸೇರ್ಪಡೆಯಾದ ಬಳಿಕ ಡಾ.ಅಂಬೇಡ್ಕರ್ ಸೇವಾ ಸಂಸ್ಥೆಯು ಅವರ ಪ್ರಮಾಣಪತ್ರದ ಅಸಲಿತನ ಕುರಿತು ಶಂಕೆ ವ್ಯಕ್ತಪಡಿಸಿ ದೂರು ಸಲ್ಲಿಸಿತ್ತು. ದೂರು ಪರಿಶೀಲಿಸಿದ ಜಿಲ್ಲಾ ಕಣ್ಗಾವಲು ಸಮಿತಿಯು ಅರ್ಜಿದಾರರು ವಲ್ಲುವನ್ ಸಮುದಾಯಕ್ಕೆ ಸೇರಿದವರು ಎಂದು ಅಭಿಪ್ರಾಯಪಟ್ಟಿತ್ತು.

ನಕಲಿ ಪ್ರಮಾಣಪತ್ರ ನೀಡಿಯೇ ಹುದ್ದೆಗೆ ನೇಮಕವಾಗಿದ್ದಾರೆ ಎಂದು ಸಂಸ್ಥೆಯು ಮತ್ತೆ ರಾಜ್ಯ ಸಮಿತಿಗೆ ದೂರು ನೀಡಿದ್ದು, ಇದನ್ನು ಆಧರಿಸಿ ರಾಜ್ಯ ಕಣ್ಗಾವಲು ಸಮಿತಿಯು ಮತ್ತೆ ಜಿಲ್ಲಾ ಸಮಿತಿಗೆ ಪ್ರಕರಣವನ್ನು ಮರುಪರಿಶೀಲಿಸಲು ಒಪ್ಪಿಸಿತ್ತು. ಮತ್ತೊಮ್ಮೆ ವಿಚಾರಣೆ ನಡೆಸಿದ ಜಿಲ್ಲಾ ಸಮಿತಿ ಅಂತಿಮವಾಗಿ ಪ್ರಮಾಣಪತ್ರವನ್ನು ರದ್ದುಪಡಿಸಿತ್ತು.

ಅದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಪೀಠವು, ಒಮ್ಮೆ ಅರ್ಜಿದಾರರಿಗೆ ನೀಡಲಾದ ಪ್ರಮಾಣಪತ್ರವು ಅಂತಿಮವಾದುದು. ಈ ಪ್ರಕರಣದಲ್ಲಿ ವಿಚಾರಣೆ ನಡೆಸುವ ಯಾವುದೇ ಅಧಿಕಾರದ ವ್ಯಾಪ್ತಿಯನ್ನು ರಾಜ್ಯ ಕಣ್ಗಾವಲು ಸಮಿತಿಯು ಹೊಂದಿಲ್ಲ ಎಂದೂ ಕೋರ್ಟ್ ತಿಳಿಸಿತು.

ಮಾದಕವಸ್ತು ಸೇವನೆ: ವಿಮಾನ ಸಿಬ್ಬಂದಿಗೆ ಪರೀಕ್ಷೆ ಕಡ್ಡಾಯ

ನವದೆಹಲಿ (ಪಿಟಿಐ): ದೇಶದಲ್ಲಿ ವಿಮಾನಯಾನ ಸಂಸ್ಥೆಗಳ ಸಿಬ್ಬಂದಿ, ಪೈಲಟ್‌ಗಳು ಇನ್ನು ಮುಂದೆ ಮಾದಕ ವಸ್ತು ಸೇವನೆ ಪರೀಕ್ಷೆಗೆ ಒಳಪಡುವುದು ಕಡ್ಡಾಯವಾಗಲಿದೆ. ವಿಮಾನಯಾನದ ಸುರಕ್ಷತೆ, ಸಿಬ್ಬಂದಿ ಮಾದಕವಸ್ತು ವ್ಯಸನಿಗಳಲ್ಲ ಎಂಬುದರ ಖಾತರಿಗೆ ಈ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ.

ಕರಡು ನಿಯಮಗಳನ್ನು ನಾಗರಿಕ ವಿಮಾನಯಾನ ಪ್ರಧಾನ ನಿರ್ದೇಶನಾಲಯ ಆಗಸ್ಟ್ 25ರಂದು ಪ್ರಕಟಿಸಿದೆ. ಭಾವಿ ಪೈಲಟ್‌ಗಳು ಕೂಡಾ ಪರೀಕ್ಷೆಗೆ ಒಳಪಡುವುದು ಕಡ್ಡಾಯವಾಗಲಿದೆ.

ಆ್ಯಂಪೆಟಮೈನ್, ಕ್ಯಾನಬಿಸ್, ಕೊಕೈನ್, ಒಪಿಯೊಡ್ಸ್, ಬಾರ್ಬಿಟುರೇಟ್ಸ್ ಹೆಸರಿನ ಮಾದಕ ವಸ್ತು ಸೇವಿಸಿದ್ದಾರೆಯೇ, ವ್ಯಸನವಿದೆಯೇ ಎಂದು ತಿಳಿಯುವುದು ಇದರ ಉದ್ದೇಶ. ಸದ್ಯ, ಪೈಲಟ್ ಹಾಗೂ ವಿಮಾನದ ಪ್ರಮುಖ ಸಿಬ್ಬಂದಿಗಳು ಮದ್ಯಪಾನ ಮಾಡಿದ್ದಾರೆಯೇ ಎಂಬುದರ ಪರೀಕ್ಷೆ ನಡೆಯಲಿದೆ.

ಜೆಇಇ ಪರೀಕ್ಷೆಯಲ್ಲಿ ಅಕ್ರಮ: 20 ಕಡೆ ಸಿಬಿಐ ಶೋಧ

ನವದೆಹಲಿ(ಪಿಟಿಐ): ಜೆಇಇ ಮುಖ್ಯ ಪರೀಕ್ಷೆಯಲ್ಲಿ ನಡೆಸಿರುವ ಅಕ್ರಮಗಳ ಆರೋಪದ ಮೇಲೆ ಸಿಬಿಐ ಅಫಿನಿಟಿ ಎಜುಕೇಶನ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ನಿರ್ದೇಶಕರ ವಿರುದ್ಧ ಪ್ರಕರಣ ದಾಖಲಿಸಿದೆ.

ಈ ಸಂಬಂಧ ಗುರುವಾರ ದೆಹಲಿ, ಪುಣೆ, ಜೆಮ್‌ಶೆಡ್‌ಪುರ ಸೇರಿ ದೇಶದಾದ್ಯಂತ 20 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಅಫಿನಿಟಿ ಎಜುಕೇಶನ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರು, ಅವರ ಸಹದ್ಯೋಗಿಗಳು ಮತ್ತು ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾಗಿದ್ದ ಸಿಬ್ಬಂದಿ ಹಾಗೂ ಇತರ ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಸಿಬಿಐ ವಕ್ತಾರ ಆರ್.ಸಿ. ಜೋಶಿ ತಿಳಿಸಿದ್ದಾರೆ.

ಪ್ರಜಾಪ್ರಭುತ್ವ ದಿನ.. ಧರ್ಮಶಾಲಾದಲ್ಲಿ ಗುರುವಾರ ಟಿಬೆಟಿಯನ್ನರ ಪ್ರಜಾಪ್ರಭುತ್ವ ದಿನದ 61 ನೇ ವಾರ್ಷಿಕೋತ್ಸವ ಆಚರಣೆ ಸಮಾರಂಭದ ಪ್ರಯುಕ್ತ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು ಪಿಟಿಐ ಚಿತ್ರ

ಪ್ರಕರಣಕ್ಕೆ ಸಾಕ್ಷಿಯಾದ ಮಾಜಿ ಶಾಸಕನ ಮಗ; ಡ್ರಗ್ಸ್ ಮಾರಿದ್ದ ಆರೋಪಿಗಳು

ಯುವರಾಜ್ ಬರ್ತಡೇ ಪಾರ್ಟಿಯಲ್ಲೂ 'ಡ್ರಗ್ಸ್'

• ಸಂತೋಷ ಜಿಗಳಿಕೊಪ್ಪ

ಆರ್.ವಿ. ಯುವರಾಜ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಸುಧಾಮ್ ನಗರ (ನಂ. 118) ವಾರ್ಡ್ ಸದಸ್ಯರಾಗಿದ್ದ ಆರ್.ವಿ. ಯುವರಾಜ್ ಅವರ ಹುಟ್ಟುಹಬ್ಬದ ಪಾರ್ಟಿಯಲ್ಲೂ ಡ್ರಗ್ಸ್ ಮಾರಾಟವಾಗಿದ್ದ ಸಂಗತಿಯನ್ನು ಸಿಸಿಬಿ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಯಲಹಂಕ ಬಳಿಯ 'ಲೇ–ರೋಮಾ ಗಾರ್ಡೇನಿಯಾ' ಹೋಮ್ ಸ್ಟೇ/ ರೆಸಾರ್ಟ್‌ನಲ್ಲಿ 2020ರ ಜುಲೈ 5ರಂದು ರಾತ್ರಿ ಆಯೋಜಿಸಿದ್ದ ಹುಟ್ಟುಹಬ್ಬ ಪಾರ್ಟಿಯಲ್ಲಿ ಆರೋಪಿಗಳು ಡ್ರಗ್ಸ್ ಮಾರಾಟ ಮಾಡಿದ್ದನ್ನು ಸಿಸಿಬಿ ಪೊಲೀಸರು, ದಾಖಲೆ ಸಮೇತ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

'ಕಾಂಗ್ರೆಸ್ ಮಾಜಿ ಶಾಸಕ ಆರ್.ವಿ. ದೇವರಾಜ್ ಅವರ ಮಗ ಯುವರಾಜ್ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲು ಸ್ನೇಹಿತರು ತೀರ್ಮಾನಿಸಿದ್ದರು. ಸ್ನೇಹಿತರ ಒತ್ತಾಯದಂತೆ ಪಾರ್ಟಿಯಲ್ಲಿ ಪಾಲ್ಗೊಂಡು ಕೇಕ್ ಕತ್ತರಿಸಿದ್ದರು. ಅದೇ ಪಾರ್ಟಿಯಲ್ಲೇ ಆರೋಪಿಗಳಾದ ಆದಿತ್ಯ ಆಳ್ವ, ಕಿರಣ್ ಕಾರ್ತಿಕ್, ಮ್ಯಾಶಿ, ವೈಭವ್‌ಕುಮಾರ್ ಜೈನ್ ಹಾಗೂ ಇತರರು ಪಾಲ್ಗೊಂಡಿದ್ದರು' ಎಂಬ ಅಂಶವೂ ಪಟ್ಟಿಯಲ್ಲಿದೆ.

ದೊಡ್ಡವರ 'ಡ್ರಗ್ಸ್' ನಶೆ

ಇಬ್ಬರಿಂದ ಡ್ರಗ್ಸ್ ಮಾರಾಟ: 'ಪ್ರಕರಣದ ಆರೋಪಿಗಳಾದ ವೈಭವ್ ಕುಮಾರ್ ಹಾಗೂ ಕಿರಣ್ ಕಾರ್ತಿಕ್ ಅಲಿಯಾಸ್ ಕೆ.ಡಿ, ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರಿಗೆ ಡ್ರಗ್ಸ್ ಮಾರಿದ್ದರು. ಈ ಬಗ್ಗೆ ಯುವರಾಜ್ ಅವರೇ ಸಾಕ್ಷಿ ಹೇಳಿಕೆ ನೀಡಿದ್ದಾರೆ' ಎಂಬ ಮಾಹಿತಿಯನ್ನೂ ಪಟ್ಟಿಯಲ್ಲಿ ತಿಳಿಸಲಾಗಿದೆ.

'ಆದಿತ್ಯ ಆಳ್ವ ಒಡೆತನದ 'ಹೌಸ್ ಆಫ್ ಲೈಫ್' ರೆಸಾರ್ಟ್ ವ್ಯವಹಾರ ನೋಡಿಕೊಳ್ಳುತ್ತಿದ್ದ ಕಿರಣ್ ಕಾರ್ತಿಕ್ ಹಾಗೂ ವೈಭವ್ ಕುಮಾರ್, ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ತಂದಿದ್ದರು. ಪಾರ್ಟಿಯಲ್ಲಿದ್ದವರಿಗೆ ಮಾರಿ ಹಣ ಪಡೆದುಕೊಂಡಿದ್ದರು.'

'ಪ್ರಕರಣದ ಮತ್ತೊಬ್ಬ ಸಾಕ್ಷಿದಾರ ಸೈಯದ್ ಶಫಿವುಲ್ಲಾ ಅವರ ಗೆಳತಿಯ ಹಾಗೂ ಆರೋಪಿ ಪ್ರಶಾಂತ್ ರಾಜುವಿನ ಹುಟ್ಟುಹಬ್ಬವನ್ನೂ ಪ್ರತ್ಯೇಕ ದಿನಗಳಂದು 'ಲೇ–ರೋಮಾ ಗಾರ್ಡೇನಿಯಾ' ಹೋಮ್ ಸ್ಟೇ/ರೆಸಾರ್ಟ್‌ನಲ್ಲಿ ನಡೆದಿತ್ತು. ವೈಭವ್‌ಕುಮಾರ್‌ನೇ ಪಾರ್ಟಿ ಆಯೋಜನೆ ಜವಾಬ್ದಾರಿ ಹೊತ್ತುಕೊಂಡಿದ್ದ. ಇದೇ ಪಾರ್ಟಿಗಳಲ್ಲಿ ಕೊಕೇನ್, ಗಾಂಜಾ ಹಾಗೂ ಎಕ್ಸೈಟೆಸ್ಸಿ ಮಾತ್ರೆಗಳನ್ನು ಮಾರಿದ್ದ' ಎಂಬ ಅಂಶವೂ ಪಟ್ಟಿಯಲ್ಲಿದೆ.

'ಡ್ರಗ್ಸ್ ಖರೀದಿ ಸಂಬಂಧ ನೈಜೀರಿಯಾ ಪ್ರಜೆಗಳ ಜೊತೆ ಆರೋಪಿಗಳು ನಡೆಸಿದ್ದ ಚಾಟಿಂಗ್ ಮಾಹಿತಿ ಸಿಕ್ಕಿದೆ. ವಾಟ್ಸ್‌ಆ್ಯಪ್, ಮೆಸೆಂಜರ್ ಹಾಗೂ ಇನ್‌ಸ್ಟಾಗ್ರಾಮ್ ಖಾತೆಗಳ ಮೂಲಕವೂ ಆರೋಪಿಗಳು ವ್ಯವಹಾರ ನಡೆಸಿದ್ದಾರೆ' ಎಂಬುದನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸಾಕ್ಷಿ ಹೇಳಿಕೆ ನೀಡಿದ ಯುವರಾಜ್: 'ಸ್ನೇಹಿತರ ಒತ್ತಾಯದಂತೆ ನನ್ನ ಹುಟ್ಟುಹಬ್ಬದ ಪಾರ್ಟಿಗೆ ಹೋಗಿದ್ದೆ. ಅಲ್ಲಿದ್ದ ಕೆಲ ಆರೋಪಿಗಳು, ಡ್ರಗ್ಸ್ ಮಾರಿದ್ದರು. ಅದನ್ನು ನಾನೂ ಪ್ರಶ್ನಿಸಿದ್ದೆ. ಅವರ ವಿರುದ್ಧ ನಾನೇ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತೇನೆ ಎಂಬುದಾಗಿ ಯುವರಾಜ್ ಹೇಳಿಕೆ ನೀಡಿದ್ದಾರೆ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಯುವಕ–ಯುವತಿಯ ಕರೆತರುತ್ತಿದ್ದ ಕೆ.ಡಿ'

'ಹೌಸ್ ಆಫ್ ಲೈಫ್' ರೆಸಾರ್ಟ್‌ನಲ್ಲಿ ಸಂಗೀತ ಕಾರ್ಯಕ್ರಮ ಹಾಗೂ ಪಾರ್ಟಿಗಳನ್ನು ಆಯೋಜಿಸುತ್ತಿದ್ದ ಕಿರಣ್ ಕಾರ್ತಿಕ್ ಅಲಿಯಾಸ್ ಕೆ.ಡಿ, ಯುವಕ– ಯುವತಿಯರನ್ನು ಕರೆತರುತ್ತಿದ್ದ. ಅವರಿಗೆ ಡ್ರಗ್ಸ್ ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದ' ಎಂಬ ಅಂಶವೂಪಟ್ಟಿಯಲ್ಲಿದೆ.

'ಹೊಸ ವರ್ಷಾಚರಣೆ, ವಾರದ ಕೊನೆ ದಿನಗಳು ಹಾಗೂ ವಿಶೇಷ ದಿನಗಳಲ್ಲಿ ಪಾರ್ಟಿ ಆಯೋಜಿಸಲಾಗುತ್ತಿತ್ತು. ಸ್ಥಳೀಯ ಯುವಕ–ಯುವತಿಯರ ಜೊತೆ ವಿದೇಶಿಗರೂ ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಯುವತಿಯರಿಗೆ ಉಚಿತ ಪ್ರವೇಶವಿರುತ್ತಿತ್ತು. ಬಹುತೇಕರಿಗೆ ಎಕ್ಸೈಟೆಸ್ಸಿ ಮಾತ್ರೆಗಳನ್ನು ಗ್ರಾಂ ಗೆ ₹1,500ರಿಂದ ₹2,500ವರೆಗೆ ಮಾರಲಾಗುತ್ತಿತ್ತು' ಎಂಬ ಮಾಹಿತಿಯನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಶುಕ್ರವಾರ, ಸೆಪ್ಟೆಂಬರ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 246 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಚಂದನವನದಿಂದ ಕೆಲಕಾಲ ಚಿಕ್ಕ ಬ್ರೇಕ್ ಪಡೆದಿದ್ದ ನಟ ಯೋಗೇಶ್ 'ಲಂಕೆ' ಮೂಲಕ ತೆರೆಯಲ್ಲಿ ಕಾಣಿಸಲಿದ್ದಾರೆ. ಅವರ ಸಿನಿಪಯಣದ ಝಲಕ್.



ಬೆಲೆ ಏರಿಕೆ; ಹಣಕಾಸು ಸಚಿವರ ಜೊತೆ ಚರ್ಚೆ: ಸಿ.ಎಂ. 6

ಆಳ-ಅಗಲ
ಆಹಾರ ಬರ: ಶ್ರೀಲಂಕಾ ತತ್ತರ

'ತೆರಿಗೆಯಿಂದ ಸುಲಿಗೆ, ಬೆಲೆ ಏರಿಕೆಯಿಂದ ಲೂಟಿ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,852 ▲	17,234 ▲	₹48,600 (ಬೆಂಗಳೂರು)	₹65,400 (ಬೆಂಗಳೂರು)	73.06 ▲

ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್ ರವರು ಕೋವಿಡ್-19 ಸಂಕಷ್ಟ ಸಮಯದಲ್ಲಿ ಕಾರ್ಮಿಕರಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸುತ್ತಿರುವುದು.

ಕಾರ್ಮಿಕ ಸಹಾಯವಾಣಿ 155214 ಸಂಪರ್ಕಿಸಿ

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಾರ್ಮಿಕ ಅದಾಲತ್
ಕಾರ್ಮಿಕ ಇಲಾಖೆಯ ವತಿಯಿಂದ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಹಾಗೂ ಪರಿಹಾರ ಒದಗಿಸಲು ರಾಜ್ಯಾದ್ಯಂತ 'ಕಾರ್ಮಿಕ ಅದಾಲತ್' ನಡೆಸಲಾಗುತ್ತಿದೆ.



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು

ದಿನಾಂಕ: 01-09-2021 ರಿಂದ 05-09-2021 ರವರೆಗೆ
ಕಾರ್ಮಿಕರ ಸಮಸ್ಯೆಗಳ ಕುರಿತು ಅರ್ಜಿಗಳನ್ನು ಸ್ವೀಕರಿಸಲಾಗುವುದು.

ದಿನಾಂಕ: 06-09-2021 ರಿಂದ 16-09-2021ರ ಒಳಗಾಗಿ
ಕಾರ್ಮಿಕರ ಸಮಸ್ಯೆಗಳ ಕುರಿತಂತೆ ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಇತ್ಯರ್ಥ ಪಡಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕಾರ್ಮಿಕ ಅಧಿಕಾರಿಗಳು ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು

ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಿ ಕೋವಿಡ್ ಮುಕ್ತ ಸಮಾಜವನ್ನು ನಿರ್ಮಿಸಿ.

ಕಾರ್ಮಿಕ ಇಲಾಖೆ ಕಾರ್ಮಿಕರ ಬೆನ್ನೆಲುಬಾಗಿ ಸದಾ ನಿಮ್ಮ ಸೇವೆಗೆ ಸಿದ್ಧವಾಗಿರುತ್ತದೆ.

ಡಾ. ಜಿ. ಕಲ್ಪನ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ

ಅಕ್ರಂ ಪಾಷ, ಭಾ.ಆ.ಸೇ., ಕಾರ್ಮಿಕ ಆಯುಕ್ತರು ಮತ್ತು ಸಿ.ಇ.ಒ. ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ

DIPR/LABOUR/76/2021-22

ಮೂರು ಪಾಲಿಕೆ ಮತದಾನ ಇಂದು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಹಾಗೂ ಕಲಬುರ್ಗಿ ಮಹಾನಗರ ಪಾಲಿಕೆಗಳ ಚುನಾವಣೆಗೆ ಶುಕ್ರವಾರ ಮತದಾನ ನಡೆಯಲಿದೆ.

ಹುಬ್ಬಳ್ಳಿ-ಧಾರವಾಡ ಪಾಲಿಕೆಯ 82, ಕಲಬುರ್ಗಿ ಪಾಲಿಕೆಯ 55 ಹಾಗೂ ಬೆಳಗಾವಿ ಪಾಲಿಕೆಯ 58 ವಾರ್ಡ್‌ಗಳಲ್ಲಿ ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದೆ. ಬೆಳಗಾವಿ ಮಹಾನಗರ ಪಾಲಿಕೆ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜಕೀಯ ಪಕ್ಷಗಳು ಚಿಹ್ನೆಗಳ ಆಧಾರದ ಮೇಲೆ ಸ್ಪರ್ಧಿಸುತ್ತಿವೆ. ಈ ಹಿಂದೆ ಭಾಷೆ ಆಧಾರದ ಮೇಲೆ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದರು. ಒಟ್ಟು 385 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಸುದ್ದಿಗೆ ಕೋಮು ಬಣ್ಣ: ಮಾಧ್ಯಮದ ವಿರುದ್ಧ ಹರಿಹಾಯ್ದ ಕೋರ್ಟ್

ಸುಳ್ಳು ಸುದ್ದಿಗೆ 'ಸುಪ್ರೀಂ' ಗುದ್ದು

ನವದೆಹಲಿ (ಪಿಟಿಐ): ಸುದ್ದಿಗಳಿಗೆ ಕೋಮು ಬಣ್ಣ ಬಳಿಯುವ ಮಾಧ್ಯಮದ ಒಂದು ವರ್ಗವು ದೇಶಕ್ಕೆ ಕೆಟ್ಟ ಹೆಸರು ತರುತ್ತಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಆಕ್ರೋಶ ವ್ಯಕ್ತಪಡಿಸಿದೆ. ಪೋರ್ಟಲ್‌ಗಳು, ಯೂಟ್ಯೂಬ್ ಸೇರಿದಂತೆ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿ ಹರಡುವಿಕೆಯ ಬಗ್ಗೆಯೂ ನ್ಯಾಯಾಲಯವು ಗಂಭೀರ ಕಳವಳ ವ್ಯಕ್ತಪಡಿಸಿದೆ. ಈ ಸಾಮಾಜಿಕ ಮಾಧ್ಯಮವು 'ಪ್ರಬಲ ಧ್ವನಿ'ಗಳ ಮಾತನ್ನು ಮಾತ್ರ ಕೇಳುತ್ತದೆ. ನ್ಯಾಯಮೂರ್ತಿಗಳು ಮತ್ತು ಸಂಸ್ಥೆಗಳ ಮಾತನ್ನು ಕೂಡ ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ. ನಿಜಾಮುದ್ದೀನ್ ಮರ್ಕಜ್‌ನಲ್ಲಿ ಕಳೆದ ವರ್ಷ ನಡೆದ ಧಾರ್ಮಿಕ ಸಮಾವೇಶದ ಬಗ್ಗೆ ಸುಳ್ಳು ಸುದ್ದಿ ಹರಡುತ್ತಿರುವುದನ್ನು ತಡೆಯಲು ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಿ ಜಮೀಯತ್ ಉಲೇಮಾ ಎ ಹಿಂದ್ ಮತ್ತು ಇತರ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠವು ನಡೆಸಿತು.

'ಸಮಸ್ಯೆ ಏನೆಂದರೆ, ಈ ದೇಶದಲ್ಲಿ ಎಲ್ಲವನ್ನೂ ಕೋಮುವಾದಿ ಕೋನದಿಂದಲೇ ನೋಡುವ ಮಾಧ್ಯಮದ ಒಂದು ವರ್ಗ ಇದೆ. ಅಂತಿಮವಾಗಿ ಇದರಿಂದ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ. ಇಂತಹ ಖಾಸಗಿ ವಾಹಿನಿಗಳನ್ನು ನಿಯಂತ್ರಿಸುವ ಪ್ರಯತ್ನವನ್ನು ನೀವು (ಕೇಂದ್ರ) ಎಂದಾದರೂ ಮಾಡಿದ್ದೀರಾ' ಎಂದು ಪೀಠವು ಪ್ರಶ್ನಿಸಿತು.

ಕೋಮುವಾದಿ ದೃಷ್ಟಿಯಿಂದ ನೋಡುವುದು ಮಾತ್ರವಲ್ಲ, ಸುದ್ದಿಗಳನ್ನು ಸೃಷ್ಟಿಸುವ ಕೆಲಸವೂ ನಡೆಯುತ್ತಿದೆ. ವೆಬ್ ಪೋರ್ಟಲ್‌ಗಳು ಸೇರಿದಂತೆ ಅಂತರ್ಜಾಲದಲ್ಲಿರುವ ಸುದ್ದಿಗಳನ್ನು ನಿಯಂತ್ರಿಸಲು ಐಟಿ ನಿಯಮಗಳನ್ನು ರೂಪಿಸಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಸಾಮಾಜಿಕ ಜಾಲತಾಣದಲ್ಲಿನ ಸುಳ್ಳು ಸುದ್ದಿ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ಎಂದು ನ್ಯಾಯಾಲಯವು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮೆಹ್ತಾ, ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಕಳೆದ ನವೆಂಬರ್ 13ರಂದು ಸಲ್ಲಿಸಿದ್ದ ಪ್ರಮಾಣಪತ್ರವನ್ನು ಉಲ್ಲೇಖಿಸಿದರು.

6ನೇ ಪುಟ ನೋಡಿ

ನ್ಯಾಯಮೂರ್ತಿಗಳೂ ಲೆಕ್ಕಕ್ಕಿಲ್ಲ

'ಸಾಮಾಜಿಕ ಜಾಲತಾಣಗಳು, ಟ್ವಿಟರ್ ಮತ್ತು ಫೇಸ್‌ಬುಕ್ ಸಾಮಾನ್ಯ ಜನರಿಗೆ ಸ್ಪಂದಿಸಿದ್ದನ್ನು ನಾನು ಕಂಡಿಲ್ಲ. ಈ ಸಂಸ್ಥೆಗಳು ಪ್ರತಿಕ್ರಿಯೆಯನ್ನೇ ನೀಡುವುದಿಲ್ಲ. ಈ ಸಂಸ್ಥೆಗಳಿಗೆ ಹೊಣೆಗಾರಿಕೆ ಇಲ್ಲ. ಸಂಸ್ಥೆಗಳ ಬಗ್ಗೆ ಕೆಟ್ಟದಾಗಿ ಬರೆಯಲಾಗಿದೆ. ಅದಕ್ಕೂ ಸಾಮಾಜಿಕ ಜಾಲತಾಣ ಸಂಸ್ಥೆಗಳು ಸ್ಪಂದಿಸುವುದಿಲ್ಲ. ಅದು ಬರೆದವರ ಹಕ್ಕು ಎಂದು ಈ ಸಂಸ್ಥೆಗಳು ಹೇಳುತ್ತವೆ. ಈ ಸಂಸ್ಥೆಗಳು ಪ್ರಭಾವಿ ವ್ಯಕ್ತಿಗಳ ಬಗ್ಗೆ ಮಾತ್ರ ಗಮನ ಹರಿಸುತ್ತವೆಯೇ ಹೊರತು ನ್ಯಾಯಮೂರ್ತಿಗಳು, ಸಂಸ್ಥೆಗಳು ಅಥವಾ ಸಾಮಾನ್ಯ ಜನರ ಬಗ್ಗೆ ಅಲ್ಲ. ಇದು ನಮ್ಮ ಕಣ್ಣೆದುರು ಇರುವ ಸತ್ಯ. ಇದು ನಮ್ಮ ಅನುಭವ' ಎಂದು ರಮಣ ವಿವರಿಸಿದರು.

'ವೆಬ್ ಪೋರ್ಟಲ್‌ಗಳು ಮತ್ತು ಯೂಟ್ಯೂಬ್ ವಾಹಿನಿಗಳಲ್ಲಿರುವ ಸುಳ್ಳು ಸುದ್ದಿ ಮತ್ತು ಮಾನಹಾನಿಕಾರಕ ಕಂಟೆಂಟ್‌ಗಳ ಮೇಲೆ ನಿಯಂತ್ರಣವೇ ಇಲ್ಲ. ಸುಳ್ಳು ಸುದ್ದಿ ಮುಕ್ತವಾಗಿ ಹರಿದಾಡುತ್ತಿರುವುದು ಯೂಟ್ಯೂಬ್ ನೋಡಿದರೆ ತಿಳಿಯುತ್ತದೆ. ಯೂಟ್ಯೂಬ್‌ನಲ್ಲಿ ಯಾರು ಬೇಕಿದ್ದರೂ ವಾಹಿನಿ ಆರಂಭಿಸಬಹುದು' ಎಂದು ಪೀಠವು ಹೇಳಿದೆ.

ಮುಖ್ಯಾಂಶಗಳು

- ಅರ್ಜಿಯನ್ನು 4 ವಾರಗಳಲ್ಲಿ ಮಾರ್ಪಡಿಸಿ ಸಲ್ಲಿಸಲು ಜಮೀಯತ್‌ಗೆ ಅವಕಾಶ
- ಕೇಂದ್ರದ ಪ್ರತಿಕ್ರಿಯೆ ಸಲ್ಲಿಕೆಗೆ ಎರಡು ವಾರ ಸಮಯ
- ಸುದ್ದಿಗೆ ಏಕಪಕ್ಷೀಯವಾಗಿ ತಡೆ ಹೇರಲು ಅಧಿಕಾರವಿಲ್ಲ: ಕೇಂದ್ರ

ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ: ಶಾ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಮುಂದಿನ ವಿಧಾನಸಭಾ ಚುನಾವಣೆ ಎದುರಿಸುವುದಾಗಿ ಗೃಹ ಸಚಿವ ಅಮಿತ್ ಶಾ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ದಾವಣಗೆರೆಯಲ್ಲಿ ಗಾಂಧಿ ಭವನ, ಪೊಲೀಸ್ ಪಬ್ಲಿಕ್ ವಸತಿ ಶಾಲೆ, ಪೊಲೀಸ್ ವಸತಿಗೃಹಗಳನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಶಾ, 'ಆಡಳಿತದಲ್ಲಿ, ಸಾರ್ವಜನಿಕ ಜೀವನದಲ್ಲಿ ಬಸವರಾಜ ಬೊಮ್ಮಾಯಿ ಅಪಾರ ಅನುಭವ ಹೊಂದಿದ್ದು, ಅವರ ನೇತೃತ್ವದಲ್ಲಿ ಬಿಜೆಪಿ ಮತ್ತೊಮ್ಮೆ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿದ ಬಗ್ಗೆ ಬಿಜೆಪಿಯಲ್ಲಿ ಒಳಗೊಳಗೇ ಅಸಮಾಧಾನಗೊಂಡಿರುವವರಿಗೆ ಶಾ ಅವರ ಈ ಮಾತುಗಳು ಪಕ್ಷದ ನಾಯಕತ್ವದ ಬಗ್ಗೆ ಸ್ಪಷ್ಟ ಸಂದೇಶ ರವಾನಿಸಿವೆ ಎಂಬ ವಿಶ್ಲೇಷಣೆ ನಡೆದಿದೆ. ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಂದಿನ ಚುನಾವಣೆ ನಳಿನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಕೆಲವು ದಿನಗಳ ಹಿಂದೆ ಹೇಳಿದ್ದರು.

ಅಮಿತ್ ಶಾ

ಬೊಮ್ಮಾಯಿ ಬೆನ್ನು ತಟ್ಟಿದ ಶಾ: 'ಬಿ.ಎಸ್. ಯಡಿಯೂರಪ್ಪ ಸರ್ಕಾರದ ಅವಧಿಯಲ್ಲಿ ಕರ್ನಾಟಕದಲ್ಲಿ ಅಭಿವೃದ್ಧಿಯ ಯುಗ ಆರಂಭವಾಯಿತು. ಹೊಸ ವ್ಯಕ್ತಿಗೆ ಜವಾಬ್ದಾರಿ ನೀಡಬೇಕು ಎಂದು ಯಡಿಯೂರಪ್ಪ ಸ್ವಯಂ ನಿರ್ಧಾರ ಕೈಗೊಂಡಿದ್ದರಿಂದ ಬೊಮ್ಮಾಯಿ ಅವರಿಗೆ ಮುಖ್ಯಮಂತ್ರಿ ಹೊಣೆಗಾರಿಕೆ ನೀಡಲು ಬಿಜೆಪಿ ನಿರ್ಧರಿಸಿತು. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ವಿಶೇಷವಾಗಿ ಹಳ್ಳಿಗಳ ಹಾಗೂ ರೈತರ ಅಭಿವೃದ್ಧಿಗಾಗಿ ಎಲ್ಲಾ ಬಗೆಯ ಕ್ರಮಗಳನ್ನೂ ಕೈಗೊಂಡಿದ್ದಾರೆ. ಅವರ ಸರ್ಕಾರದಲ್ಲಿ ಕೆಲಸ ಮಾಡಿರುವ ಹಾಗೂ ಸಾರ್ವಜನಿಕ ಜೀವನದಲ್ಲಿ ಅನುಭವ ಹೊಂದಿರುವ ಬೊಮ್ಮಾಯಿ ಅವರು ಕೂಡ ಉತ್ತಮವಾಗಿ ಕೆಲಸ ಮಾಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ವಿವಿಐಪಿ ವ್ಯವಸ್ಥೆಯಲ್ಲಿ ಕೆಲವನ್ನು ಕೈಬಿಟ್ಟಿದ್ದಾರೆ. ಆಡಳಿತದಲ್ಲಿ ಪಾರದರ್ಶಕತೆ ತರಲು ಹಲವು ಕ್ರಮ ಕೈಗೊಳ್ಳುವ ಮೂಲಕ ಅಧಿಕಾರ ಸ್ವೀಕರಿಸಿದ ಅಲ್ಪಾವಧಿಯಲ್ಲೇ ಬದಲಾವಣೆಗಳನ್ನು ತಂದಿದ್ದಾರೆ. ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿರುವುದರಿಂದ ಬಿಜೆಪಿ ತನ್ನನ್ನು ತಾನು ಮತ್ತಷ್ಟು ಗಟ್ಟಿ ಮಾಡಿಕೊಂಡಿದೆ ಎಂದು ಕರ್ನಾಟಕ ಸರ್ಕಾರವನ್ನು ಹತ್ತಿರದಿಂದ ನೋಡುತ್ತಿರುವ ದೆಹಲಿಯಲ್ಲಿರುವವರು ಹೇಳುತ್ತಿದ್ದಾರೆ. ಬೊಮ್ಮಾಯಿ ಉತ್ತಮ ಆಡಳಿತ ನೀಡುವ ಮೂಲಕ ದೇಶದ ವಿಕಾಸದಲ್ಲಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವನ್ನೂ ಮುಂಚೂಣಿಗೆ ತರಲಿ' ಎಂದು ಅಮಿತ್ ಶಾ ಆಶಿಸಿದರು.

'ಪೆಟ್ರೋಲ್, ಟೊಮೆಟೊ, ಈರುಳ್ಳಿ ಬಗ್ಗೆ ಮಾತನಾಡಲ್ಲ'

ಬೆಂಗಳೂರು: 'ಒಂದು ಪೆಟ್ರೋಲ್... ಒಂದು ಟೊಮೆಟೊ ... ಒಂದು ಈರುಳ್ಳಿ ಬಗ್ಗೆ ನಾನು ಮಾತನಾಡಲ್ಲ. ಆರ್ಥಿಕ ತಜ್ಞರ ರೀತಿಯಲ್ಲಿ ನೀವು (ಪತ್ರಕರ್ತರು) ಪ್ರಶ್ನೆ ಕೇಳಬೇಕು..'

– ಹೀಗೆಂದು ಸುದ್ದಿ ಮಾಧ್ಯಮಗಳಿಗೆ ಪಾಠ ಮಾಡಿದ್ದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್.

ಗುರುವಾರ ನಡೆದ ಬೆಂಗಳೂರು ನಗರ ಉತ್ತರ, ದಕ್ಷಿಣ ಮತ್ತು ಕೇಂದ್ರ ಜಿಲ್ಲೆಗಳ ಪಕ್ಷದ ಪದಾಧಿಕಾರಿಗಳ ಸಭೆಯ ಬಳಿಕ ಅಡುಗೆ ಅನಿಲ ಮತ್ತು ಪೆಟ್ರೋಲ್ ಬೆಲೆ ಏರಿಕೆಯ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಮೇಲಿನಂತೆ ಉತ್ತರ ನೀಡಿದರು.

'ಅಡುಗೆ ಅನಿಲ, ಪೆಟ್ರೋಲ್ ಬೆಲೆ ಗಗನಕ್ಕೇರಿದೆ. ಇದನ್ನು ತಗ್ಗಿಸಲು ಏನು ಮಾಡುತ್ತಿದ್ದೀರಿ, ಜನರಿಗೆ ಏನು ಸಂದೇಶ ನೀಡುತ್ತೀರಿ' ಎಂಬ ಪ್ರಶ್ನೆಗೆ 'ನೋಡಿ ಪ್ರಧಾನಿ ಮಂತ್ರಿ ಮೋದಿಯವರ ನೇತೃತ್ವದಲ್ಲಿ ಬಡವರಿಗೆ ಎಲ್ಲ ರೀತಿಯಿಂದಲೂ ನೆರವು ಸಿಗುತ್ತಿದೆ. ಪ್ರತಿ ಮನೆಗಳಿಗೂ ನಲ್ಲಿಯಿಂದ ನೀರು ಪೂರೈಕೆ ಮಾಡುವ ಕೆಲಸ ನಡೀತಿದೆ. ರೈತರ ಖಾತೆಗಳಿಗೆ ₹ 6 ಸಾವಿರ ಹಾಕುತ್ತಿದ್ದೇವೆ... ಭಾರತ್ ಮಾಲಾ ಯೋಜನೆಯಡಿ ರಸ್ತೆಗಳನ್ನು ನಿರ್ಮಿಸುತ್ತಿದ್ದೇವೆ' ಎಂದು ಹೇಳುವ ಮೂಲಕ ವಿಷಯಾಂತರಕ್ಕೆ ಯತ್ನಿಸಿದರು.

6ನೇ ಪುಟ ನೋಡಿ

ಒಳ ಪುಟ

ಹಕ್ಕಿಗಾಗಿ ಬೀದಿಗಿಳಿದ ಅಫ್ಗನ್ ಮಹಿಳೆ 11

ರಾಜ್ಯ ಕೋವಿಡ್ ಅಂಕಿ–ಅಂಶ

29,51,844 ▲	ಒಟ್ಟು ಸೋಂಕಿತರು (29,50,604 ನಿನ್ನೆಯ ವಿವರ)
18,378 ▼	ಸಕ್ರಿಯ ಪ್ರಕರಣಗಳು
28,96,079 ▲	ಗುಣಮುಖರಾದವರು
37,361 ▲	ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	1,240	▲
ಗುಣಮುಖ	1,252	▲
ಸಾವು	22	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಚಿನಕುರಳಿ

ಪ್ರಕಾಶ್ ಶೆಟ್ಟಿ





ಕೋವಿಡ್ 2ನೇ ಅಲೆ ನಡುವೆಯೂ ₹170 ಕೋಟಿ ಹೆಚ್ಚುವರಿ ಕರ ವಸೂಲಿ

ಆಸ್ತಿ ತೆರಿಗೆ: 5 ತಿಂಗಳಲ್ಲಿ ₹2 ಸಾವಿರ ಕೋಟಿ ಸಂಗ್ರಹ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ಎರಡನೇ ಅಲೆ ನಡುವೆಯೂ ಕಳೆದ ಐದು ತಿಂಗಳಲ್ಲಿ ₹2,052 ಕೋಟಿ ಆಸ್ತಿ ತೆರಿಗೆಯನ್ನು ಬಿಬಿಎಂಪಿ ಸಂಗ್ರಹಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ₹170.77 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗಿದೆ.

ಲಾಕ್‌ಡೌನ್ ಇದ್ದರೂ ಆನ್‌ಲೈನ್ ಮೂಲಕ ಅಧಿಕ ಪ್ರಮಾಣದ ತೆರಿಗೆ ಪಾವತಿಯಾಗಿದೆ. ₹1,121 ಕೋಟಿ ಆನ್‌ಲೈನ್ ಮೂಲಕವೇ ಪಾವತಿಯಾಗಿದ್ದರೆ, ₹930 ಕೋಟಿ ಬ್ಯಾಂಕ್ ಖಾತೆಗೆ ಸಂದಾಯವಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಮೊದಲ ಹಂತದಲ್ಲಿ ನೋಟಿಸ್ ನೀಡಬೇಕು. ಅದಕ್ಕೂ ಜಗ್ಗದಿದ್ದರೆ ವಾರಂಟ್ ಜಾರಿ ಮಾಡಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಕಂದಾಯ ವಿಭಾಗದ ಅಧಿಕಾರಿಗಳಿಗೆ ಈ ಹಿಂದೆ ತಾಕೀತು ಮಾಡಿದ್ದರು. ಹೊಸ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಸೇರಿಸುವ ಸಂಬಂಧ ಜಿಐಎಸ್ ಮತ್ತು ಡ್ರೋನ್ ಮೂಲಕ ಸರ್ವೆ ನಡೆಸುವಂತೆಯೂ ತಿಳಿಸಿದ್ದರು.

ಪ್ರತಿ ವಲಯದಲ್ಲೂ ಖಾತಾ ಮೇಳ ಏರ್ಪಡಿಸಿ ಆಸ್ತಿ ಮಾಲೀಕರಿಗೆ ನಿಗದಿತ ಸಮಯದಲ್ಲಿ ಖಾತಾ ದೊರೆಯುವಂತೆ ನೋಡಿಕೊಳ್ಳಬೇಕು. ಆಸ್ತಿ ತೆರಿಗೆ ಸಂಗ್ರಹ ಮಾಡುವ ವಿಷಯದಲ್ಲಿ ಯಾರೊಬ್ಬರೂ ಸಬೂಬು ಹೇಳದೆ ಕೆಲಸ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

‘ಆಸ್ತಿ ತೆರಿಗೆ ವಸೂಲಿ ಅಭಿಯಾನ ಆರಂಭಿಸಲಾಗಿದೆ. ಪ್ರತಿ ಬುಧವಾರ ಈ ಅಭಿಯಾನ ನಡೆಯುತ್ತಿದೆ. ತೆರಿಗೆ ಬಾಕಿ ಉಳಿಸಿಕೊಂಡಿರುವ 3 ಲಕ್ಷಕ್ಕೂ ಹೆಚ್ಚು ಸುಸ್ತಿದಾರರ ಪೈಕಿ 1.41 ಲಕ್ಷ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಅದರಿಂದಲೇ ₹120 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಮುಖ್ಯ ಆಯುಕ್ತರ ನಿರ್ದೇಶನದಂತೆ ಖಾತಾ ಮೇಳ ಮಾಡಿ 21 ಸಾವಿರ ಹೊಸ ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಜೋಡಣೆ ಮಾಡಿಕೊಳ್ಳಲಾಗಿದೆ. ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ವಲಯದಲ್ಲಿ ಇನ್ನೂ ಹೆಚ್ಚಿನ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬರಬೇಕಿದೆ. ವಿಶೇಷ ಖಾತಾ ಮೇಳದ ಮೂಲಕ 1 ಲಕ್ಷದಷ್ಟು ಹೊಸ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಸೂಚನೆ ನೀಡಲಾಗಿದೆ’ ಎಂದು ಅವರು ಹೇಳಿದರು.



ನಗರದಲ್ಲಿ ಇಂದು

ರಾಮರಾಜ್ ಮಳಿಗೆ ಉದ್ಘಾಟನೆ: ಎಸ್. ಆರ್. ವಿಶ್ವನಾಥ್, ಸ್ಥಳ: ನಂ.792, ಮದರ್ ಡೈರಿ ರಸ್ತೆ, ಯಲಹಂಕ ನ್ಯೂ ಟೌನ್, ಬೆಳಿಗ್ಗೆ 10

ರಾಷ್ಟ್ರೀಯ ವಿಚಾರ ಸಂಕಿರಣ: ‘ರಾಷ್ಟ್ರೀಯ ಶಿಕ್ಷಣ ನೀತಿ-2021’, ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಮೌಂಟ್ ಕಾರ್ಮೆಲ್ ಕಾಲೇಜು, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10.30

ಉದ್ಯೋಗ ಮೇಳಕ್ಕೆ ಚಾಲನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ: ನಾರಾಯಣ ಟ್ರೈನಿಂಗ್ ಸರ್ವೀಸಸ್, ವಾಲಿಬಾಲ್ ಒಳಾಂಗಣ ಕ್ರೀಡಾಂಗಣ, 6ನೇ ಅಡ್ಡ ರಸ್ತೆ, 5ನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9.30

60 ವಸಂತಗಳ ಸಂಭ್ರಮ: ಉದ್ಘಾಟನೆ ಹಾಗೂ ಚಿನ್ನದ ಪದಕ ವಿತರಣೆ: ಬಸವರಾಜ ಬೊಮ್ಮಾಯಿ, ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ಅಂಚೆ ಲಕೋಟೆ ಬಿಡುಗಡೆ: ಬಿ. ಶ್ರೀರಾಮುಲು, ಆನ್‌ಲೈನ್ ವ್ಯವಸ್ಥೆ ಉದ್ಘಾಟನೆ: ಶಿವರಾಮ ಹೆಬ್ಬಾರ್, ಬಿ.ಸಿ. ನಾಗೇಶ್, ಕೋಟ ಶ್ರೀನಿವಾಸ ಪೂಜಾರಿ, ಎಂ. ಚಂದ್ರಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ನಗರದ ಹೊರ ವರ್ತುಲ ರಸ್ತೆಯಲ್ಲಿ ಇರುವ ಅದ್ವೈತ್ ಹುಂಡೈ ಷೋರೂಂನಲ್ಲಿ ಗುರುವಾರ ಹುಂಡೈ ಕಂಪನಿಯ ಹೊಸ ‘ಐ20 ಎನ್ ಲೈನ್’ ಕಾರು ಬಿಡುಗಡೆ ಮಾಡಲಾಯಿತು. ಚೇತನ್ ಶಿವರಾಂ ಮತ್ತು ಅದ್ವೈತ್ ಹುಂಡೈ ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ನಿರ್ದೇಶಕ ಎಲ್.ಎನ್. ಅಜಯ್ ಸಿಂಗ್ ಇದ್ದರು

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 3 ಮತ್ತು 4ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

3: ಅಜಿತ್ ಸೇಠ್ ಕೈಗಾರಿಕಾ ಪ್ರದೇಶ, ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, ಮೂಕಾಂಬಿಕಾ ಬಡಾವಣೆ, ಬಿಎಚ್‌ಇಎಲ್ ಬಡಾವಣೆ, ಜಿ.ಎಂ.ಕಾಟೇಜ್, ಎನ್.ಆರ್. ಫ್ಯಾಷನ್ಸ್, ಕೆಎಚ್‌ಬಿ ಬಡಾವಣೆ, ಸರ್ ಎಂ.ವಿ. ಬ್ಲಾಕ್, ಉಲ್ಲಾಳ ಬಸ್ ನಿಲ್ದಾಣ, ಬಿಡಿಎ ಕಾಲೊನಿ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

4: ಗುರು ಸಾರ್ವಭೌಮ ಬಡಾವಣೆ, ಐಟಿಐ ಬಡಾವಣೆ, ಬೆಂಗಳೂರು ವಿಶ್ವವಿದ್ಯಾಲಯ ಆವರಣ, ಅರಣ್ಯ ಬಡಾವಣೆ, ಮುತ್ತುರಾಯನ ನಗರ, ಡಿಸೋಜ ಬಡಾವಣೆ, ನಾಯಂಡಹಳ್ಳಿ, ಪ್ರಮೋದ್ ಬಡಾವಣೆ, ಜವರಾಯನ ದೊಡ್ಡಿ, ಗಂಗೊಂಡನಹಳ್ಳಿ, ಮೈಸೂರು ರಸ್ತೆ, ಪಂತರಪಾಳ್ಯ, ಮಾರಪ್ಪ ಬಡಾವಣೆ, ಸುಭಾಷ್ ಭವನ, ಆದಿತ್ಯ ಬಡಾವಣೆ, ಕೆಂಚೇನಹಳ್ಳಿ, ರಾಜರಾಜೇಶ್ವರಿ ನಗರ, ಐಡಿಯಲ್ ಹೋಮ್ಸ್, ವಿನಾಯಕ ಬಡಾವಣೆ, ಕೆಂಗೇರಿ ಉಪನಗರ, ಮೈಲಸಂದ್ರ, ಮೈಸೂರು ರಸ್ತೆ, ಅತ್ತಿಗುಪ್ಪೆ.

ಅಂಜನಾನಗರ, ಮಾರುತಿ ನಗರ, ದಾಬಸ್ ಪಾಳ್ಯ, ಮರಿಯಪ್ಪನಪಾಳ್ಯ, ಸೊನ್ನೇನಹಳ್ಳಿ, ಭುವನೇಶ್ವರಿ ನಗರ, ರಾಮಸಂದ್ರ, ಕೆಂಚಾಪುರ, ಸುಳ್ಳಿಕೆರೆ ಪಾಳ್ಯ, ಕೆಎಚ್‌ಬಿ ಪ್ಲಾಟಿನಮ್, ನುಗ್ಗೇನಪಾಳ್ಯ, ಜ್ಞಾನಭಾರತಿ ಬಡಾವಣೆ, ಮಾಗಡಿ ಮುಖ್ಯರಸ್ತೆ, ಉಲ್ಲಾಳ ಮುಖ್ಯರಸ್ತೆ, ಪ್ರೆಸ್ ಬಡಾವಣೆ, ಸರ್ ಎಂ.ವಿ. ಬಡಾವಣೆ ಐದನೇ ಹಂತ, ಕೆಂಗುಂಟೆ, ಮಲ್ಲತ್ತಹಳ್ಳಿ, ಡಿ ಗ್ರೂಪ್ ಬಡಾವಣೆ, ದೊಡ್ಡಬಸ್ತಿ, ಚಿಕ್ಕಬಸ್ತಿ, ರಾಮಸಂದ್ರ, ಗಾಯತ್ರಿ ಬಡಾವಣೆ, ಅಮ್ಮ ಆಶ್ರಮ, ಆರ್.ಆರ್. ಬಡಾವಣೆ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಐಬಿಎಂ, ಸೀಮನ್ಸ್, ಮಾನ್ಯತಾ ರೆಸಿಡೆನ್ಸಿ, ಬಿ.ಟಿ.ಎಸ್. ಲೂಸೆಂಟ್, ಗೋದ್ರೇಜ್ ಅಪಾರ್ಟ್‌ಮೆಂಟ್, ಹೆಬ್ಬಾಳ, ಕೆಂಪಾಪುರ, ವಿನಾಯಕ ಬಡಾವಣೆ, ಚಿರಂಜೀವಿ ಬಡಾವಣೆ, ವೆಂಕಟೇಗೌಡ ಬಡಾವಣೆ, ಜೆಎನ್‌ಸಿ, ಎಲ್5 ನೋಕಿಯಾ, ಮಧುವನ ಬ್ಲಾಕ್, ರಾಚೇನಹಳ್ಳಿ, ಶ್ರೀರಾಂಪುರ, ಚಾಮುಂಡೇಶ್ವರಿ ಬಡಾವಣೆ, ರಾಯಲ್ ಎನ್‌ಕ್ಲೇವ್, ಮೇಸ್ತ್ರಿ ಪಾಳ್ಯ, ಥಣಿಸಂದ್ರ, ಎಸ್‌ಎನ್‌ಎನ್ ಕ್ಲೆರ್‌ಮೌಂಟ್, ಕಾರ್ಲೆ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಸಂಕ್ಷಿಪ್ತ ಸುದ್ದಿ

ಶಿಕ್ಷಕರ ವರ್ಗ: ಅವಧಿ ವಿಸ್ತರಣೆ

ಬೆಂಗಳೂರು: 2020-21ನೇ ಸಾಲಿನ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಅರ್ಹ ಶಿಕ್ಷಕರಿಗೆ ಹೊಸತಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನವನ್ನು ಇದೇ 8ರವರೆಗೆ ವಿಸ್ತರಿಸಲಾಗಿದೆ.

ವರ್ಗಾವಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಜೂನ್ 30ರಂದು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿತ್ತು, ಅದರ ಅನ್ವಯ ಹೊಸತಾಗಿ ಅರ್ಜಿ ಸಲ್ಲಿಸುವ ಶಿಕ್ಷಕರಿಗೆ ಸೆ. 2 ಕೊನೆಯ ದಿನವಾಗಿತ್ತು. ಇದೀಗ ಮತ್ತೆ ಅವಧಿ ವಿಸ್ತರಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ತರಬೇತಿ ಕಾರ್ಯಾಗಾರ

ಬೆಂಗಳೂರು: ತೋಟಗಾರಿಕೆ ನಿರ್ದೇಶನಾಲಯವು ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಇದೇ 4ರಂದು ಅಣಬೆ ಬೇಸಾಯ ತರಬೇತಿ ಕಾರ್ಯಾಗಾರ ಹಮ್ಮಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಹುಳಿಮಾವು ತೋಟಗಾರಿಕೆ ಜೈವಿಕ ಕೇಂದ್ರದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ಇದರಲ್ಲಿ ಪಾಲ್ಗೊಳ್ಳುವವರು ₹250 ಶುಲ್ಕ ಪಾವತಿಸಿ ಹೆಸರು ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗೆ 94498 33153 ಅಥವಾ 9066764248ಗೆ ಕರೆ ಮಾಡಬಹುದು.

ಜಿಐ ಉತ್ಪನ್ನಗಳ ಪ್ರದರ್ಶನ, ಮಾರಾಟ

ಬೆಂಗಳೂರು: ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು (ವಿಟಿಪಿಸಿ) ದಸ್ತಕರ್ ಸ್ವಯಂಸೇವಾ ಸಂಸ್ಥೆಯ ಸಹಯೋಗದಲ್ಲಿ ಇದೇ 7ರವರೆಗೆ ಭೌಗೋಳಿಕ ಸನ್ನದು (ಜಿಐ) ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಂಡಿದೆ. ಜಿಐ ಉತ್ಪನ್ನಗಳ ಪರಂಪರೆ ಮತ್ತು ಕಲೆಯನ್ನು ಉತ್ತೇಜಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಮೇಳವು ಜಯಮಹಲ್ ಪ್ಯಾಲೇಸ್‌ನಲ್ಲಿ ನಿಗದಿಯಾಗಿದೆ.

ಸಂಡೂರಿನ ಬಂಜಾರ ಕಸೂತಿ ಕಲೆಯ ಉತ್ಪನ್ನಗಳು, ಬಿದಿರು ಕಲೆ, ಚನ್ನಪಟ್ಟಣದ ಬೊಂಬೆ ಮತ್ತು ಆಟಿಕೆ, ಮೈಸೂರಿನ ಸಾಂಪ್ರದಾಯಿಕ ಕಲಾಕೃತಿ ಹಾಗೂ ಇನ್ನಿತರ ಉತ್ಪನ್ನಗಳ ಪ್ರದರ್ಶನ ನಡೆಯಲಿದೆ.

ಸುದ್ದಿ 2 ನಿಮಿಷ

ವೈಎಸ್‌ಆರ್ ಕುಟುಂಬದಲ್ಲಿ ಬಿರುಕು?

ಹೈದರಾಬಾದ್: ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿ ಅವರ ಸ್ಮರಣಾರ್ಥ, ಅವರ ಪತ್ನಿ ವೈ.ಎಸ್. ವಿಜಯಮ್ಮ ಅವರು ಗುರುವಾರ ಇಲ್ಲಿ ಏರ್ಪಡಿಸಿದ್ದ ಸಭೆಗೆ ಅವರ ಪುತ್ರ, ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಗೈರಾಗಿದ್ದರು.

ಹೈದರಾಬಾದಿನಲ್ಲಿ ನಡೆದ 12ನೇ ವಾರ್ಷಿಕೋತ್ಸವ ಸಭೆಗೆ ಜಗನ್ ಹಾಜರಾಗದಿರುವುದು ಮತ್ತು ಎಡುಪುಲಪಾಯದಲ್ಲಿ ನಡೆದ ಕಾರ್ಯಕ್ರಮಗಳನ್ನು ಗಮನಿಸಿದರೆ ವೈಎಸ್‌ಆರ್ ಕುಟುಂಬದಲ್ಲಿ ಬಿರುಕು ಮೂಡಿರಬಹುದು ಎಂದು ರಾಜಕೀಯ ವಿಶ್ಲೇಷಕರು ಸಂಶಯ ಪಟ್ಟಿದ್ದಾರೆ.

ಜಗನ್ ಅವರ ಸಹೋದರಿ ವೈ.ಎಸ್.ಶರ್ಮಿಳಾ ಅವರು ತೆಲಂಗಾಣ ರಾಜಕೀಯಕ್ಕೆ ಧುಮುಕಿದ್ದರಿಂದ ಈ ಬಿರುಕು ಮೂಡಿದೆ ಎಂಬುದು ಅವರ ವಿಶ್ಲೇಷಣೆ.

ಜಗನ್ ಅವರು ತನ್ನ ರಾಜಕೀಯ ಚಟುವಟಿಕೆಯನ್ನು ಆಂಧ್ರ ಪ್ರದೇಶಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಅವರ ಸಹೋದರಿ ಶರ್ಮಿಳಾ ಅವರು ಸಹೋದರನ ಅಸಮ್ಮತಿಯ ಹೊರತಾಗಿಯೂ ತೆಲಂಗಾಣ ರಾಜಕೀಯ ಪ್ರವೇಶಿಸಿದ್ದಾರೆ.

ಹೈದರಾಬಾದ್ ಸ್ಟಾರ್ ಹೋಟೆಲ್‌ನಲ್ಲಿ ಸಂಜೆ ನಡೆದ ಕೂಟದಲ್ಲಿ ವೈಎಸ್‌ಆರ್ ನಿಷ್ಠರು, ರಾಜಕಾರಣಿಗಳು, ಕೈಗಾರಿಕೋದ್ಯಮಿಗಳು, ಮಾಜಿ ಅಧಿಕಾರಿಗಳು ಭಾಗವಹಿಸಿದ್ದರು. ರಾಜಕೀಯವಾಗಿ ಶರ್ಮಿಳಾ ಅವರ ಕೈಬಲಪಡಿಸುವ ನಿಟ್ಟಿನಲ್ಲಿ ಈ ಸಭೆ ನಡೆದಿದೆ ಎಂದು ಹೇಳಲಾಗುತ್ತಿದೆ.

ಜುಲೈ 8ರಂದು ವೈಎಸ್‌ಆರ್ ಜನ್ಮ ದಿನಾಚರಣೆಯಂದು ಶರ್ಮಿಳಾ ಅವರು ವೈಎಸ್‌ಆರ್ ತೆಲಂಗಾಣ ಪಕ್ಷವನ್ನು (ವೈಎಸ್‌ಆರ್‌ಟಿಪಿ) ಘೋಷಿಸಿದ್ದರು.

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಜಲಮಂಡಳಿಯು ಇದೇ 4ರಂದು (ಶನಿವಾರ) ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅಹವಾಲು ಆಲಿಸಲಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮತ್ತು ಕೊಳವೆಗಳಿಂದ ತ್ಯಾಜ್ಯ ನೀರು ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಹೇಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ದಸರಾ ಮಹೋತ್ಸವ: ಸಭೆ ಇಂದು

ಮೈಸೂರು: ನಾಡಹಬ್ಬ ದಸರಾ ಮಹೋತ್ಸವ ಆಚರಣೆ ಬಗ್ಗೆ ಪೂರ್ವಭಾವಿಯಾಗಿ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ಸಭೆಯು ಶುಕ್ರವಾರ (ಸೆ.3) ಸಂಜೆ 4 ಗಂಟೆಗೆ ವಿಧಾನಸೌಧದಲ್ಲಿ ನಡೆಯಲಿದೆ.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಮೈಸೂರು ಭಾಗದ ಸಂಸದರು, ಶಾಸಕರು ಹಾಗೂ ಜಿಲ್ಲಾಧಿಕಾರಿ ಪಾಲ್ಗೊಳ್ಳಲಿದ್ದಾರೆ.

ಈ ಬಾರಿ ದಸರೆಯು ಅ.7ರಿಂದ 15ವರೆಗೆ ನಡೆಯಲಿದ್ದು, ಪೂರ್ವಸಿದ್ಧತೆ ಆರಂಭವಾಗಿಲ್ಲ. ಕೋವಿಡ್ ಮೂರನೇ ಅಲೆ ಕಾರಣ ಈ ಬಾರಿಯೂ ಸರಳ ಹಾಗೂ ಸಾಂಪ್ರದಾಯಿಕ ದಸರೆ ಬಗ್ಗೆಯೇ ಜನಪ್ರತಿನಿಧಿಗಳು ಒಲವು ತೋರಿದ್ದು, ಅದನ್ನೇ ಸಭೆಯಲ್ಲಿ ಮಂಡಿಸುವುದಾಗಿ ಹೇಳಿದ್ದಾರೆ.

ಉನ್ನತ ಮಟ್ಟದ ಸಮಿತಿಯು ನಾಡಹಬ್ಬದ ಆಚರಣೆ ಬಗ್ಗೆ ತಜ್ಞರ ಸಲಹೆ ಕೇಳುವ ನಿರೀಕ್ಷೆ ಇದೆ. ಕಳೆದ ಬಾರಿಯೂ ದಸರೆ ಸರಳವಾಗಿತ್ತು. ಚಾಮುಂಡಿ ಬೆಟ್ಟ ಹಾಗೂ ಅರಮನೆ ಆವರಣಕ್ಕೆ ಸೀಮಿತವಾಗಿ ಕಾರ್ಯಕ್ರಮಗಳು ನಡೆದಿದ್ದವು.

ಕಾರ್ಮಿಕರಿಗೆ ಲಸಿಕೆ ಒದಗಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕ ಇಲಾಖೆಯ ಸಹಯೋಗದಲ್ಲಿ 18 ವರ್ಷ ಮೇಲ್ಪಟ್ಟ ಕಟ್ಟಡ ಕಾರ್ಮಿಕರಿಗೆ ಕೋವಿಡ್ ಲಸಿಕಾ ಅಭಿಯಾನ ನಡೆಸಬೇಕು. 15 ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಕಾರ್ಮಿಕರು ಇರುವಲ್ಲಿ ಹತ್ತಿರದ ನಿಗದಿತ ಖಾಸಗಿ ಸ್ಥಳಗಳನ್ನು ಗುರುತಿಸಿ, ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಬೇಕು' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಕಟ್ಟಡ ಕಾರ್ಮಿಕರ ಹೆಚ್ಚಾಗಿ ಕೋವಿಡ್ ಪೀಡಿತರಾಗುತ್ತಿದ್ದಾರೆ. ಸಂಭಾವ್ಯ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಕಾರ್ಮಿಕರು ಹಾಗೂ ಅವರ ಕುಟುಂಬದ ಸದಸ್ಯರಿಗೆ ರಕ್ಷಣೆ ಒದಗಿಸಬೇಕಿದೆ. ಹೀಗಾಗಿ, ಖಾಸಗಿ ಆರೋಗ್ಯ ಸಂಸ್ಥೆಗಳೊಂದಿಗೆ ಕೈಜೋಡಿಸಿ, ಲಸಿಕಾ ಅಭಿಯಾನವನ್ನು ನಡೆಸಬೇಕು. ಕಾರ್ಮಿಕರು ಹಾಗೂ ಅವರ ಕುಟುಂಬದ ಅರ್ಹ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಕ್ರಿಯಾಯೋಜನೆ ರೂಪಿಸಬೇಕು' ಎಂದು ಹೇಳಿದ್ದಾರೆ.

ಆಶ್ರಯ ಕೇಂದ್ರ: ಹೆಚ್ಚಳಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ನಿರಾಶ್ರಿತರ ಅನುಕೂಲಕ್ಕಾಗಿ ಆಶ್ರಯ ಕೇಂದ್ರಗಳ ಸಂಖ್ಯೆ ಹೆಚ್ಚಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಂದಾಗಿದೆ.

'ನಗರದಲ್ಲಿ ಈಗಾಗಲೇ 10 ಆಶ್ರಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಖ್ಯೆಯನ್ನು 40ಕ್ಕೆ ಏರಿಸಲು ಉದ್ದೇಶಿಸಿದ್ದು, ಈಗಾಗಲೇ ಸ್ಥಳಗಳನ್ನು ಗುರುತಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ವಲಯವಾರು ನಿರ್ಗತಿಕರ ಆಶ್ರಯ ಕೇಂದ್ರ ಪ್ರಾರಂಭ ಮಾಡಲಾಗಿದೆ. ಅಲ್ಲಿ ಊಟದ ವ್ಯವಸ್ಥೆ, ಮಲಗಲು ಬೇಕಾದ ವ್ಯವಸ್ಥೆ ಇರುತ್ತದೆ' ಎಂದರು.

ಅವಧಿ ವಿಸ್ತರಣೆ: 'ನಗರದಲ್ಲಿ ಬುಧವಾರ ನಡೆದ ಲಸಿಕೆ ಮೇಳದಲ್ಲಿ 1.30 ಲಕ್ಷ ಗುರಿಯನ್ನು ಮೀರಿ, 1.85 ಲಕ್ಷ ಲಸಿಕೆ ವಿತರಿಸಲಾಗಿದೆ' ಎಂದು ಅವರು ತಿಳಿಸಿದರು.

'ಶೇ 95ಕ್ಕೂ ಹೆಚ್ಚು ಜನರಿಗೆ ಮೊದಲ ಡೋಸ್ ಲಸಿಕೆ ವಿತರಿಸುವ ಗುರಿ ಇದ್ದು, ಇದಕ್ಕಾಗಿ, ಲಸಿಕಾ ವಿತರಣಾ ಕೇಂದ್ರಗಳ ಕೆಲಸದ ಅವಧಿಯನ್ನು ವಿಸ್ತರಿಸಲಾಗಿದೆ. 50 ಕೇಂದ್ರಗಳಲ್ಲಿ ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ ಲಸಿಕೆ ನೀಡಲಾಗುತ್ತದೆ. ಜತೆಗೆ, ಕೆಲವು ಕೊಳೆಗೇರಿ ಹಾಗೂ ಹಿಂದುಳಿದ ಬಡಾವಣೆಗಳಲ್ಲಿ ಲಸಿಕಾ ಕೇಂದ್ರಗಳು ಕಾರ್ಯನಿರ್ವಹಿಸಲಿವೆ' ಎಂದು ಗೌರವ್ ಗುಪ್ತ ಮಾಹಿತಿ ನೀಡಿದರು.

'ಸುರಕ್ಷಿತ ಗಣೇಶೋತ್ಸವಕ್ಕೆ ಆದ್ಯತೆ'

ಗೌರವ್ ಗುಪ್ತ

'ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನು ಗೌರವಿಸಬೇಕು, ಅದರ ಜೊತೆಗೆ ಕೋವಿಡ್ ಮಾರ್ಗಸೂಚಿಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದು ನಮ್ಮ ಆದ್ಯತೆ. ಈ ನಿಟ್ಟಿನಲ್ಲಿ ಸರಳ ಮತ್ತು ಸುರಕ್ಷಿತ ಗಣೇಶೋತ್ಸವಕ್ಕೆ ಅವಕಾಶ ನೀಡಲಾಗುವುದು' ಎಂದು ಗೌರವ್ ಗುಪ್ತ ಹೇಳಿದರು.

'ನೆರೆಯ ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಹಬ್ಬದ ಸಂಭ್ರಮದಲ್ಲಿ ಸೋಂಕು ವ್ಯಾಪಕವಾಗಿ ಹರಡದಂತೆ ತಡೆಯಬೇಕಾದ ಅಗತ್ಯವೂ ಇದೆ' ಎಂದೂ ಹೇಳಿದರು.

ಸೆರೊ ಸಮೀಕ್ಷೆ ಪ್ರಾಥಮಿಕ ವರದಿಯಲ್ಲಿ ಬಹಿರಂಗ

ನಗರದ ಶೇ 75ರಷ್ಟು ಜನರಲ್ಲಿ ಪ್ರತಿಕಾಯ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶೇ 75ರಷ್ಟು ಮಂದಿಯಲ್ಲಿ ಪ್ರತಿಕಾಯ ವೃದ್ಧಿಯಾಗಿದೆ (ರೋಗ ನಿರೋಧಕ ಶಕ್ತಿ) ಎಂದು ಬಿಬಿಎಂಪಿ ನಡೆಸಿದ ಸೆರೊ ಸಮೀಕ್ಷೆಯ ಪ್ರಾಥಮಿಕ ವರದಿಯಲ್ಲಿ ಬಹಿರಂಗವಾಗಿದೆ.

ನಗರದ ನಿವಾಸಿಗಳಲ್ಲಿ ಎಷ್ಟು ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ಬೆಳೆದಿದೆ ಎಂಬುದನ್ನು ಪತ್ತೆಹಚ್ಚಲು ಬಿಬಿಎಂಪಿಯು ಆಗಸ್ಟ್ 4ರಂದು ಸೆರೊ ಸಮೀಕ್ಷೆ ಆರಂಭಿಸಿತ್ತು.

ನಗರದ 2 ಸಾವಿರ ನಿವಾಸಿಗಳ ರಕ್ತದ ದ್ರವ ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಲಸಿಕೆ ಪಡೆದವರಲ್ಲಿ ಒಂದು ಸಾವಿರ ಹಾಗೂ ಲಸಿಕೆ ಪಡೆಯದವರಲ್ಲಿ ಒಂದು ಸಾವಿರ ಮಂದಿ ಸಮೀಕ್ಷೆಗೆ ಒಳಗಾಗಿದ್ದರು. ಅವರ ರಕ್ತದ ದ್ರವ (ಸೀರಂ) ಸಂಗ್ರಹಿಸಿ ಅವರಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿಕಾಯಗಳು ಪತ್ತೆಯಾಗಿವೆ ಎಂಬುದನ್ನು ಪರೀಕ್ಷೆ ಮಾಡಲಾಗಿತ್ತು.

18 ವರ್ಷದೊಳಗಿನವರು, 18 ರಿಂದ 45 ವರ್ಷಗಳ ಒಳಗಿನವರು ಹಾಗೂ 45 ವರ್ಷ ಮೇಲಿನವರು ಎಂಬ ಮೂರು ಗುಂಪುಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಎರಡು ಸಾವಿರ ಮಂದಿಯಲ್ಲಿ 18 ವರ್ಷಗಳ ಒಳಗಿನ ಶೇ 30ರಷ್ಟು ಮಂದಿ, 18 ವರ್ಷಗಳಿಂದ 45 ವರ್ಷಗಳ ಒಳಗಿನವರು ಶೇ 50 ರಷ್ಟು ಮಂದಿ ಹಾಗೂ 45 ವರ್ಷ ಮೇಲ್ಪಟ್ಟ ಶೇ 20ರಷ್ಟು ಮಂದಿ ಇದ್ದರು.

'1,800 ಜನರ ಪೈಕಿ, 1,400 ಮಂದಿಯಲ್ಲಿ ಕೊರೊನಾ ಸೋಂಕಿನ ವಿರುದ್ಧದ ಪ್ರತಿಕಾಯಗಳು ವೃದ್ಧಿಯಾಗಿವೆ' ಎಂದು ಬಿಬಿಎಂಪಿಯ ಮೂಲಗಳು ಹೇಳಿವೆ.

'ಕೋವಿಡ್ ಲಸಿಕೆಯು ಜನರಲ್ಲಿ ಯಾವ ರೀತಿಯಲ್ಲಿ ಪ್ರತಿಕಾಯಗಳನ್ನು ವೃದ್ಧಿ ಮಾಡಿದೆ, ಲಸಿಕೆ ಪಡೆಯದವರಲ್ಲಿ ಯಾವ ರೀತಿಯ ಪರಿಣಾಮಗಳು ಇರುತ್ತವೆ ಎಂಬುದನ್ನು ತಿಳಿಯಲು ಸಮೀಕ್ಷೆ ನಡೆಸಲಾಗಿತ್ತು. ಆದರೆ, ಸಮೀಕ್ಷೆಯ ಅಂತಿಮ ವರದಿ ಇನ್ನೂ ನಮ್ಮ ಕೈ ಸೇರಿಲ್ಲ. ನಗರದ ಹೆಚ್ಚು ನಿವಾಸಿಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿರುವುದು ಪ್ರಾಥಮಿಕ ಮಾಹಿತಿಯಿಂದ ತಿಳಿದು ಬಂದಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್ ಹೇಳಿದರು.

'ಮೂರನೇ ಅಲೆ ಸಾಧ್ಯತೆ ಕಡಿಮೆ'

'ದತ್ತಾಂಶಗಳ ಪ್ರಕಾರ, ಕೋವಿಡ್ ಪಾಸಿಟಿವ್ ದೃಢಪಟ್ಟವರ ಪೈಕಿ ಶೇ 65ರಿಂದ ಶೇ 80ರಷ್ಟು ಜನರಲ್ಲಿ ಪ್ರತಿಕಾಯಗಳು ವೃದ್ಧಿಯಾಗಿರುತ್ತವೆ. ಬೆಂಗಳೂರಿನ ನಿವಾಸಿಗಳಿಗೆ ನಡೆಸಲಾದ ಸೆರೊ ಸಮೀಕ್ಷೆಯಲ್ಲಿ ಶೇ 75ಕ್ಕೂ ಹೆಚ್ಚು ಜನರಲ್ಲಿ ಪ್ರತಿಕಾಯಗಳು ವೃದ್ಧಿಯಾಗಿದ್ದರೆ, ಒಟ್ಟು ಜನಸಂಖ್ಯೆಯಲ್ಲಿ ಶೇ 85ರಷ್ಟು ಮಂದಿಯಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗಿರುವ ಸಾಧ್ಯತೆ ಇದೆ' ಎಂದು ವೈರಾಣು ತಜ್ಞ ಡಾ. ಟಿ. ಜಾಕೊಬ್ ಜಾನ್ ಹೇಳಿದರು.

'ಅಂತಿಮ ವರದಿಯಲ್ಲಿಯೂ ಇಷ್ಟೇ ಜನರಲ್ಲಿ ಪ್ರತಿಕಾಯ ಸೃಷ್ಟಿಯಾಗಿರುವುದು ದೃಢಪಟ್ಟರೆ, ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ತೀರಾ ಕಡಿಮೆ ಇರುತ್ತದೆ' ಎಂದೂ ಹೇಳಿದರು.

ಕೋವಿಡ್: 29.51 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 1,240 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.51 ಲಕ್ಷಕ್ಕೆ ಏರಿಕೆ ಕಂಡಿದೆ.

ಒಂದು ದಿನದ ಅವಧಿಯಲ್ಲಿ 1.65 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.74 ರಷ್ಟು ವರದಿಯಾಗಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಚಿಕ್ಕಬಳ್ಳಾಪುರ ಹಾಗೂ ಹಾವೇರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 264, ಮೈಸೂರಿನಲ್ಲಿ 88 ಹಾಗೂ ಕೊಡಗಿನಲ್ಲಿ 52 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 319 ಮಂದಿ ಹಾಗೂ ಉಡುಪಿಯಲ್ಲಿ 111 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 11 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 5, ಬೆಂಗಳೂರಿನಲ್ಲಿ 4, ಬೆಳಗಾವಿಯಲ್ಲಿ 3, ಮೈಸೂರು ಹಾಗೂ ಮಂಡ್ಯದಲ್ಲಿ ತಲಾ ಇಬ್ಬರು, ಉಡುಪಿ ಸೇರಿದಂತೆ 6 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.77 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,361ಕ್ಕೆ ತಲುಪಿದೆ. ಸೋಂಕಿತರಲ್ಲಿ 1,252 ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,38,515 ಒಟ್ಟು ಸೋಂಕಿತರು (12,38,196 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,609	12,14,901	16,004

ದಿನದ ಏರಿಕೆ

ಹೊಸ ಪ್ರಕರಣ	319
ಗುಣಮುಖ	264
ಸಾವು	04

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.96 ಕೋಟಿ	3.29 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ	3.93 ಲಕ್ಷ
ಗುಣಮುಖ	19.64 ಕೋಟಿ	3.20 ಕೋಟಿ
ಸಾವು	45.50 ಲಕ್ಷ	4.39 ಲಕ್ಷ
ದಿನದ ಮಾಹಿತಿ: ಹೊಸ ಪ್ರಕರಣ	6.88 ಲಕ್ಷ	45,572
ದಿನದ ಮಾಹಿತಿ: ಗುಣಮುಖ	6.34 ಲಕ್ಷ	34,642
ದಿನದ ಮಾಹಿತಿ: ಸಾವು	10,480	339

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.84 ಲಕ್ಷ ಅಮೆರಿಕ; 35,585 ಬ್ರಿಟನ್; 33,170 ಇರಾನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
85.32 ಅಮೆರಿಕ; 11.89 ಬ್ರಿಟನ್; 6.79 ಇರಾನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.37 ಲಕ್ಷ ಮಹಾರಾಷ್ಟ್ರ; 34,961 ತಮಿಳುನಾಡು; 25,082 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
64.73 ಮಹಾರಾಷ್ಟ್ರ; 41.22 ಕೇರಳ; 26.17 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

THE BIG DISCOUNT SALE
All New 2021 Collection at Mill Rate

Last 3 days only
Credit Cards Accepted
SINCE 1960 hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas
HEAVY DISCOUNT UPTO 50%
7th September Opening at Nagalakshmi Kalyana Mantapa
No. 5, BSK IInd Stage, Near Post Office, Bangalore - 560 070
Shop online at www.hakoba.in
Venue :
THE CANARA UNION
No. 42, 8th Main, 13th Cross, Canara Union Road, Bangalore - 03.
KALAVISION

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification
The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from Class I Contractors/ Eligible contractor for construction of Safety Netting at Alur cricket ground
The details of issue/submission of tender document are as follows :-
1. Name of work :- Construction of safety netting at Alur cricket Ground
2. Estimated Cost :- Rs. 1.48 Crores
3. Earnest Money Deposit :- Rs. 3,00,000/- should be enclosed in the technical bid cover
4. Cost of tender form :- Rs. 15,000/- plus GST (Non Refundable)
5. Date of issue of tender form :- 06/9/2021 to 24/9/2021
6. Last date of submission of filled tender form :- 04/10/2021 before 4.30 p.m two covers bid system (Technical & Commercial Separately)
7. Completion of work by :- 4months from the date of work order
8. Eligibility of contractors :- Class I and above PWD/ CPWD/ Equivalent

Registered, similar work done contractors and GST Complaint.
Tender documents may be obtained from the Office of the KSCA, by submitting a requisition in the company's letter head between 11.00 a.m. to 5.00 p.m. on any working days. For any clarification please contact Mr.H.A.Venkatesprasad, AGM Civil Engineering Dept, Mobile No. 9945604515/8150900022
Hon. Secretary KSCA

REPLY PUBLIC NOTICE
Reply to public notice got published by JCM Law Partners, Joseph Anthony Advocate of Bengaluru in Prajavani daily Kannada News Paper dated 16.08.2021.
Public beware the General Public is hereby that this reply public notice is being issued, under the instructions of my client **Sri. Mohsin Shariff**, No. 32 & 33, Sonnappanahalli Village, Jala Hobli, Bengaluru North Taluk, in the said public notice my client is reply is hereunder.
The general Public that my client Sri. Mohsin Shariff, S/o Late Dr. A.M Shariff is the absolute owner of the immovable agricultural property bearing No. 32 (phode as 32/1/3/4/5) measuring 4 acre 24 guntas and in Sy.No. 33 (phode as 33/2/3) measuring 2 Acre 11 guntas situated at Sonnappanahalli Village, Jala Hobli, Bengaluru North Taluk. My client in physical possession and enjoyment of the above said property with a nine feet compound wall in and around the entire my clients property covering all the sides the said Sy.No. 32 & 33 along with 15HP electric power supply connection is installed there on.
The said public notice published with intention to wrongful gain by abusing the process of law within intention to cause loss of the valuable property of my client in the said public notice one **Sri. KAMININ R RAMINI, W/o N. Ramesh** are the absolute owners of immovable my clients property said Sy.No. 32 and 33 situated at Sonnappanahalli Village, Jala Hobli, Bengaluru North Taluk, now it is in Yelahanka Taluk, is denied as false and untrue.
The said persons obtained two fraud Regd GPA No. 1308/1998 and 130/1998 by fraudulently created, bogus the said Registered GPA, Registered in the office of the Sub-Registrar Yelahanka, Bengaluru by the said person. Based on the said Regd GPA Holder namely Smt. KAMINI .R RAMINI and she obtained fraudulent 6 sale deeds and the basis of said fraud two Registered GPA with intention to snatch the above said of my clients property.
The said information and notice got my client at the time of transferring and bifurcating the katha of the said Sy.Nos property in favor of my client before the Tahasildar Office Bengaluru North Taluk. After my client got said information my client had filed a Civil suit in O.S No. 163/2015 before the Hon'ble Senior Civil Judge and JMFC at Devanahalli against one Sri. N. RAMESH and his wife Smt. KAMINI R RAMINI for the relief of cancellation of the said Bogus and created two registered GPAs.
My client denied the said O.S No. mentioned in the said public notice are (1) 502/2007 and (2) O.S No. 646/2008 both the suits are not related to my clients property title in respect of any title dispute. The said both suits are the related internal issues with my clients previous vendors namely **Smt. R.M LALITHAMMA, H.V. Gayathri Devi, SANATH KUMAR** and **Smt. H.V RAJESHWARI,** one Mr. N.R. RAMESH and his wife Kamani R. Ramini both are habitual mischief monger persons and my client has got so many evidences in this regard the same will be produced before the Hon'ble said Court at the time, of evidence stage or appropriate time. Hence this reply public notice is issued on behalf of my client.
It is to inform the General Public not to get mislead or entertain by the public notice published on 16.08.2021 in daily Prajavani Kannada News Paper has got above said persons published and also note that at present my client had filed one Civil suit against the said two persons, the said suit are pending during the pendency of the said suit the Kamini R Ramini had published the said public notice only to Just mislead on 16.08.2021. Hence this reply notice is published.
ZAFAR .A.S @ SALEEM, Advocate
Basavanagudi, Bengaluru-560 004.
Mobile : 9449413308

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009
ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕುಗಳಿಂದ ಒಂದು ವರ್ಷದ ಅವಧಿಗೆ **ರೂ. 100.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ-ಬಿಡ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ 02-09-2021 ರಿಂದ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

R T Nagar
2240 sft 2 Bedroom penthouse+ 2260 sft open terrace.Total area 4500sqft R.T.Nagar 9886725924

Vasanth Nagar
SALE 2 BHK Flat for Sale at Palace Cross Road, Vasanthnagar. 1262 sqft including covered car park. Contact: 9845493251, 9449009325.

Banashankari
"SALE LUXURY-FLAT on-BDA-Plot, A-Katha,ready to-occupy, PoornaPragna Layout, Uttarahalli, 3BHK,2100.Sqft, one flat-on each-floor,1.40 Crore. "Sri.Ganesh Estate" 9845286505"

HRBR Layout
LAST 2X3 BHK Flats for Sale at Rs. 7500/- Sq.ft, Aswath Enclave 9th E Main 1st Block Posh Locality 98453 51055 / 98459 05000

Mahalakshmi Layout
3 BHK Ready Apartments 1750 sqft, 2 Car Parks with amenitries @ SKAV Aastha, Yeshwanthpur/ Mahalakshmipuram Near Metro Stations. Attractive Price, Contact: 9739150900/ 9886020900

READY TO Move, 3BHK Flats, 1KM from Iskcon Temple & Metro Station, 94Lakhs. Few Flats Left. 9845014364/ 9513999423

Commerical

J P Nagar

MRPL (ONGC) NEW PETROL BUNK 8TH PHASE JPNAGAR OPP HM INDIGO / WORLDCITY 20 YEARS LEASE + 5750 SFT AREA FOR OUTRATE SALE 8.19 CR NEGO. MALLESH: 9845150959

Sites

Hebbal
WANTED/ AVAILABLE Plots/houses Arkavathy Layout, R.T.Nagar, Thanisandra, Hebbal, Jakkur, Yelahanka, HRBR,Hennur. Immediate_settlement. "SPACELINKS" 9845129934.

Vishweshwariah Layout
VISHWESHWARAIAH LAYOUT BDA Site-Sale 6th-Block 30x40, EF 5600/-, 20x30 4th Block 43L Negotiable: 9341733480/ 8892901567

Commercial
CAR, TWO Wheeler Show Room Commercial Building For Rent 5300 sqft,No.31 Industrial Town Basaveshwara Nagar Contact: 9448367178

Industrial And Factory
BOMMASANDRA, HOSUR_ROAD, Mysore_Road, Whitefield, Surrounding_Covered Industrial_Shed, Warehouse Space_Require 10000sqft_to 2,00,000sqft for_Rent_Ready to_move-in Property Call:9740803686 9620137615

Villas/Bunglows
SOBHA CITY 5BHK Semi-furnished Row House Villa available for Rent at Sobha City, Tanisandra Main Road. Contact owner: +91 7337676822

LOGO DISPLAY AD
Deccan Herald All Karnataka + Prajavani Bangalore

Two BHK for rent ground floor at xxxxxxxxxxxx xxxxxxxxxx Bangalore
Contact: xxxxxxxxxx xxxxxxxxxxxxxxxxx
3cm (W) x 4cm (H) @ Just Rs.2000/-* only
For more information contact:
9880856233 / 9731821077
9845114560
9606912256 / 9886213331

RENTAL PROPERTIES

Accommodation Available

House
2BHK HOUSE For Rent, 1500 sqft 1st Floor, Rajajinagar 5th Block Main Road, Contact: 9986300235

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Accounts & Finance
SAI ABHAY PETROLEUM
#27, Thirumenahalli, Jakkur Post, Yelahanka, Bangalore - 560064.
REQUIRES Accountant with Tally Knowledge
2 to 3 Years Experience Only
CALL: 82967 83003

I T
SOFTWARE DEVELOPERS coders for open sea, dream 11 , zed run clones, websites, apps work from home 9810911089

PUBLIC NOTICE
ಶಾಶ್ವತ ನಿಧಿ ಲಿಮಿಟೆಡ್
CIN: U65999KA2017PLC102542
ನೊಂದಾಯಿತ ಕಛೇರಿ : 30/31, 3ನೇ ಮಹಡಿ ಬಿ.ಕೆ. ವೃತ್ತ, ಕೊತ್ತನೂರು ರಸ್ತೆ, ಜೆ.ಪಿ.ನಗರ, 8ನೇ ಹಂತ, ಬೆಂಗಳೂರು–560 076
ಫೋನ್: 080-35000364
Email:contact@shashwathaltd.com, Website: www.shashwathaltd.com
ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ
ಶಾಶ್ವತ ನಿಧಿ ಲಿಮಿಟೆಡ್ ನಾಲ್ಕನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 22, 2021 ರ ಬುಧವಾರ ಬೆಳಿಗ್ಗೆ 11:00 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ ಹಾಗೂ ಇತರ ಆಡಿಯೋ, ವಿಡಿಯೋ ದೃಶ್ಯ ಮೀನ್ಸ್ (OAVM). ರಲ್ಲಿ ನಡೆಸಲು ನಿರ್ಧರಿಸಿದೆ. ಕಂಪನಿಯ ವಾರ್ಷಿಕ ವರದಿ ಮತ್ತು ಹಣಕಾಸು ಅಂಕಿ ಅಂಶಗಳನ್ನು ಕಂಪನಿಯ ವೆಬ್ ಸೈಟ್ (https://shashwathaltd.com) ರಲ್ಲಿ ಪ್ರಕಟಿಸಲಾಗಿದೆ. ಮತ್ತು ಈ ಮೇಲ್ ಮೂಲಕ ಸದಸ್ಯರಿಗೆ ಕಳುಹಿಸಲಾಗಿದೆ. ಕಂಪನಿಯ ವಾರ್ಷಿಕ ವರದಿಯನ್ನು ನೊಂದಾಯಿತ ಕಛೇರಿಯಲ್ಲಿ ಪರಿಶೀಲಿಸಬಹುದು. VC/OVAM ಲಿಂಕನ್ನು ಸದಸ್ಯರಿಗೆ ದಿನಾಂಕ 20 Sep-2021 ರೊಳಗೆ ಕಳುಹಿಸಲಾಗುತ್ತದೆ. ಸದಸ್ಯರು email/SMS/ website ಮೂಲಕ ಮತ ಚಲಾಯಿಸಬಹುದು.
ಸಹಿ/– ಮಂಡಳಿ ಆದೇಶದ ಮೇರೆಗೆ
ಶಾಶ್ವತ ನಿಧಿ ಲಿಮಿಟೆಡ್
ಪದ್ಮಪ್ರಸಾದ
(ಪ್ರಧಾನ ನಿರ್ದೇಶಕರು)
DIN:03099253
ದಿನಾಂಕ: 02–09–2021
ಸ್ಥಳ: ಬೆಂಗಳೂರು

PUBLIC NOTICE
It is hereby notified that, my clients have agreed to purchase the Schedule property from its owner **SRI. H.M. NARAYANA SWAMY S/o late Sri. Madappa,** resident of Harappanahalli Village, Jigani Hobli, Anekal Taluk, Bangalore Urban District.
If any person/s have any manner of right, title, interest or claim or charge or lien over the Schedule property or otherwise have any lawful objection/s for sale of the Schedule property by the aforesaid owner, they are hereby called upon to file their objections in writing, along with the photocopies of documents on which they rely, with the undersigned, within **10 days** from the date of publication of this notice. Objection/s received thereafter will not be binding on my clients.
SCHEDULE
Item No.1:
All that piece and parcel of the converted land measuring **9 ½ Guntas** in **Sy.No.81/2,** situated at **Harappanahalli Village,** Jigani Hobli, Anekal Taluk, Bangalore Urban District and bounded on:
East by: Land belonging to Annasandrapalya Muniyamma
West by: Remaining portion of land in Sy.No.81/2.
North by: Land belonging to Sri. H.N.Muniswamy,
South by: Land bearing Sy.No.81/3
Item No.2:
All that piece and parcel of the converted land measuring **1½ Guntas** in **Sy.No.81/3,** situated at **Harappanahalli Village,** Jigani Hobli, Anekal Taluk, Bangalore Urban District and bounded on:
East by: Land belonging to Venkataswamy Reddy
West by: Land bearing Sy.No.83/1
North by: Land bearing Sy.No.81/2
South by: Varun Residency
Sd/- S.F.Goutam Chand, Advocate
Goutam Associates
No.60, 2nd Floor, Kanakapura Road, Basavanagudi, Bengaluru – 560 004.

BUSINESS

Business Offers

Finance
FINANCE AGAINST Land & Building Properties Industries Schools Hospitals Projects & NRI Funds.7358729820

PROPERTY CORNER
REQUIRED COMMERCIAL SPACE @ CHANDRA LAYOUT
Around 5000 Sqft Space for Petrol Bunk, in and around Chandra Layout Main Road (or) 80ft or 50ft approach Road to Main Road for a period of 20 years Lease.
Contact: 99453 60606
snsindanegasagency@gmail.com

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

EDUCATIONAL

Correspondence Courses
CORRESPONDENCE/ REGULAR courses: SSLC, PUC, BA, B.Com, BBA, BCA, B.Sc (PCM/ CBZ), B.Sc IT, MA, M.Com, M.Sc (PCMB), M.Sc IT, MBA, Personality/ skill development courses with 100% Job assistance. For easy schemes contact immediately. Oceanik Education Society: 6363302436, 080-23515863/ 23515864.

Admission
DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore:94 48460103

PERSONAL

Change of Name
JC675360P- NB-SUB-**MT-** ANCHAL KUMAR at ASC Centre & College, changed my minor Son's name ANKI KUMAR to ANKIT KUMAR SINGH notary KV Mani, Bangalore.

I, ANNIE, Residing at #90, JJ-Villa, 6th main, Rukmininagar, Nagasandra, Bengaluru-73 have changed my name as ANNIE ARIMPUR KOCHU, vide affidavit dated 1/9/2021 before Notary V.Anjanappa, Bengaluru

EDUCATION CORNER
R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
SPOT ADMISSION FOR MANAGEMENT & Merit / Govt. QUOTA STARTED FOR 10th PASS or PUC FAIL / PASS
3 Years Diploma for - 10th Pass
2 Years Diploma for - PUC / 12th / ITI Pass
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-21203

I, PRATHAM Shankar, S/o Shankar @ Sonnegowda, aged about 20 years, R/at No.39, 1st Cross, Kenchenahalli, BHEL Layout, Rajarajeshwarinagar, Bangaluru-560098. I hereby state that My father name 'SHANKAR@SONNEGOWDA' belongs to him only. vide affidavit dated:02.09.2021 Sworn before MANJULA JANGAM,Advocate, Bangalore

HARISH CHANDRA, Father/o, 14815740K, HAV/MT, Godage Tanaji Harish Chandra, Vill- Ropale, Madha, Solapur, Maharashtra, have changed my name from HARISH CHANDRA to HARISHCHANDRA GOPINATH GODAGE, 31/08/2021, Notary K.V. Mani, Bangalore

GODAGE TANAJI HARISH CHANDRA, 14815740K, HAV/MT, Vill- Ropale, Madha, Solapur, Maharashtra, have changed my Daughter's name from TANISKA TANAJI GODAGE to TANISHKA TANAJI GODAGE, 31/08/2021, Notary K.V. Mani, Bangalore

KAMAL, MOTHER/O, 14815740K, HAV/MT, Godage Tanaji Harish Chandra, Vill- Ropale, Madha, Solapur, Maharashtra, have changed my name from KAMAL to KAMAL HARISHCHANDRA GODAGE, 31/08/2021, Notary K.V. Mani, Bangalore

SAVITA, WIFE/O, 14815740K, HAV/MT, Godage Tanaji Harish Chandra, Vill- Ropale, Madha, Solapur, Maharashtra, have changed my name from SAVITA to SAVITA TANAJI GODAGE, 31/08/2021, Notary K.V. Mani, Bangalore

I, MANVITH DALLI, have changed my name to MANVITH REDDY DALLI vide affidavit dated: 2/9/2021 Before Notary Shreeshail.B. Gobbani Bangalore

Lost

DOCUMENT LOST
I Choban Babu S/o Late C. Venkateshaiah, R/a. No.253, MIG-A4, Ground Floor, Block No.170, Shirke Apartment, Kengeri Satellite Town, Bengaluru - 560060. Have lost **Original Sale Deed. Dated : 25.05.2006 registered as document No. 6933/2006-2007 in Book - 1, Stored in CD No. KEND292,** registered in the office of the sub-register Kengeri, Bangalore
Finders Please Contact: M-9666792848/7411988856

LOST
I, Rizwan, R/a Sunrise Apartment, Eastend 'D' Main Road, Jayanagar 9th Block, have lost BDA Katha Site No.364, 3rd Block, 9th Phase, J.P. Nagar, Bangalore.
Finders Pl. contact: 9986406301

Document Lost
I. Smt. Rathnashyam, W/o Shyamsundar, residing at H.No. 47, 3rd Cross, 1st Main, Ayyappa Layout, KMF Pounch Factory, Banglore North, Bangalore- 560037 has lost my Original Allotment letter of Property, LIG S&S site, no. 710, Municipal property no.31-1-538-15A, measuring east to west 12.00mtrs and north to south 9.00mtrs which stands in the name of Smt. Rathna Shyam. Anybody who found the document please inform to the above mentioned address:

ವಾರದ ಏಳು ದಿನವೂ ವಂಡರ್ ಲಾ ಕಾರ್ಯ ನಿರ್ವಹಣೆ

ರಾಮನಗರ: ಬಿಡದಿಯಲ್ಲಿರುವ ವಂಡರ್ ಲಾ ಮನೋರಂಜನಾ ಪಾರ್ಕ್ ವಾರದ ಏಳು ದಿನವೂ ಗ್ರಾಹಕರಿಗೆ ತೆರೆದಿರಲಿದೆ.

ಸರ್ಕಾರದ ನಿರ್ದೇಶನದ ಮೇರೆಗೆ ಕಳೆದ ಒಂದು ತಿಂಗಳಿನಿಂದ ಸುರಕ್ಷಿತ ಕೋವಿಡ್ ಮಾರ್ಗಸೂಚಿಯೊಂದಿಗೆ ಪಾರ್ಕ್ ಅನ್ನು ನಡೆಸಲಾಗುತ್ತಿದೆ. ಮೊದಲು ಗುರುವಾರದಿಂದ ಭಾನುವಾರದವರೆಗೂ ಮಾತ್ರ ತೆರೆಯಲಾಗುತ್ತಿತ್ತು. ಗ್ರಾಹಕರ ಬೇಡಿಕೆ ಹಿನ್ನೆಲೆಯಲ್ಲಿ ವಾರದ ಎಲ್ಲ ದಿನವೂ ಬೆಳಿಗ್ಗೆ 11 ರಿಂದ ತೆರೆಯಲಾಗುತ್ತದೆ. ಕೋವಿಡ್ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ಸಿಬ್ಬಂದಿಗೂ ಲಸಿಕೆ ಹಾಕಿಸಲಾಗಿದ್ದು, ಇಡೀ ಪಾರ್ಕ್ ಅನ್ನು ಪ್ರತಿ ದಿನ ಸ್ಯಾನಿಟೈಸ್ ಮಾಡಲಾಗುತ್ತಿದೆ ಎಂದು ವಂಡರ್‌ಲಾ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 080-37230333, 080-35073966.

2 ಪಾಳಿಯಲ್ಲಿ ಪದವಿ ತರಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣಕ್ಕೆ 2020–21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯ ಎಲ್ಲ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ್ದರಿಂದ, ರಾಜ್ಯದ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಗಣನೀಯವಾಗಿ ಹೆಚ್ಚಳಗೊಂಡಿದೆ. ಹೀಗಾಗಿ, ಎರಡು ಪಾಳಿಯಲ್ಲಿ ತರಗತಿ ನಡೆಸಬೇಕಾಗಿದೆ.

ಕಾಲೇಜುಗಳಲ್ಲಿ ಈಗಾಗಲೇ ನಿಗದಿಪಡಿಸಿದ ಸೀಟುಗಳಿಗಿಂತ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಬಯಸಿ ಬಂದರೆ ಬೆಳಿಗ್ಗೆ ಮತ್ತು ಮಧ್ಯಾಹ್ನ ಪಾಳಿಯಲ್ಲಿ ತರಗತಿ ನಡೆಸಲು ಕಾಲೇಜು ಆಡಳಿತ ಮಂಡಳಿಗಳು ಮುಂದಾಗಿವೆ. ಲಭ್ಯ ಮೂಲಸೌಲಭ್ಯವನ್ನು ಬಳಸಿಕೊಂಡು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಕಾಲೇಜುಗಳಿಗೆ ಅವಕಾಶ ನೀಡಲಾಗಿದೆ.

‘ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿದಾಖಲುಮಾಡಿಕೊಂಡಕಾಲೇಜುಗಳು ಬೆಳಿಗ್ಗೆ 8 ಗಂಟೆಯಿಂದ 12 ಗಂಟೆಯವರೆಗೆ ಬೆಳಗ್ಗಿನ ಪಾಳಿ, ಮಧ್ಯಾಹ್ನ 12ರಿಂದ 4 ಗಂಟೆವರೆಗೆ ಸಂಜೆಯ ಪಾಳಿಯಲ್ಲಿ ತರಗತಿ ನಡೆಸಲು ಅವಕಾಶ ನೀಡಲಾಗಿದೆ’ ಎಂದು ಕಾಲೇಜು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

‘ಈ ಬಾರಿ ದ್ವಿತೀಯ ಪಿಯುಸಿ ಪಾಸಾದ ವಿದ್ಯಾರ್ಥಿಗಳಿಗೆ ಪದವಿಗೆ ಸೇರಲು ಸೀಟುಗಳ ಸಂಖ್ಯೆ ಕೊರತೆಯಾಗುವ ಸಾಧ್ಯತೆ ಇಲ್ಲ. ಯಾಕೆಂದರೆ, ಪ್ರತಿವರ್ಷ ಸುಮಾರು 1 ಲಕ್ಷ ಸೀಟುಗಳು ಪದವಿ ಪೂರ್ವ ಕಾಲೇಜುಗಳಲ್ಲಿ ಭರ್ತಿಯಾಗದೆ ಉಳಿಯುತ್ತಿವೆ. 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಈ ಬಾರಿ ಸಂಜೆ ಕಾಲೇಜು ಆರಂಭಿಸಲಾಗಿದೆ. ಜೊತೆಗೆ, ಪಾಳಿಯಲ್ಲಿ ತರಗತಿ ನಡೆಸಲು ಕಾಲೇಜುಗಳಿಗೆ ಅವಕಾಶ ನೀಡಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

‘ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಶೇ 20ರಷ್ಟು ಹೆಚ್ಚು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಈಗಾಗಲೇ ಸೂಚನೆ ನೀಡಿದೆ. ಕಾಲೇಜುಗಳು ಮನವಿ ಸಲ್ಲಿಸಿದರೆ ಮತ್ತಷ್ಟು ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ ಮಾಡಿಕೊಡಲಾಗುವುದು’ ಎಂದೂ ಅವರು ಹೇಳಿದರು.

ಅಂಕಿ–ಅಂಶ

1.50 ಲಕ್ಷ — ಸರ್ಕಾರಿ ಪದವಿ ಕಾಲೇಜುಗಳಲ್ಲಿ ಲಭ್ಯ ಒಟ್ಟು ಸೀಟು

430 — ಒಟ್ಟು ಸರ್ಕಾರಿ ಪದವಿ ಕಾಲೇಜುಗಳು

390 — ಖಾಸಗಿ ಅನುದಾನಿತ, ಅನುದಾನರಹಿತ ಕಾಲೇಜುಗಳು

6,66,497 — ಈ ಬಾರಿ ಪಿಯುಸಿ ತೇರ್ಗಡೆ ಆದವರು

ಅಬ್ಬರಿಸಿ ಸುರಿದ ಮಳೆ

ಪ್ರಜಾವಾಣಿ ವಾರ್ತೆ

ನಗರದ ಟೌನ್ ಹಾಲ್ ಬಳಿ ಗುರುವಾರ ಸುರಿಯುತ್ತಿದ್ದ ಮಳೆಯಲ್ಲಿಯೇ ಸಾಗಿದ ಸಾರ್ವಜನಿಕರು – ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಗುರುವಾರ ಸಂಜೆಯಿಂದ ರಾತ್ರಿಯವರೆಗೆ ಮಳೆ ಅಬ್ಬರಿಸಿ ಸುರಿಯಿತು. ಬಹುತೇಕ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಹರಿಯುವ ನೀರಿನಲ್ಲೇ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದ್ದರಿಂದ, ಸಂಚಾರ ದಟ್ಟಣೆಯೂ ಉಂಟಾಯಿತು.

ಬುಧವಾರವೂ ಮಳೆ ಜೋರಾಗಿತ್ತು. ಗುರುವಾರ ಬೆಳಿಗ್ಗೆಯಿಂದ ಬಿಸಿಲು ಕಾಣಿಸಿಕೊಂಡಿತು. ಮಧ್ಯಾಹ್ನವೇ ಮೋಡ ಕವಿದ ವಾತಾವರಣವಿತ್ತು. ಹಲವೆಡೆ ಮಳೆಯೂ ಸುರಿಯಿತು. ಸಂಜೆಯಾಗುತ್ತಿದ್ದಂತೆ ಮಳೆ ಜೋರಾಯಿತು. ರಾತ್ರಿಯವರೆಗೂ ಮಳೆ ಆರ್ಭಟವಿತ್ತು.

ಮೆಜೆಸ್ಟಿಕ್, ಗಾಂಧಿನಗರ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ಶಿವಾಜಿನಗರ, ಅಶೋಕನಗರ, ಬೈಯಪ್ಪನಹಳ್ಳಿ, ರಾಮಮೂರ್ತಿನಗರ, ಬಾಣಸವಾಡಿ, ಎಚ್‌ಎಸ್‌ಆರ್ ಲೇಔಟ್, ಮಡಿವಾಳ, ಕೋರಮಂಗಲ, ಎಂ.ಜಿ. ರಸ್ತೆ, ವಸಂತನಗರ, ಸಂಪಂಗಿರಾಮನಗರ, ಹಲಸೂರು, ಬಸವನಗುಡಿ, ಕೆಂಗೇರಿ, ರಾಜರಾಜೇಶ್ವರಿನಗರ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಹೊಸಕೆರೆಹಳ್ಳಿ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ನಗರದ ಬಹುತೇಕ ರಸ್ತೆಗಳಲ್ಲಿ ಕಾಮಗಾರಿ ನಡೆಯುತ್ತಿದ್ದು, ರಸ್ತೆಗಳನ್ನು ಅಗೆಯಲಾಗಿದೆ. ಈ ಜಾಗದಲ್ಲಿದ್ದ ತಗ್ಗುಗಳಲ್ಲಿ ನೀರು ನಿಂತುಕೊಂಡಿತ್ತು. ನಡೆದುಕೊಂಡು ಹೋಗಲು ಪಾದಚಾರಿಗಳಿಗೆ ತೊಂದರೆಯಾಯಿತು.

ಮೆಜೆಸ್ಟಿಕ್, ಕೆ.ಆರ್. ವೃತ್ತ, ಕಾರ್ಪೋರೇಷನ್ ವೃತ್ತ, ಹಳೇ ಮದ್ರಾಸ್ ರಸ್ತೆ, ರಾಜಾಜಿನಗರ ಪಶ್ಚಿಮ ಕಾರ್ಡ್ ರಸ್ತೆ, ಯಶವಂತಪುರ, ಹೊಸೂರು ರಸ್ತೆಯ ಡೈರಿ ವೃತ್ತ ಹಾಗೂ ಲಾಲ್‌ಬಾಗ್ ಮುಖ್ಯರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಿತ್ತು. ಶಿವಾನಂದ ವೃತ್ತದ ರೈಲ್ವೆ ಕೆಳಸೇತುವೆ, ಓಕಳಿಪುರ ಕೆಳ ಸೇತುವೆಗಳಲ್ಲಿ 4 ಅಡಿಯಷ್ಟು ನೀರು ಹರಿಯಿತು.

‘ನಗರದ ಬಹುತೇಕ ಕಡೆ ಮಳೆ ಆಗಿದೆ. ಹೆಚ್ಚು ಹಾನಿಯಾದ ಬಗ್ಗೆ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಸ್ವಚ್ಛತಾ ಜಾಗೃತಿ — ನಗರದ ಎಂ.ಎಸ್. ರಾಮಯ್ಯ ಸ್ಮಾರಕ ಆಸ್ಪತ್ರೆಯ ಶುಶ್ರೂಷಕ ಸಿಬ್ಬಂದಿ ಕೈಗಳ ಸ್ವಚ್ಛತೆ ಬಗ್ಗೆ ಗುರುವಾರ ಜಾಗೃತಿ ಮೂಡಿಸಿದರು – ಪ್ರಜಾವಾಣಿ ಚಿತ್ರ

‘ಗುರಿಗಿಂತ ಅಧಿಕ ಡೋಸ್ ಲಸಿಕೆ ವಿತರಣೆ’

ಬೆಂಗಳೂರು: ‘ಕೋವಿಡ್ ಲಸಿಕಾ ಉತ್ಸವದ ಮೊದಲ ದಿನವಾದ ಬುಧವಾರ 12 ಲಕ್ಷ ಡೋಸ್ ಲಸಿಕೆಯನ್ನು ವಿತರಿಸಲಾಗಿದೆ. ಈ ಮೂಲಕ ದೇಶದಲ್ಲಿ ಅತೀ ಹೆಚ್ಚು ಡೋಸ್‌ಗಳನ್ನು ವಿತರಿಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಅಗ್ರ ಸ್ಥಾನವನ್ನು ಪಡೆದುಕೊಂಡಿತ್ತು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲಸಿಕಾ ಉತ್ಸವದಲ್ಲಿ ಮೊದಲ ದಿನ 10 ಲಕ್ಷ ಡೋಸ್ ಲಸಿಕೆ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಬಿಬಿಎಂಪಿ ವ್ಯಾಪ್ತಿಯಲ್ಲಿ 1.85 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ. ಬೆಳಗಾವಿಯಲ್ಲಿ 99,973 ಡೋಸ್ ವಿತರಿಸಲಾಗಿದೆ. ಕೊಡಗು, ಗದಗ, ಚಾಮರಾಜನಗರ ಹಾಗೂ ಯಾದಗಿರಿ ಜಿಲ್ಲೆಯಲ್ಲಿ 20 ಸಾವಿರಕ್ಕೂ ಕಡಿಮೆ ಡೋಸ್ ವಿತರಿಸಲಾಗಿದೆ’ ಎಂದರು.

ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರ ನಿವಾಸಕ್ಕೆ ಭೇಟಿ ನೀಡಿದರು

ಅಶ್ವತ್ಥನಾರಾಯಣ ನಿವಾಸಕ್ಕೆ ಅರುಣ್ ಸಿಂಗ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಅವರ ನಿವಾಸಕ್ಕೆ ಗುರುವಾರ ಬೆಳಿಗ್ಗೆ ಭೇಟಿ ನೀಡಿದರು.

ಆರ್‌ಎಂವಿ ಬಡಾವಣೆಯಲ್ಲಿರುವ ಸಚಿವರ ನಿವಾಸದಲ್ಲಿ ಅರುಣ್ ಸಿಂಗ್ ಅವರು ಉಪಾಹಾರ ಸೇವಿಸಿ, ಕೆಲ ಸಮಯ ಮಾತುಕತೆ ನಡೆಸಿದರು. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಕುರಿತು ಅಶ್ವತ್ಥನಾರಾಯಣ ಅವರು ಮಾಹಿತಿ ನೀಡಿದರು. ಶಿಕ್ಷಣ ನೀತಿ ಜಾರಿ ವಿಚಾರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿರುವ ಮತ್ತು ಈ ಕುರಿತು ಸಚಿವರು ವಹಿಸಿದ ಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಮತ್ತಿತರರು ಇದ್ದರು.

ಪರಿಷತ್ ಸದಸ್ಯರ ಜತೆ ಶಿಕ್ಷಣ ನೀತಿ ಚರ್ಚೆ

‘ಸವಾಲು ಎದುರಿಸದೇ ಪರಿವರ್ತನೆ ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರುವುದರ ಜತೆಗೆ, ಬಹು ಶಿಸ್ತೀಯ ಕಲಿಕೆ ಮತ್ತು ಕಲಿಕೆಯ ಆಯ್ಕೆಗೆ ಮುಕ್ತ ಸ್ವಾತಂತ್ರ್ಯ ನೀಡಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಪ್ರತಿಪಾದಿಸಿದರು.

ಇದರಿಂದ ಹೆಜ್ಜೆ ಹಿಂದಕ್ಕೆ ಇಟ್ಟರೆ ಅಥವಾ ಹೊಸ ಸವಾಲುಗಳನ್ನು ಎದುರಿಸದೇ ಇದ್ದರೆ, ಪರಿವರ್ತನೆ ಸಾಧ್ಯವಿಲ್ಲ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ವಿಧಾನಪರಿಷತ್‌ನ ಪದವೀಧರ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಪ್ರತಿನಿಧಿಸುವ ಸದಸ್ಯರ ಸಭೆಯ ಬಳಿಕ ಅವರು ಮಾತನಾಡಿದರು.

‘ಸವಾಲುಗಳಿವೆ, ಕಷ್ಟವಿದೆ ಎಂದು ಈಗ ಹೆಜ್ಜೆ ಹಿಂದಕ್ಕೆ ಇಟ್ಟರೆ ಮುಂದೆಂದೂ ಜಾರಿ ಮಾಡುವುದು ಕಷ್ಟವಾಗುತ್ತದೆ. ಜ್ಞಾನ ಮತ್ತು ಕೌಶಲ್ಯ ಆಧಾರಿತ ಶಿಕ್ಷಣ ನೀತಿಯನ್ನು ಜಾರಿ ಮಾಡುವುದು ರಾಜ್ಯದ ಪಾಲಿಗೆ ನಿರ್ಣಾಯಕ ಅಂಶ. ಬೋಧಕರು ಮತ್ತು ಇತರೆ ಸಿಬ್ಬಂದಿಯ ತರಬೇತಿಯ ಬಗ್ಗೆ ಕ್ರಮ ವಹಿಸಲಾಗುವುದು. ಮೂಲಸೌಕರ್ಯಗಳನ್ನು ಹೆಚ್ಚಿಸುವ ಸಂಬಂಧ ಹಂತ ಹಂತವಾಗಿ ಕೆಲಸ ಮಾಡಲಾಗುವುದು. ಈ ವಿಚಾರವಾಗಿ ಮುಖ್ಯಮಂತ್ರಿಯವರ ಜತೆ ಚರ್ಚಿಸುತ್ತೇನೆ’ ಎಂದು ಅವರು ಹೇಳಿದರು.

‘ಈಗಿರುವ ಅಧ್ಯಾಪಕ ವರ್ಗ ಶಿಕ್ಷಣ ನೀತಿ ಪ್ರಕಾರವೇ ಬೋಧನೆ ಮಾಡುತ್ತಾರಾ? ಕೆಲವರಿಗೆ ಕಂಪ್ಯೂಟರ್ ಜ್ಞಾನವೇ ಇರುವುದಿಲ್ಲ. ಅವರನ್ನು ಸಜ್ಜುಗೊಳಿಸುವುದು ಮತ್ತು ತರಬೇತಿ ನೀಡುವುದು ಹೇಗೆ’ ಎಂದು ಜೆಡಿಎಸ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಸಭೆಯಲ್ಲಿ ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಸಚಿವರು, ಪ್ರತಿ ಹಂತದಲ್ಲೂ ಬೋಧಕರಿಗೆ ವ್ಯವಸ್ಥಿತವಾಗಿ ತರಬೇತಿ ನೀಡಲಾಗುವುದು. ತಾಂತ್ರಿಕ ನೆರವು, ಅಧ್ಯಯನ ಸಾಮಗ್ರಿ ಸೇರಿದಂತೆ ಎಲ್ಲ ವಿಷಯಗಳಲ್ಲೂ ಸಹಕಾರ ನೀಡಲಾಗುವುದು ಎಂದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯವಿಲ್ಲ, ಸೌಲಭ್ಯಗಳನ್ನು ನೀಡಿಲ್ಲ, ಪ್ರಯೋಗಾಲಯಗಳೂ ಇಲ್ಲ. ಸೂಕ್ತ ವ್ಯವಸ್ಥೆ ಇಲ್ಲದೇ ಏಕಾಏಕಿ ರಾಷ್ಟ್ರೀಯ ನೀತಿ ಜಾರಿ ಮಾಡುತ್ತಿರುವುದರಿಂದ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಹೇಳಿದರು.

ಮಠಾಧೀಶರ ಒಕ್ಕೂಟದ ಸಭೆಯಲ್ಲಿ ತೀರ್ಮಾನ

ಸಂಸುದ್ದಿಯಲ್ಲಿ ಪಂಚಮಸಾಲಿ ಸಮಾಜದ 3ನೇ ಪೀಠ?

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ಜಮಖಂಡಿ: ಪಂಚಮಸಾಲಿ ಸಮುದಾಯದ ಮೂರನೇ ಪೀಠಕ್ಕೆ ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಸಂಸುದ್ದಿ ಗ್ರಾಮದಲ್ಲಿ ಎರಡು ಎಕರೆ ಜಮೀನು ಗುರುತಿಸಲಾಗಿದೆ.

ಪಂಚಮಸಾಲಿ ಸಮಾಜದ ಕೂಡಲ ಸಂಗಮ ಹಾಗೂ ಹರಿಹರ ಪೀಠಗಳಿಗೆ ಪರ್ಯಾಯವಾಗಿ ಆ ಸಮುದಾಯದ ಸ್ವಾಮೀಜಿಗಳ ಪ್ರತ್ಯೇಕ ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ. ಜೊತೆಗೆ ಇದು ಮೂರನೇ ಪೀಠ ಸ್ಥಾಪನೆಗೂ ನಾಂದಿಯಾಗಿದೆ. ಶ್ರಾವಣ ಮುಗಿದ ಮೇಲೆ ಮೂರನೇ ಪೀಠದ ಸಂಪೂರ್ಣ ಚಿತ್ರಣ ದೊರೆಯಲಿದೆ ಎಂದು ಹೇಳಲಾಗಿದೆ.

ಜಮಖಂಡಿಯಲ್ಲಿ ಬುಧವಾರ ನಡೆದ ಮಠಾಧೀಶರ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರಾಗಿ ವಿಜಯಪುರ ಜಿಲ್ಲೆ ಬಬಲೇಶ್ವರ ಬೃಹನ್ಮಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮನಗೂಳಿ ಹಿರೇಮಠದ ಸಂಗನಬಸವ ಸ್ವಾಮೀಜಿ ಅವರನ್ನು ಆಯ್ಕೆ ಮಾಡಲಾಗಿದೆ. ಸಭೆಯಲ್ಲಿ 15ಕ್ಕೂ ಹೆಚ್ಚು ಸ್ವಾಮೀಜಿಗಳು, ಅಖಿಲ ಭಾರತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಸಂಗನಬಸವ ಶ್ರೀಗಳೇ ಪೀಠಾಧಿಪತಿ?: ವಿಜಯಪುರ ಜಿಲ್ಲೆಯ ಮನಗೂಳಿ ಸಂಗನಬಸವ ಸ್ವಾಮೀಜಿಯನ್ನು ಪೀಠಾಧಿಪತಿಯಾಗಿ ನೇಮಿಸಲು ಹಾಗೂ ಸಂಸುದ್ದಿಯಲ್ಲಿ ಮೂರನೇ ಪೀಠದ ಆಶ್ರಮ, ವಿದ್ಯಾರ್ಥಿಗಳಿಗೆ ಹಾಸ್ಟೆಲ್, ಅನಾಥಾಶ್ರಮ, ವೃದ್ಧಾಶ್ರಮ ನಿರ್ಮಿಸಲು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.

‘ಪಂಚಮಸಾಲಿ ಸಮಾಜ ರಾಜ್ಯದಲ್ಲಿ ಒಂದು ಕೋಟಿ ಜನಸಂಖ್ಯೆ ಇರುವ ದೊಡ್ಡ ಸಮುದಾಯ. ಹೀಗಾಗಿ ಐದು ಪೀಠಗಳು ಬೇಕು ಎಂದು ಈ ಹಿಂದೆ ಹರಿಹರ ಪೀಠದ ಮೊದಲ ಶ್ರೀಗಳಾಗಿದ್ದ ಡಾ.ಮಹಾಂತ ಶಿವಾಚಾರ್ಯರು ಹೇಳಿದ್ದರು. ಆದರೆ ಅವರು ಲಿಂಗೈಕ್ಯರಾಗಿದ್ದರಿಂದ ಅವರ ಆಸೆ ಈಡೇರಿರಲಿಲ್ಲ. ಈಗ ಜನರಿಂದ ಒತ್ತಡ ಬಂದರೆ ಮೂರನೇ ಪೀಠ ಆಗಬಹುದು’ ಎಂದು ಜಮಖಂಡಿ ಸಭೆಯ ನಂತರ ಸಂಗನಬಸವ ಶ್ರೀಗಳು ಮಾರ್ಮಿಕವಾಗಿ ಹೇಳಿದ್ದರು.

ಇನ್ನೊಂದು ಸುದ್ದಿ 6

ಮೂರನೇ ಸುತ್ತಿಗೆ ಸಿಟ್ಸಿಪಾಸ್

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಮೆಡ್ವೆಡೆವ್ ಜಯಭೇರಿ

ನ್ಯೂಯಾರ್ಕ್ (ಎಎಫ್‌ಪಿ): ಜಿದ್ದಾಜಿದ್ದಿ ಪೈಪೋಟಿಯಲ್ಲಿ ಗೆದ್ದ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಈ ಪಂದ್ಯದಲ್ಲಿ ಅವರು ಶೌಚಕ್ಕೆ ಹೋಗಿ ಬರಲು ನಿಗದಿಗಿಂತಲೂ ಹೆಚ್ಚು ಸಮಯ ತೆಗೆದುಕೊಂಡಿದ್ದು ಮೋಜಿನ ಪ್ರಸಂಗವಾಗಿ ದಾಖಲಾಯಿತು.

ಅರ್ಥರ್ ಆ್ಯಶ್ ಕ್ರೀಡಾಂಗಣದಲ್ಲಿ ಮೂರನೇ ಶ್ರೇಯಾಂಕದ ಸಿಟ್ಸಿಪಾಸ್ ಪಂದ್ಯದ ಮೂರು ಮತ್ತು ನಾಲ್ಕನೇ ಸೆಟ್‌ನ ನಡುವಿನ ಅವಧಿಯಲ್ಲಿ ನಿಗದಿಗಿಂತ ಎಂಟು ನಿಮಿಷಗಳ ಕಾಲ ಶೌಚ ವಿರಾಮ ತೆಗೆದುಕೊಂಡರು. ಬಳಿಕ ನಾಲ್ಕನೇ ಸೆಟ್‌ನಲ್ಲಿ ಸಂಪೂರ್ಣ ಪಾರಮ್ಯ ಮೆರೆದರು.

ಪಂದ್ಯದಲ್ಲಿ ಅವರು 6-3, 6-4, 6-7 (4/7), 6-0ರಿಂದ ಫ್ರಾನ್ಸ್‌ನ ಆ್ಯಡ್ರಿಯನ್ ಮನ್ನಾರಿನೊ ಎದುರು ಜಯ ಸಾಧಿಸಿದರು.

ಸ್ಟೆಫನೊಸ್ ಸಿಟ್ಸಿಪಾಸ್ ಆಟದ ಶೈಲಿ– ಎಎಫ್‌ಪಿ ಚಿತ್ರ

ಮಹಿಳಾ ಸಿಂಗಲ್ಸ್ ಹಾಲಿ ಚಾಂಪಿಯನ್ ನವೊಮಿ ಒಸಾಕ ಅವರಿಗೆ ಎರಡನೇ ಸುತ್ತಿನಲ್ಲಿ ವಾಕ್ ಓವರ್ ಲಭಿಸಿತು. ಅವರ ವಿರುದ್ಧ ಆಡಬೇಕಿದ್ದ ಸರ್ಬಿಯಾದ ಓಲ್ಗಾ ಡ್ಯಾನಿಲೊವಿಚ್ ಅನಾರೋಗ್ಯದ ಕಾರಣದಿಂದ ಹಿಂದೆ ಸರಿದರು.

ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಇತರ ಪಂದ್ಯಗಳಲ್ಲಿ ರಷ್ಯಾದ ಆ್ಯಂಡ್ರೆ ರುಬ್ಲೆವ್ 7-6 (7/2), 6-7 (5/7), 6-1, 6-1ರಿಂದ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಎದುರು, ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ 6-4, 6-1, 6-2ರಿಂದ ಜರ್ಮನಿಯ ಡಾಮಿನಿಕ್ ಕೂಪರ್ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್ ವಿಭಾಗದ 2ನೇ ಸುತ್ತಿನ ಹಣಾಹಣಿಗಳಲ್ಲಿ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ 6-2, 7-5ರಿಂದ ಸ್ಪೇನ್‌ನ ರೆಬೆಕಾ ಮಸರೊವಾ ಎದುರು, ರುಮೇನಿಯಾದ ಸಿಮೊನಾ ಹಲೆಪ್ 6-3, 6-1ರಿಂದ ಸ್ಲೋವೆಕಿಯಾದ ಕ್ರಿಸ್ಟಿನಾ ಕುಸೊವಾ ಎದುರು ಗೆದ್ದರು.

ರೊನಾಲ್ಡೊ ದಾಖಲೆ

ಪ್ಯಾರಿಸ್ (ಎಎಫ್‌ಪಿ): ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಮತ್ತೊಂದು ದಾಖಲೆ ನಿರ್ಮಿಸಿದರು. ಅತಿ ಹೆಚ್ಚು ಗೋಲು ಗಳಿಸಿದ ಆಟಗಾರನಾದರು.

ಇಲ್ಲಿ ನಡೆಯುತ್ತಿರುವ 2022ರ ವಿಶ್ವಕಪ್ ಕ್ವಾಲಿಫೈಯಿಂಗ್ ಟೂರ್ನಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪೋರ್ಚುಗಲ್ ತಂಡವು 2–1ರಿಂದ ಐರ್ಲೆಂಡ್ ವಿರುದ್ಧ ಜಯಿಸಿತು. 36 ವರ್ಷದ ರೊನಾಲ್ಡೊ 89ನೇ ನಿಮಿಷ ಮತ್ತು ಇಂಜುರಿ ಸಮಯದಲ್ಲಿ ಬಾರಿಸಿದ ಗೋಲುಗಳಿಂದಾಗಿ ಪೋರ್ಚುಗಲ್ ಗೆದ್ದಿತು. ರೊನಾಲ್ಡೊ ಅಗ್ರಸ್ಥಾನಕ್ಕೇರಿದರು.

ಐದು ಬಾರಿ ಬ್ಯಾಲನ್ ಡಿ ಒರ್ ಪ್ರಶಸ್ತಿ ಗೆದ್ದಿರುವ ಅವರು, ‘ಈ ದಾಖಲೆ ನನ್ನದಾಗಿರುವುದು ಅತೀವ ಸಂತಸವಾಗುತ್ತಿದೆ. ಇದೊಂದು ಅತ್ಯಂತ ಹೆಮ್ಮೆಯ ಕ್ಷಣ’ ಎಂದು ರೋನಾಲ್ಡೊ ಹೇಳಿದರು.

ಕ್ರಿಸ್ಟಿಯಾನೊ ರೊನಾಲ್ಡೊ ಸಂಭ್ರಮ

ಆಟಗಾರ	ದೇಶ	ಗೋಲು	ಪಂದ್ಯಗಳು
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	111	180
ಅಲಿ ದೇಯಿ	ಇರಾನ್	109	149
ಮೊಕ್ತಾರ್ ದಹರಿ	ಮಲೇಷ್ಯಾ	89	142
ಫೆರೆನ್ಸ್ ಪಸ್ಕಸ್	ಹಂಗರಿ	84	85
ಗಾಡ್‌ಫ್ರೆ ಚೈತಾಲು	ಜಾಂಬಿಯಾ	79	111

ಓಮನ್‌ಗೆ ಕನ್ನಡಿಗ ಅನಂತ್ ಸ್ಪಿನ್ ಕೋಚ್

ಬೆಂಗಳೂರು: ಮುಂದಿನ ತಿಂಗಳು ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಓಮನ್ ತಂಡಕ್ಕೆ ಕರ್ನಾಟಕದ ಮಾಜಿ ಕ್ರಿಕೆಟಿಗ ಆರ್. ಅನಂತ್ ಸ್ಪಿನ್ ಕೋಚ್ ಆಗಿ ನೇಮಕವಾಗಿದ್ದಾರೆ.

ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿರುವ ಟೂರ್ನಿಗೆ ಓಮನ್ ದೇಶವೂ ಜಂಟಿ ಆತಿಥ್ಯ ವಹಿಸುತ್ತಿದೆ.

ಆರ್. ಅನಂತ್

ಪ್ರಾಥಮಿಕ ಸುತ್ತಿನಲ್ಲಿ ಬಾಂಗ್ಲಾದೇಶ, ಸ್ಕಾಟ್ಲೆಂಡ್ ಮತ್ತು ಪಪುವಾ ನ್ಯೂಗಿನಿ ತಂಡಗಳೊಂದಿಗೆ ಓಮನ್ ಸ್ಪರ್ಧಿಸಲಿದೆ. ಮಸ್ಕತ್‌ನಲ್ಲಿ ಪಂದ್ಯಗಳು ನಡೆಯಲಿವೆ.

ಕರ್ನಾಟಕ ತಂಡದ ಯಶಸ್ವಿ ಸ್ಪಿನ್ನರ್‌ಗಳಲ್ಲಿ ಒಬ್ಬರಾಗಿರುವ ಅನಂತ್ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ನೀಡಲು ತೆರಳಲಿದ್ದಾರೆ. ಕಳೆದ ಎರಡು ದೇಶಿ ಋತುಗಳಲ್ಲಿ ಅವರು ಅರುಣಾಚಲ ಪ್ರದೇಶದ 19 ವರ್ಷದೊಳಗಿನವರ ತಂಡಕ್ಕೆ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. 1995–96ರಲ್ಲಿ ಕರ್ನಾಟಕ, ರಣಜಿ ಟ್ರೋಫಿ ಜಯಿಸುವಲ್ಲಿ ಅನಂತ್ ಪಾತ್ರವೂ ಮಹತ್ವದ್ದಾಗಿತ್ತು. ಆ ಟೂರ್ನಿಯಲ್ಲಿ ಅವರು 20 ವಿಕೆಟ್‌ಗಳನ್ನು ಗಳಿಸಿದ್ದರು.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಸಂಘಟಿಸುವ ವಲಯವಾರು ಶಿಬಿರಗಳಲ್ಲಿ ಅವರು ಸ್ಪಿನ್ ಬೌಲಿಂಗ್ ಕೋಚ್ ಆಗಿ ಕೆಲಸ ಮಾಡಿದ್ದಾರೆ. ಅನಂತ್ ಅವರು ಈಗಾಗಲೇ ಮಸ್ಕತ್‌ನಲ್ಲಿ ತಂಡಕ್ಕೆ ತರಬೇತಿ ನೀಡಲು ಆರಂಭಿಸಿದ್ದಾರೆ.

‘ನಮಗೆ ಸಮಯ ಕಡಿಮೆ ಇದೆ ಎಂಬ ಅರಿವು ನನಗಿದೆ. ಆದರೆ ಇದೊಂದು ರಾಷ್ಟ್ರೀಯ ತಂಡವಾಗಿದೆ. ಎಲ್ಲ ಆಟಗಾರರು ಚೆನ್ನಾಗಿ ಆಡುವ ಹುಮ್ಮಸ್ಸಿನಲ್ಲಿದ್ದಾರೆ. ಮುಖ್ಯ ಸುತ್ತಿಗೆ ಅರ್ಹತೆ ಗಿಟ್ಟಿಸುವ ಗುರಿ ಅವರದ್ದು. ಅದಕ್ಕೆ ಮಾರ್ಗದರ್ಶನ ನೀಡುವುದು ನಮ್ಮ ಕೆಲಸ’ ಎಂದು ಅನಂತ್ ಹೇಳಿದರು.

ಉದಕಮಂಡಲ ರೇಸ್

ಕೂಲ್ ರೈಡರ್‌ಗೆ 2000 ಗಿನ್ನೀಸ್

ಚೆನ್ನೈನಲ್ಲಿ ಏರ್ಪಡಿಸಿರುವ ಶುಕ್ರವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆ ಚೆಟ್ಟಿನಾಡ್ ಸಿಮೆಂಟ್ ನೀಲ್‌ಗಿರೀಸ್ 2000 ಗಿನ್ನೀಸ್‌ನಲ್ಲಿ ಕೂಲ್ ರೈಡರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3.00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಿಂಗ್ ಹೊರೊಫ್ 1, ಚಾಣಕ್ಯ 2, ಪ್ರೊಪಹಾಲ್ಡಿ 4
2ನೇ ರೇಸ್: ಕ್ವೀನ್ಸ್ ಹಾಲ್ 3, ಸಿಫಾನ್ 9, ಬ್ರಿಂಕಾ 1
3ನೇ ರೇಸ್: ಮಿಸ್ಟರ್ ಮೂನ್‌ಲೈಟ್ 2, ರೀನ್ ಆಫ್ ಟೆರರ್ 3, ಡ್ಯಾಶಿಂಗ್ ಬ್ಯೂಟಿ 6
4ನೇ ರೇಸ್: ಅವೆಲಿನೊ 1, ಕಾಟನ್ ಹಾಲ್ 2, ಪೆಸಿಫಿಕ್ 8
5ನೇ ರೇಸ್: ಕೂಲ್ ರೈಡರ್ 3, ಅಸ್ಕೊವಾಲ್ 1, ಇಂಪೀರಿಯಲ್ ಬ್ಲೂ 5
6ನೇ ರೇಸ್: ಲೇಡಿ ರಾಯಲ್ 5, ವಿಕ್ಟರಿ ವಾಕ್ 6, ಫನ್ ಲವರ್ 7

ಉತ್ತಮ ಬೆಟ್: ಲೇಡಿ ರಾಯಲ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಪ್ರಶಸ್ತಿಯೊಂದಿಗೆ ವರುಣ್ಯಾ ಸಿ.ಎನ್‌. (ಎಡ) ಮತ್ತು ಸಂಚಿತ್ ಸುಧೀರ್ ರಾವ್

ವರುಣ್ಯಾ, ಸಂಚಿತ್‌ಗೆ ಪ್ರಶಸ್ತಿ

ಬೆಂಗಳೂರು: ಸಂಚಿತ್ ಸುಧೀರ್ ರಾವ್ ಮತ್ತು ವರುಣ್ಯಾ ಸಿ.ಎನ್. ಅವರು ಇಲ್ಲಿ ನಡೆದ ಎಐಟಿಎ ಟಿಎಸ್–3 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಗುರುವಾರ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಸಹಯೋಗದೊಂದಿಗೆ ಫಾರ್ಚೂನ್ ಸ್ಪೋರ್ಟ್ಸ್ ಅಕಾಡೆಮಿ ಆಯೋಜಿಸಿದ್ದ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಸಂಚಿತ್ 6-3, 6-7 (3), 7-5ರಿಂದ ಶ್ರೀಕರ್ ಡೋಣಿ ಅವರನ್ನು ಸೋಲಿಸಿದರು. ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಮೈಸೂರಿನ ವರುಣ್ಯಾ 6-2, 6-2ರಿಂದ ಅಗ್ರಶ್ರೇಯಾಂಕದ ಮಹಿಕಾ ರೆಡ್ಡಿ ಅವರಿಗೆ ಸೋಲುಣಿಸಿದರು.

ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ.
SHRIRAM City — MONEY WHEN YOU NEED IT MOST
ನೋಂದಾಯಿತ ಕಛೇರಿ: ಹೆಚ್. ನಂ. 123, ಅನಗಪ್ಪ ನಾಯಗನ್ ಸ್ಟ್ರೀಟ್, ಚೆನ್ನೈ–600001.
ಆಡಳಿತ ಕಚೇರಿ, #259/31, 1ನೇ ಮಹಡಿ, ಅಕ್ಷೋದಯ ಕಟ್ಟಡ, ಹೊಂಬೆಗೌಡ ಬಾಯ್ಸ್ ಹೈಸ್ಕೂಲ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–560027,ದೂ: 080–42451699 / 90717 76501

ಚಿನ್ನಾಭರಣ ಹರಾಜು ಹಾಗೂ ಆಹ್ವಾನ ಸೂಚನಾ ಪತ್ರ

ಈ ಕೆಳಕಂಡ ಗ್ರಾಹಕರು ತಾವು ಬಾಕಿ ಉಳಿಸಿಕೊಂಡಿರುವ ಚಿನ್ನಾಭರಣಗಳ ಸಾಲದ ಸೌಲಭ್ಯ (ಸೌಲಭ್ಯ) ವನ್ನು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. (ಎಸ್‌ಸಿಯುಎಫ್) ಯವರು ತೀರಿಸಲು ಸೂಚನಾ ಪತ್ರಗಳನ್ನು ಕಳುಹಿಸಿದ್ದರೂ ಕೂಡ ಬಾಕಿ ತೀರಿಸಲು ವಿಫಲರಾಗಿರುವುದರಿಂದ ಗ್ರಾಹಕರು ಅಡಮಾನ ಮಾಡಿದಂತಹ ಚಿನ್ನಾಭರಣಗಳು ಹರಾಜು ಪ್ರಕ್ರಿಯೆಯಲ್ಲಿ ನಾವು 15–09–2021 (ಹರಾಜು ದಿನಾಂಕ) ದಿನಾಂಕದಂದು ಮಾಡುತ್ತಿದ್ದೇವೆ. ಸದರಿ ಹರಾಜಿನ ಮೂಲಕ ಬಂದ ಹಣವನ್ನು ಒಂದು ವೇಳೆ ನಮಗೆ ಬರಬೇಕಾದ ಎಲ್ಲಾ ಬಾಕಿಗಳನ್ನು ಸರಿದೂಗಿಸಿ ಹೆಚ್ಚಿನ ಹಣ ಉಳಿದಲ್ಲಿ ಸಂಬಂಧಪಟ್ಟ ಗ್ರಾಹಕರಿಗೆ ಹಿಂದಿರುಗಿಸಲಾಗುವುದು ಮತ್ತು ಹರಾಜು/ಮಾರಟವಾದ ನಂತರವೂ ಬಂದ ಹಣ ತಮ್ಮ ಸಾಲದ ಒಟ್ಟು ಮೊತ್ತಕ್ಕಿಂತ ಕಡಿಮೆಯಾದಲ್ಲಿ ಬರಬೇಕಾದ ಬಾಕಿ ಹಣಕ್ಕಾಗಿ ಸೂಕ್ತ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. ರವರು ಈ ಕೆಳಕಂಡ ಗ್ರಾಹಕ ಖಾತೆಗಳ ಪಟ್ಟಿಯಲ್ಲಿ ಯಾವುದೇ ಒಂದು ಅಥವಾ ಕೆಲವು ಖಾತೆಗಳನ್ನು ಮುನ್ಸೂಚನೆಯಿಲ್ಲದೆ ತೆಗೆದು ಹಾಕುವ ಅಧಿಕಾರ ಹೊಂದಿರುತ್ತಾರೆ. ಮುಂದುವರಿದು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. ರವರು ಹರಾಜು ಪ್ರಕ್ರಿಯೆ ದಿನಾಂಕವನ್ನು ನಿರೀಕ್ಷಿಸಲು ಸಾದ್ಯಾವಾಗದ ಸಂದರ್ಭದಲ್ಲಿ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಗಾಂಧಿ ಬಜಾರ್

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಲಕ್ಷ್ಮೀಪತಿ ವಿ	QGANBPJ2007270003	ಲಕ್ಷ್ಮೀಪತಿ ವಿ	QGANBPJ2007270002

ಜೆ.ಪಿ ನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಸ್ಗರ್ ಪಾಷ	QJPNGPJ2008080009	ಜಗದೀಶ್ ಸೋನಿ	QJPNGPJ2010050005	ರಮೇಶ್ ಕುಮಾರ್ ಪಟೇಲ್	QJPNGPJ2010220009
ಆಯೇಶ ಸಿದ್ದಿಕ್	QJPNGPJ2009140006	ಜಗದೀಶ್ ಸೋನಿ	QJPNGPJ2009080001	ರಮೇಶ್ ಕುಮಾರ್ ಪಟೇಲ್	QJPNGPJ2009160003
ಹ್ಯಾಪಿ ಟಕ್	QJPNGPJ2010310002	ಜಗದೀಶ್ ಸೋನಿ	QJPNGPJ2009080002	ರಮೇಶ್ ಕುಮಾರ್ ಪಟೇಲ್	QJPNGPJ2009160005
ಹ್ಯಾಪಿ ಟಕ್	QJPNGPJ2010310001	ನಾರಾಯಣ್	QJPNGPJ2010240002	ಶಂಶುನ್ನಿಸ	QJPNGPJ2008140002
ಜಗದೀಶ್ ಸೋನಿ	QJPNGPJ2010150001	ನಾರಾಯಣ್	QJPNGPJ2010240001	ಶಂಶುನ್ನಿಸ	QJPNGPJ2008140003
ಜಗದೀಶ್ ಸೋನಿ	QJPNGPJ2010130001	ನಾರಾಯಣ್	QJPNGPJ2010230001	ತೌಫಿಕ್ ಖಾನ್	QJPNGPJ2010070002
ಜಗದೀಶ್ ಸೋನಿ	QJPNGPJ2010090005	ನಾರಾಯಣ್	QJPNGPJ2008190002	ಯಾರ್ವ ಮನೋಜ್ ಕುಮಾರ್	QJPNGPJ2010100002
ಜಗದೀಶ್ ಸೋನಿ	QJPNGPJ2010080001				

ಜಯನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಕುಮಾರ್ ಎ	QJAYBPJ2010120002	ಮಂಜುನಾಥ ಅಶ್ವಿನಿದೇವಿ	QJAYBPJ2010270002	ಸ್ವರೂಪ್ ಸುಧಾಕರ	QJAYBPJ2010300001
ಕುಮಾರ್ ಎ	QJAYBPJ2010120001	ಮಂಜುನಾಥ ಅಶ್ವಿನಿದೇವಿ	QJAYBPJ2010270001	ಸ್ವರೂಪ್ ಸುಧಾಕರ	QJAYBPJ2010290001
ಮಂಜುನಾಥ ಅಶ್ವಿನಿದೇವಿ	QJAYBPJ2010300003	ಮಂಜುನಾಥಗೌಡ	QJAYBPJ2006030002	ವಿನೋದ್ ಕುಮಾರ್	QJAYBPJ2009090001
ಮಂಜುನಾಥ ಅಶ್ವಿನಿದೇವಿ	QJAYBPJ2010290003	ಪ್ರತಾಪ್ ಎಲ್ ಸಿ	QJAYBPJ2006040001	ವಿನೋದ್ ಕುಮಾರ್	QJAYBPJ2009090002
ಮಂಜುನಾಥ ಅಶ್ವಿನಿದೇವಿ	QJAYBPJ2010290002	ಸತ್ಯ ಎಂ	QJAYBPJ2006050001	ವಿನೋದ್ ಕುಮಾರ್	QJAYBPJ2009100006
ಮಂಜುನಾಥ ಅಶ್ವಿನಿದೇವಿ	QJAYBPJ2010270003	ಸ್ವರೂಪ್ ಸುಧಾಕರ	QJAYBPJ2010300002	ವಿನೋದ್ ಕುಮಾರ್	QJAYBPJ2009100007

ಮತ್ತಿಕೆರೆ

ಹೆಸರು	ಲೋನ್ ನಂಬರ್
ಪುನೀತ್ ಕುಮಾರ್	QMTHKPJ2010290001

ಶಿವಾಜಿ ನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಗಣಪತಿ ಲಾಲ್ ಎನ್	QSHIVPJ1911020001	ಗಣಪತಿ ಲಾಲ್ ಎನ್	QSHIVPJ1912110001

ಟಿ.ದಾಸರಹಳ್ಳಿ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಬಿ ವಿ ಮಂಜುನಾಥ್	QDSRLPJ2010300001	ಲೋಕೇಶ್	QDSRLPJ2010210003	ಷರೀಫ್	QDSRLPJ2009230006
ಗಣೇಶ್	QDSRLPJ2002270005	ಲೋಕೇಶ್	QDSRLPJ2010210002	ಶೇಖ್ ಅಹಮದ್	QDSRLPJ2006150005
ಗಿರೀಶ ಟಿ	QDSRLPJ2008180001	ಮೋಹಿನಿ ದೇವಿ	QDSRLPJ2010310007	ಶ್ರೀಲಕ್ಷ್ಮಿ ಬಿಎಸ್	QDSRLPJ2007250003
ಗೋಪಾಲ್ ಬಿ	QDSRLPJ2010010001	ಪ್ರವೀಣ್ ಕುಮಾರ್ ಸಾಲಿಂಕ	QDSRLPJ2008250001	ಉಮೇಶ್ ಕುಮಾರ್ ಬನ್ನಟ್ಟಿ	QDSRLPJ2007270003
ಗುರುಸ್ವಾಮಿ	QDSRLPJ2009260004	ಪ್ರವೀಣ್ ಕುಮಾರ್ ಸಾಲಿಂಕ	QDSRLPJ2008270002		

ವಿಜಯನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಶಿವರಾಜ್	QBANVPJ2009240001	ಶಿವರಾಜ್	QBANVPJ2009240002

ವಿಲ್ಸನ್ ಗಾರ್ಡನ್ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಶ್ರಫ್ ಖಾನುಮ್	QBANWPJ2010210004	ಪುಷ್ಪ ರಾಜ್	QBANWPJ2010290002	ರಮೇಶ್ ಕುಮಾರ್	QBANWPJ2009100004
ಅಶ್ರಫ್ ಖಾನುಮ್	QBANWPJ2010210003	ಪುಷ್ಪ ರಾಜ್	QBANWPJ2010050005	ರವಿ ಎನ್	QBANWPJ2008170003
ಅಶ್ರಫ್ ಖಾನುಮ್	QBANWPJ2010210002	ರಾಜೇಂದ್ರ ಪ್ರಸಾದ್ ಯಾದವ್	QBANWPJ2009040003	ರವಿ ಎನ್	QBANWPJ2008170004
ಅಶ್ರಫ್ ಖಾನುಮ್	QBANWPJ2010210001	ರಾಜೇಂದ್ರ ಪ್ರಸಾದ್ ಯಾದವ್	QBANWPJ2009040004	ರವಿ ಎನ್	QBANWPJ2008170005
ಗಜೇಂದ್ರ	QBANWPJ2010190001	ರಾಜೇಂದ್ರ ಪ್ರಸಾದ್ ಯಾದವ್	QBANWPJ2009040005	ಸೈಯದ್ ಅನ್ವರ್	QBANWPJ2010030002

ಯಲಹಂಕ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಪ್ರಶಾಂತ್ ಕುಮಾರ್	QYELNPJ2010290002	ಸುಬ್ರಹ್ಮಣ್ಯಂ ನಾಯ್ಡು	QYELNPJ2008120003	ಸುಧಾ	QYELNPJ2008070005
ಪ್ರಶಾಂತ್ ಕುಮಾರ್	QYELNPJ2010280002	ಸುಬ್ರಹ್ಮಣ್ಯಂ ನಾಯ್ಡು	QYELNPJ2008120004	ಸುಧಾ	QYELNPJ2008130001
ಸುಬ್ರಹ್ಮಣ್ಯಂ ನಾಯ್ಡು	QYELNPJ2008120001	ಸುಧಾ	QYELNPJ2008070003	ಸುಧಾ	QYELNPJ2008130002
ಸುಬ್ರಹ್ಮಣ್ಯಂ ನಾಯ್ಡು	QYELNPJ2008120002	ಸುಧಾ	QYELNPJ2008070004		

ಹರಾಜು ಈ ಕೆಳಕಂಡ ವಿಳಾಸದಲ್ಲಿ ನಡೆಸಲಾಗುವುದು: : ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ., #259/31, 1ನೇ ಮಹಡಿ, ಅಕ್ಷೋದಯ ಕಟ್ಟಡ, ಹೊಂಬೆಗೌಡ ಬಾಯ್ಸ್ ಹೈಸ್ಕೂಲ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–560027, ದೂ: 9071776501
ಹರಾಜು ಸಮಯ: ಬೆಳಿಗ್ಗೆ : 10.30 ಘಂಟೆಗೆ
ಹೆಚ್ಚಿನ ಮಾಹಿತಿಗಳಿಗಾಗಲಿ, ಷರತ್ತು ಹಾಗೂ ನಿಭಂದನೆಗಳಿಗಾಗಿಯಾಗಲಿ, ಹರಾಜಿನಲ್ಲಿ ಬಾಗವಹಿಸುವುದು ಮತ್ತು ಹೆಸರನ್ನು ನೊಂದಾಯಿಸಿಕೊಳ್ಳಲು ಆಸಕ್ತಿ ಉಳ್ಳವರು ಮೊಬೈಲ್: 8431166309/9071776580 / 9901066688 ಕರೆ ಮಾಡಿ ಸಂಪರ್ಕಿಸಬಹುದು. ಒಂದು ವೇಳೆ ಹರಾಜು ನಿಗಧಿ ಪಡಿಸುವ ದಿನದಂದು ಸಮಯದ ಅಭಾವದಿಂದ ಮುಗಿಸಿಲಾಗದ ಪಕ್ಷದಲ್ಲಿ ಕಛೇರಿಯ ಕೆಲಸದ ಮುಂದಿನ ದಿನಗಳಲ್ಲಿ ನಿಗದಿತ ಷರತ್ತು ಹಾಗೂ ನಿಭಂದನೆಗಳಿಗನುಗುಣವಾಗಿ ನೆಡೆಸಲಾಗುವುದು. ಒಂದು ವೇಳೆ ಯಾವುದೇ ಗ್ರಾಹಕ ಮೃತ್ಯು ಹೊಂದಿದ್ದಲ್ಲಿ ಅತನ/ಅವಳ ವಾರಸುದಾರರಿಗೆ ಹರಾಜಿನ ಎಲ್ಲಾ ಷರತ್ತು ಹಾಗೂ ನಿಭಂದನೆಗಳು ಅನ್ವಹಿಸುವುದು.
ದಿನಾಂಕ: 03.09.2021
ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ. ಪರವಾಗಿ

ಡ್ರಗ್ಸ್ ಪ್ರಕರಣ: ತನಿಖೆಗೆ ಸಹಕರಿಸದೆ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರ ವಶಕ್ಕೆ

ಪೊಲೀಸರನ್ನೇ ಅಪಹರಣಕಾರರೆಂದು ದಿಕ್ಕುತಪ್ಪಿಸಿದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ತನ್ನನ್ನು ಬಂಧಿಸಲು ಬಂದ ಪೊಲೀಸರನ್ನೇ ಅಪಹರಣಕಾರರೆಂದು ಹೇಳಿ ಸ್ಥಳೀಯರ ದಿಕ್ಕುತಪ್ಪಿಸಿ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಆರೋಪಿಯನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಪೊಲೀಸರ ತನಿಖೆಗೆ ಸಹಕರಿಸದೇ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಸ್ಥಳೀಯ ನಿವಾಸಿ ಭರತ್ ಹಾಗೂ ಪೊಲೀಸರ ಮಾಹಿತಿದಾರನೆಂದು ಹೇಳಿಕೊಳ್ಳುತ್ತಿದ್ದ ರತನ್ ಲಾಲ್ ಎಂಬಾತನನ್ನು ಗುರುವಾರ ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಡ್ರಗ್ಸ್ ಮಾರಾಟ ಸಂಬಂಧ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯಾಗಿದ್ದ ಭರತ್ ತಲೆಮರೆಸಿಕೊಂಡಿದ್ದ. ಆತ, ಕಾಮಾಕ್ಷಿಪಾಳ್ಯದಲ್ಲಿರುವ ತನ್ನ ಮನೆಯಲ್ಲಿ ಅಡಗಿರುವ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಹೀಗಾಗಿ, ಕುಮಾರಸ್ವಾಮಿ ಲೇಔಟ್ ಪೊಲೀಸರ ವಿಶೇಷ ತಂಡ ಮನೆ ಬಳಿ ಬಂದಿತ್ತು.’

‘ಮಫ್ತಿಯಲ್ಲಿದ್ದ ಪೊಲೀಸರನ್ನು ನೋಡಿದ್ದ ಭರತ್, ‘ನನ್ನನ್ನು ಅಪಹರಣ ಮಾಡಲು ಅಪರಿಚಿತರು ಬಂದಿದ್ದಾರೆ’ ಎಂದು ಕೂಗಾಡಿ ಸ್ಥಳೀಯರನ್ನು ಸೇರಿಸಿದ್ದ. ‘ನನ್ನನ್ನು ಕಾಪಾಡಿ’ ಎಂದು ಗೋಗರೆದಿದ್ದ ಆರೋಪಿ, ಪೊಲೀಸ್ ನಿಯಂತ್ರಣ ಕೊಠಡಿಗೂ ಕರೆ ಮಾಡಿದ್ದ.’

‘ಆರೋಪಿ ಮಾತು ನಂಬಿದ್ದ ಸ್ಥಳೀಯರು, ಪೊಲೀಸರ ಮೇಲೆಯೇ ಹರಿಹಾಯ್ದಿದ್ದರು. ಕಾಮಾಕ್ಷಿಪಾಳ್ಯ ಠಾಣೆಯ ಹೊಯ್ಸಳ ವಾಹನದ ಸಿಬ್ಬಂದಿ, ಸ್ಥಳಕ್ಕೆ ಹೋಗಿದ್ದರು. ಬಂಧಿಸಲು ಬಂದವರು ನೈಜ ಪೊಲೀಸರು ಎಂಬುದು ಗೊತ್ತಾಗುತ್ತಿದ್ದಂತೆ, ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಚಿವರ ಸಂಬಂಧಿಯೆಂದ ಆರೋಪಿ: ‘ತಾನು ಪೊಲೀಸರ ಮಾಹಿತಿದಾರನೆಂದು ಹೇಳಿಕೊಂಡು ರತನ್‌ಲಾಲ್ ಎಂಬಾತ ಸ್ಥಳಕ್ಕೆ ಬಂದಿದ್ದ. ಭರತ್‌ನನ್ನು ಬೆದರಿಸಿದ್ದ ಎನ್ನಲಾಗಿದೆ. ಆತನನ್ನು ಪೊಲೀಸರು ವಶಕ್ಕೆ ಪಡೆದಾಗ, ತಾನೊಬ್ಬ ಸಚಿವರ ಸಂಬಂಧಿಯೆಂದು ಹೇಳಿದ್ದಾನೆ. ಆತನನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ನವೋದ್ಯಮಿಗಳಿಗೆ ವಂಚನೆ; ತಮ್ಮ ಬಂಧನ, ಅಕ್ಕ ಪರಾರಿ

ಬೆಂಗಳೂರು: ಐ.ಟಿ ಯೋಜನೆ ಕೊಡಿಸುವುದಾಗಿ ಆಮಿಷವೊಡ್ಡಿ ನವೋದ್ಯಮಿಗಳಿಂದ ಹಣ ಪಡೆದು ವಂಚಿಸಿದ ಆರೋಪದಡಿ ರೂಪೇಶ್ ಎಂಬಾತನನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದಲ್ಲಿ ಆರೋಪಿಯಾಗಿರುವ ಆತನ ಅಕ್ಕ ಕಾವ್ಯಾ ತಲೆಮರೆಸಿಕೊಂಡಿದ್ದಾರೆ.

‘ಅಮೆರಿಕದ ಕಂಪನಿಯೊಂದರಿಂದ ಯೋಜನೆ ಕೊಡಿಸುವುದಾಗಿ ಹೇಳಿದ್ದ ಆರೋಪಿಗಳು ₹ 50 ಲಕ್ಷ ಪಡೆದು ವಂಚಿಸಿದ್ದಾರೆಂದು ನವೋದ್ಯಮಿಯೊಬ್ಬರು ಇತ್ತೀಚೆಗೆ ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು ರೂಪೇಶ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಂಇಐ ಬಡಾವಣೆ ನಿವಾಸಿಗಳಾದ ರೂಪೇಶ್ ಮತ್ತು ಕಾವ್ಯಾ, ಎಂಟು ನವೋದ್ಯಮಿಗಳಿಂದ ಹಣ ಪಡೆದಿರುವುದಕ್ಕೆ ಪುರಾವೆಗಳಿವೆ. ಲಾಕ್‌ಡೌನ್‌ನಿಂದ ಕೆಲಸವಿಲ್ಲದೇ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ನವೋದ್ಯಮಿಗಳು, ಹೊಸ ಯೋಜನೆಗಳಿಗಾಗಿ ಹುಡುಕಾಡುತ್ತಿದ್ದರು. ಅಂಥವರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಕಮಿಷನ್ ನೆಪದಲ್ಲಿ ಮುಂಗಡವಾಗಿ ಹಣ ಪಡೆದು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ತೂಕದಲ್ಲಿ ಜನರಿಗೆ ವಂಚನೆ; ಮೂವರು ವಶಕ್ಕೆ

ಬೆಂಗಳೂರು: ತೂಕದ ಯಂತ್ರದಲ್ಲಿರುವ ಸಂಖ್ಯೆಗಳನ್ನು ಅಕ್ರಮವಾಗಿ ಬದಲಾಯಿಸಿ ಜನರನ್ನು ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದು, ಹಲವು ಅಂಗಡಿಗಳ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.

‘ತೂಕ ಯಂತ್ರದ ತಂತ್ರಜ್ಞಾನವನ್ನು ಬದಲಿಸಿ ಸಂಖ್ಯೆಗಳನ್ನು ತಮ್ಮಿಷ್ಟದಂತೆ ಮಾರ್ಪಡಿಸಿ ಜನರನ್ನು ವಂಚಿಸಲಾಗುತ್ತಿತ್ತು. ಮಾನ್ಯತೆ ಪಡೆದ ಕಂಪನಿಯಿಂದ ಖರೀದಿಸಿದ್ದ ಯಂತ್ರಗಳನ್ನು ಅಕ್ರಮವಾಗಿ ಮಾರ್ಪಡಿಸುತ್ತಿದ್ದ ಆರೋಪದಡಿ ರವೀಂದ್ರ, ನಾಗೇಶ್ ಹಾಗೂ ರಾಘವೇಂದ್ರ ಎಂಬುವರನ್ನು ವಶಕ್ಕೆ ಪಡೆಯಲಾಗಿದೆ. ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತರಕಾರಿ, ಮಾಂಸ ಮಾರಾಟ ಹಾಗೂ ಕಿರಾಣಿ ಅಂಗಡಿಗಳ ತೂಕದ ಯಂತ್ರಗಳಲ್ಲಿ ವ್ಯತ್ಯಾಸ ಕಂಡುಬಂದಿತ್ತು. ಈ ಬಗ್ಗೆ ದೂರುಗಳು ಬಂದಿದ್ದವು. ಎಂಟು ಅಂಗಡಿಗಳ ಮೇಲೆ ದಾಳಿ ಮಾಡಿ ಪರಿಶೀಲಿಸಿದಾಗ, ಅಕ್ರಮ ಬಯಲಾಯಿತು.’

‘ಅಕ್ರಮದ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಗೆ ಬರುವಂತೆ ಅಂಗಡಿಗಳ ಮಾಲೀಕರಿಗೆ ನೋಟಿಸ್ ನೀಡಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಪಾನಮತ್ತ ಚಾಲನೆ; ತಳ್ಳುಗಾಡಿಗೆ ಡಿಕ್ಕಿ

ಬೆಂಗಳೂರು: ವಿದ್ಯಾರಣ್ಯಪುರ ಸಮೀಪದ ಸಂಭ್ರಮ ಕಾಲೇಜು ಬಳಿ ವ್ಯಕ್ತಿಯೊಬ್ಬ ಪಾನಮತ್ತನಾಗಿ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದಾನೆ.

‘ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿಕೊಂಡು ಬಂದಿದ್ದ ಚಾಲಕ, ರಸ್ತೆ ಪಕ್ಕದಲ್ಲಿದ್ದ ತಳ್ಳುಗಾಡಿಗೆ ಗುದ್ದಿಸಿದ್ದಾನೆ. ತರಕಾರಿ ಮಾರುತ್ತಿದ್ದ ಮೂವರು ಬೀದಿವ್ಯಾಪಾರಿಗಳು, ದೂರಕ್ಕೆ ಓಡಿ ಪ್ರಾಣ ಉಳಿಸಿಕೊಂಡಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಅಪಘಾತದ ಬಳಿಕ ಚಾಲಕ ಪರಾರಿಯಾಗಿದ್ದಾನೆ. ಆತನ ಹೆಸರು ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡಿರುವ ಜಾಲಹಳ್ಳಿ ಸಂಚಾರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಎಂಟು ವರ್ಷಗಳ ಬಳಿಕ ಸಿಕ್ಕಿಬಿದ್ದ ಆರೋಪಿ

ಬೆಂಗಳೂರು: ನಗರದ ಹಲವೆಡೆ ಅಪರಾಧ ಕೃತ್ಯ ಎಸಗಿ ಪರಾರಿಯಾಗಿದ್ದ ಆರೋಪಿ ಹಮೀದ್ ಎಂಬಾತ, ಎಂಟು ವರ್ಷಗಳ ಬಳಿಕ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

‘ಕೊಲೆ, ಕೊಲೆ ಯತ್ನ, ಸುಲಿಗೆ ಹಾಗೂ ಮಾದಕ ವಸ್ತು ಮಾರಾಟ ಸೇರಿದಂತೆ 15 ಪ್ರಕರಣದಲ್ಲಿ ಆರೋಪಿ ಭಾಗಿಯಾಗಿದ್ದ. ಆತನಿಗಾಗಿ ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ಹುಡುಕಾಟ ನಡೆಸಲಾಗಿತ್ತು. ಇತ್ತೀಚೆಗೆ ಸಿಕ್ಕ ಸುಳಿವು ಆಧರಿಸಿ ಆತನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ಜ್ಞಾನಭಾರತಿ, ಅನ್ನಪೂರ್ಣೇಶ್ವರಿ ನಗರ ಹಾಗೂ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಹೆಚ್ಚು ಕೃತ್ಯ ಎಸಗಿದ್ದ. ತನ್ನದೇ ಸಹಚರರ ತಂಡ ಕಟ್ಟಿಕೊಂಡು ಜನರನ್ನು ಬೆದರಿಸುತ್ತಿದ್ದ. ಮಾದಕ ವಸ್ತು ಮಾರಾಟದಲ್ಲೂ ತೊಡಗಿಸಿಕೊಂಡಿದ್ದ. ಆತನ ಜೊತೆ ಸಹೋದರನನ್ನೂ ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಅಕ್ರಮ ಗಣಿಗಾರಿಕೆ ಕಡಿವಾಣಕ್ಕೆ ನಿರ್ದೇಶನ

ಬೆಂಗಳೂರು: ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಪಕ್ಕದಲ್ಲಿರುವ ಸಾದರಹಳ್ಳಿ ಬಂಡೆ ಮತ್ತು ಸುತ್ತಮುತ್ತ ಯಾವುದೇ ಅಕ್ರಮ ಗಣಿಗಾರಿಕೆಗೆ ನಡೆಯದಂತೆ ನೋಡಿಕೊಳ್ಳಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ನಿವೃತ್ತ ಐಪಿಎಸ್ ಅಧಿಕಾರಿ ಎಸ್. ಮರಿಸ್ವಾಮಿ ಹಾಗೂ ಸ್ಥಳೀಯ ನಿವಾಸಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿದೆ.

‘ಈ ಗಣಿಗಾರಿಕೆ ಕ್ವಾರಿಗಳ ಸುತ್ತ ಈಗ ವಸತಿ ಬಡಾವಣೆಗಳು ನಿರ್ಮಾಣವಾಗಿವೆ. ಜೇಡ್ ಗಾರ್ಡನ್ ಲೇಔಟ್, ಹಾಲಿವುಡ್ ಟೌನ್ ರೆಸಿಡೆನ್ಷಿಯಲ್ ಲೇಔಟ್, ಸ್ವಿಸ್ ಟೌನ್ ಲೇಔಟ್ ಸುತ್ತಮುತ್ತಲ ಪ್ರದೇಶಗಳಿಂದ ಕೇವಲ 100ರಿಂದ 200 ಮೀಟರ್ ದೂರದಲ್ಲೇ ಗಣಿಗಾರಿಕೆ ಚಟುವಟಿಕೆಗಳು ನಡೆಯುತ್ತಿವೆ’ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಗಣಿಗಾರಿಕೆಯು ನಿವಾಸಿಗಳ ಮೇಲೆ, ಅದರಲ್ಲೂ ಹಿರಿಯ ನಾಗರಿಕರ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಕ್ವಾರಿಯ ದೂಳು ಹಲವರ ಸಾವಿಗೂ ಕಾರಣವಾಗಿವೆ. ‘ಸಿಲಿಕೋಸಿಸ್’ ರೀತಿಯ ರೋಗಗಳಿಗೂ ಜನ ತುತ್ತಾಗುತ್ತಿದ್ದಾರೆ. ಶ್ವಾಸಕೋಶದಲ್ಲಿ ಕೊರೊನಾ ವೈರಾಣು ಮಾಡುವುದಕ್ಕಿಂತ ಹೆಚ್ಚು ಹಾನಿಯನ್ನು ಈ ದೂಳು ಮಾಡುತ್ತಿದೆ’ ಎಂದು ಅರ್ಜಿದಾರರು ವಿವರಿಸಿದ್ದಾರೆ.

‘ಅಕ್ರಮ ಗಣಿಗಾರಿಕೆ ಸಂಬಂಧ ಲೋಕಾಯುಕ್ತಕ್ಕೂ ಈ ಹಿಂದೆ ದೂರು ನೀಡಲಾಗಿತ್ತು. ಲೋಕಾಯುಕ್ತ ತನಿಖೆ ಬಳಿಕ 2018ರಲ್ಲಿ ಅಕ್ರಮ ಗಣಿಗಾರಿಕೆ ಸ್ಥಗಿತಗೊಂಡಿತ್ತು. ಇದೇ ಜಾಗದಲ್ಲಿ ಮತ್ತೆ ಗಣಿಗಾರಿಕೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅನುಮತಿ ನೀಡಿರುವ ಅನುಮಾನ ಇದೆ’ ಎಂದು ಅರ್ಜಿದಾರರು ಹೇಳಿದ್ದಾರೆ.

ಮಾಸ್ಕ್ ಧರಿಸದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ದಂಡ

ಮೈಸೂರು: ಸಭೆಯಲ್ಲಿ ಮಾಸ್ಕ್ ಧರಿಸದ ಜಯಪುರ ಹೋಬಳಿ ಕಡಕೊಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ವೆಂಕಟೇಶ್ ಅವರಿಗೆ ಪಾಲಿಕೆ ಅಧಿಕಾರಿಗಳು ಸ್ಥಳದಲ್ಲೇ ₹ 250 ದಂಡ ವಿಧಿಸಿದ್ದಾರೆ.

‘ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೋವಿಡ್–19 ನಿಯಂತ್ರಣ ಸಂಬಂಧ ಗುರುವಾರ ನಡೆದ ಸಭೆಯಲ್ಲಿ ಸರಿಯಾಗಿ ಮಾಸ್ಕ್ ಧರಿಸದೆ ಇರುವುದಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಎರಡು ಬಾರಿ ಎಚ್ಚರಿಕೆ ನೀಡಿದರೂ ಅವರು ಮತ್ತೆ ನಿರ್ಲಕ್ಷ್ಯ ತೋರಿದರು’ ಎಂದು ಪಾಲಿಕೆ ಆರೋಗ್ಯಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸಾರ್ವಜನಿಕ ಸ್ಥಳ, ಸಭೆ/ಸಮಾರಂಭಗಳಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಈ ಸಂಬಂಧ ಕಟ್ಟುನಿಟ್ಟಿನ ಕ್ರಮ ಜಾರಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಸಿ.ಎಂ ಮನೆ ರಸ್ತೆಗೆ ಡಾಂಬರೀಕರಣ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಸಂಪರ್ಕ ಕಲ್ಪಿಸುವ ರೇಸ್‌ಕೋರ್ಸ್ ರಸ್ತೆಯ ಡಾಂಬರೀಕರಣ ಕಾರ್ಯದಲ್ಲಿ ಕಾರ್ಮಿಕರು ಗುರುವಾರ ನಿರತರಾಗಿದ್ದರು–ಪ್ರಜಾವಾಣಿ ಚಿತ್ರ

ವಾಯುನೆಲೆ ಮೇಲೆ ‘ಡ್ರೋನ್’ ಹಾರಾಟ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿಯ ವಾಯುನೆಲೆ ಪ್ರದೇಶದಲ್ಲಿ ಅಪರಿಚಿತರು ‘ಡ್ರೋನ್’ ಹಾರಿಸಿರುವ ಅನುಮಾನ ವ್ಯಕ್ತವಾಗಿದ್ದು, ಈ ಬಗ್ಗೆ ಗಂಗಮ್ಮನಗುಡಿ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ, ‘ವಾಯುನೆಲೆ ಪ್ರದೇಶದಲ್ಲಿ 40 ದಿನಗಳ ಹಿಂದೆ ಡ್ರೋನ್ ಮಾದರಿ ವಸ್ತುವಿನ ಬೆಳಕು ನೋಡಿರುವುದಾಗಿ ಸಿಬ್ಬಂದಿ ದೂರು ನೀಡಿದ್ದರು. ಅಂದಿನಿಂದಲೂ ವಾಯುನೆಲೆ ಬಳಿ ಪೊಲೀಸರು ಗಸ್ತು ತಿರುಗುತ್ತಿದ್ದಾರೆ. ಅಂಥ ಯಾವುದೇ ಡ್ರೋನ್ ಇದುವರೆಗೂ ಕಂಡುಬಂದಿಲ್ಲ’ ಎಂದರು.

‘ವಾಯುನೆಲೆ ಪ್ರದೇಶವನ್ನು ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ. ಸಾರ್ವಜನಿಕರ ಪ್ರವೇಶವನ್ನೂ ನಿರ್ಬಂಧಿಸಲಾಗಿದೆ. ಇಂಥ ಸ್ಥಳದಲ್ಲಿ ರಾತ್ರಿ ಕಾವಲು ಕಾಯುತ್ತಿದ್ದ ವಾಯುನೆಲೆ ಸಿಬ್ಬಂದಿಗೆ, ಆಕಾಶದಲ್ಲಿ ಡ್ರೋನ್ ಮಾದರಿ ಉಪಕರಣವೊಂದರ ಬೆಳಕು ಕಾಣಿಸಿತ್ತು ಎನ್ನಲಾಗಿದೆ. ಇದರಿಂದ ವಾಯುನೆಲೆಯಲ್ಲಿ ಆತಂಕ ಸೃಷ್ಟಿಯಾಗಿತ್ತು.’

‘ಅಕ್ಕ–ಪಕ್ಕದ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಮನೆಗಳಲ್ಲಿ ಪರಿಶೀಲನೆ ಸಹ ನಡೆಸಲಾಗಿದೆ. ಅಂದು ಡ್ರೋನ್ ಹಾರಾಡಿದ ಬಗ್ಗೆ ಸದ್ಯಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ’ ಎಂದೂ ಹೇಳಿದರು.

ಜನಾಂಗೀಯ ತಾರತಮ್ಯ: ಗಮನ ಸೆಳೆದ ಕನ್ನಡತಿ

ಮಂಗಳೂರು: ಇಂಗ್ಲೆಂಡ್‌ನ ಲ್ಯಾಂಕಸ್ಟರ್ ವಿಶ್ವವಿದ್ಯಾಲಯದಲ್ಲಿ ಕಾನೂನು ಸಂಶೋಧನಾ ವಿದ್ಯಾರ್ಥಿನಿಯಾಗಿರುವ ಇಲ್ಲಿನ ಪ್ರೀತಿ ಲೋಲಾಕ್ಷ ನಾಗವೇಣಿ ಅವರು ಜನಾಂಗೀಯ ತಾರತಮ್ಯ ನಿವಾರಣೆಗೆ ಸಲ್ಲಿಸಿದ್ದ ಶಿಫಾರಸುಗಳನ್ನು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದಾರೆ.

ಪ್ರೀತಿ

ಈ ಶಿಫಾರಸುಗಳ ಮಹತ್ವವನ್ನು ಪರಿಗಣಿಸಿರುವ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಹೈ ಕಮಿಷನರ್, ಅದನ್ನು ತಮ್ಮ ಅಧಿಕೃತ ವೆಬ್‌ಸೈಟ್‌ನಲ್ಲೇ ಪ್ರಕಟಿಸಿದ್ದಾರೆ. ಪ್ರೀತಿ ಅವರು ತಮ್ಮ ಸಹಪಾಠಿ ಸಂಶೋಧನಾ ವಿದ್ಯಾರ್ಥಿ ಅಮಿತ್ ಆನಂದ್ ಜೊತೆಯಲ್ಲಿ ಸಿದ್ಧಪಡಿಸಿದ್ದರು.

ಕಾನೂನು ಬಾಹಿರ ವೇತನ: ವಿ.ವಿ ಅಕ್ರಮ ಆರೋಪ

ಬೆಂಗಳೂರು: ಕೆಲ ಸಿಬ್ಬಂದಿಗೆ ಕಾನೂನುಬಾಹಿರವಾಗಿ ವೇತನ ರಕ್ಷಣೆ ನೀಡುವ ಮೂಲಕ ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಅಕ್ರಮ ಎಸಗಿದೆ ಎಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರ ಗುಂಪು ಆರೋಪಿಸಿದೆ.

‘ಕುಲಪತಿ ಕೆ.ಆರ್. ವೇಣುಗೋಪಾಲ್ ಅವರು ವಿಶ್ವವಿದ್ಯಾಲಯಗಳ ಕಾಯ್ದೆ ಉಲ್ಲಂಘಿಸಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಕೆಲ ಸಿಬ್ಬಂದಿಗೆ ವೇತನ ರಕ್ಷಣೆ ನೀಡಿದ್ದಾರೆ’ ಎಂದು ಸಿಂಡಿಕೇಟ್ ಸದಸ್ಯ ಡಾ. ಸುಧಾಕರ್ ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ವೇತನ ರಕ್ಷಣೆ ಹೆಸರಿನಲ್ಲಿ ಆರು ಪ್ರಾಧ್ಯಾಪಕರಿಗೆ ₹2 ಕೋಟಿಗೂ ಹೆಚ್ಚು ವೇತನ ಪಾವತಿಸಲಾಗಿದೆ. ಪ್ರತಿ ತಿಂಗಳು ಲಕ್ಷಗಟ್ಟಲೆ ಹಣ ಪ್ರಾಧ್ಯಾಪಕರಿಗೆ ವೇತನ ರೂಪದಲ್ಲಿ ಸಂದಾಯವಾಗುತ್ತಿದೆ. ಉನ್ನತ ಶಿಕ್ಷಣ ಇಲಾಖೆ ಮತ್ತು ರಾಜ್ಯಪಾಲರು ತಕ್ಷಣ ಕಾರ್ಯಪ್ರವೃತ್ತರಾಗಿ ವೇತನ ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು.

ಯುಜಿಸಿ ನಿಯಮ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ನಿಯಂತ್ರಣ ಮಂಡಳಿಯ ನಿಯಮಗಳನ್ನು ಗಾಳಿಗೆ ತೂರಿ ಯುವಿಸಿಇ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾಲಯ ಹೊರಡಿಸಿದೆ ಎಂದು ಮತ್ತೊಬ್ಬ ಸಿಂಡಿಕೇಟ್ ಸದಸ್ಯ ಉದಯಕುಮಾರ್ ಆರೋಪಿಸಿದರು.

‘ವಿಶ್ವವಿದ್ಯಾಲಯದ ಪಿಎಚ್.ಡಿ ನಿಯಮಗಳು 2016 ಅನ್ನು ಉಲ್ಲಂಘಿಸಿ ಅನರ್ಹ ಅಭ್ಯರ್ಥಿಗಳನ್ನು ಪಿಎಚ್.ಡಿಗೆ ಸೇರಿಸಲಾಗಿದೆ. ಅತಿಥಿ ಉಪನ್ಯಾಸಕರ ನೇಮಕಾತಿ, ಖಾಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸೇರಿ ವಿಶ್ವವಿದ್ಯಾಲಯದ ಎಲ್ಲ ಅಕ್ರಮಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು’ ಎಂದು ಮತ್ತೊಬ್ಬ ಸದಸ್ಯ ಡಾ. ಗೋವಿಂದರಾಜು ಆಗ್ರಹಿಸಿದರು.

ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಮಾರುತ್ತಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಿಂದ ನಗರಕ್ಕೆ ಬರಲು ಯತ್ನಿಸುತ್ತಿದ್ದವರಿಗೆ ‘ಆರ್‌ಟಿಪಿಸಿಆರ್ ನೆಗೆಟಿವ್ ವರದಿ’ ಮಾರುತ್ತಿದ್ದ ಆರೋಪದಡಿ ನಿಪುಣ್ (29) ಎಂಬಾತನನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದು, ಆತನನ್ನು ಇದೀಗ ಕೇರಳ ಪೊಲೀಸರು ಕಸ್ಟಡಿಗೆ ಪಡೆದಿದ್ದಾರೆ.

‘ಕೇರಳದ ನಿಪುಣ್, ಪಿಯುಸಿವರೆಗೂ ಓದಿದ್ದಾನೆ. ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆತ, ಸ್ಥಳೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸೀಟು ಕೊಡಿಸುವ ಮಧ್ಯವರ್ತಿ ಕೆಲಸ ಮಾಡುತ್ತಿದ್ದ. ಲಾಕ್‌ಡೌನ್‌ನಿಂದ ಹೆಚ್ಚು ಕೆಲಸವಿರಲಿಲ್ಲ. ಹಣ ಸಂಪಾದಿಸಲು, ನಕಲಿ ವರದಿ ತಯಾರಿಸಿ ಮಾರಲಾರಂಭಿಸಿದ್ದ. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಿಪುಣ್

‘ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿತ್ತು. ಆತನ ವಿರುದ್ಧ ಕೇರಳದಲ್ಲೂ ಪ್ರಕರಣ ದಾಖಲಾಗಿದೆ. ಕೇರಳ ಪೊಲೀಸರು, ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ’ ಎಂದೂ ತಿಳಿಸಿದರು.

‘ಕೇರಳದಿಂದ ಬೆಂಗಳೂರಿಗೆ ಬರುವವರಿಗೆ ‘ಆರ್‌ಟಿಪಿಸಿಆರ್ ನೆಗೆಟಿವ್ ವರದಿ’ ಕಡ್ಡಾಯಗೊಳಿಸಲಾಗಿದೆ. ಕೆಲವರ ವರದಿಗಳು ಪಾಸಿಟಿವ್ ಬಂದಿದ್ದವು. ಅವರೆಲ್ಲ ಬೆಂಗಳೂರಿಗೆ ಬರಲು ಯತ್ನಿಸುತ್ತಿದ್ದರು. ಅಂಥವರನ್ನು ಸಂಪರ್ಕಿಸುತ್ತಿದ್ದ ಆರೋಪಿ ನಿಪುಣ್, ನಕಲಿ ವರದಿ ತಯಾರಿಸಿ ಕೊಡುತ್ತಿದ್ದ. ಅದಕ್ಕಾಗಿ ₹ 2 ಸಾವಿರದಿಂದ ₹ 5 ಸಾವಿರ ಪಡೆಯುತ್ತಿದ್ದ’ ಎಂದು ಪೊಲೀಸರು ಹೇಳಿದರು.

'ಆರೋಪಿ ಕಡೆಯಿಂದ ಲ್ಯಾಪ್‌ಟಾಪ್, ಮುದ್ರಣ ಯಂತ್ರ ಹಾಗೂ ‘ಆರ್‌ಟಿಪಿಸಿಆರ್ ನೆಗೆಟಿವ್ ವರದಿ’ಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿ, ನಕಲಿ ವೀಸಾ ಸಹ ತಯಾರಿಸಿ ಮಾರಾಟ ಮಾಡಿದ್ದಾನೆ. ಈ ಬಗ್ಗೆಯೂ ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿದರು.

ಎಲೆಕ್ಟ್ರಿಷಿಯನ್ ಬಂಧನ; ಆಭರಣ ಜಪ್ತಿ

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಎಲೆಕ್ಟ್ರಿಷಿಯನ್ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಉಲ್ಲಾಸ್ ಹಾಗೂ ರುದ್ರೇಶ್ ಬಂಧಿತರು. ಅವರಿಂದ ₹ 7 ಲಕ್ಷ ಮೌಲ್ಯದ 94 ಗ್ರಾಂ ಚಿನ್ನಾಭರಣ, 70 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಅವರಿಬ್ಬರ ಬಳಿ ₹ 2.50 ಲಕ್ಷ ನಗದು ಸಹ ಸಿಕ್ಕಿದೆ’ ಎಂದು ಪೊಲೀಸರು ಹೇಳಿದರು.

‘ಹೆಗ್ಗನಹಳ್ಳಿ ಬಳಿಯ ಸಂಜೀವಿನಗರದ ಮನೆಯೊಂದರಲ್ಲಿ ಆಗಸ್ಟ್ 19ರಂದು ಕಳ್ಳತನ ನಡೆದಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿತ್ತು. ಆ. 27ರಂದು ಬೆಳಿಗ್ಗೆ ಸುಂಕದಕಟ್ಟೆ ಬಸ್ ತಂಗುದಾಣ ಬಳಿ ಆರೋಪಿಗಳು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದರು. ಅವರಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳ್ಳತನ ಸಂಗತಿ ಬಾಯ್ಬಿಟ್ಟರು’ ಎಂದೂ ತಿಳಿಸಿದರು.

‘ಬಂಧಿತರ ಪೈಕಿ, ಒಬ್ಬಾತ ಎಲೆಕ್ಟ್ರಿಷಿಯನ್. ಬಸವೇಶ್ವರನಗರ, ಮಲ್ಲೇಶ್ವರ ಹಾಗೂ ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆ ಕೃತ್ಯ ಎಸಗಿದ್ದ. ಜೈಲಿಗೂ ಹೋಗಿ ತಿಂಗಳ ಹಿಂದಷ್ಟೇ ಜಾಮೀನು ಮೇಲೆ ಹೊರಬಂದಿದ್ದ’ ಎಂದೂ ಪೊಲೀಸರು ಹೇಳಿದರು.

ಅತ್ಯಾಚಾರ: ತಮಿಳುನಾಡಿಗೆ ಆರೋಪಿಗಳನ್ನು ಕರೆದೊಯ್ದ ಪೊಲೀಸರು

ಎನ್‌ಕೌಂಟರ್ ಮಾಡಬೇಡಿ; ಪೋಷಕರ ಮನವಿ

ಮೈಸೂರು: ‘ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾದ ನಮ್ಮವರನ್ನು ಎನ್‌ಕೌಂಟರ್ ಮಾಡಬೇಡಿ’ ಎಂದು ಆರೋಪಿಗಳ ಪೋಷಕರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ.

ಕೃತ್ಯ ನಡೆಸಿದ ದಿನ ತೊಟ್ಟಿದ್ದ ಬಟ್ಟೆ ಹಾಗೂ ಹಲ್ಲೆಗೆ ಬಳಸಿದ್ದ ಮಾರಕಾಸ್ತ್ರಗಳನ್ನು ವಶಕ್ಕೆ ಪಡೆಯಲು ಪೊಲೀಸರು ತಮಿಳುನಾಡಿನಲ್ಲಿರುವ ಆರೋಪಿಗಳ ಮನೆಗಳಿಗೆ ತೆರಳಿದಾಗ ಪೋಷಕರು ಕಣ್ಣೀರಿಡುತ್ತಾ ಕೈ ಮುಗಿದಿದ್ದಾರೆ.

‘ಕರ್ನಾಟಕ ಪೊಲೀಸರು ಆರೋಪಿಗಳನ್ನು ಎನ್‌ಕೌಂಟರ್ ಮಾಡುತ್ತಾರೆ’ ಎಂಬ ಸುದ್ದಿ ಸತ್ಯಮಂಗಲ, ಈರೋಡ್, ತಾಳವಾಡಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವ್ಯಾಪಕವಾಗಿ ಹಬ್ಬಿದೆ.

ಸ್ಥಳೀಯ ಮಾಧ್ಯಮಗಳೂ ಆರೋಪಿಗಳನ್ನು ಎನ್‌ಕೌಂಟರ್ ಮಾಡುವಂತೆ ಕರ್ನಾಟಕದ ರಾಜಕಾರಣಿಗಳು ನೀಡಿದ ಹೇಳಿಕೆಯನ್ನು ಪ್ರಧಾನವಾಗಿ ಬಿತ್ತರಿಸಿ, ಎನ್‌ಕೌಂಟರ್ ಮಾಡುವ ಸಾಧ್ಯತೆ ಕುರಿತು ಹೆಚ್ಚು ಚರ್ಚೆ ನಡೆಸಿವೆ. ಹೀಗಾಗಿ ಪೊಲೀಸರು ಎನ್‌ಕೌಂಟರ್ ಮಾಡಿಬಿಡಬಹುದು ಎಂಬ ಭೀತಿ ಪೋಷಕರಲ್ಲಿದೆ.

ಸಾಕ್ಷ್ಯ ವಶ; ತಮಿಳುನಾಡಿನ ತಾಳವಾಡಿ, ತಿರ್‌ಪೂರ್, ಈರೋಡ್ ಹಾಗೂ ಸತ್ಯಮಂಗಲದ ಆಸುಪಾಸಿನ ಗ್ರಾಮಗಳ ಆರೋಪಿಗಳ ಮನೆಗಳಲ್ಲಿ ಪೊಲೀಸರು ಶೋಧ ನಡೆಸಿ ಆರೋಪಿಗಳ ಬಟ್ಟೆ, ಮಾರಕಾಸ್ತ್ರಗಳನ್ನು ವಶಕ್ಕೆ ಪಡೆದರು.

ಸಂತ್ರಸ್ತೆ ಹಾಗೂ ಆಕೆಯ ಸ್ನೇಹಿತನನ್ನು ದರೋಡೆ ಮಾಡುವಂತೆ ಹೇಳಿದ ಆರೋಪಿಯ ಬಂಧನಕ್ಕೆ ವಿಶೇಷ ಪೊಲೀಸ್ ತಂಡವು 5 ದಿನಗಳಿಂದ ತಮಿಳುನಾಡಿನಲ್ಲಿಯೇ ಬೀಡುಬಿಟ್ಟಿದೆ.

‘ಸುಳಿವು ನೀಡಿದರೆ ಪೊಲೀಸರು ಎನ್‌ಕೌಂಟರ್ ಮಾಡಬಹುದು ಎಂಬ ಭಯದಿಂದ ಆರೋಪಿಯ ಸಂಬಂಧಿಕರು, ಸ್ನೇಹಿತರು ಹಾಗೂ ಸಾರ್ವಜನಿಕರು ಮೌನ ವಹಿಸಿದ್ದಾರೆ’ ಎಂದು ಸಿಬ್ಬಂದಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಪತ್ನಿಗೆ ಉಗ್ರ ನಂಟು ಶಂಕೆ: ಪತಿ ದೂರು

ಮಂಗಳೂರು: ತನ್ನ ಪತ್ನಿಗೆ ಉಗ್ರ ಸಂಘಟನೆಯೊಂದಿಗೆ ನಂಟಿದ್ದು, ಈಗ ನಾಪತ್ತೆ ಆಗಿರುವುದಾಗಿ ವ್ಯಕ್ತಿಯೊಬ್ಬರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದಾರೆ.

ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದ ಚಿದಾನಂದ ಕೆ.ಆರ್., ಪತ್ನಿ ವಿರುದ್ಧ ದೂರು ನೀಡಿದ್ದಾರೆ. ಇವರ ಪತ್ನಿ ರಾಜಿ ರಾಘವನ್ 11 ವರ್ಷಗಳಿಂದ ದುಬೈನಲ್ಲಿ ಉದ್ಯೋಗದಲ್ಲಿದ್ದಾರೆ. ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ‘ಪತ್ನಿ ಜುಲೈ 11ಕ್ಕೆ ಮತ್ತೆ ಊರಿಗೆ ಬಂದಿದ್ದು, ಮಗಳನ್ನು ತನ್ನೊಂದಿಗೆ ಕಳುಹಿಸಿಕೊಡಬೇಕು ಎಂದು ಒತ್ತಾಯಿಸುತ್ತಿದ್ದಾಳೆ. ಇದಕ್ಕೆ ಆಕೆಯ ಅಕ್ಕನ ಕುಮ್ಮಕ್ಕಿದೆ’ ಎಂದು ಪತಿ ಆರೋಪಿಸಿದ್ದಾರೆ.

‘ಲಕ್ಷದ್ವೀಪದಿಂದ ಒಬ್ಬ ತನಗೆ ಕರೆ ಮಾಡಿ, ನೀನು ನಿನ್ನ ಮಗಳು ಹಾಗೂ ಹೆಂಡತಿಯನ್ನು ನಮ್ಮೊಂದಿಗೆ ಕಳುಹಿಸಿಕೊಡಬೇಕು. ಇಲ್ಲದಿದ್ದಲ್ಲಿ ಹೇಗೆ ಕರೆದುಕೊಂಡು ಹೋಗಬೇಕು ಎನ್ನುವುದು ನನಗೆ ಗೊತ್ತು ಎಂದು ಬೆದರಿಕೆ ಹಾಕಿದ್ದಾನೆ’ ಎಂದಿದ್ದಾರೆ.

ನಾಪತ್ತೆ: ಆ.26ರಂದು ಮಗಳ ಜೊತೆ ರಾತ್ರಿ ಮಲಗಿದ್ದ ರಾಜಿ ರಾಘವನ್, ನಸುಕಿನ ವೇಳೆ ನಾಪತ್ತೆಯಾಗಿದ್ದಾಳೆ. ಈ ಬಗ್ಗೆ ನಾವು ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದೆವು. ಮೊನ್ನೆ ಪೊಲೀಸರು ಕರೆ ಮಾಡಿ ‘ರಾಜಿ ಅವರು ಮಂಗಳೂರಿನ ವೇದಂ ಆಸ್ಪತ್ರೆಯಲ್ಲಿ ದಾಖಲಾಗಿದ್ದು, 10 ದಿನಗಳ ಚಿಕಿತ್ಸೆ ನಡೆಯುತ್ತಿದೆ. ಅಪ್ಪರವರೆಗೆ ಕಾಯಿರಿ’ ಎಂದು ಹೇಳಿದ್ದಾರೆ. ಆ ಬಳಿಕ ನಮ್ಮೊಂದಿಗೆ ಸಂಪರ್ಕದಲ್ಲಿಲ್ಲ. ಆದರೆ ನನಗೆ ಕೇರಳದಿಂದ ಪತ್ನಿ, ಮಗಳಿಬ್ಬರನ್ನು ಕಳುಹಿಸಿ ಕೊಡಬೇಕು ಎಂದು ಕರೆಯ ಮೇಲೆ ಕರೆ ಬರುತ್ತಿವೆ’ ಎಂದು ದೂರು ನೀಡಿದ್ದಾರೆ.

ವಿಧಾನಸೌಧದ ಬಹುಮಹಡಿ ಕಟ್ಟಡದ ಬಳಿ ಸಚಿವಾಲಯ ನೌಕರರು ಪ್ರತಿಭಟನೆ ನಡೆಸಿದರು.

ಸಚಿವಾಲಯ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವಾಲಯದಲ್ಲಿ ಕಿರಿಯ ಸಹಾಯಕರ ಹುದ್ದೆಗಳನ್ನು ಕಡಿತಗೊಳಿಸುವಪ್ರಸ್ತಾವನೆತಕ್ಷಣಕೈಬಿಡಬೇಕುಎಂದು ಒತ್ತಾಯಿಸಿ ಸಚಿವಾಲಯ ನೌಕರರ ಸಂಘ ಗುರುವಾರ ಪ್ರತಿಭಟನೆ ನಡೆಸಿತು.

ಆಡಳಿತ ಸುಧಾರಣೆ ಹೆಸರಿನಲ್ಲಿ ಸಚಿವಾಲಯದಲ್ಲಿ ಯಾವುದೇ ಹುದ್ದೆಗಳನ್ನು ಕಡಿತ ಮಾಡಬಾರದು. ನಿವೃತ್ತರನ್ನು ಮತ್ತೆ ಸೇವೆಗೆ ತೆಗೆದುಕೊಳ್ಳದೇ, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ನೀಡಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.ಸರ್ಕಾರ ಸಚಿವಾಲಯ ನೌಕರರ ಹಕ್ಕುಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದು, ಇದೇ ಧೋರಣೆ ಮುಂದುವರೆದರೆ ಸಚಿವಾಲಯ ಬಂದ್ ಮಾಡಿ ಉಗ್ರ ಹೋರಾಟ ನಡೆಸಲಾಗುವುದು ಎಂದೂ ಎಚ್ಚರಿಕೆ ನೀಡಿದರು.

ಸುಮಾರು 542 ಕಿರಿಯ ಸಹಾಯಕ ಹುದ್ದೆಗಳನ್ನು ಕಡಿತಗೊಳಿಸಲು ಉದ್ದೇಶಿಸಲಾಗಿದೆ. ಆದರೆ, ಕಿರಿಯ ಸಹಾಯಕ ಹುದ್ದೆಗಳು ಅತ್ಯಗತ್ಯ. ಆದ್ದರಿಂದ ಕಡಿತಗೊಳಿಸಬಾರದು. ಸಚಿವಾಲಯದಿಂದ ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಿರುವ ಅಧಿಕಾರಿ ಮತ್ತು ಸಿಬ್ಬಂದಿಯನ್ನು ತಕ್ಷಣವೇ ಮಾತೃ ಇಲಾಖೆಗೆ ಕಳುಹಿಸಬೇಕು ಎಂದೂ ಆಗ್ರಹಿಸಿದರು. ಸಚಿವಾಲಯ ಸಂಘದ ಅಧ್ಯಕ್ಷ ಗುರುಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ವಿಶೇಷ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಉಪವಿಭಾಗಾಧಿಕಾರಿ

ಎಫ್‌ಡಿಎಯಿಂದ ₹1.05 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ರಾಯಚೂರು: ಬೆಂಗಳೂರಿನಲ್ಲಿ ಈಚೆಗೆ ಆತ್ಮಹತ್ಯೆ ಮಾಡಿಕೊಂಡ ಇಲ್ಲಿಯ ಉಪವಿಭಾಗಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಪ್ರಕಾಶಬಾಬು ಅವರು ಉಪವಿಭಾಗಾಧಿಕಾರಿಯ ಖಾತೆಯಿಂದ ತನ್ನ ಸಂಬಂಧಿಗಳ ಬ್ಯಾಂಕ್ ಖಾತೆಗಳಿಗೆ ಒಟ್ಟು ₹1.05 ಕೋಟಿ ವರ್ಗಾಯಿಸಿಕೊಂಡು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಪ್ರಕರಣ ದಾಖಲಾಗಿದೆ.

‘ಲೆಕ್ಕಪರಿಶೋಧನೆಯಲ್ಲಿ ಈ ಅಂಶ ಕಂಡು ಬಂದಿದೆ. ಈ ಹಣಕಾಸಿನ ಅವ್ಯವಹಾರದ ಕುರಿತು ಅಗತ್ಯ ಕಾನೂನು ಕ್ರಮ ಜರುಗಿಸಬೇಕು’ ಎಂದು ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ ವಿಶೇಷ ಅಪರಾಧ ಪೊಲೀಸ್ ಠಾಣೆಗೆ ಗುರುವಾರ ದೂರು ಸಲ್ಲಿಸಿದ್ದಾರೆ.

ಮುಖ್ಯಾಂಶಗಳು

- ಆತ್ಮಹತ್ಯೆ ಮಾಡಿಕೊಂಡ ಎಫ್‌ಡಿಎಯಿಂದ ಹಣ ದುರ್ಬಳಕೆ ಬಯಲು
- ವಿಶೇಷ ಲೆಕ್ಕ ಪರಿಶೋಧನಾ ತಂಡ ರಚಿಸಲು ಕೋರಿಕೆ

ಈ ಬಗ್ಗೆ ವಿವರವಾದ ವರದಿಯನ್ನು ಸಂತೋಷ ಕಾಮಗೌಡ ಅವರು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದಾರೆ. ವಿಶೇಷ ಲೆಕ್ಕ ಪರಿಶೋಧನಾ ತಂಡವನ್ನು ನಿಯೋಜಿಸಿ 10 ವರ್ಷಕ್ಕಿಂತಲೂ ಹಿಂದಿನ ಅವಧಿಯ ಸಂಪೂರ್ಣ ಲೆಕ್ಕ ಪರಿಶೋಧನೆಗೆ ಆದೇಶ ಮಾಡುವಂತೆಯೂ ಕೋರಿದ್ದಾರೆ.

ಸಂಬಂಧಿಗಳಿಗೆ ಹಣ ವರ್ಗಾವಣೆ: ವಿಪತ್ತು ನಿರ್ವಹಣೆ, ಭೂಸ್ವಾಧೀನ, ದೇವಸ್ಥಾನಗಳ ಖಾತೆ, ಜುರಾಲಾ ಯೋಜನೆ ಸೇರಿದಂತೆ ಪ್ರಮುಖ ವಿಭಾಗಗಳ ಕಡತ ನಿರ್ವಹಿಸುತ್ತಿದ್ದ ಪ್ರಕಾಶಬಾಬು ಅವರು, ಪತ್ನಿ ಅಂಬಿಕಾ, ಮಾವ ಶಂಕರ ಹಾಗೂ ಅತ್ತೆ ನೀಲಮ್ಮ ಅವರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡಿರುವುದು ಕಂಡು ಬಂದಿರುವುದಾಗಿ ಉಪವಿಭಾಗಾಧಿಕಾರಿ ತಿಳಿಸಿದ್ದಾರೆ.

ಪ್ರಕಾಶಬಾಬು

2021ರ ಆಗಸ್ಟ್ 16 ರಂದು ಒಟ್ಟು ₹28,78,260 ಮೊತ್ತವು ಮೂವರು ಸಂಬಂಧಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಆಗಿದೆ. ಭೂಸ್ವಾಧೀನ ಖಾತೆಯಿಂದ 2017ರಲ್ಲಿ ನೇರವಾಗಿ ಅತ್ತೆ ಖಾತೆಗೆ ₹ 20 ಲಕ್ಷ ಹಣವನ್ನು ಆರ್‌ಟಿಜಿಎಸ್ ಮಾಡಿರುವುದು ಲೆಕ್ಕ ಪರಿಶೋಧನೆಯಲ್ಲಿ ಖಾತ್ರಿಯಾಗಿದೆ.

ಮಾನ್ವಿ ತಾಲ್ಲೂಕು ಜಾಲಾಪೂರ ರೈತರೊಬ್ಬರಿಗೆ ಭೂಸ್ವಾಧೀನಕ್ಕಾಗಿ ನೀಡಬೇಕಿದ್ದ ಪರಿಹಾರ ಮೊತ್ತದ ಚೆಕ್ ಅನ್ನು ತಿದ್ದಿ ₹20 ಲಕ್ಷ ಹೆಚ್ಚಳ ಮಾಡಿಕೊಂಡು, ಪತ್ನಿಯ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವುದು ಕಂಡುಬಂದಿದೆ. ದೇವದುರ್ಗ ತಾಲ್ಲೂಕು ಗಣಜಲಿ ಗ್ರಾಮದಲ್ಲಿ ಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡಿಕೊಂಡ ರೈತ ಫಲಾನುಭವಿಗಳೊಂದಿಗೆ ತನ್ನ ಅತ್ತೆಯ ಹೆಸರನ್ನು ಕೂಡಾ ಸೇರ್ಪಡೆ ಮಾಡಿಕೊಂಡು 2016ರಲ್ಲಿ ₹18,47,518 ಮೊತ್ತವನ್ನು ಜಮಾ ಮಾಡಿಕೊಂಡಿರುವುದು ಖಾತ್ರಿಯಾಗಿದೆ ಎಂದು ಉಪವಿಭಾಗಾಧಿಕಾರಿ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಐಫೋನ್‌ನಿಂದ ಕೇಕ್ ಕತ್ತರಿಸಿ ಜನ್ಮದಿನಾಚರಣೆ

ಕೊಪ್ಪಳ: ಕನಕಗಿರಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ಧಡೇಸುಗೂರು ಅವರ ಪುತ್ರ ಸುರೇಶ ದುಬಾರಿ ಐಫೋನ್ ಕಂಪನಿಯ ಮೊಬೈಲ್‌ನಿಂದ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿಕೊಂಡ ವಿಡಿಯೊ ವೈರಲ್ ಆಗಿದೆ.

ಶಾಸಕರ ಎರಡನೇ ಪುತ್ರ ಸುರೇಶ, ಕನಕಗಿರಿ ಮತ್ತು ಕಾರಟಗಿಯ ತಮ್ಮ ಸ್ನೇಹಿತರ ಜೊತೆಗೆ ಬಿಎಂಡಬ್ಲ್ಯೂ ದುಬಾರಿ ಕಾರಿನಲ್ಲಿ ಜಾಲಿ ರೈಡ್ ಮಾಡಿ ಹೊಸಪೇಟೆಯಲ್ಲಿ 'ಸುರೇಶ ಧಡೇಸುಗೂರು' ಎಂದು ಹೆಸರು ಬರೆದಿದ್ದ ಎಂಟು ಕೇಕ್‌ಗಳನ್ನು ಮೊಬೈಲ್‌ನಿಂದ ಕತ್ತರಿಸಿ ಸಂಭ್ರಮಿಸಿರುವುದು ವಿಡಿಯೊದಲ್ಲಿದೆ.

ಅಂಜನಾಪುರ ಸಮಸ್ಯೆ: ಹಂತ–ಹಂತವಾಗಿ ಪರಿಹಾರ

ಶಾಸಕ, ನಿವಾಸಿಗಳು, ಅಧಿಕಾರಿಗಳ ಜತೆ ಬಿಡಿಎ ಅಧ್ಯಕ್ಷರ ಸಭೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಅಂಜನಾಪುರ ಬಡಾವಣೆಯ ರಸ್ತೆ ಮತ್ತು ಎಲ್ಲ ಮೂಲಸೌಕರ್ಯ ಸಮಸ್ಯೆಗಳನ್ನು ಹಂತ–ಹಂತವಾಗಿ ಪರಿಹರಿಸಲಾಗುವುದು ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, ಬಡಾವಣೆ ನಿವಾಸಿಗಳು ಮತ್ತು ಅಧಿಕಾರಿಗಳ ಜತೆ ವಿಶ್ವನಾಥ್ ಗುರುವಾರ ಸಭೆ ನಡೆಸಿದರು.

ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಜಲ ಮಂಡಳಿಯಿಂದ ರಸ್ತೆ ಅಗೆದಿದ್ದರಿಂದ ಗುಂಡಿ ಬಿದ್ದು ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ಅಂಜನಾಪುರ ಬಡಾವಣೆಯಲ್ಲಿ ರಸ್ತೆ, ಒಳಚರಂಡಿ, ಬೀದಿ ದೀಪ ಸೇರಿ ಮೂಲಸೌಕರ್ಯ ಕೊರತೆ ಇದೆ ಎಂದು ಶಾಸಕ ಕೃಷ್ಣಪ್ಪ ಮತ್ತು ನಿವಾಸಿಗಳು ಅಧ್ಯಕ್ಷರ ಗಮನಕ್ಕೆ ತಂದರು.

ಪ್ರತಿಕ್ರಿಯಿಸಿದ ವಿಶ್ವನಾಥ್, 'ಹಾಳಾಗಿರುವ ಅಂಜನಾಪುರ ಮುಖ್ಯರಸ್ತೆ ಅಭಿವೃದ್ಧಿಗೆ ₹25 ಕೋಟಿ ಮೀಸಲಿಡಲಾಗಿದೆ. ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು' ಎಂದು ತಿಳಿಸಿದರು.

ಅಂಜನಾಪುರ ಬಡಾವಣೆಯ ಇತರೆ ಭಾಗಗಳು ಮತ್ತು ಈ ಬಡಾವಣೆಗೆ ಹೊಂದಿಕೊಂಡಿರುವ ಜೆ.ಪಿ. ನಗರ 8 ಮತ್ತು 9ನೇ ಬ್ಲಾಕ್ ರಸ್ತೆಗಳ ದುರಸ್ತಿ ಕಾಮಗಾರಿಯನ್ನು ಹಂತ–ಹಂತವಾಗಿ ಕೈಗೆತ್ತಿಕೊಳ್ಳಲಾಗುತ್ತದೆ. ಇದಕ್ಕಾಗಿ ₹40 ಕೋಟಿ ನಿಗದಿ ಮಾಡಲಾಗಿದೆ ಎಂದು ಹೇಳಿದರು.

ಕುಡಿಯುವ ನೀರು ಮತ್ತು ಒಳಚರಂಡಿ ಸಂಪರ್ಕಕ್ಕೆ ಸಂಬಂಧಿಸಿದಂತೆ ಜಲಮಂಡಳಿಗೆ ಬಿಡಿಎ ನೀಡಬೇಕಾಗಿರುವ ಹಣವನ್ನು ಆದ್ಯತೆ ಮೇರೆಗೆ ನೀಡಲಾಗುತ್ತದೆ ಎಂದು ತಿಳಿಸಿದರು.

ಬಿಡಿಎ ಆಯುಕ್ತ ಎಂ.ಬಿ. ರಾಜೇಶಗೌಡ, ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ, ಉಪವಿಭಾಗಾಧಿಕಾರಿ ಡಾ.ಸೌಜನ್ಯ ಇದ್ದರು.

'ದೊಡ್ಡಕಲ್ಲಸಂದ್ರ–ಗೊಟ್ಟಿಗೆರೆ ಪ್ರಯಾಣ ಹೈರಾಣ' ಎಂಬ ವರದಿಯನ್ನು 'ಪ್ರಜಾವಾಣಿ' ಗುರುವಾರ ಪ್ರಕಟಿಸಿತ್ತು.

> ಗೌರಿ ಹಬ್ಬ ಮುಗಿದ ಕೂಡಲೇ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭವಾಗಲಿದೆ. ಟೆಂಡರ್ ಪ್ರಕ್ರಿಯೆ ಆರಂಭಿಸುವುದಾಗಿ ಬಿಡಿಎ ಅಧ್ಯಕ್ಷರು ಭರವಸೆ ನೀಡಿದ್ದಾರೆ
>
> **ಎಂ. ಕೃಷ್ಣಪ್ಪ,** ಶಾಸಕ

ಜೆಡಿಎಸ್ ಮಹಿಳಾ ಸಮಾವೇಶದಲ್ಲಿ ಎಚ್.ಡಿ. ದೇವೇಗೌಡ ಘೋಷಣೆ

9 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನಗರದ 28 ಕ್ಷೇತ್ರಗಳ ಪೈಕಿ 9 ಕಡೆ ಮಹಿಳೆಯರಿಗೆ ಟಿಕೆಟ್ ನೀಡಲಾಗುವುದು ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ತಿಳಿಸಿದರು.

ಜೆಡಿಎಸ್ ಬೆಂಗಳೂರು ಮಹಾನಗರ ಘಟಕ ಆಯೋಜಿಸಿದ್ದ ಮಹಿಳಾ ಸಮಾವೇಶದಲ್ಲಿ ಮಾತನಾಡಿದ ಅವರು, 'ಜೆಡಿಎಸ್ ಅಭ್ಯರ್ಥಿಗಳು ಎಷ್ಟು ಮತ ಪಡೆಯುತ್ತಾರೆ ಎಂಬುದು ಮುಖ್ಯವಲ್ಲ. ಸೋತರೂ ಮುಂದಿನ ಚುನಾವಣೆ ವೇಳೆಗೆ ಅವರು ನಾಯಕತ್ವ ಬೆಳೆಸಿಕೊಳ್ಳುತ್ತಾರೆ' ಎಂದರು.

'ಮಹಿಳೆಯರು ಚುನಾವಣೆಗೆ ಸ್ಪರ್ಧಿಸಲು ಹಿಂಜರಿಯಬಾರದು. ಹಣವಿಲ್ಲ ಎಂಬ ಹಿಂಜರಿಕೆ ಬೇಡ. ವಿಧಾನಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬರಬೇಕು. ಪಕ್ಷದ ಟಿಕೆಟ್ ಕೊಡಲು ನಾವು ಸಿದ್ಧರಿದ್ದೇವೆ' ಎಂದು ಹೇಳಿದರು.

'ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಕೆಲಸ ಮಾಡಿ ಬಳಿಕವೇ ನಾನು ಮುಖ್ಯಮಂತ್ರಿಯಾದೆ. ಬಳಿಕ ಸ್ಥಳೀಯ ಸಂಸ್ಥೆಗಳಲ್ಲಿ ಶೇ 33ರಷ್ಟು ಮೀಸಲಾತಿ ನೀಡುವ ನಿರ್ಧಾರ ಕೈಗೊಂಡೆ. ಬಿಬಿಎಂಪಿ ಚುನಾವಣೆಯಲ್ಲೂ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡುತ್ತೇವೆ' ಎಂದು ತಿಳಿಸಿದರು.

ಅನಿತಾ ಗೈರು: ಜೆಡಿಎಸ್‌ನಿಂದ ಆಯ್ಕೆಯಾಗಿರುವ ಏಕೈಕ ಮಹಿಳಾ ಶಾಸಕಿ ಅನಿತಾ ಕುಮಾರಸ್ವಾಮಿ ಅವರು ಮಹಿಳಾ ಸಮಾವೇಶಕ್ಕೆ ಗೈರಾಗಿದ್ದರು.

ಅನಿತಾ ಕುಮಾರಸ್ವಾಮಿ ಬರುವ ನಿರೀಕ್ಷೆಯಲ್ಲಿ ಕಾರ್ಯಕರ್ತೆಯರು ಕಾದಿದ್ದರು. ಬೆಳಿಗ್ಗೆ 11ಕ್ಕೆ ನಿಗದಿಯಾಗಿದ್ದ ಕಾರ್ಯಕ್ರಮಕ್ಕೆ ದೇವೇಗೌಡರು 1 ಗಂಟೆಗೆ ಬಂದರು. ಬಳಿಕ ಸಮಾವೇಶಕ್ಕೆ ಚಾಲನೆ ದೊರೆಯಿತು. ಅನಿತಾ ಅವರು ಬರಲಿಲ್ಲ.

ಕೋವಿಡ್ ಮೂರನೇ ಅಲೆ ಆತಂಕದ ನಡುವೆಯೂ ಅಂತರ ಕಾಪಾಡಿಕೊಳ್ಳದೆ ಸಮಾವೇಶದಲ್ಲಿ ಜನ ಭಾಗವಹಿಸಿದ್ದರು. ಮಾಸ್ಕ್ ತೆಗೆದು ಘೋಷಣೆ ಕೂಗುವಂತೆ ಕಾರ್ಯಕರ್ತೆಯೊಬ್ಬರು ಘೋಷಣೆ ಮಾಡಿದರು. ಆದರೆ, ಆಯೋಜಕರು ಸಮಜಾಯಿಷಿ ನೀಡಿ, 'ಯಾರೂ ಮಾಸ್ಕ್ ತೆಗೆಯಬಾರದು, ಕೋವಿಡ್ ನಿಯಮಗಳನ್ನು ಎಲ್ಲರೂ ಪಾಲಿಸಬೇಕು. ರಾಜಕೀಯ ಪಕ್ಷಗಳ ಸಮಾವೇಶದಲ್ಲಿ ನಿಯಮ ಉಲ್ಲಂಘನೆ ಆಗಬಾರದು ಎಂದು ಹೈಕೋರ್ಟ್ ಪದೇ ಪದೇ ಹೇಳುತ್ತಿದೆ. ಎಲ್ಲರೂ ನಿಯಮ ಪಾಲಿಸಬೇಕು' ಎಂದು ತಿಳಿಸಿದರು.

ಜೆಡಿಎಸ್ ಮಹಿಳಾ ಸಮಾವೇಶದಲ್ಲಿ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್, ಮುಖಂಡರಾದ ರುತ್ ಮನೋರಮಾ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, ಮುಖಂಡ ಟಿ.ಎ. ಶರವಣ ಇದ್ದರು –ಪ್ರಜಾವಾಣಿ ಚಿತ್ರ

ಸಿಲಿಂಡರ್ ಹಿಡಿದು ಯುವ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳು, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಆನಂದ ರಾವ್ ವೃತ್ತದ ಬಳಿ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಗುರುವಾರ ಪ್ರತಿಭಟನಾ ಜಾಥಾ ನಡೆಯಿತು.

ಪ್ರತಿಭಟನೆಯ ನೇತೃತ್ವವನ್ನು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ವಹಿಸಿದ್ದರು. 100 ಅಡಿ ಉದ್ದದ ಸಿಲಿಂಡರ್‌ನ ಬಾವುಟ ಹಿಡಿದು ಕಾಂಗ್ರೆಸ್ ಭವನದಿಂದ ಹೊರಟ ಜಾಥಾ ಆನಂದ ರಾವ್ ವೃತ್ತದ ಮೇಲ್ಸೇತುವೆಯಿಂದ ಮೌರ್ಯ ವೃತ್ತದ ಗಾಂಧಿ ಪ್ರತಿಮೆವರೆಗೆ ನಡೆಯಿತು.

ಅಡುಗೆ ಅನಿಲ ಸಿಲಿಂಡರ್‌ಗಳನ್ನು ಹಿಡಿದು ಯುವ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಒಂದೆಡೆ ಉಜ್ವಲ ಯೋಜನೆಯಡಿ ಉಚಿತ ಸಿಲಿಂಡರ್ ನೀಡಿ, ಮತ್ತೊಂದೆಡೆ ಅಡುಗೆ ಸಿಲಿಂಡರ್ ದರ ಗಣನೀಯವಾಗಿ ಏರಿಕೆ ಮಾಡುತ್ತಿದೆ. ಮನಮೋಹನ್ ಸಿಂಗ್ ಕಾಲದಲ್ಲಿ ₹ 400 ಇದ್ದ ಸಿಲಿಂಡರ್ ಬೆಲೆ ಇದೀಗ ₹ 900ಗೆ ತಲುಪಿದೆ. ಬೆಲೆ ಇಳಿಸದಿದ್ದರೆ ಬಿಜೆಪಿ ಸಚಿವರು, ಸಂಸದರು, ಶಾಸಕರು ಹೀಗೆ ಎಲ್ಲರನ್ನೂ ಘೇರಾವ್ ಮಾಡಿ ಹೋರಾಟ ತೀವ್ರಗೊಳಿಸುತ್ತೇವೆ' ಎಂದು ಬಿ.ವಿ. ಶ್ರೀನಿವಾಸ್ ಎಚ್ಚರಿಸಿದರು.

ರಕ್ಷಾ ರಾಮಯ್ಯ ಮಾತನಾಡಿ, 'ಬಿಜೆಪಿ ನಾಯಕರು ಜನರ ಸಂಕಷ್ಟಕ್ಕೆ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿಯಿಂದಾಗಿ ಜನ ಸಾಮಾನ್ಯರು ತೀವ್ರ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಜನರಿಗೆ ಉದ್ಯೋಗ ಸೃಷ್ಟಿಯಾಗಿಲ್ಲ. ಇರುವ ಉದ್ಯೋಗವೂ ನಷ್ಟವಾಗಿದೆ. ಮುಂದಿನ 15 ದಿನಗಳ ಒಳಗಾಗಿ ಬೆಲೆ ಇಳಿಕೆ ಆಗದಿದ್ದರೆ ರಾಜ್ಯದ ಮೂಲೆ ಮೂಲೆಗಳಲ್ಲಿ ಯುವ ಕಾಂಗ್ರೆಸ್ ಹೋರಾಟ ನಡೆಸಲಿದೆ' ಎಂದು ಎಚ್ಚರಿಕೆ ನೀಡಿದರು.

ಅಡುಗೆ ಅನಿಲ ದರ ಏರಿಕೆ ಖಂಡಿಸಿ ಸಿಲಿಂಡರ್ ಹಿಡಿದು ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ ಬಿ.ವಿ. ಶ್ರೀನಿವಾಸ್, ಮೊಹಮದ್ ನಲಪಾಡ್, ಎಂ.ಎಸ್. ರಕ್ಷಾ ರಾಮಯ್ಯ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ನ್ಯಾಯಾಂಗ ನಿಂದನೆ: ನಾಲ್ವರು ಐಎಎಸ್ ಅಧಿಕಾರಿಗಳಿಗೆ ಸಜೆ

ಅಮರಾವತಿ (ಪಿಟಿಐ): ನ್ಯಾಯಾಂಗ ನಿಂದನೆ ಆರೋಪದಡಿ ನಾಲ್ವರು ಐಎಎಸ್ ಅಧಿಕಾರಿಗಳು ಮತ್ತು ಒಬ್ಬರು ನಿವೃತ್ತ ಅಧಿಕಾರಿಗೆ ಆಂಧ್ರ ಪ್ರದೇಶ ಹೈಕೋರ್ಟ್ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ. ಈ ಪ್ರಕರಣದಲ್ಲಿ ಮುಖ್ಯ ಕಾರ್ಯದರ್ಶಿ ಆದಿತ್ಯನಾಥ್ ದಾಸ್ ಸೇರಿ ಇತರೆ ಮೂವರು ಐಎಎಸ್ ಅಧಿಕಾರಿಗಳ ವಿರುದ್ಧದ ಆರೋಪವನ್ನು ನ್ಯಾಯಾಲಯ ಕೈಬಿಟ್ಟಿದೆ.

ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಂಶೀರ್ ಸಿಂಗ್ ರಾವತ್, ಮುಖ್ಯಮಂತ್ರಿಯವರ ಹೆಚ್ಚುವರಿ ಕಾರ್ಯದರ್ಶಿ ರೇವು ಮುತ್ಯಾಲ ರಾಜು, ನೆಲ್ಲೂರಿನ ಜಿಲ್ಲಾಧಿಕಾರಿ ಕೆ.ವಿ. ಎನ್. ಚಕ್ರಧರ ಬಾಬು ಮತ್ತು ನಿವೃತ್ತ ಜಿಲ್ಲಾಧಿಕಾರಿ ಎಂ.ವಿ. ಶೇಷಗಿರಿ ಬಾಬು ಅವರಿಗೆ ಹೈಕೋರ್ಟ್ ಶಿಕ್ಷೆ ವಿಧಿಸಿದೆ.

2017ರಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಮನಮೋಹನ್ ಸಿಂಗ್ ಅವರನ್ನೂ ದೋಷಿ ಎಂದು ಕೋರ್ಟ್ ಪರಿಗಣಿಸಿದೆ. ನೆಲ್ಲೂರು ಜಿಲ್ಲೆಯ ರೈತ ಮಹಿಳೆ ತಲ್ಲಪಕ ಸಾವಿತ್ರಮ್ಮ ಅವರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ಮೇಲಿನ ಆದೇಶವನ್ನು ನ್ಯಾಯಮೂರ್ತಿ ಬತ್ತು ದೇವಾನಂದ್ ಅವರು ಗುರುವಾರ ಪ್ರಕಟಿಸಿದರು.

ರಾವತ್ ಮತ್ತು ಸಿಂಗ್ ಅವರಿಗೆ ಒಂದು ತಿಂಗಳು ಹಾಗೂ ಇತರರಿಗೆ ಎರಡು ವಾರಗಳ ಸಜೆಯನ್ನು ವಿಧಿಸಿ, ಎಲ್ಲರಿಗೂ ತಲಾ ₹ 1,000 ದಂಡವನ್ನು ನ್ಯಾಯಾಲಯ ವಿಧಿಸಿದೆ.

ಪ್ರಕರಣದ ವಿವರ: ತನ್ನ ಮೂರು ಎಕರೆ ಕೃಷಿ ಭೂಮಿಯನ್ನು ಕಂದಾಯ ಅಧಿಕಾರಿಗಳು ಯಾವುದೇ ಸೂಚನೆ ಅಥವಾ ಪರಿಹಾರ ಕೊಡದೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಂಸ್ಥೆಗೆ ಹಂಚಿಕೆ ಮಾಡಿದ್ದಾರೆ ಎಂದು ಸಾವಿತ್ರಮ್ಮ ಅವರು 2017ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 2017ರ ಫೆಬ್ರುವರಿ 10ರಂದು ಹೈಕೋರ್ಟ್ ಅರ್ಜಿದಾರರಿಗೆ ಪರಿಹಾರ ನೀಡುವಂತೆ ಸೂಚಿಸಿ ತೀರ್ಪು ನೀಡಿತ್ತು. ಆದರೆ ಆದೇಶ ಅನುಷ್ಠಾನಗೊಳಿಸಲು ಅಧಿಕಾರಿಗಳು ವಿಫಲವಾದ್ದರಿಂದ ಸಾವಿತ್ರಮ್ಮ ಅವರು ಹೈಕೋರ್ಟ್‌ನಲ್ಲಿ 2018ರಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿದ್ದರು.

ತಿಗಳರ ಕುಲಶಾಸ್ತ್ರೀಯ ಅಧ್ಯಯನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಪಿ.ಆರ್.ರಮೇಶ್

ಬೆಂಗಳೂರು: ತಿಗಳ ಸಮುದಾಯ ಮತ್ತು ಅದರ ಉಪ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಬೇಕು ಎಂದು ವಿಧಾನ ಪರಿಷತ್ತಿನ ಸದಸ್ಯ ಪಿ.ಆರ್. ರಮೇಶ್ ಒತ್ತಾಯಿಸಿದ್ದಾರೆ.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಪತ್ರ ಬರೆದಿರುವ ಅವರು, 'ವಹ್ನಿಕುಲ ಕ್ಷತ್ರಿಯ, ಅಗ್ನಿಕುಲ ಕ್ಷತ್ರಿಯ, ಶಂಭುಕುಲ ಕ್ಷತ್ರಿಯ, ಅಗ್ನಿವನ್ನಿ, ಧರ್ಮರಾಜ ಕಾಪು, ತಿಗಳ, ಪಳ್ಳಿ, ಪನ್ನುಗೊಂಡರ್, ವನ್ನಿಯಾರ್, ಪಡಿಯಾಚಿ, ತಿಗ್ಲರ್... ಹೀಗೆ ಉಪ ಜಾತಿಗಳನ್ನು ಈ ಸಮುದಾಯ ಒಳಗೊಂಡಿದೆ. ಕರ್ನಾಟಕದ ಮೂಲ ನಿವಾಸಿಗಳಲ್ಲಿ ತಿಗಳ ಸಮುದಾಯವೂ ಒಂದು' ಎಂದು ವಿವರಿಸಿದ್ದಾರೆ.

ರಾಜ್ಯದ 16 ಜಿಲ್ಲೆಗಳಲ್ಲಿ ಈ ಸಮುದಾಯದ ಜನರಿದ್ದು, ಸರ್ಕಾರ ಈ ಸಮುದಾಯವನ್ನು ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಪ್ರವರ್ಗ 2ಎ ಎಂದು ಗುರುತಿಸಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ರಾಜಕೀಯ ಸ್ಥಾನಮಾನ ಸಿಗದೆ ಸಮುದಾಯ ವಂಚಿತವಾಗಿದೆ. ಶೈಕ್ಷಣಿಕವಾಗಿಯೂ ಹಿಂದುಳಿದಿದೆ ಎಂದು ಹೇಳಿದ್ದಾರೆ.

'ತಿಗಳ ಸಮುದಾಯ ಮತ್ತು ಅದರ ಉಪ ಜಾತಿಗಳ ಐತಿಹಾಸಿಕ ಹಿನ್ನೆಲೆ, ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಾನಮಾನದ ಸ್ಥಿತಿ, ಭಾಷೆ (ತಿಗಳರ ಲಿಪಿ) ಒಳಗೊಂಡ ಸಮಗ್ರ ಕುಲಶಾಸ್ತ್ರೀಯ ಅಧ್ಯಯನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಮೂಲಕ ನಡೆಸಬೇಕು. ಅಧ್ಯಯನ ವರದಿ ಆಧರಿಸಿ ತಿಗಳ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು' ಎಂದು ಒತ್ತಾಯಿಸಿದ್ದಾರೆ.

'ಪುಸ್ತಕೋದ್ಯಮಕ್ಕೆ ಜಿಎಸ್‌ಟಿ ಹೇರಿಕೆ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕೋದ್ಯಮವು ಅತ್ಯಂತ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದು, ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಕೈಬಿಡಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದರು.

ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುತ್ತಿರುವ ಅವರನ್ನು ಕರ್ನಾಟಕ ಪ್ರಕಾಶಕರ ಸಂಘವು ಗುರುವಾರ ಗೌರವಿಸಿತು. ಈ ವೇಳೆ ಮಾತನಾಡಿದ ಅವರು, 'ಪುಸ್ತಕೋದ್ಯಮದಲ್ಲಿ ಪ್ರಕಾಶಕರು ಮತ್ತು ಲೇಖಕರ ಮೇಲೆ ಜಿಎಸ್‌ಟಿ ಹೇರಿಕೆ ಸರಿಯಲ್ಲ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಜಿಎಸ್‌ಟಿಯನ್ನು ಕೈಬಿಡುವಂತೆ ಸರ್ಕಾರಕ್ಕೆ ಮತ್ತೆ ಮತ್ತೆ ಹಕ್ಕೊತ್ತಾಯ ಮಾಡುತ್ತಲೇ ಬಂದಿದ್ದೇನೆ' ಎಂದು ಹೇಳಿದರು.

ಕರ್ನಾಟಕ ಪ್ರಕಾಶಕರ ಸಂಘದ ವತಿಯಿಂದ ಮನು ಬಳಿಗಾರ್ ಅವರನ್ನು ಗೌರವಿಸಲಾಯಿತು. ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, ಕಾರ್ಯದರ್ಶಿ ನಾ. ರವಿಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್, ಪ್ರಕಾಶಕ ಸೃಷ್ಟಿ ನಾಗೇಶ್, ವಿದ್ಯಾರಣ್ಯ ಹಾಗೂ ವಿದ್ಯಾಶಂಕರ್ ಇದ್ದರು

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ವತಿಯಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ವಿಧಾನ ಪರಿಷತ್ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ಅರುಣ್ ಶಹಾಪುರ, ಸಂಘದ ಪದಾಧಿಕಾರಿಗಳಾದ ಚೌಡಪ್ಪ ಎಸ್., ಶ್ರೀನಿವಾಸ ಗೌಡ, ಕಲವಾಡ ಬಿ.ಡಿ, ಕೆ.ಎಚ್.ನಾಯಕ್, ಚಂದ್ರಶೇಖರ್ ಕೆ.ಜಿ., ಬಾಲರಾಜ್, ತ್ಯಾಗಂ ಹರೇಕಳ ಚಿತ್ರದಲ್ಲಿದ್ದಾರೆ.

ಇಸಿಟಿ: ನಿಮ್ಹಾನ್ಸ್ ಪ್ರತಿವಾದಿ ಮಾಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಗೆ ಪ್ರಯತ್ನಿಸುವ ಮಾನಸಿಕ ಅಸ್ವಸ್ಥರಿಗೆ ಎಲೆಕ್ಟ್ರೋಕನ್ವಲ್ಸಿವ್ ಚಿಕಿತ್ಸೆ (ಇಸಿಟಿ) ನೀಡಲು ಅನುಮತಿ ಕೋರಿರುವ ಅರ್ಜಿಯಲ್ಲಿ ನಿಮ್ಹಾನ್ಸ್ ಸಂಸ್ಥೆಯನ್ನೂ ಪ್ರತಿವಾದಿಯಾಗಿ ಮಾಡುವಂತೆ ಅರ್ಜಿದಾರರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹುಬ್ಬಳ್ಳಿಯ ನರರೋಗ ತಜ್ಞ ಡಾ. ವಿನೋದ್ ಜಿ. ಕುಲಕರ್ಣಿ ಈ ಅರ್ಜಿ ಸಲ್ಲಿಸಿದ್ದು, 'ರೋಗಿಗಳಲ್ಲಿ ಆತ್ಮಹತ್ಯೆ ಆಲೋಚನೆಗಳನ್ನು ತೆಗೆದು ಹಾಕಬಹುದಾದ ಈ ಚಿಕಿತ್ಸೆಯನ್ನು ಮಾನಸಿಕ ಆರೋಗ್ಯ ಕಾಯ್ದೆ 2017ರ ಸೆಕ್ಷನ್ 94(3)ರ ಅಡಿಯಲ್ಲಿ ನಿರ್ಬಂಧಿಸಲಾಗಿದೆ. ಮಾನಸಿಕವಾಗಿ ತೀರಾ ಖಿನ್ನರಾದವರಿಗೆ ಈ ಚಿಕಿತ್ಸೆ ನೀಡಿ ಅವರ ಜೀವ ಉಳಿಸಬಹುದು' ಎಂದು ಪ್ರತಿಪಾದಿಸಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ವಿಷಯದಲ್ಲಿ ತಜ್ಞರ ಸಲಹೆ ಪಡೆಯಬೇಕಾಗಿದೆ. ಆದ್ದರಿಂದ ನಿಮ್ಹಾನ್ಸ್ ಸಂಸ್ಥೆಯನ್ನು ಪ್ರತಿವಾದಿಯಾಗಿ ಮಾಡುವಂತೆ ಸೂಚಿಸಿತು. ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿತು.

ನೊಂದವರಿಗೆ ಧ್ವನಿ– ಡಿಕೆಶಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ಅಧ್ಯಕ್ಷನಾಗಿ ಎಲ್ಲ ವರ್ಗದ ಜನರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಜವಾಬ್ದಾರಿ ನನ್ನ ಮೇಲಿದೆ. ಬಸವಣ್ಣ, ಗಾಂಧಿ ಸೇರಿದಂತೆ ಹಲವರ ವಿಚಾರ ನಮ್ಮ ಸಿದ್ಧಾಂತ. ಯಾರಿಗೆ ಧ್ವನಿ ಇಲ್ಲವೋ ಅವರಿಗೆ ಧ್ವನಿ ನೀಡಬೇಕು. ನೊಂದವರ ಪರ ನಿಲ್ಲಬೇಕು ಎನ್ನುವುದು ನನ್ನ ಆಶಯ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶೇಷಾದ್ರಿಪುರದಲ್ಲಿ ಮಡಿವಾಳ ಸಮುದಾಯ ಭವನ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಡಿವಾಳರಿಲ್ಲದೆ ಈ ಸಮಾಜ ಇಲ್ಲ. ಬಟ್ಟೆ ಸ್ವಚ್ಛ ಮಾಡಿ ಕೊಡದಿದ್ದರೆ ಆಗುವುದಿಲ್ಲ. ಸಾಂಪ್ರದಾಯಿಕ ವೃತ್ತಿ ಉಳಿಸಿಕೊಂಡು ಬದುಕುತ್ತಿರುವ ಸಮುದಾಯಕ್ಕೆ ರಾಜಕೀಯವಾಗಿ ಶಕ್ತಿ ತುಂಬಬೇಕಿದೆ, ರಾಜಕೀಯವಾಗಿ ಶಕ್ತಿ ಪಡೆಯಬೇಕು' ಎಂದರು.

'ನಾನು ನಿಮ್ಮ ಜತೆ ಇದ್ದೇನೆ ಎಂದು ಹೇಳಲು ಬಂದಿದ್ದೇನೆ. ನಾನು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತೇನೆ. ಮುಂದಿನ ದಿನಗಳಲ್ಲಿ ನಿಮ್ಮ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇನೆ. ನಿಮ್ಮ ನೋವು, ಸಮಸ್ಯೆಗಳಿಗೆ ಕಾಂಗ್ರೆಸ್ ಪಕ್ಷ ಧ್ವನಿ ಆಗಲಿದೆ' ಎಂದು ಸಮುದಾಯದ ಜನರಿಗೆ ವಿಶ್ವಾಸ ತುಂಬಿದರು.

ನೀಟ್ ವಿರುದ್ಧ ಕಾಯ್ದೆ ರೂಪಿಸಲು ತಮಿಳುನಾಡು ನಿರ್ಧಾರ

ಚೆನ್ನೈ: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಿಂದ (ನೀಟ್) ವಿನಾಯಿತಿ ನೀಡಲು ಕೋರಿ ತಮಿಳುನಾಡು ಸರ್ಕಾರ ಕಾಯ್ದೆ ರೂಪಿಸಲಿದೆ ಮತ್ತು ಇದನ್ನು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲಿದೆ ಎಂದು ಆರೋಗ್ಯ ಸಚಿವ ಮಾ ಸುಬ್ರಮಣಿಯನ್ ಗುರುವಾರ ತಿಳಿಸಿದರು.

ಇಲಾಖೆಯ ನೀತಿಯನ್ನು ವಿಧಾನಸಭೆಯಲ್ಲಿ ಮಂಡಿಸಿದ ಅವರು, ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ನೀಟ್‌ನಿಂದ ವಿನಾಯಿತಿಗೆ ಕಾಯ್ದೆ ರೂಪಿಸುವ ಕುರಿತು ಕಾರ್ಯದರ್ಶಿಗಳ ಸಮಿತಿಯು ಸಲಹೆ ಮಾಡಿದೆ ಎಂದು ಹೇಳಿದರು.

ಈ ಕ್ರಮದಿಂದ ನಿರ್ಲಕ್ಷ್ಯಿತ ಸಮುದಾಯ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಸಿಗಲಿದೆ. ವೈದ್ಯಕೀಯ ಶಿಕ್ಷಣ ಪ್ರವೇಶಕ್ಕಾಗಿ ನೀಟ್ ಕಡ್ಡಾಯಗೊಳಿಸುವುದನ್ನು ತಮಿಳುನಾಡು ಮೊದಲಿನಿಂದಲೂ ವಿರೋಧಿಸುತ್ತಿದೆ ಎಂದು ಅವರು ಹೇಳಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಕೆ.ರಾಜನ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ನೀಟ್ ಆಧರಿಸಿ ಪ್ರವೇಶ ನೀಡುವುದರಿಂದ ಬಡ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮೇಲೆ ಪರಿಣಾಮವಾಗಲಿದೆ ಎಂಬ ಅಂಶವನ್ನು ಅಧ್ಯಯನ ಮಾಡಿದೆ ಎಂದು ಸಚಿವರು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ವಿದೇಶಿಗರ ವೀಸಾ ಅವಧಿ ವಿಸ್ತರಿಸಿದ ಭಾರತ

ನವದೆಹಲಿ: ಕೋವಿಡ್ ಪಿಡುಗಿನಿಂದಾಗಿ ಭಾರತದಲ್ಲಿ ಸಿಲುಕಿರುವ ವಿದೇಶಿ ಪ್ರಜೆಗಳ ವೀಸಾ ಅವಧಿಯನ್ನು ಸರ್ಕಾರ ಇದೇ 30ರವರೆಗೆ ವಿಸ್ತರಿಸಿದೆ.

2020ರ ಮಾರ್ಚ್‌ಗಿಂತ ಮೊದಲು ವಿವಿಧ ರೀತಿಯ ವೀಸಾಗಳಲ್ಲಿ ಭಾರತಕ್ಕೆ ಬಂದ ಹಲವು ವಿದೇಶಿಯರು ಸಾಂಕ್ರಾಮಿಕ ರೋಗದಿಂದಾಗಿ ಇಲ್ಲಿಯೇ ಉಳಿಯಬೇಕಾಯಿತು. ವಿಮಾನಗಳ ಸಂಚಾರ ಸ್ಥಗಿತವಾಗಿದ್ದರಿಂದ ಅವರಿಗೆ ತಮ್ಮ ದೇಶಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ಹಾಗಾಗಿ ಅಂಥವರ ವೀಸಾ ಅವಧಿಯನ್ನು ಸರ್ಕಾರ ವಿಸ್ತರಿಸಿದೆ ಎಂದು ಗೃಹ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

2021ರ ಆಗಸ್ಟ್ 31ಕ್ಕೆ ಮುಕ್ತಾಯವಾಗಿರುವ ವಿದೇಶಿಗರ ವೀಸಾ ಅವಧಿಯನ್ನು ಇದೇ 30ರವರೆಗೆ ವಿಸ್ತರಿಸಲಾಗಿದೆ. ಇದಕ್ಕಾಗಿ ವಿದೇಶಿಗರು ಯಾವುದೇ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ ಎಂದು ವಕ್ತಾರರು ಹೇಳಿದ್ದಾರೆ.

ರಾಜೀವ್ ಗಾಂಧಿ ಬದಲಿಗೆ ಕಾರ್ಯಪ್ಪ ಹೆಸರಿಡಿ: ಸಂಸದ ಪ್ರತಾಪಸಿಂಹ

ಮೈಸೂರು: 'ರಾಜೀವ್ ಗಾಂಧಿ ನಾಗರಹೊಳೆ ರಾಷ್ಟ್ರೀಯ ಉದ್ಯಾನಕ್ಕೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ನಾಗರಹೊಳೆ ರಾಷ್ಟ್ರೀಯ ಉದ್ಯಾನ' ಎಂದು ಮರು ನಾಮಕಾರಣ ಮಾಡಬೇಕೆಂದು ಕೋರಿ ಸಂಸದ ಪ್ರತಾಪಸಿಂಹ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಈ ಕುರಿತು ಕೊಡಗಿನಲ್ಲಿ ಆನ್‌ಲೈನ್ ಅಭಿಯಾನವೂ ನಡೆದಿದೆ. ದೇಶದಲ್ಲಿರುವ ರಾಷ್ಟ್ರೀಯ ಉದ್ಯಾನಗಳಲ್ಲಿ ಹಲವು ಉದ್ಯಾನಗಳು ನೆಹರೂ ಕುಟುಂಬದವರ ಹೆಸರಿನಲ್ಲಿವೆ. ಕೊಡಗಿನ ಅಸ್ಮಿತೆಗಾಗಿ ಮರುನಾಮಕಾರಣ ಮಾಡಬೇಕು' ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ವಿಶ್ರಾಂತ ಕುಲಪತಿಗಳ ವೇದಿಕೆಗೆ ರಂಗಪ್ಪ ಅಧ್ಯಕ್ಷ

ಬೆಂಗಳೂರು: ಪ್ರೊ. ಕೆ.ಎಸ್. ರಂಗಪ್ಪ ಅವರು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 2023ರವರೆಗೆ ಈ ಹುದ್ದೆಯಲ್ಲಿ ಇರಲಿದ್ದಾರೆ.

ನೂತನ ಕಾರ್ಯಕಾರಿ ಮಂಡಳಿ: ಉಪಾಧ್ಯಕ್ಷರು: ಕೆ.ನಾರಾಯಣಗೌಡ ಮತ್ತು ಓ.ಅನಂತರಾಮಯ್ಯ, **ಕಾರ್ಯದರ್ಶಿ:** ಸುರೇಶ್ ಎಸ್.ಹೊನ್ನಪ್ಪಗೋಳ, **ಜಂಟಿ ಕಾರ್ಯದರ್ಶಿ:** ಎಸ್. ಆರ್.ನಿರಂಜನ, **ಖಜಾಂಚಿ:** ಇ.ಟಿ. ಪುಟ್ಟಯ್ಯ.

ಸದಸ್ಯರು: ಸರ್ವಮಂಗಳ ಶಂಕರ್, ಎಸ್.ಬಿ.ಹೊಸಮನಿ, ಎ.ಎಚ್. ರಾಜಾಸಾಬ್, ಪದ್ಮಾ ಶೇಖರ್, ಡಿ.ಶಿವಲಿಂಗಯ್ಯ, ಎಂ.ಎನ್. ಶೀಲವಂತರ್, ಬಿ.ಜಿ. ಸಂಗಮೇಶ್ವರ, ಎಚ್.ಮಹೇಶಪ್ಪ, ಮಲ್ಲಿಕಾ ಘಂಟಿ, ಎಸ್.ಎನ್. ಹೆಗಡೆ, ಆರ್.ಎನ್. ಶ್ರೀನಿವಾಸ ಗೌಡ, ಆರ್. ಚಂದ್ರಶೇಖರ.

73 ವಿದ್ಯಾರ್ಥಿಗಳ ಅಪಹರಣ

ಲಾಗೋಸ್ (ನೈಜೀರಿಯಾ) (ಎಪಿ): ವಾಯವ್ಯ ನೈಜೀರಿಯಾದಲ್ಲೂ ಶಸ್ತ್ರಧಾರಿಗಳಾದ ದುಷ್ಕರ್ಮಿಗಳು ಶಾಲೆಯೊಂದರಿಂದ 73 ವಿದ್ಯಾರ್ಥಿಗಳನ್ನು ಅಪಹರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಮೊದಲು ದುಷ್ಕರ್ಮಿಗಳಿಂದ ಅಪಹರಣಕ್ಕೊಳಗಾಗಿದ್ದ ಒತ್ತೆಯಾಳುಗಳನ್ನು ಭಾರಿ ಮೊತ್ತದ ಹಣ ನೀಡಿ ಬಿಡುಗಡೆಗೊಳಿಸಿದ ಬಳಿಕ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೆಕ್ಕ ಪರಿಶೋಧಕರ ಸಂಘಕ್ಕೆ ಆಯ್ಕೆ

ಬೆಂಗಳೂರು: ರಾಜ್ಯ ಸನ್ನದು ಲೆಕ್ಕ ಪರಿಶೋಧಕರ ಸಂಘದ ನೂತನ ಅಧ್ಯಕ್ಷರಾಗಿ ಚಂದನ ಕುಮಾರ ಹೆಗ್ಡೆ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇತ್ತೀಚೆಗೆ ನಡೆದ ಸಂಘದ 47ನೇ ವಾರ್ಷಿಕ ಸಭೆಯಲ್ಲಿ 2021–22ನೇ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಂಘದ ಉಪಾಧ್ಯಕ್ಷರಾಗಿ ಪ್ರಮೋದ ಶ್ರೀಹರಿ, ಕಾರ್ಯದರ್ಶಿಯಾಗಿ ಜಿ. ಸುಜಾತಾ, ಜಂಟಿ ಕಾರ್ಯದರ್ಶಿಯಾಗಿ ಶಿವಪ್ರಕಾಶ ವಿರಕ್ತಮಠ, ಖಜಾಂಚಿಯಾಗಿ ಎಂ. ವಿಜಯಕುಮಾರ್ ಪಟೇಲ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ.

ಚಂದನ

ಸುಜಾತ

ಗಣೇಶ ಮೂರ್ತಿ ತಯಾರಿಕೆ ತರಬೇತಿ

ಬೆಂಗಳೂರು: ಪ್ರಯೋಗ ಮಂಟಪ ಹಾಗೂ ರಂಗ ಚಂದಿರ ತಂಡಗಳ ಸಹಯೋಗದಲ್ಲಿ ಇದೇ 5ರಂದು ಜೇಡಿ ಮಣ್ಣಿನ ಗಣೇಶ ಮೂರ್ತಿ ತಯಾರಿಕೆ ತರಬೇತಿ ಹಮ್ಮಿಕೊಳ್ಳಲಾಗಿದೆ.

ಹನುಮಂತನಗರದ ರಾಮಾಂಜನೇಯ ಗುಡ್ಡದಲ್ಲಿ ಬೆಳಿಗ್ಗೆ 9.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ನುರಿತ ಕಲಾವಿದರು ಗಣೇಶ ವಿಗ್ರಹ ತಯಾರಿಕೆ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ. ಭಾಗವಹಿಸುವವರಿಗೆ ಜೇಡಿಮಣ್ಣು ಹಾಗೂ ಅಡಿಕೆ ತಟ್ಟೆಗಳನ್ನು ಕೊಡಲಾಗುತ್ತದೆ. ತಯಾರಿಸಿದ ಗಣೇಶ ಮೂರ್ತಿಗಳನ್ನು ಮನೆಗೆ ಕೊಂಡೊಯ್ಯುವ ಅವಕಾಶವೂ ಇದೆ. ಇದರ ಜೊತೆಗೆ ಪ್ರಶಸ್ತಿ ಪತ್ರ ಹಾಗೂ ಲಾಡು ಪ್ರಸಾದವನ್ನೂ ನೀಡಲಾಗುತ್ತದೆ.

ಆಸಕ್ತರು ವೆಂಕಟೇಶ ಜೋಶಿ (9845821847) ಹಾಗೂ ಜಿಪಿಒ ಚಂದ್ರು (9113081894) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ನಿಧನ ವಾರ್ತೆ

ಕಬಾಡಿ ಜಗನ್ನಾಥಸಾ

ಬೆಂಗಳೂರು: ರೇಷ್ಮೆ ಬಟ್ಟೆ ಉದ್ಯಮಿ ಕಬಾಡಿ ಜಗನ್ನಾಥಸಾ (78) ಅವರು ಆಗಸ್ಟ್ 29ರಂದು ನಿಧನರಾದರು.

ಸದಾಶಿವನಗರದಲ್ಲಿರುವ 'ಕಬಾಡಿ ಚಿಕ್ಕನಾಗುಸಾ ಆ್ಯಂಡ್ ಸನ್ಸ್' ಮೂಲಕ ಜಗನ್ನಾಥಸಾ ಅವರು ಖ್ಯಾತರಾಗಿದ್ದರು. ರೇಷ್ಮೆ ಬಟ್ಟೆಗಳ ರಫ್ತಿನಲ್ಲಿ ಅವರು ಹೆಸರು ಮಾಡಿದ್ದರು. ಅಮೆರಿಕ, ಜಪಾನ್ ಸೇರಿದಂತೆ ಹಲವು ದೇಶಗಳಲ್ಲಿ ಅವರ ಗ್ರಾಹಕರಿದ್ದಾರೆ.

ಜಗನ್ನಾಥಸಾ ಅವರ ರೇಷ್ಮೆ ರಫ್ತು ಸಾಧನೆಗೆ ದೆಹಲಿಯ ಭಾರತೀಯ ರೇಷ್ಮೆ ರಫ್ತು ಉತ್ತೇಜನ ಮಂಡಳಿ ಪ್ರಶಸ್ತಿ ನೀಡಿತ್ತು.

ಚಿತ್ರಾವಳಿ

ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿರುವ ಕಾರಣ ನೆಹರೂ ವೃತ್ತದಿಂದ ಶಿವಾನಂದ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಸಾಗಲು ವಾಹನ ಸವಾರರು ಹರಸಾಹಸ ಪಡುವಂತಾಗಿದೆ– ಪ್ರಜಾವಾಣಿ ಚಿತ್ರ

ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆ ನಡೆಸಲು ಗುರುವಾರ ಆರೋಗ್ಯ ಕಾರ್ಯಕರ್ತರು ಬಾಲಕಿಯ ಮೂಗಿನ ದ್ರವ ಸಂಗ್ರಹಿಸಿದರು



ಸುಭಾಷಿತ

ಯಾವುದನ್ನಾದರೂ ನೀವು ನಂಬಿದ್ದೀರಿ ಎನ್ನುವ ಒಂದೇ ಕಾರಣಕ್ಕೆ ಅದು ಸತ್ಯವೇ ಆಗಿರುತ್ತದೆ ಎಂದರ್ಥವಲ್ಲ.

–ಆಲ್ಬರ್ಟ್ ಐನ್‌ಸ್ಟೀನ್

ಅನುದಾನ ಬಿಡುಗಡೆಯಲ್ಲಿ ವಿಳಂಬ ಜನವಿರೋಧಿ ಧೋರಣೆ ಬದಲಾಗಲಿ

ಕೋವಿಡ್ ಸಾಂಕ್ರಾಮಿಕ ಸೃಷ್ಟಿಸಿರುವ ಬಿಕ್ಕಟ್ಟಿನಿಂದಾಗಿ ರಾಜ್ಯ ಸರ್ಕಾರವೂ ಸಂಕಷ್ಟಕ್ಕೆ ಸಿಲುಕಿದೆ. ರಾಜ್ಯ ಸರ್ಕಾರದ ವರಮಾನದ ಮೂಲಗಳು ಕುಗ್ಗಿವೆ. ತೆರಿಗೆ ಮೂಲಗಳಿಂದ ನಿರೀಕ್ಷಿತ ಪ್ರಮಾಣದ ವರಮಾನ ಸಂಗ್ರಹ ಆಗುತ್ತಿಲ್ಲ. ಪರಿಸ್ಥಿತಿ ನಿಭಾಯಿಸಲು ರಾಜ್ಯ ಸರ್ಕಾರ ಹೆಣಗಾಡುತ್ತಿದೆ. ಇಂತಹ ಸನ್ನಿವೇಶದಲ್ಲೇ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನಕ್ಕೆ ತನ್ನ ಪಾಲಿನ ಅನುದಾನವನ್ನು ಕೇಂದ್ರ ಸರ್ಕಾರ ಸಕಾಲಕ್ಕೆ ಬಿಡುಗಡೆ ಮಾಡದಿರುವುದು ದುರದೃಷ್ಟಕರ. ಗ್ರಾಮೀಣಾಭಿವೃದ್ಧಿ, ವಸತಿ, ಕೃಷಿ, ತೋಟಗಾರಿಕೆ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಹತ್ತು ಪ್ರಮುಖ ಕೇಂದ್ರ ಪುರಸ್ಕೃತ ಯೋಜನೆಗಳಿಗೆ 2021-22ನೇ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಒಂದು ರೂಪಾಯಿ ಕೂಡ ಬಿಡುಗಡೆ ಆಗಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಮಂಗಳವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಮಂಡಿಸಿರುವ ಅಂಕಿಅಂಶಗಳೇ ಇದನ್ನು ಬಹಿರಂಗಪಡಿಸಿವೆ. ಸ್ವಚ್ಛ ಭಾರತ, ಪ್ರಧಾನ ಮಂತ್ರಿ ಗ್ರಾಮ ಸಡಕ್, ಪ್ರಧಾನ ಮಂತ್ರಿ ಆವಾಸ್, ಆಹಾರ ಭದ್ರತಾ ಅಭಿಯಾನ ಸೇರಿದಂತೆ ಜನರ ಜೀವನಮಟ್ಟ ಸುಧಾರಣೆಯ ಗುರಿ ಸಾಧನೆಯಲ್ಲಿ ನೇರವಾಗಿ ಸಂಬಂಧ ಹೊಂದಿರುವ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡಿಲ್ಲ. ಪರಿಣಾಮವಾಗಿ ಈ ಯೋಜನೆಗಳ ಅನುಷ್ಠಾನದಲ್ಲಿನ ವೆಚ್ಚವೂ ಶೂನ್ಯವಾಗಿದೆ. ₹ 3,890.59 ಕೋಟಿ ವೆಚ್ಚದ ಹತ್ತು ಪ್ರಮುಖ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಸರ್ಕಾರ ₹ 2,410.81 ಕೋಟಿ ನೀಡಬೇಕಿದೆ. ಈ ಯೋಜನೆಗಳಿಗೆ ರಾಜ್ಯ ಸರ್ಕಾರವು ₹ 1,479.78 ಕೋಟಿ ಹೊಂದಾಣಿಕೆ ಅನುದಾನವನ್ನು ನೀಡಬೇಕಿದೆ. ಕೇಂದ್ರದ ಅನುದಾನ ಮತ್ತು ರಾಜ್ಯದ ಹೊಂದಾಣಿಕೆ ಅನುದಾನ ಎರಡೂ ಲಭಿಸದೇ ಇರುವುದರಿಂದ ಈ ಯೋಜನೆಗಳ ಅನುಷ್ಠಾನ ಪ್ರಗತಿ ಶೂನ್ಯವಾಗಿದೆ. ಕೇಂದ್ರವು ತಾನೇ ಜಾರಿಗೊಳಿಸಿರುವ ಮಹತ್ವಾಕಾಂಕ್ಷಿ ಯೋಜನೆಗಳ ಅನುಷ್ಠಾನಕ್ಕೆ ಸಕಾಲದಲ್ಲಿ ಅನುದಾನ ಒದಗಿಸದೇ ಇರುವುದು ಯಾವುದೇ ನೆಲೆಯಲ್ಲಿ ಸಮರ್ಥನೀಯವಲ್ಲ.

ತಾನೇ ಜಾರಿಗೊಳಿಸಿರುವ ಮಹತ್ವಾಕಾಂಕ್ಷಿ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಸಕಾಲದಲ್ಲಿ ಅನುದಾನ ಒದಗಿಸದೇ ಇರುವುದು ಸರಿಯಲ್ಲ

ರಾಜ್ಯ ಸರ್ಕಾರದ 22 ಇಲಾಖೆಗಳ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ 89 ಯೋಜನೆಗಳು ಜಾರಿಯಲ್ಲಿವೆ. ಇದಕ್ಕಾಗಿ ಕೇಂದ್ರ ಸರ್ಕಾರವು ಪ್ರಸಕ್ತ ವರ್ಷ ₹ 17,643 ಕೋಟಿ ಅನುದಾನ ಒದಗಿಸಬೇಕಿದೆ. ಹಲವು ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ, ಬಯಲು ಬಹಿರ್ದೆಸೆಯಿಂದ ದೇಶವನ್ನು ಮುಕ್ತಗೊಳಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ರಸ್ತೆ ನಿರ್ಮಾಣ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡಗಳ ನಿರ್ವಹಣೆ, ಹೊಸ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಶಿಷ್ಯವೇತನ ಯೋಜನೆಗಳಿಗೆ ಆರ್ಥಿಕ ವರ್ಷ ಆರಂಭವಾಗಿ ನಾಲ್ಕು ತಿಂಗಳು ಕಳೆದರೂ ಅನುದಾನ ಬಿಡುಗಡೆ ಮಾಡದಿರುವುದು ಸರಿಯಲ್ಲ. ಕೃಷಿ ಮತ್ತು ವಸತಿ ಯೋಜನೆಗಳಿಗೂ ಅನುದಾನ ನೀಡಿಲ್ಲ. ಜನರ ಜೀವನಮಟ್ಟ ಸುಧಾರಣೆಯ ದಿಸೆಯಲ್ಲಿ ಆದ್ಯತೆಯ ಯೋಜನೆಗಳಿಗೇ ಅನುದಾನ ಬಿಡುಗಡೆಯಲ್ಲಿ ವಿಳಂಬ ಮಾಡಿರುವುದು ಜನವಿರೋಧಿ ನಡೆ. ಆರಂಭಿಕ ಹಂತದಲ್ಲಿ ಅನುದಾನ ಬಿಡುಗಡೆ ವಿಳಂಬವಾದರೆ ವರ್ಷದ ಅಂತ್ಯದಲ್ಲಿ ಪೂರ್ಣ ಪ್ರಮಾಣದ ಗುರಿ ಸಾಧನೆ ಆಗುವುದಿಲ್ಲ. 2020-21ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ₹ 18,715 ಕೋಟಿ ಅನುದಾನವು ಕೇಂದ್ರದಿಂದ ಬರಬೇಕಿತ್ತು. ಆದರೆ, ರಾಜ್ಯಕ್ಕೆ ದೊರಕಿರುವುದು ₹ 16,320 ಕೋಟಿ ಮಾತ್ರ. ಇದು ಅನುದಾನ ಬಿಡುಗಡೆಯಲ್ಲಿನ ವಿಳಂಬದ ಪ್ರತಿಕೂಲ ಪರಿಣಾಮಗಳಿಗೆ ಸಾಕ್ಷಿ. ಇಂತಹ ಬೆಳವಣಿಗೆ ಮರುಕಳಿಸದಂತೆ ತಡೆಯಬೇಕಾದ ಹೊಣೆಗಾರಿಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲಿದೆ.

ಜಿಎಸ್‌ಟಿಯಲ್ಲಿ ರಾಜ್ಯದ ಪಾಲು, ಜಿಎಸ್‌ಟಿ ಪರಿಹಾರ, ಹಣಕಾಸು ಆಯೋಗದ ಅನುದಾನಗಳ ಹಂಚಿಕೆ ಸೇರಿದಂತೆ ಹಲವು ವಿಷಯಗಳಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದ ನ್ಯಾಯೋಚಿತ ಬೇಡಿಕೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ಅಸಮಾಧಾನ ದೀರ್ಘ ಕಾಲದಿಂದ ಇದೆ. ತೆರಿಗೆ ಪಾಲು ಮತ್ತು ಅನುದಾನ ಹಂಚಿಕೆಯಲ್ಲಿ ರಾಜ್ಯವನ್ನು ಕಡೆಗಣಿಸಲಾಗುತ್ತಿದೆ ಎಂಬ ಆರೋಪವೂ ಇದೆ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಅನುದಾನ ಬಿಡುಗಡೆಯ ವಿಳಂಬದ ವಿಚಾರದಲ್ಲಿ ಗಟ್ಟಿಯಾದ ನಿಲುವು ತಾಳಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿದೆ. ಅನುದಾನ ಬಿಡುಗಡೆಯಲ್ಲಿನ ವಿಳಂಬವನ್ನು ಮುಚ್ಚಿಟ್ಟು, ಕೇಂದ್ರ ಸರ್ಕಾರವನ್ನು ಸಮರ್ಥಿಸಿಕೊಳ್ಳುವಂತಹ ನಡೆಯನ್ನು ಪ್ರದರ್ಶಿಸದೇ ವಾಸ್ತವಿಕವಾಗಿ ದೊರೆಯಬೇಕಾದ ಪಾಲನ್ನು ಗಟ್ಟಿ ಧ್ವನಿಯಲ್ಲಿ ಕೇಳಬೇಕಾದ ಜವಾಬ್ದಾರಿ ಇದೆ. ಹಂಚಿಕೆಯಾದ ಪೂರ್ಣ ಪ್ರಮಾಣದ ಅನುದಾನವನ್ನು ಪಡೆದು, ಬಳಕೆ ಮಾಡುವುದಕ್ಕೆ ಸರಿಯಾದ ಪ್ರಯತ್ನಗಳನ್ನು ಮಾಡಬೇಕಾದುದು ರಾಜ್ಯ ಸರ್ಕಾರದ ಕರ್ತವ್ಯ. ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ ಹತ್ತು ಪ್ರಮುಖ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ಬಿಡುಗಡೆ ಆಗದೇ ಇರುವುದಕ್ಕೆ ಕಾರಣವಾದ ಅಂಶಗಳನ್ನು ಪತ್ತೆಮಾಡಿ, ಪರಿಹಾರ ಕಂಡುಕೊಳ್ಳುವ ಮೂಲಕ ರಾಜ್ಯದ ಪಾಲಿನ ಪೂರ್ಣ ಅನುದಾನವನ್ನು ಪಡೆಯುವ ದಿಟ್ಟತನ ಪ್ರದರ್ಶಿಸಬೇಕು.

ದಿನದ ಟ್ವೀಟ್

ಪ್ರತ್ಯೇಕ ಮಾರ್ಗ ಇರಲಿ

ಎಲ್ಲ ಬಗೆಯ ಸಂಚಾರ ವ್ಯವಸ್ಥೆಗೂ ಒಂದೇ ರಸ್ತೆ ಜಾಲ ಇರಬೇಕು ಎಂದು ಭಾವಿಸುವ ಬದಲು, ನಡಿಗೆ, ಸೈಕ್ಲಿಂಗ್‌ನಂತಹವುಗಳಿಗೆ ಪ್ರತ್ಯೇಕವಾದ ಮಾರ್ಗಗಳ ಬಗ್ಗೆ ಯೋಚಿಸುವುದು ಒಳ್ಳೆಯದು. ರೈಲಿಗಾಗಿ ಈಗಾಗಲೇ ನಾವು ಪ್ರತ್ಯೇಕ ಮಾರ್ಗವನ್ನು ಹೊಂದಿದ್ದೇವೆ. ಆದರೆ, ಇತರ ಬಗೆಯ ಸಂಚಾರ ವ್ಯವಸ್ಥೆಗಳ ವಿಚಾರದಲ್ಲಿ ಮಾತ್ರ ನಾವು ಆ ರೀತಿ ಯೋಚಿಸುವುದಿಲ್ಲ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

‘ಗಾಂಧಿ’ ಉಪನಾಮವನ್ನು ಕಾಂಗ್ರೆಸ್ ಗರಿಷ್ಠ ಮಟ್ಟದಲ್ಲಿ ಬಳಸಿಕೊಂಡಿದೆ. ಎಷ್ಟರಮಟ್ಟಿಗೆ ಎಂದರೆ ‘ಗಾಂಧಿ’ಯನ್ನು ಸ್ವಂತ ಉಪನಾಮವೆಂಬಂತೆ ಉಪಯೋಗಿಸಿಕೊಳ್ಳುತ್ತಿದೆ. ಕಾಂಗ್ರೆಸ್ಸಿಗರು ತಮ್ಮನ್ನು ತಾವು ಅಭಿವೃದ್ಧಿಪಡಿಸಿಕೊಳ್ಳುವಲ್ಲಿ ನಿರತರಾಗಿದ್ದಾರೆ. ಅವರು ಭ್ರಷ್ಟಾಚಾರವನ್ನು ಸಾಂಸ್ಥೀಕರಣಗೊಳಿಸಿದ್ದಾರೆ.

ರಾಜನಾಥ್ ಸಿಂಗ್, ರಕ್ಷಣಾ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 3-9-1996

• ವೈದ್ಯ ಶಿಕ್ಷಣ ಪ್ರವೇಶ: ಸರ್ಕಾರದ ಅರ್ಜಿ ವಜಾ

ಬೆಂಗಳೂರು, ಸೆ. 2– ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣದ ಪ್ರವೇಶ ಪ್ರಕ್ರಿಯೆಯನ್ನು ಎರಡು ವಾರ ಮುಂದಕ್ಕೆ ಹಾಕಿದ್ದ ಹೈಕೋರ್ಟಿನ ಮಧ್ಯಂತರ ಆಜ್ಞೆಯ ವಿರುದ್ಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ರಾಮ್ ಪ್ರಕಾಶ್ ಸೇಥಿ ಮತ್ತು ಎಸ್. ರಾಜೇಂದ್ರಬಾಬು ಅವರಿದ್ದ ವಿಭಾಗೀಯ ಪೀಠ ಇಂದು ತಳ್ಳಿಹಾಕಿತು.

ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದನ್ನು ಪುರಸ್ಕರಿಸಿದ್ದ ಹೈಕೋರ್ಟ್ ಈ ಪ್ರಕ್ರಿಯೆಯನ್ನು ಎರಡು ವಾರದ ಮಟ್ಟಿಗೆ ಮುಂದೂಡಬೇಕು ಎಂದು ಸರ್ಕಾರಕ್ಕೆ ಆದೇಶಿಸಿತ್ತು.

ಈ ಪ್ರವೇಶ ಪ್ರಕ್ರಿಯೆಯನ್ನು ಆಗಸ್ಟ್ 30 ರಂದು ಆರಂಭಿಸಬೇಕಾಗಿದ್ದು, ಆ. 29ರ ಈ ಆಜ್ಞೆಯಿಂದ ವಿದ್ಯಾರ್ಥಿಗಳಿಗೆ ಅಸಹನೀಯ ತೊಂದರೆ ಆಗುತ್ತದೆ ಎಂಬ ವಾದವನ್ನು ರಿಟ್‌ನಲ್ಲಿ ಮಂಡಿಸಲಾಗಿತ್ತು.

• ರೈಲ್ವೆ ವಲಯಕ್ಕೆ ಹುಬ್ಬಳ್ಳಿಯೇ ಪ್ರಶಸ್ತ: ನಿಜಲಿಂಗಪ್ಪ

ಬೆಂಗಳೂರು, ಸೆ. 2– ರಾಜ್ಯಕ್ಕೆ ಹೊಸದಾಗಿ ಮಂಜೂರಾಗಿರುವ ನೈರುತ್ಯ ರೈಲ್ವೆ ವಲಯದ ಕೇಂದ್ರ ಕಚೇರಿಯನ್ನು ಹುಬ್ಬಳ್ಳಿಯಲ್ಲೇ ಸ್ಥಾಪಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ರಾಜಕಾರಣಿ ಎಸ್.ನಿಜಲಿಂಗಪ್ಪ ಇಂದು ಇಲ್ಲಿ ಆಗ್ರಹಪಡಿಸಿದರು.

‘ನೈರುತ್ಯ ರೈಲ್ವೆ ವಲಯದ ಕೇಂದ್ರ ಕಚೇರಿಯನ್ನು ಹುಬ್ಬಳ್ಳಿಯಲ್ಲಿಯೇ ಸ್ಥಾಪಿಸಬೇಕು ಎಂಬುದು ಎಲ್ಲ ಜನತೆಯ ಮತ್ತು ಜನಪ್ರತಿನಿಧಿಗಳ ಒತ್ತಾಯವಾಗಿದೆ. ನಾನೂ ಮೊದಲಿನಿಂದಲೂ ಇದನ್ನೇ ಪ್ರತಿಪಾದಿಸಿಕೊಂಡು ಬಂದಿದ್ದೇನೆ. ಕೇಂದ್ರ ಸರ್ಕಾರ ಜನಾಭಿಪ್ರಾಯಕ್ಕೆ ಸ್ಪಂದಿಸಬೇಕು’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಸಲಹೆ ನೀಡಿದರು.

• ಕಾವೇರಿ: ಮಧ್ಯಂತರ ತೀರ್ಪಿನ ಚೌಕಟ್ಟಿನಲ್ಲಿ ಚರ್ಚೆ– ಕರುಣಾನಿಧಿ

ತಿರುಚಿನಾಪಳ್ಳಿ, ಸೆ. 2 (ಯುಎನ್‌ಐ, ಪಿಟಿಐ)– ಕಾವೇರಿ ಜಲವಿವಾದದ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರೊಂದಿಗೆ ನಡೆಯುತ್ತಿರುವ ಸಂಧಾನ ಮಾತುಕತೆಗಳು ನ್ಯಾಯಮಂಡಳಿಯ ಮಧ್ಯಂತರ ತೀರ್ಪಿನ ಚೌಕಟ್ಟಿನಲ್ಲೇ ನಡೆಯುವುದು ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕರುಣಾನಿಧಿ ಇಂದು ಇಲ್ಲಿ ಪುನರುಚ್ಚರಿಸಿದರು.

ಜಗತ್ತಿನ ಸುಗಂಧ ದ್ರವ್ಯದ ವ್ಯಾಪಾರವೆಲ್ಲ ಇದರ ಮೇಲೇ ನಿಂತಿದೆಯೇ?

ತಿಮಿಂಗಿಲದ ವಾಂತಿ ಮತ್ತು ಭ್ರಾಂತಿ

ವಿಶ್ಲೇಷಣೆ

ಟಿ.ಆರ್.ಅನಂತರಾಮು

ಕದ್ದ ಮಾಲನ್ನು ಮಾರಿದರೆ ಹಣ ಬರುತ್ತದೆಂದರೆ ಕಳ್ಳರು ಯಾಕೆ ಕದಿಯಲು ಹಿಂದುಮುಂದು ನೋಡುತ್ತಾರೆ? ಕದಿಯಲು ನಗ ನಾಣ್ಯವೇ ಆಗಬೇಕೆಂದಿಲ್ಲ. ಕಳೆದ ಎರಡು ತಿಂಗಳಲ್ಲಿ ಸುದ್ದಿ ಮಾಡಿರುವ ತಿಮಿಂಗಿಲದ ವಾಂತಿ ಇದನ್ನೇ ಖಚಿತಪಡಿಸುತ್ತದೆ. ಒಂದು ಕಿಲೊ ಗ್ರಾಂ ಗಟ್ಟಿ ವಾಂತಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಕೋಟಿ ರೂಪಾಯಿ.

ತಿಮಿಂಗಿಲದ 80 ಕಿಲೊ ಗ್ರಾಂ ಗಟ್ಟಿ ವಾಂತಿಯನ್ನು ಕದ್ದೊಯ್ಯುತ್ತಿದ್ದವರನ್ನು ಇದೇ ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಬಂಧಿಸಿತು. ಜುಲೈ ತಿಂಗಳಲ್ಲಿ ಕೇರಳದ ತ್ರಿಶೂರ್ ಜಿಲ್ಲೆಯ ಚೆಟ್ಟುವ ಎಂಬಲ್ಲಿ ಅರಣ್ಯ ಇಲಾಖೆಯು ಕಳ್ಳರನ್ನು ಬೆನ್ನಟ್ಟಿ ತಿಮಿಂಗಿಲದ 19 ಕಿಲೊ ಗ್ರಾಂ ವಾಂತಿಯನ್ನು ವಶಮಾಡಿಕೊಂಡು ಪ್ರಕರಣ ದಾಖಲಿಸಿತು. ಗುಜರಾತಿನಲ್ಲಂತೂ ಇಂಥ ಪ್ರಸಂಗಗಳು ಲಾಗಾಯ್ತಿನಿಂದ ಇವೆ. ಪ್ರಚಾರ ಮಾತ್ರ ಇತ್ತೀಚಿನದು. ತಮಿಳುನಾಡಿನ ರೆವಿನ್ಯೂ ಇಂಟಲಿಜೆನ್ಸ್ ಪಡೆ ಒಂದು ತಂಡವನ್ನು ರಚಿಸಿ, ತೂತ್ತುಕುಡಿ ಬೀಚಿನಲ್ಲಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಮೂವರನ್ನು ಬಂಧಿಸಿದಾಗ, ಸಿಕ್ಕಿದ್ದು ₹ 23 ಕೋಟಿ ಬೆಲೆಯ ತಿಮಿಂಗಿಲದ ವಾಂತಿ. ಇತ್ತೀಚೆಗೆ ‘ವಾಂತಿಕೋರರು’ ಹೆಚ್ಚಾಗುತ್ತಿದ್ದಾರೆ ಎನ್ನುವುದು ಕೂಡ ಸರ್ವೆ ಮಾಡಿದ ಮೇಲೆ ಬಂದ ವರದಿ.

ಈಗ ಪೊಲೀಸಿನವರು ಅಕ್ಷರಶಃ ವನ್ಯಜೀವಿ ಕಾನೂನನ್ನು ಓದಬೇಕಾಗಿದೆ. ತಿಮಿಂಗಿಲದ ವಾಂತಿಯನ್ನು ಸಂಗ್ರಹಿಸುವುದೇ ಅಪರಾಧ, ಮಾರುವುದು ಮತ್ತೊಂದು ಅಪರಾಧ ಎಂದು ಹೇಳುತ್ತಾ ಅವರೇ ಕಾನೂನು ತಜ್ಞರಾಗುತ್ತಿದ್ದಾರೆ. ಭಾರತದಲ್ಲಿ ವನ್ಯಜೀವಿ ಸಂರಕ್ಷಣೆ ಕಾಯ್ದೆಯ ಎರಡನೆಯ ಷೆಡ್ಯೂಲ್‌ನಲ್ಲಿ ಇದನ್ನು ಅಪರಾಧ ಎಂದು ಪರಿಗಣಿಸಲಾಗಿದೆ.

ತಿಮಿಂಗಿಲದ ವಾಂತಿ ಎನ್ನುವ ಪದವೇ ಅಸಹ್ಯ ಹುಟ್ಟಿಸಬಹುದು. ಇಂಗ್ಲಿಷ್‌ನಲ್ಲಿ ಅಂಬರ್ಗ್ರಿಸ್ ಎಂದಾಗ, ಅರ್ಥವಾಗದಿದ್ದರೂ ಅದು ಸಹ್ಯ ಎನಿಸಿಬಿಡುತ್ತದೆ. ಉಚ್ಚೆ ಬದಲು ಯೂರಿನ್ ಎಂದಾಗ ಉಂಟಾಗುವ ಭಾವನೆಯಂತೆ. ಅಂಬರ್ಗ್ರಿಸ್ ಎನ್ನುವುದು ಹಳೆಯ ಫ್ರೆಂಚ್ ಪದ. ಅಂಬರ-ಮೇಣದಂಥ ಪದಾರ್ಥ ಎನ್ನುವುದು ಇದರ ಅರ್ಥ. ಎಲ್ಲ ತಿಮಿಂಗಿಲಗಳೂ ಹೊಟ್ಟೆಬಿರಿಯ ತಿಂದಾಗ ವಾಂತಿ ಮಾಡುವುದರಲ್ಲಿ ವಿಶೇಷವೇನಿಲ್ಲ. ಆದರೆ ಅಂಬರ್ಗ್ರಿಸ್ ಎಂದು ಕರೆಯುವ ಪದಾರ್ಥ ಸ್ಪರ್ಮ್ ವೇಲ್ ಮೂಲದ್ದು. ಹಾಗೆ ನೋಡಿದರೆ ಸ್ಪರ್ಮ್ ವೇಲ್ ಎನ್ನುವುದೇ ಒಂದು ಅಬದ್ಧ ಹೆಸರು. ತಲೆ ಸೀಳಿದಾಗ ಭಗ್ಗನೆ ಅದರಿಂದ ವೀರ್ಯಾಣು ಹೊರಬರುತ್ತದೆಂಬ ತಪ್ಪು ತಿಳಿವಳಿಕೆಯಿಂದ ಕೊಟ್ಟ ಹೆಸರು. ವಾಸ್ತವವಾಗಿ ಈ ತಿಮಿಂಗಿಲದ ತಲೆಯಲ್ಲಿ ಅರೆ ದ್ರವರೂಪದ ಮೇಣದಂಥ ಪದಾರ್ಥ ಶೇಖರಣೆಯಾಗಿರುತ್ತದೆ ಎಂದು ತಿಳಿದದ್ದು ಆಮೇಲೆ. ಆದರೆ ಹೆಸರು ಕೊಟ್ಟಾಗಿತ್ತಲ್ಲ! ಬದಲಾಗಲಿಲ್ಲ. ಸಮುದ್ರವಾಸಿ ದಂತಜೀವಿಗಳಲ್ಲಿ ಸ್ಪರ್ಮ್ ತಿಮಿಂಗಿಲಗಳೇ ಚಕ್ರವರ್ತಿಗಳು. ಹದಿನಾರು ಮೀಟರ್ ಉದ್ದ ಬೆಳೆಯಬಲ್ಲವು. ಎಲ್ಲ ಸಾಗರಗಳೂ ಅವುಗಳ ತವರೇ. ಅವಕ್ಕೆ ಕಂಟಕ ಒದಗಿರುವುದು ಕಿಲ್ಲರ್ ವೇಲ್‌ಗಳು ಮತ್ತು ಮನುಷ್ಯನಿಂದ.

ಕಾಡ್ ಮೀನುಗಳ ಯಕೃತ್ತನ್ನು ಬಗೆದು ತೈಲ ತೆಗೆದು ವಿಟಮಿನ್ ‘ಎ’ ಮತ್ತು ‘ಡಿ’ ಕೊರತೆಯನ್ನು ತುಂಬಿಕೊಳ್ಳುವುದು ತಲತಲಾಂತರದಿಂದ ಬಂದ ಹಲವು ಕೋಟಿ ರೂಪಾಯಿ ಉದ್ಯಮ. ತಮ್ಮ ತೂಕವನ್ನು ನೀರಿನಲ್ಲಿ ಸಮತೋಲವಾಗಿಸಲು ಶಾರ್ಕ್‌ಗಳು ತೈಲಭರಿತ ಯಕೃತ್ತನ್ನು ಬಳಸುತ್ತವೆ. ಅದನ್ನು ಬಗೆದು ತೈಲವನ್ನು ಬಾಚಿಕೊಳ್ಳುವುದುಂಟು. ಆ ತೈಲಕ್ಕೆ ವಿಶೇಷ ಜಾಹೀರು. ಗಾಯ ವಾಸಿ ಮಾಡುತ್ತದೆ, ಉಸಿರಾಟ ಮಾರ್ಗವನ್ನು ಸ್ವಚ್ಛಗೊಳಿಸುತ್ತದೆ ಎಂಬ ನಂಬಿಕೆ.

ಈಗ ಸ್ಪರ್ಮ್ ವೇಲ್ ಸರದಿ. ಅದರಲ್ಲೂ ಸೀಮೆಎಣ್ಣೆ ಬಳಕೆಗೆ ಬರುವ ಮೊದಲು ನಾವಿಕರು ಸ್ಪರ್ಮ್ ವೇಲ್ ಬೇಟೆಯಾಡಿ, ಅದರ ತಲೆಯಲ್ಲಿ ಕೊಬ್ಬರಿ ಎಣ್ಣೆಯಂತಿರುವ ದ್ರವ ರೂಪದ ತೈಲ ತೆಗೆದು ದೀಪಕ್ಕಾಗಿ ಬಳಸುತ್ತಿದ್ದುದು ಲಾಗಾಯ್ತಿನಿಂದ ಬಂದ ಚಾಳಿ. ಮಾಂಸಕ್ಕಿಂತ ಅದರ ಎಣ್ಣೆಯೇ ಜನರಿಗೆ ಮುಖ್ಯವಾಗಿತ್ತು. ಈಗ ಹೊಸತೊಂದು ನಿಧಿಯನ್ನು ಸ್ಪರ್ಮ್ ವೇಲ್‌ಗಳು ತೋರಿಸಿಕೊಟ್ಟಿವೆ. ಈ ನಿಧಿ ಅವುಗಳ ಬದುಕಿಗೇ ಮಾರಕವಾಗಿದೆ. ಅದೇ ತಿಮಿಂಗಿಲದ ವಾಂತಿ ಎಂದು ಭ್ರಮಿಸುವ ಅಂಬರ್ಗ್ರಿಸ್.

ಈ ಪದಾರ್ಥದ ಬಗ್ಗೆ ತಪ್ಪು ತಿಳಿವಳಿಕೆಯೇ ಹೆಚ್ಚು. ಸ್ಪರ್ಮ್ ವೇಲ್‌ಗಳು ಎಲ್ಲ ತಿಮಿಂಗಿಲಗಳಂತೆ ಬಕಾಸುರ ವಂಶದವು. ಆಕ್ಟೋಪಸ್‌ನಿಂದ ಹಿಡಿದು ಅದೇ ಜಾತಿಯ ಸ್ಕ್ವಿಡ್‌ಗಳವರೆಗೆ ಅವುಗಳ ಭಕ್ಷ್ಯ ಸೇರಿದೆ. ಮೀನುಗಳನ್ನು ಗುಳುಂ ಮಾಡಲು ಸಾಗರದಲ್ಲಿ ಎರಡು ಕಿಲೊ ಮೀಟರ್ ಆಳಕ್ಕೂ ಡೈವ್ ಮಾಡಬಲ್ಲವು. ವರ್ಷಕ್ಕೆ ಸ್ಪರ್ಮ್ ವೇಲ್‌ಗಳ ಗುಂಪು ಒಂಬತ್ತು ಕೋಟಿ ಟನ್ ಆಹಾರವನ್ನು ಸ್ವಾಹ ಮಾಡುತ್ತದೆಂಬುದು ಕಡಲಜೀವಿ ವಿಜ್ಞಾನಿಗಳ ಅಂದಾಜು. ಸ್ವಾಹ ಮಾಡುವ ಜೀವಿಗಳಲ್ಲಿ ಮೂಳೆಗಳಿದ್ದರೆ ಅವಕ್ಕೆ ಫಜೀತಿ. ತಕ್ಷಣವೇ ಮೂಳೆಗಳು ಒತ್ತುವುದನ್ನು ಶಮನ ಮಾಡಲು ಪಿತ್ತರಸ ಸ್ರವಿಸುವುದುಂಟು. ತಿಂದ ಅಜೀರ್ಣ ಪದಾರ್ಥ ಉಂಡೆಯಾಗುತ್ತದೆ. ಒಂದುವೇಳೆ ಆ ಪದಾರ್ಥವನ್ನು ತೆಗೆಯದೆ, ಸತ್ತ ಸ್ಪರ್ಮ್ ವೇಲನ್ನು ಕತ್ತರಿಸಿದರೆ ದುರ್ಗಂಧ ಸೂಸುತ್ತದೆ, ಥೇಟ್ ಮಲದ ವಾಸನೆ, ಮೀನುಗಾರರಿಗೂ ವಾಂತಿಯಾಗುವಂಥ ಗಬ್ಬುವಾಸನೆ. ಆಗ ಅದು ಬಿಳಿ ಪದಾರ್ಥ. ಆದರೆ ತಿಮಿಂಗಿಲ ಹೊರಹಾಕಿದರೆ ಕಿಮ್ಮತ್ತು ಬರುತ್ತದೆ. ಕಳ್ಳರ ಭಾಷೆಯಲ್ಲಿ ‘ತೇಲುವ ಬಂಗಾರ’. ಹೊರಗೆ ಹಾಕುವುದೆಂದರೆ ಜನ ಭಾವಿಸಿದಂತೆ ಬಾಯಿಯಿಂದ ಕಕ್ಕುವುದಲ್ಲ. ಗುದದ್ವಾರದ ಮೂಲಕ ಮಲ ವಿಸರ್ಜನೆಯಾದಂತೆ ಇದೂ ವಿಸರ್ಜನೆಯಾಗುತ್ತದೆ. ಎಷ್ಟೋ ವೇಳೆ ತಿಮಿಂಗಿಲ ಈ ಪದಾರ್ಥವನ್ನು ವಿಸರ್ಜನೆ ಮಾಡುವಾಗ ಗುದದ್ವಾರ ಹರಿದುಹೋಗುವುದೂ ಉಂಟು.

ಅಂಬರ್ಗ್ರಿಸ್ ಎಂಬ ಹೆಸರು ಆಗಲೂ ಇದಕ್ಕೆ ಸಲ್ಲುವುದಿಲ್ಲ. ಆ ವಿಸರ್ಜನೆಯು ಸಾಗರದ ಅಲೆಗಳಲ್ಲಿ ಕರಗದೆ, ಕೊಚ್ಚಿಹೋಗದೆ ಬಚಾವಾದರೆ ಸೂರ್ಯಕಿರಣಗಳಿಗೆ ತೆರೆದು ಗಟ್ಟಿಯಾಗುತ್ತ ಹೋಗುತ್ತದೆ. ಕೆಲವೊಮ್ಮೆ ತಿಂಗಳುಗಳು, ವರ್ಷಗಳೂ ಆಗಬಹುದು. ಅಂಥ ಉಂಡೆ ಬೂದುಬಣ್ಣ ತಳೆದು ತೇಲುತ್ತದೆ. ನಿಧಾನವಾಗಿ ದುರ್ವಾಸನೆ ಹೋಗಿ ಪರಿಮಳ ಮೂಡುತ್ತದೆ. ಒಂದು ರೀತಿಯ ಮದ್ಯಸಾರ ಎನ್ನಿ. ವೈಜ್ಞಾನಿಕವಾಗಿ ಇದನ್ನು ಟರ್ಪೀನ್ ಮತ್ತು ಅಂಬ್ರೀನ್ ರಾಸಾಯನಿಕ ಎಂದು ಗುರುತಿಸಲಾಗಿದೆ. ಅಲೆಯಲ್ಲಿ ತೇಲುತ್ತ ಬಂದಾಗ ಸಿಕ್ಕಿದವರಿಗೆ ಸೀರುಂಡೆ. 15 ಗ್ರಾಂ ಇರಬಹುದು, 50 ಕೆ.ಜಿ. ಇರಬಹುದು. ಗಾತ್ರ ದೊಡ್ಡದಾದಷ್ಟೂ ಬೆಲೆ ಕೋಟಿ ರೂಪಾಯಿಗಳನ್ನು ಮುಟ್ಟುತ್ತದೆ. ಏಕೆ ಇದಕ್ಕೆ ಇಷ್ಟೊಂದು ಕಿಮ್ಮತ್ತು? ಸುಗಂಧದ್ರವ್ಯ ವ್ಯಾಪಾರದಲ್ಲಿ ಇದರ ಬಳಕೆ ಇದೆ. ಪರಿಮಳ ಹೊರಹೋಗದಂತೆ ಇದು ಕಾಪಿಡುತ್ತದೆ ಎಂಬುದನ್ನು ಕಂಡುಕೊಂಡುಬಿಟ್ಟಿದ್ದಾರೆ. ಇದು ಕಸ್ತೂರಿಯಂತೆ ಬಳಸುವ ಸುಗಂಧ ದ್ರವ್ಯವಲ್ಲ. ಒಂದರ್ಥದಲ್ಲಿ ಪ್ರಿಸರ್ವೇಟಿವ್.

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಜಗತ್ತಿನ ಸುಗಂಧ ದ್ರವ್ಯದ ವ್ಯಾಪಾರವೆಲ್ಲ ತಿಮಿಂಗಿಲದ ಈ ವಾಂತಿಯ ಮೇಲೇ ನಿಂತಿದೆಯೇ? ಇಲ್ಲ, ಹಾಗಿದ್ದರೆ ಇರುವ ಎಲ್ಲ ಕಾನೂನನ್ನೂ ಮುರಿದು ಈ ಹೊತ್ತಿಗೆ ಸಾಗರದ ಎಲ್ಲ ಸ್ಪರ್ಮ್ ವೇಲ್‌ಗಳ ಮಾರಣಹೋಮವಾಗಬೇಕಾಗಿತ್ತು. ಕ್ರಿ.ಶ. 1800ರ ಆಜುಬಾಜು ಸ್ಪರ್ಮ್ ವೇಲ್‌ಗಳೂ ಸೇರಿದಂತೆ ತೈಲಕ್ಕಾಗಿ, ಮೂಳೆಗಾಗಿ ಈ ಅಂಬರ್ಗ್ರಿಸ್‌ಗಾಗಿ 50,000 ತಿಮಿಂಗಿಲಗಳು ವಾರ್ಷಿಕ ವಧೆಯಾಗುತ್ತಿದ್ದವೆಂದು ಒಂದು ಅಂದಾಜು. ಈಗ ಅಂತರರಾಷ್ಟ್ರೀಯ ಕಾನೂನು ಜಾರಿಯಲ್ಲಿದೆ (1986), ತಿಮಿಂಗಿಲಗಳನ್ನು ಕೊಲ್ಲುವಂತಿಲ್ಲ. ಆದರೆ ಅದರ ವಿಸರ್ಜನೆಯನ್ನು ಸಂಗ್ರಹಿಸಲು ಕಾನೂನೇಕೆ ಅಡ್ಡ ಬರಬೇಕು ಎಂದು ಕೇಳುವ ಹಲವು ದೇಶಗಳಿವೆ. ಬ್ರಿಟನ್, ಫ್ರಾನ್ಸ್, ಸ್ವಿಟ್ಜರ್ಲೆಂಡ್ ಇಂಥ ವಾದ ಮಂಡಿಸುತ್ತಿವೆ.

ಭಾರತದಲ್ಲಿ ಅಂಬರ್ಗ್ರಿಸ್ ಕೂಡ ಸಂಗ್ರಹಿಸುವಂತಿಲ್ಲ, ಮಾರುವಂತಿಲ್ಲ. ವಾಸ್ತವವಾಗಿ ಸುಗಂಧ ದ್ರವ್ಯವನ್ನು ಕಾಪಿಡಲು ಅಂಬರ್ಗ್ರಿಸ್ ಬೇಕಾಗುವುದಿಲ್ಲ. ರಾಸಾಯನಿಕ ಕೈಗಾರಿಕೆಗಳು ಈಗ ಅಂಬ್ರಾಕ್ಸೈಡ್ ಎಂಬ ಸಂಶ್ಲೇಷಿತ ರಾಸಾಯನಿಕವನ್ನು ಉತ್ಪಾದಿಸುತ್ತಿವೆ. ಜಗತ್ತು ನೆಚ್ಚಿರುವುದು ಇದನ್ನೇ.

ಚುರುಮುರಿ

ತುರ್ತುಪರಿಸ್ಥಿತಿ!

• ಬಿ.ಎನ್.ಮಲ್ಲೇಶ್

ತಿಂಡಿ ಕೊಟ್ಟು ಬಹಳ ಹೊತ್ತಾದರೂ ಮುಖ ಸೊಟ್ಟಗೆ ಮಾಡಿಕೊಂಡು ತಿನ್ನಲು ಒದ್ದಾಡುತ್ತಿದ್ದ ತೆಪರೇಸಿಯನ್ನು ಕಂಡು ಪಮ್ಮಿ ಕವಿ ಡುಂಡಿರಾಜರ ಸ್ಟೈಲ್‌ನಲ್ಲಿ ಕೇಳಿದಳು ‘ಪ್ರಿಯ, ನಿಮ್ಮ ಮುಖವೇಕೆ ಕಪ್ಪಿಟ್ಟದೆ?’

ಅದಕ್ಕೆ ತೆಪರೇಸಿ, ‘ನೀ ಮಾಡಿದ ಉಪ್ಪಿಟ್ಟಲ್ಲಿ ಎಣ್ಣೆಯೇ ಇಲ್ಲವಲ್ಲ ಪ್ರಿಯೆ, ನುಂಗಲು ಕಷ್ಟವಾಗುತ್ತಿದೆ’ ಎಂದ.

ಮಧ್ಯಾಹ್ನವೂ ಅದೇ ಕತೆ. ‘ಬೇಳೆ ಸಾರಲ್ಲಿ ಬೇಳೆ, ತರಕಾರಿ ಪಲ್ಯದಲ್ಲಿ ತರಕಾರಿಯೇ ಇಲ್ಲವಲ್ಲ ಪ್ರಿಯೆ’ ಎಂದು ರಾಗ ಎಳೆದ ತೆಪರೇಸಿ ಮೇಲೆ ಪಮ್ಮಿಗೆ ಸಿಟ್ಟು ಬಂತು.

‘ಸುಮ್ನೆ ಕೊಟ್ಟದ್ದು ತಿಂದೋಗೋಕಾಗಲ್ವ? ಎಣ್ಣೆ, ತರಕಾರಿ, ಬೇಳೆ ಎಲ್ಲ ಎಷ್ಟು ರೇಟಾಗಿದೆ ಗೊತ್ತಾ? ನೀವು ತರೋ ಸಂಬಳದಲ್ಲಿ ಇಷ್ಟೇ ಮಾಡೋಕಾಗೋದು’ ಎಂದು ರೇಗಿದಳು.

‘ಪದ್ಯಂ ವದ್ಯಂ, ಗದ್ಯಂ ಹೃದ್ಯಂ’ ಅಂತ ಕೇಳಿದ್ದೆ. ಇಲ್ಲಿ ‘ಗದ್ಯಂ ಯುದ್ಧಂ’ ತರ ಆಯ್ತಲ್ಲಪ್ಪ ಇದು ಎಂದುಕೊಂಡ ತೆಪರೇಸಿ ‘ನಾನೇನ್ ಮಾಡ್ಲಿ? ಪೆಟ್ರೋಲು, ಗ್ಯಾಸು ಎಲ್ಲ ರಾಕೆಟ್ ತರ ಏರ್ತಾ ಇವೆ. ಸಂಬಳ ಮಾತ್ರ ಅಷ್ಟೇ ಇದೆ’ ಎಂದು ತಿರುಗೇಟು ಕೊಟ್ಟ.

ಸಂಜೆ ಟೀ ಬರಲಿಲ್ಲ. ಅಡುಗೆ ಮನೆಯಲ್ಲಿ ಪಾತ್ರೆಗಳು ತಾಲಿಬಾನಿಯರ ಥರ ಸದ್ದು ಮಾಡತೊಡಗಿದವು. ಅದೇ ವೇಳೆಗೆ ‘ಏನ್ ಮಾಡ್ತಿದೀಯೋ ದೋಸ್ತಾ’ ಎನ್ನುತ್ತ ಗುಡ್ಡೆ ವಕ್ಕರಿಸಿದ.

‘ವಿಷಯ ಗೊತ್ತಾತ, ಶ್ರೀಲಂಕಾದಲ್ಲಿ ಆಹಾರ ತುರ್ತು ಪರಿಸ್ಥಿತಿಯಂತೆ. ಪಾಪ ಅಲ್ವ? ಎಲ್ಲಿ ಪಮ್ಮಕ್ಕ ಕಾಣ್ತಿಲ್ಲ? ಜಲ್ದಿ ಚಾ ಮಾಡೋಕೇಳು’ ಎಂದ.

ತಾಲಿಬಾನ್ ಮಧ್ಯ ಇವನೊಬ್ಬ ತೆಲಿಬ್ಯಾನಿ ಎಂದು ಗೊಣಗಿದ ತೆಪರೇಸಿ, ‘ಜಾಸ್ತಿ ಅವಾಜ್ ಮಾಡ್ಬೇಡ, ಶ್ರೀಲಂಕಾದಲ್ಲಿ ಆಹಾರ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ರೆ ನಮ್ಮನೆ ಅಡುಗೆ ಮನೇಲಿ ತುರ್ತುಪರಿಸ್ಥಿತಿ ಜಾರಿಯಲ್ಲಿದೆ, ಹುಷಾರು’ ಎಂದ. ಗುಡ್ಡೆಗೆ ಅರ್ಥವಾಯಿತು.

ಪಿಟಿಕ್ಕೆನ್ನದೆ ಅಫ್ಗಾನಿಸ್ತಾನದಿಂದ ಅಮೆರಿಕ ಕಾಲ್ಕಿತ್ತ ಹಾಗೆ ಮನೆಯಿಂದ ತೆಪರೇಸಿ ಮೆಲ್ಲಗೆ ಜಾಗ ಖಾಲಿ ಮಾಡಿದ.

ಸಂಗತ

ಜಲ ಸ್ವಾವಲಂಬನೆಗೆ ಇದೋ ಹಾದಿ

ಮಳೆ ನೀರನ್ನು ಸಂಗ್ರಹಿಸಿಕೊಂಡು, ತ್ಯಾಜ್ಯ ನೀರನ್ನು ಶುದ್ಧೀಕರಿಸಿ, ಸರಬರಾಜಿನಲ್ಲಾಗುವ ಸೋರಿಕೆ ತಡೆದರೆ ಬೃಹತ್ ನಗರಗಳು ನೀರಿನ ಬಳಕೆಯಲ್ಲಿ ಸ್ವಾವಲಂಬಿಯಾಗುತ್ತವೆ

• ಗುರುರಾಜ್ ಎಸ್. ದಾವಣಗೆರೆ

ಎಪ್ಪತ್ತೈದನೆಯ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮೇಕೆದಾಟು ಯೋಜನೆ ಖಚಿತ ಎಂದು ಹೇಳುತ್ತಾ, ಅಮೃತ ನಗರೋತ್ಥಾನ ಯೋಜನೆಯ ಅಡಿಯಲ್ಲಿ ಬೆಂಗಳೂರಿನ 75 ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದಿದ್ದಾರೆ. ಅದರ ಪ್ರಕಾರ ಕೆರೆಗಳ ಅಭಿವೃದ್ಧಿಯಾದರೆ, ನಗರಕ್ಕೆ ದೂರದಿಂದ ನೀರು ತರುವ ಅಗತ್ಯ ಬರಲಾರದು.

ಅವರ ಹೇಳಿಕೆಗೆ ಪೂರಕವಾದ ಅನೇಕ ಸಕಾರಾತ್ಮಕ ಅಂಶಗಳಿವೆ. ಕೆರೆಗಳ ಅಭಿವೃದ್ಧಿಗೆ ಅಣೆಕಟ್ಟೆಗೆ ಬೇಕಾಗುವಂತೆ ಸಾವಿರಾರು ಕೋಟಿ ರೂಪಾಯಿ ಬೇಕಿಲ್ಲ. ಬೆಂಗಳೂರಿನಲ್ಲಿ ವಾರ್ಷಿಕ ಸರಾಸರಿ 800 ಮಿ.ಮೀ. ಮಳೆ ಬೀಳುತ್ತದೆ. ಅದರ ಅರ್ಧದಷ್ಟನ್ನು ಹಿಡಿದಿಟ್ಟುಕೊಂಡು ಬಳಸಿದರೂ ಬೆಂಗಳೂರಿನ ನೀರಿನ ಬವಣೆ ಬಹುಪಾಲು ಬಗೆಹರಿಯುತ್ತದೆ. ಕಾವೇರಿ ನದಿಯ ಗಣನೀಯ ಪಾಲು ನೀರು ಈಗಾಗಲೇ ಬೆಂಗಳೂರಿಗೆ ಹರಿದು ಬರುತ್ತಿದೆ.

ಕೆರೆತಜ್ಞ ಶಿವಾನಂದ ಕಳವೆ ಅವರು ಹೇಳುವಂತೆ, ನಗರದ ಎಲ್ಲ ಕೆರೆಗಳನ್ನು ಸರಣಿ ಕೆರೆಗಳಂತೆ ಜೋಡಿಸಿಬಿಟ್ಟರೆ ಬೆಂಗಳೂರಿನ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕುತ್ತದೆ. ಕೆರೆಗಳ ಹೂಳೆತ್ತಿ ಒತ್ತುವರಿಯನ್ನು ತೆರವುಗೊಳಿಸಿ, ಏರಿಗಳನ್ನು ಭದ್ರಗೊಳಿಸಿದರೆ ನಮ್ಮ ನಗರದ ವಿಶಾಲ ಕೆರೆಗಳು ಕುಡಿಯುವ ಮತ್ತು ಬಳಕೆಗೆ ಬೇಕಾಗುವ ನೀರೊದಗಿಸುತ್ತವೆ. ಆಗ ಅಪಾರ ಪರಿಸರ ನಾಶ ಮಾಡುತ್ತಿರುವ ಎತ್ತಿನಹೊಳೆ ಮತ್ತು ಉದ್ದೇಶಿತ ಮೇಕೆದಾಟು ಯೋಜನೆಗಳೆರಡೂ ಬೇಕಾಗುವುದಿಲ್ಲ.

ಬೆಂಗಳೂರು ನಗರದ ನೀರಿನ ಸವಾಲು ಎದುರಿಸಲು ಇನ್ನೂ ಒಂದು ಸುವರ್ಣಾವಕಾಶ ಇದೆ. ಅದು ನಗರದ ಮನೆ, ಉದ್ಯಮ, ಹೋಟೆಲ್, ಶಾಲೆ, ಮಾಲ್ ಮತ್ತಿತರ ಜಾಗಗಳಿಂದ ಬಳಕೆಯ ನಂತರ ಚರಂಡಿ, ಕಾಲುವೆಗಳನ್ನು ಸೇರುವ ನೀರನ್ನು ಸಂಪೂರ್ಣವಾಗಿ ಪುನರ್ಬಳಕೆ ಮಾಡುವುದು! ಅದಕ್ಕೆ ಬೇಕಾದ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಲಭ್ಯವಿದೆ. ಬಳಸಿ ಯಶಸ್ವಿಯಾದ ಅನೇಕ ಉದಾಹರಣೆಗಳು ವಿಶ್ವದಾದ್ಯಂತ ಇವೆ.

ಇಸ್ರೇಲ್‌ನಲ್ಲಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಬೀಳುವ ಮಳೆಯ ಕಾಲುಭಾಗ ಮಾತ್ರ ಲಭ್ಯವಿದ್ದರೂ ಇಡೀ ದೇಶದಲ್ಲಿ ನೀರಿನ ಅಭಾವ ತಲೆದೋರದಂತೆ ವ್ಯವಸ್ಥೆ ಕಲ್ಪಿಸಿಕೊಂಡಿದ್ದಾರೆ. ನಮೀಬಿಯಾದಂಥ ಪುಟ್ಟದೇಶ ತನ್ನ ಪ್ರಜೆಗಳು ಬಳಸಿ ಬಿಸಾಡುವ ತ್ಯಾಜ್ಯ ನೀರನ್ನೆಲ್ಲ ಶುದ್ಧೀಕರಿಸಿ ಕುಡಿಯಲು ಬಳಸುತ್ತಿದೆ!

ಬೆಂಗಳೂರಿನಷ್ಟೇ ವಿಶಾಲವಾಗಿರುವ ದ್ವೀಪರಾಷ್ಟ್ರ ಸಿಂಗಪುರ ಕುಡಿಯುವ ನೀರಿನ ಅರ್ಧದಷ್ಟನ್ನು ಪಕ್ಕದ ಮಲೇಷ್ಯಾದಿಂದ ತರಿಸಿಕೊಳ್ಳುತ್ತಿತ್ತು. ಈಗ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ತನ್ನ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಕುಡಿಯಲು ಮತ್ತು ಉದ್ಯಮಗಳಿಗೆ ಬಳಸುತ್ತಿದೆ. ಜೊತೆಗೆ ಸಮುದ್ರದ ನೀರಿನ ಉಪ್ಪನ್ನು ಬೇರ್ಪಡಿಸುವುದರ ಜೊತೆಗೆ, ಬೀಳುವ ಮಳೆಯ ಪ್ರತೀ ಹನಿಯನ್ನೂ ಸಂಗ್ರಹಿಸಿ ಬಳಸುತ್ತಿದೆ. ಜಾಗದ ಕೊರತೆ ಇರುವ ಸಿಂಗಪುರದಲ್ಲಿ ಶುದ್ಧೀಕರಣ ಘಟಕಗಳನ್ನು 250 ಅಡಿ ಆಳದಲ್ಲಿ ಭೂಮ್ಯಂತರ್ಗತಗೊಳಿಸಿ 48 ಕಿ.ಮೀ. ಉದ್ದದ ಸುರಂಗಗಳ ಮೂಲಕ ತ್ಯಾಜ್ಯ ನೀರನ್ನು ಹಾಯಿಸಿ ಶುದ್ಧಗೊಳಿಸಲಾಗುತ್ತಿದೆ. ಎರಡು- ಮೂರು ಹಂತಗಳಲ್ಲಿ ತಿಳಿಗೊಳಿಸಿದ ನಂತರ ಅಲ್ಟ್ರಾವಯಲೆಟ್ ಕಿರಣ ಹಾಯಿಸಿ ಅತ್ಯಂತ ಶುದ್ಧ ನೀರನ್ನು ಉತ್ಪಾದಿಸಿ ಕಂಪ್ಯೂಟರ್‌ಗಳ ಮೈಕ್ರೊಚಿಪ್ ತಯಾರಿಕೆಗೂ ಬಳಸಲಾಗುತ್ತಿದೆ! ಶುದ್ಧೀಕರಿಸಿದ ತ್ಯಾಜ್ಯ ನೀರು ಸಿಂಗಪುರದ ಶೇ 40ರಷ್ಟು ಬೇಡಿಕೆ ಪೂರೈಸುತ್ತಿದೆ.

ಬೃಹತ್ ಅಣೆಕಟ್ಟು ಯೋಜನೆಗಳಿಗೆ ಹೋಲಿಸಿದರೆ ಶುದ್ಧೀಕರಣ ಘಟಕ ನಿರ್ಮಾಣಕ್ಕೆ ತಗಲುವ ಖರ್ಚು ಶೇ 25ರಷ್ಟು ಮಾತ್ರ. ಬೆಂಗಳೂರಿಗೆ ಪ್ರತಿದಿನ ಕಾವೇರಿ ನದಿಯಿಂದ 140 ಕೋಟಿ ಲೀಟರ್ ನೀರು ಸರಬರಾಜಾಗುತ್ತದೆ. ಮನೆಗಳ ಬೋರ್‌ವೆಲ್ ಮತ್ತು ಮಳೆನೀರು ಸಂಗ್ರಹ ವ್ಯವಸ್ಥೆಯಿಂದ ಬೇಡಿಕೆಯ ಸ್ವಲ್ಪ ಭಾಗ ಪೂರೈಕೆಯಾಗುತ್ತದೆ. ಬೆಂಗಳೂರಿನಂಥ ಮೆಟ್ರೊ ನಗರದ ಪ್ರಜೆಗೆ ದಿನಕ್ಕೆ 150ರಿಂದ 200 ಲೀಟರ್ ನೀರು ಬೇಕೆಂಬ ಲೆಕ್ಕವಿದೆ.



ತ್ಯಾಜ್ಯ ನೀರನ್ನು ಮರುಬಳಕೆ ಮಾಡುವ ವ್ಯವಸ್ಥೆ ಹೊಂದಿರುವ ಬೃಹತ್ ಉದ್ಯಮಗಳು, ಅಪಾರ್ಟ್‌ಮೆಂಟ್, ಮಾಲ್‌ಗಳು ಕೊಳವೆ ಬಾವಿಯ ನೀರನ್ನೇ ಅವಲಂಬಿಸಿವೆ. ಅನೇಕ ಮನೆಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಇದೆ. ಆದರೂ ನೀರಿನ ಕೊರತೆ ಇದೆ. ಚೆನ್ನೈ ನಗರದಲ್ಲಿ ಮನೆ, ಉದ್ಯಮ, ಮದುವೆ ಛತ್ರ, ಆಸ್ಪತ್ರೆ, ಶಾಲೆ, ಹೋಟೆಲ್, ಹಾಸ್ಟೆಲ್‌ಗಳಿಗೆ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ನಮ್ಮಲ್ಲೂ ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ.

ಜಲಸಂಪನ್ಮೂಲ ತಜ್ಞರು ದಕ್ಷಿಣ ಭಾರತದಲ್ಲೇ ಹೆಚ್ಚಾಗಿದ್ದಾರೆ. ಬೀಳುವ ಮಳೆ ನೀರನ್ನು ಅವರ ಅನುಭವ ಮತ್ತು ಮಾರ್ಗದರ್ಶನದಲ್ಲಿ ಸಂಗ್ರಹಿಸಿಕೊಂಡು, ತ್ಯಾಜ್ಯ ನೀರನ್ನು ಶುದ್ಧೀಕರಿಸಿ, ಸರಬರಾಜಿನಲ್ಲಾಗುವ ಸೋರಿಕೆಯನ್ನು ತಡೆದರೆ ಬೃಹತ್ ನಗರಗಳು ನೀರಿನ ಬಳಕೆಯಲ್ಲಿ ಸಂಪೂರ್ಣ ಸ್ವಾವಲಂಬಿಯಾಗುತ್ತವೆ. ಅಣೆಕಟ್ಟು, ಪೈಪ್ ಅಳವಡಿಕೆಗೆ ನಡೆಸುವ ಕಾಮಗಾರಿಯನ್ನು ಕೆರೆಗಳನ್ನು ಸರಿಮಾಡಲು ಬಳಸಿದರೆ ಅರಣ್ಯ ನಾಶವೂ ತಪ್ಪುತ್ತದೆ ಮತ್ತು ಕಡಿಮೆ ಖರ್ಚಿನಲ್ಲಿ ಬೇಕಾದ ನೀರೂ ಸಿಗುತ್ತದೆ.

ಬೆಂಗಳೂರಿಗೆ ಸೈನ್ಸ್ ಸಿಟಿ, ಲೇಕ್ ಸಿಟಿ, ಸ್ಪೇಸ್ ಟೆಕ್ನಾಲಜಿ ಸಿಟಿ ಎಂಬ ಬಿರುದುಗಳಿವೆ. ಅದು ಸಾರ್ಥಕವಾಗಬೇಕಾದರೆ, ತಂತ್ರಜ್ಞಾನ ಬಳಸಿಕೊಂಡು ತನಗೆ ಬೇಕಾದ ನೀರನ್ನು ತಾನೇ ಪಡೆಯುವಂತಾಗಬೇಕು. ಪರಿಸರದ ಮೇಲಿನ ಒತ್ತಡ ತಡೆಯಬೇಕು.

ವಾಚಕರ ವಾಣಿ

ಮನೆಯಲ್ಲೇ ನೆನೆಯೋಣ ವಿಘ್ನ ನಿವಾರಕನ

ಕೋವಿಡ್ ಆತಂಕ ಪೂರ್ಣ ಮರೆಯಾಗಿದೆಯೇ? ಇಲ್ಲ, ಮೂರನೇ ಅಲೆಯ ಗುಮ್ಮ ಕಣ್ಮುಂದಿದೆ. ಪರಿಸ್ಥಿತಿ ಹೀಗಿರುವಾಗಲೂ ಹಬ್ಬಗಳ ಆಚರಣೆ ವಿಚಾರ ಹೆಚ್ಚಿನ ಚರ್ಚೆಗೊಳಗಾಗುತ್ತಿದೆ. ಅದರಲ್ಲೂ ಸಾರ್ವಜನಿಕ ಗಣೇಶೋತ್ಸವ ಮುನ್ನೆಲೆಗೆ ಬಂದಿದೆ. ಭಕ್ತಿಗಿಂತ ಆಡಂಬರಕ್ಕೆ ಹೆಚ್ಚು ಒತ್ತು ಇರುವುದನ್ನು ಬಹುಶಃ ಯಾರೂ ಅಲ್ಲಗಳೆಯಲಿಕ್ಕಿಲ್ಲ. ಗಣೇಶೋತ್ಸವದ ನೆಪದಲ್ಲಿ ಕೆಲವರು ಬಲವಂತವಾಗಿ, ಬೆದರಿಸಿ ಚಂದಾ ಎತ್ತುವುದುಂಟು. ಶಬ್ದಮಾಲಿನ್ಯದಿಂದ ಜನರ ನೆಮ್ಮದಿ ಹಾಳು ಮಾಡುವ ಪ್ರವೃತ್ತಿಯೂ ಹೆಚ್ಚುತ್ತಿದೆ. ಇಂಥ ಭಕ್ತಿಯನ್ನು ವಿನಾಯಕ ಬಯಸುತ್ತಾನೆಯೇ?

ಅಷ್ಟಕ್ಕೂ ಕೋವಿಡ್ ಕರಿನೆರಳಿನಲ್ಲಿ ಈ ಬಗೆಯ ಆಚರಣೆ ತೀರಾ ಅಗತ್ಯವೇ? ಸೋಂಕಿನ ಆತಂಕದ ಈ ಸಮಯದಲ್ಲಿ, ಮನೆಯಲ್ಲಿಯೇ ಚಿಕ್ಕ ಮೂರ್ತಿ ಪ್ರತಿಷ್ಠಾಪಿಸಿ ನಿಜವಾದ ಭಕ್ತಿಯೊಂದಿಗೆ ವಿಘ್ನ ನಿವಾರಕನನ್ನು ನೆನೆದರೆ ಸಾಕಲ್ಲವೇ?

ನಾರಾಯಣರಾವ್ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಕ್ರೀಡಾಪಟುಗಳ ನಡುವೆ ತಾರತಮ್ಯವೇಕೆ?

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಚಿನ್ನದ ಪದಕವನ್ನು ಮತ್ತು ಇತರ ಕ್ರೀಡಾಪಟುಗಳು ಬೆಳ್ಳಿ, ಕಂಚಿನ ಪದಕಗಳನ್ನು ಮುಡಿಗೇರಿಸಿಕೊಂಡಾಗ ದೇಶದಾದ್ಯಂತ ಸಂಭ್ರಮ ವ್ಯಕ್ತವಾಯಿತು, ಸಾಮಾಜಿಕ ಜಾಲತಾಣಗಳಲ್ಲಿ ಅಭಿನಂದನೆಯ ಮಹಾಪೂರವೇ ಹರಿದುಬಂತು. ಆದರೆ, ಅದೇ ಪ್ಯಾರಾ ಒಲಿಂಪಿಕ್ಸ್‌ನ ಜಾವಲಿನ್ ಎಸೆತದಲ್ಲಿ ಸುಮಿತ್ ಅಂಟಿಲ್ ಹಾಗೂ ಏರ್ ರೈಫಲ್‌ನಲ್ಲಿ ಅವನಿ ಲೇಖರ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡಾಗ ಸಾಮಾಜಿಕ ಜಾಲತಾಣಗಳಲ್ಲಿ ಮೊದಲಿನ ಸಂಭ್ರಮ ಕಂಡುಬರಲಿಲ್ಲ, ಶುಭಾಶಯಗಳ ಮಹಾಪೂರವೂ ಹರಿದು ಬರಲಿಲ್ಲ. ಇನ್ನಾದರೂ ನಮ್ಮ ಮನಃಸ್ಥಿತಿಯನ್ನು ಬದಲಿಸಿಕೊಂಡು, ಎಲ್ಲರನ್ನೂ ಸಮಾನವಾಗಿ ಕಾಣೋಣ. ಆಗ ಮಾತ್ರ ಅಂಗವಿಕಲ ಕ್ರೀಡಾಪಟುಗಳಿಗೆ ಚೈತನ್ಯ ತುಂಬಲು ಸಾಧ್ಯ.

ನಿಂಗಪ್ಪ ಮಾಳಶೆಟ್ಟಿ, ಹೊಸಪೇಟೆ

ಭಾಷೆಯ ಅಸ್ಮಿತೆ ಉಳಿವಿಗಾಗಿ ಶ್ರಮಿಸೋಣ

ಮೆಟ್ರೊ ಕಾರ್ಯಕ್ರಮದಲ್ಲಿ ಕನ್ನಡವನ್ನು ಕಡೆಗಣಿಸಿದ್ದರ ವಿರುದ್ಧ ಶಿಸ್ತು ಕ್ರಮಕ್ಕೆ ಸಚಿವ ಸುನಿಲ್ ಕುಮಾರ್ ಅವರು ಸೂಚಿಸಿರುವುದು ಅಭಿನಂದನಾರ್ಹ (ಪ್ರ.ವಾ., ಸೆ. 2). ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ರಾಜಧಾನಿ ಬೆಂಗಳೂರಿನಲ್ಲಿ ನಮ್ಮ ರಾಜ್ಯ ಭಾಷೆಯ ಬಳಕೆ ಬಗ್ಗೆ ಅಸಡ್ಡೆ ತೋರುವುದನ್ನು ತಡೆಯಲು ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ ಎನ್ನುವುದಕ್ಕೆ, ಮೈಸೂರು ರಸ್ತೆ- ಕೆಂಗೇರಿಯ ಮೆಟ್ರೊ ವಿಸ್ತರಿತ ಮಾರ್ಗದ ಉದ್ಘಾಟನಾ ಕಾರ್ಯಕ್ರಮದ ವೇದಿಕೆಯ ಪರದೆಯ ಮೇಲೆ ಕನ್ನಡ ಭಾಷೆಯನ್ನು ಕಡೆಗಣಿಸಿದ್ದೇ ನಿದರ್ಶನ. ನಮ್ಮ ಭಾಷೆಗೆ ತೊಡಕುಂಟಾಗದಂತೆ ನೋಡಿಕೊಳ್ಳಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದೆ. ಆದರೂ ಇದರ ಆದೇಶಕ್ಕೆ ಯಾವುದೇ ಸಂಸ್ಥೆ ಕವಡೆಕಾಸಿನ ಕಿಮ್ಮತ್ತನ್ನೂ ನೀಡದಿರುವುದು ವಿಪರ್ಯಾಸ.

ಈಗ ಸಚಿವರು ಸೂಚಿಸಿರುವಂತೆ ಶಿಸ್ತು ಕ್ರಮ ಜರುಗಿಸಿದಾಗ ಮಾತ್ರ ನಮ್ಮ ನೆಲ, ಜಲ, ಭಾಷೆಯ ಸ್ವಂತಿಕೆ ಉಜ್ವಲವಾಗುತ್ತದೆ. ಈ ಆದೇಶ ಬರೀ ಕಾಗದದ ರೂಪದಲ್ಲಿ ಉಳಿಯದೆ, ಅದರ ಮೂಲ ಉದ್ದೇಶ ಈಡೇರುವವರೆಗೆ ಸಂಬಂಧಿಸಿದ ಎಲ್ಲರೂ ಶ್ರಮಿಸಬೇಕು. ಕನ್ನಡದ ಬಗ್ಗೆ ಇಲ್ಲಿಯವರೆಗೆ ತೋರಿರುವ ನಿರ್ಲಕ್ಷ್ಯ ಸಾಕು. ಈಗಲಾದರೂ ಕನ್ನಡದ ಅಸ್ಮಿತೆ ಉಳಿಸಲು ಶ್ರಮಿಸೋಣ.

ಚಾಂದ್ ಬಾಷ, ಅರಸೀಕೆರೆ

ಶಾಲೆ ಆರಂಭ: ಸ್ವಾಗತಾರ್ಹ ನಿರ್ಧಾರ

ರಾಜ್ಯ ಸರ್ಕಾರ ಇದೇ 6ರಿಂದ 6, 7 ಮತ್ತು 8ನೇ ತರಗತಿಗಳನ್ನು ಪ್ರಾರಂಭಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಸುಮಾರು ಒಂದೂವರೆ ವರ್ಷ ಕಾಲ ಈ ಮಕ್ಕಳು ಶಿಕ್ಷಣದಿಂದ ದೂರವಿದ್ದರು. ಲೆಕ್ಕಕ್ಕಷ್ಟೇ ಎಂಬಂತಿದ್ದ ಆನ್‌ಲೈನ್ ತರಗತಿಗಳಿಗೆ ಎಲ್ಲ ವಿದ್ಯಾರ್ಥಿಗಳನ್ನೂ ತಲುಪಲು ಸಾಧ್ಯವಾಗಿಲ್ಲ. ದುಬಾರಿ ಮೊಬೈಲ್ ಹಾಗೂ ನೆಟ್‌ವರ್ಕ್ ಸಮಸ್ಯೆ ದೊಡ್ಡ ಸವಾಲಾಗಿತ್ತು. ಈ ನಡುವೆ ಪ್ರಾರಂಭಿಸಿದ ವಿದ್ಯಾಗಮ, ವಠಾರ ಶಾಲೆಗಳು ಹೆಸರಿಗೆ ಮಾತ್ರ ಎಂಬಂತಿದ್ದವು.

ಅಗತ್ಯವಾದ ಸುರಕ್ಷಾ ಕ್ರಮಗಳನ್ನು ಕೈಗೊಂಡು ಶಾಲೆಯನ್ನು ಪ್ರಾರಂಭಿಸುವುದೊಂದೇ ಸಾಧ್ಯವಿರುವ ಮಾರ್ಗ. ಕಲಿಕೆಯಿಂದ ದೂರವಿದ್ದ ವಿದ್ಯಾರ್ಥಿಗಳನ್ನು ಮತ್ತೆ ಆ ವಾತಾವರಣಕ್ಕೆ ಒಗ್ಗಿಸಲು ಕನಿಷ್ಠ ತಿಂಗಳಾದರೂ ಅಗತ್ಯವಿದೆ. ಸರ್ಕಾರ ಪ್ರಸ್ತುತ ತೆಗೆದುಕೊಂಡಿರುವ ನಿರ್ಧಾರದ ಜೊತೆಗೆ ಸಾಧ್ಯವಾದಷ್ಟು ಬೇಗ ಒಂದರಿಂದ ಐದನೇ ತರಗತಿಗಳನ್ನೂ ಪ್ರಾರಂಭಿಸಲು ಮುಂದಾಗಲಿ ಹಾಗೂ ಬಿಸಿಯೂಟದ ವ್ಯವಸ್ಥೆಯೂ ಪ್ರಾರಂಭವಾಗಲಿ.

ಈ.ಬಸವರಾಜು, ಬೆಂಗಳೂರು

ಗುತ್ತಿಗೆಗೆ ಸರ್ಕಾರಿ ಆಸ್ತಿ: ಅಸಾಂವಿಧಾನಿಕ ಕ್ರಮ

ಸಾರ್ವಜನಿಕ ಹಣಕಾಸುಶಾಸ್ತ್ರದಲ್ಲಿ ಸರ್ಕಾರವೊಂದು ತನಗೆ ಅಗತ್ಯವಾದ ಸಂಪನ್ಮೂಲ ಸಂಗ್ರಹಿಸಿಕೊಳ್ಳಲು ತೆರಿಗೆಗಳು, ಸಾಲ ಎತ್ತುವುದು ಮತ್ತು ಹಣ ಮುದ್ರಿಸುವುದು ಎಂದು ಮೂರು ಮಾರ್ಗಗಳನ್ನು ನೀಡಲಾಗಿದೆ. ಅದರಲ್ಲಿ ಹಣಕಾಸು ಸಂಪನ್ಮೂಲಕ್ಕೆ ಸಾರ್ವಜನಿಕ ಆಸ್ತಿಗಳನ್ನು ಗುತ್ತಿಗೆಗೆ ನೀಡುವ, ಮಾರಾಟ ಮಾಡುವ ಬಗ್ಗೆ ಯಾವ ಚರ್ಚೆಯೂ ಇಲ್ಲ. ಇಂದು ನಮ್ಮ ಒಕ್ಕೂಟ ಸರ್ಕಾರವು ಇಂತಹ ಸಾರ್ವಜನಿಕ ಆಸ್ತಿಗಳನ್ನು, ಭೂಮಿಯನ್ನು ಮತ್ತು ಸರ್ಕಾರಿ ಉದ್ದಿಮೆಗಳನ್ನು ಖಾಸಗಿ ಬಂಡವಾಳಿಗರಿಗೆ ಗುತ್ತಿಗೆಗೆ ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸಲು ಹೊರಟಿದೆ. ಇದು ಸಂವಿಧಾನ ವಿರೋಧಿ ಕ್ರಮವಾಗಿದೆ. ಏಕೆಂದರೆ ಈ ಕಾರ್ಯಕ್ರಮದ ಮೂಲಕ ಸಂಗ್ರಹವಾಗುವ ಸಂಪನ್ಮೂಲವನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಕ್ರಮ ಇದರಲ್ಲಿ ಇಲ್ಲ. ಇದು ಸಂವಿಧಾನಾತ್ಮಕ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದೆ. ಮೇಲಾಗಿ ಈ ಆಸ್ತಿಗಳನ್ನು ಕಳೆದ ಏಳು ದಶಕಗಳಿಂದ ಪ್ರತಿಯೊಬ್ಬ ಪ್ರಜೆಯೂ ನೀಡಿರುವ ತೆರಿಗೆಯ ಬಂಡವಾಳದಿಂದ ನಿರ್ಮಾಣ ಮಾಡಲಾಗಿದೆ.

ಇದೀಗ ಒಂದು ರೂಪಾಯಿ ಬಂಡವಾಳ ಹಾಕದೆ ಕೇವಲ ಲಾಭ ಗುಡ್ಡೆ ಹಾಕಿಕೊಳ್ಳಲು ಗುತ್ತಿಗೆಗೆ ನೀಡಲಾಗುತ್ತದೆ. ಈ ಗುತ್ತಿಗೆದಾರರು ಆಸ್ತಿಗಳಿಂದ ಮಾಡಿಕೊಳ್ಳುವ ಲಾಭದಲ್ಲಿ ಸರ್ಕಾರಕ್ಕೆ ಯಾವುದೇ ಪಾಲು ಇಲ್ಲ. ಗುತ್ತಿಗೆ ಅವಧಿ ಮುಗಿದ ಮೇಲೆ ಆಸ್ತಿಗಳನ್ನು ಯಾವ ಸ್ಥಿತಿಯಲ್ಲಿ ಹಿಂತಿರುಗಿಸಲಾಗುತ್ತದೆ ಎಂಬುದರ ಬಗ್ಗೆಯೂ ಕರಾರುಗಳಿದ್ದಂತೆ ಕಾಣುವುದಿಲ್ಲ. ಈ ‘ನ್ಯಾಷನಲ್ ಮಾನಿಟೈಸೇಶನ್ ಪೈಪ್‌ಲೈನ್’ ಕಾರ್ಯಕ್ರಮವನ್ನು ಕೈಬಿಡಲು ಒತ್ತಾಯ ಮಾಡುವ ಅಗತ್ಯವಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆಹಾರ ಬರ ಶ್ರೀಲಂಕಾ ತತ್ತರ

ಕೊಲಂಬೊದಲ್ಲಿ ಸೀಮೆ ಎಣ್ಣೆಗಾಗಿ ಜನರ ಸಾಲು ಎಎಫ್‌ಪಿ ಚಿತ್ರ

ನಾಲ್ಕು ದಶಕಗಳಲ್ಲೇ ಅತ್ಯಂತ ಕೆಟ್ಟ ಪರಿಸ್ಥಿತಿಯು ಶ್ರೀಲಂಕಾದಲ್ಲಿ ಮನೆ ಮಾಡಿದೆ. ವಿದೇಶಿ ವಿನಿಮಯ ಮೀಸಲು ಕುಸಿದಿದೆ. ಆಹಾರ ಕೊರತೆ ತೀವ್ರವಾಗಿದೆ. ಪರಿಣಾಮವಾಗಿ, ದೇಶದಲ್ಲಿ ಆಹಾರ ತುರ್ತುಸ್ಥಿತಿಯನ್ನು ಹೇರಲಾಗಿದೆ.

ತಮಿಳು ಪ್ರತ್ಯೇಕತಾವಾದಿ ಸಂಘಟನೆ ಎಲ್‌ಟಿಟಿಇ ಜತೆಗಿನ ಸುಮಾರು ಮೂರು ದಶಕಗಳ ರಕ್ತಸಿಕ್ತ ಹೋರಾಟವು 2009ರಲ್ಲಿ ಕೊನೆಗೊಂಡರೂ ದ್ವೀಪರಾಷ್ಟ್ರ ಶ್ರೀಲಂಕಾವು ಆರ್ಥಿಕವಾಗಿ ಚೇತರಿಕೆಯ ಹಾದಿಗೆ ಮರಳುವುದು ಸಾಧ್ಯವಾಗಲೇ ಇಲ್ಲ. ಆಂತರಿಕ ಸಂಘರ್ಷದ ಬಳಿಕ ದೇಶವನ್ನು ಮತ್ತೆ ಕಟ್ಟುವ ಕೆಲಸಕ್ಕೆ ಚಾಲನೆ ಸಿಕ್ಕರೂ ಅದಕ್ಕೆ ಹಲವು ಅಡೆತಡೆಗಳು ಎದುರಾದವು.

2019ರ ಬಳಿಕ ಶ್ರೀಲಂಕಾದ ಸ್ಥಿತಿಯು ಇನ್ನಷ್ಟು ಶೋಚನೀಯಗೊಂಡಿದೆ. 2019ರ ಏಪ್ರಿಲ್‌ನಲ್ಲಿ ಉಗ್ರರು ನಡೆಸಿದ ಬಾಂಬ್ ಸ್ಫೋಟ, ಆಂತರಿಕ ಭದ್ರತೆಯ ಬಗ್ಗೆ ಸೃಷ್ಟಿಯಾದ ಕಳವಳ, ನಂತರ ಕಾಣಿಸಿಕೊಂಡ ಕೋವಿಡ್ ಸಾಂಕ್ರಾಮಿಕವು ದೇಶದ ಆರ್ಥಿಕತೆಯ ಬೆನ್ನೆಲುಬನ್ನೇ ಮುರಿದು ಹಾಕಿವೆ.

ಶ್ರೀಲಂಕಾವು ಸಾಂಪ್ರದಾಯಿಕವಾಗಿ ಖಾಸಗಿ ಕೇಂದ್ರಿತ, ಮಾರುಕಟ್ಟೆಸ್ನೇಹಿ ಆರ್ಥಿಕ ನೀತಿಯನ್ನು ಅವಲಂಬಿಸಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ನೀತಿಯಲ್ಲಿ ಬದಲಾವಣೆ ಕಂಡು ಬಂದಿದೆ. ಅರ್ಥ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ಪ್ರಮುಖ ಪಾತ್ರವನ್ನು ಈಗ ನೀಡಲಾಗಿದೆ ಎಂದು ಅಲ್ಲಿನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಪಂಚವಾರ್ಷಿಕ ಯೋಜನೆಗಳನ್ನು ಹಮ್ಮಿಕೊಂಡು, ವಾರ್ಷಿಕ ಶೇ 6.5ಕ್ಕಿಂತ ಹೆಚ್ಚಿನ ಆರ್ಥಿಕ ಪ್ರಗತಿ, 6,500 ಡಾಲರ್‌ಗಿಂತ (ಸುಮಾರು ₹4.75 ಲಕ್ಷ) ಹೆಚ್ಚಿನ ತಲಾ ಆದಾಯ, ನಿರುದ್ಯೋಗ ಪ್ರಮಾಣವನ್ನು ಶೇ 4ಕ್ಕಿಂತ ಕೆಳಕ್ಕೆ ಇಳಿಸುವುದು ಮುಂತಾದ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಆದರೆ, ಯಾವುದೂ ಈಡೇರಿಲ್ಲ.

ಸಾಲದ ಸುಳಿಗೆ ಸಿಲುಕಿರುವ ದೇಶವು ತೀವ್ರ ಬಡತನಕ್ಕೆ ಜಾರಿದೆ.

ಸಂಕಷ್ಟದ ಹಲವು ಕಾರಣಗಳು

ಶ್ರೀಲಂಕಾ ದೇಶವು ಭಾರಿ ಸಾಲದಲ್ಲಿ ಮುಳುಗಿದೆ. 2020ರಲ್ಲಿ ದೇಶದ ಆರ್ಥಿಕತೆಯು ದಾಖಲೆಯ ಶೇ 3.6ರಷ್ಟು ಕುಸಿತ ಕಂಡಿತು. ಪ್ರಮುಖವಾಗಿ ವಿದೇಶಿ ವಿನಿಮಯ ಕೊರತೆ, ಕೋವಿಡ್ ಸೇರಿದಂತೆ ಹಲವು ಕಾರಣಗಳನ್ನು ಗುರುತಿಸಲಾಗಿದೆ.

ಕೋವಿಡ್ ಪ್ರಹಾರ: ಶ್ರೀಲಂಕಾವು ತನ್ನ ಆಂತರಿಕ ಭದ್ರತೆಯ ಬಗ್ಗೆ ನಿರ್ಲಕ್ಷ್ಯ ತಾಳಿದ್ದರಿಂದ 2019ರಲ್ಲಿ ಬಾಂಬ್ ಸ್ಫೋಟ ಘಟನೆಗೆ ಸಾಕ್ಷಿಯಾಯಿತು. ಇದರಿಂದ ದೇಶ ಚೇತರಿಸಿಕೊಳ್ಳುವ ಮುನ್ನವೇ ಎದುರಾಗಿದ್ದು ಕೋವಿಡ್ ಸಾಂಕ್ರಾಮಿಕ. ಕೋವಿಡ್ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸದ್ದರಿಂದ ದೇಶವ್ಯಾಪಿ ಸೋಂಕು ಹರಡಿತು. ಲಾಕ್‌ಡೌನ್‌ಗಳು ಆರ್ಥಿಕತೆಯನ್ನು ಸಂಪೂರ್ಣವಾಗಿ ಮಲಗಿಸಿದವು. ಲಸಿಕೆ ಖರೀದಿಗೆ ವಿಶ್ವಬ್ಯಾಂಕ್‌ನಿಂದ ₹750 ಕೋಟಿ ಸಾಲ ಪಡೆಯಬೇಕಾಯಿತು.

ಭಯೋತ್ಪಾದಕ ದಾಳಿಯ ಬಳಿಕ ದೇಶದಲ್ಲಿ ಬಂಡವಾಳ ಹೂಡಿಕೆಯ ವಿಶ್ವಾಸ ಕುಗ್ಗಿದೆ. ಹಣ ಚಲಾವಣೆಗೆ ಕಾರಣವಾಗುವ ಮೂಲಸೌಕರ್ಯ ಕ್ಷೇತ್ರದ ಬದಲು ರಕ್ಷಣಾ ವಲಯದಲ್ಲಿ ಹೆಚ್ಚು ಹೂಡಿಕೆ ಮಾಡುತ್ತಿದೆ. ಇಂತಹ ದುರ್ಬಲ ಸ್ಥಿತಿಯಲ್ಲಿ ತುರ್ತುಪರಿಸ್ಥಿತಿ ಘೋಷಿಸದೇ ಬೇರೆ ಆಯ್ಕೆ ಇರಲಿಲ್ಲ ಎನ್ನುತ್ತಾರೆ ವಿಶ್ಲೇಷಕರು.



ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ (ಆಗಸ್ಟ್ 21) ನಿರ್ಜನವಾಗಿದ್ದ ಬೀದಿ ಎಎಫ್‌ಪಿ ಚಿತ್ರ

ಸಾಲದ ಶೂಲ: ಚೀನಾ ಸೇರಿದಂತೆ ಹಲವು ದೇಶಗಳು ಹಾಗೂ ಐಎಂಎಫ್ ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ಸಂಘಟನೆಗಳಿಂದ ಪಡೆದ ಅಪಾರ ಪ್ರಮಾಣದ ಸಾಲಕ್ಕೆ ಬಡ್ಡಿ ಕಟ್ಟಲು ಶ್ರೀಲಂಕಾವು ತನ್ನ ವಿದೇಶಿ ವಿನಿಮಯದ ಶೇ 80ರಷ್ಟು ಖರ್ಚು ಮಾಡುತ್ತಿರುವುದು ಆರ್ಥಿಕತೆಯ ದಿಕ್ಕು ತಪ್ಪಿಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಕಳೆದ ಬಾರಿ ಚೀನಾದಿಂದ ಮಾಡಿದ್ದ ಸಾಲಕ್ಕೆ ಬಡ್ಡಿಕಟ್ಟಲೂ ಆಗದ ಪರಿಸ್ಥಿತಿ ಎದುರಾದಾಗ, ಶ್ರೀಲಂಕಾವು ಒಂದು ಬಂದರನ್ನು ಚೀನಾಕ್ಕೆ ಹಸ್ತಾಂತರಿಸಬೇಕಾಯಿತು. ಈ ವರ್ಷ ಒಟ್ಟು ₹30 ಸಾವಿರ ಕೋಟಿ ವಿದೇಶಿ ಸಾಲ ಪಾವತಿ ಮಾಡಬೇಕಾಗಿದೆ. ಏಪ್ರಿಲ್ ವೇಳೆಗೆ ದೇಶದ ಒಟ್ಟು ಸಾಲ ₹2.63 ಲಕ್ಷ ಕೋಟಿ ಇತ್ತು ಎಂದು ಕೇಂದ್ರೀಯ ಬ್ಯಾಂಕ್ ತಿಳಿಸಿದೆ. 2012ರಿಂದಲೂ ಶ್ರೀಲಂಕಾದ ಜಿಡಿಪಿ ಬೆಳವಣಿಗೆ ದರ ನಿರಂತರವಾಗಿ ಇಳಿಯುತ್ತಾ ಬಂದಿದೆ. ಉತ್ಪಾದನಾ ವಲಯದಲ್ಲಿ ಯಾವುದೇ ಬೆಳವಣಿಗೆ ಇಲ್ಲ. ಶ್ರೀಲಂಕಾವು ಐಎಂಎಫ್‌ನಿಂದ ಈವರೆಗೆ ವಿವಿಧ ಸಂದರ್ಭಗಳಲ್ಲಿ ಒಟ್ಟು 16 ಬಾರಿ ಆರ್ಥಿಕ ನೆರವು (ಬೇಲ್‌ಔಟ್) ಕೋರಿದೆ.

ಕರಗಿದ ವಿದೇಶಿ ಮೀಸಲು

ಶ್ರೀಲಂಕಾದ ವಿದೇಶಿ ವಿನಿಮಯ ಮೀಸಲು ಜುಲೈ ಅಂತ್ಯದಲ್ಲಿ ಸುಮಾರು ₹21,000 ಕೋಟಿಗೆ (280 ಕೋಟಿ ಡಾಲರ್‌ಗೆ) ಕುಸಿದಿದೆ. 2019ರ ನವೆಂಬರ್‌ನಲ್ಲಿ ಇದರ ಪ್ರಮಾಣ ಸುಮಾರು ₹56,000 ಕೋಟಿ (750 ಕೋಟಿ ಡಾಲರ್) ಇತ್ತು. ಉಳಿದಿರುವ ಅಲ್ಪ ಮೊತ್ತದಲ್ಲಿ ಎಲ್ಲವನ್ನೂ ಸರಿದೂಗಿಸಬೇಕಾದ ಒತ್ತಡದಲ್ಲಿ ದೇಶ ಇದೆ.

ವಿದೇಶಿ ವಿನಿಮಯ ಕೊರತೆ: ಶ್ರೀಲಂಕಾದಲ್ಲಿ ಕಳೆದ 12 ತಿಂಗಳಲ್ಲಿ ಅನೇಕ ಅಗತ್ಯ ವಸ್ತುಗಳ ಬೆಲೆ ವಿಪರೀತ ಏರಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ವಿದೇಶಿ ವಿನಿಮಯ ಕೊರತೆ. ಅಳಿದುಳಿದ ವಿದೇಶ ವಿನಿಮಯವನ್ನು ಉಳಿತಾಯ ಮಾಡಲು, ಸರ್ಕಾರವು ಆಮದು ನಿಷೇಧದಂತಹ ಕ್ರಮಗಳನ್ನು ಜಾರಿಗೊಳಿಸಿತು. ಅರಿಶಿಣ ಪುಡಿ, ಅಡುಗೆ ಎಣ್ಣೆಯಿಂದ ಹಿಡಿದು, ವಾಹನಗಳ ಆಮದಿನ ಮೇಲೆ ಸರ್ಕಾರ ನಿರ್ಬಂಧ ವಿಧಿಸಿತು. ಹೀಗಾಗಿ ಕೆಲವು ಆಹಾರ ಪದಾರ್ಥಗಳಿಗೆ ದೇಶದಲ್ಲಿ ಹಾಹಾಕಾರ ಶುರುವಾಗಿ, ಈಗ ಆಹಾರ ತುರ್ತುಪರಿಸ್ಥಿತಿ ಘೋಷಿಸುವ ಮಟ್ಟವನ್ನು ತಲುಪಿದೆ.

ಅಗತ್ಯ ಆಹಾರ ಮತ್ತು ಔಷಧಿ ಖರೀದಿಗೆ ಡಾಲರ್ ಹೊಂದಿಸಲು ಸರ್ಕಾರ ಕಷ್ಟಪಡುತ್ತಿದೆ. ವಾಹನ ಚಾಲಕರು ಇಂಧನವನ್ನು ಮಿತವಾಗಿ ಬಳಸಬೇಕು ಎಂದು ಇಂಧನ ಸಚಿವ ಉದಯ ಗಮ್ಮನ್‌ಪಿಲ ಒತ್ತಾಯಿಸಿರುವುದು ಪರಿಸ್ಥಿತಿಯ ತೀವ್ರತೆಯನ್ನು ವಿವರಿಸುತ್ತದೆ.

ಪರಿಣಾಮಗಳ ವಿಷವರ್ತುಲ

ಶ್ರೀಲಂಕಾದ ಆರ್ಥಿಕ ಮುಗ್ಗಟ್ಟಿನಿಂದ ಉಂಟಾದ ವಿವಿಧ ಪರಿಣಾಮಗಳ ಮಧ್ಯೆ ಪರಸ್ಪರ ಸಂಬಂಧವಿದೆ. ಒಂದು ಕ್ಷೇತ್ರದ ಮೇಲೆ ಉಂಟಾದ ಪರಿಣಾಮವು, ಮತ್ತೊಂದು ಕ್ಷೇತ್ರದ ಮೇಲಿನ ದುಷ್ಪರಿಣಾಮವನ್ನು ಹೆಚ್ಚಿಸಿದೆ. ಆ ಪರಿಣಾಮವು ಬೇರೊಂದು ಕ್ಷೇತ್ರದ ಮೇಲೆ ದುಷ್ಪರಿಣಾಮ ಬೀರಿದೆ. ಹೀಗೆ ಪರಿಣಾಮಗಳ ಸರಪಳಿ ಬೆಳೆದಿದೆ ಮತ್ತು ಅದು ವಿಷ ವರ್ತುಲದಂತೆ ಆಗಿದೆ.

ಪ್ರವಾಸೋದ್ಯಮಕ್ಕೆ ತೊಡಕು

ಶ್ರೀಲಂಕಾದ ಪ್ರವಾಸೋದ್ಯಮ ಕುಸಿತಕ್ಕೆ 2019ರ ಏಪ್ರಿಲ್‌ನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟವೇ ಕಾರಣ ಎನ್ನಲಾಗಿದೆ. ಬಾಂಬ್ ಸ್ಫೋಟದ ಕಾರಣ ಪ್ರವಾಸಿಗರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. 2019ರ ಬಾಂಬ್ ಸ್ಫೋಟದ ನಂತರ ಪ್ರವಾಸೋದ್ಯಮ ಉತ್ತೇಜನಕ್ಕೆ ಹಲವು ಕ್ರಮಗಳನ್ನು ಶ್ರೀಲಂಕಾ ಸರ್ಕಾರ ತೆಗೆದುಕೊಂಡಿತ್ತಾದರೂ, ಕೋವಿಡ್‌ನ ಕಾರಣ ಪ್ರವಾಸೋದ್ಯಮ ಮತ್ತೆ ಕುಸಿಯಿತು.

2020ರಲ್ಲಿ 45 ಲಕ್ಷ ಪ್ರವಾಸಿಗರನ್ನು ಶ್ರೀಲಂಕಾ ನಿರೀಕ್ಷಿಸಿತ್ತು. ಆದರೆ ಲಾಕ್‌ಡೌನ್‌ನಿಂದಾಗಿ, ಇಡೀ 2020ರಲ್ಲಿ ಶ್ರೀಲಂಕಾಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 1 ಲಕ್ಷವನ್ನೂ ದಾಟಿಲ್ಲ. ಈಗ ಲಾಕ್‌ಡೌನ್ ತೆರವಾಗಿದ್ದರೂ, ಪ್ರವಾಸಿಗರು ಶ್ರೀಲಂಕಾದತ್ತ ಮುಖ ಮಾಡುತ್ತಿಲ್ಲ. ಪ್ರವಾಸಿ ಸ್ಥಳಗಳು ಬಿಕೋ ಎನ್ನುತ್ತಿವೆ. ಪ್ರವಾಸಿ ಸಂಬಂಧಿ ಸೇವೆಗಳು ಸಂಪೂರ್ಣವಾಗಿ ಸ್ಥಗಿತವಾಗಿದೆ. ಈ ಕಾರಣದಿಂದ 2020ರಲ್ಲಿ ಶ್ರೀಲಂಕಾದ ಒಟ್ಟು ಆದಾಯದಲ್ಲಿ 500 ಕೋಟಿ ಅಮೆರಿಕನ್ ಡಾಲರ್‌ನಷ್ಟು (ಅಂದಾಜು ₹36,550 ಕೋಟಿ) ಖೋತಾ ಆಗಿದೆ. 2021ರಲ್ಲಿ ಈವರೆಗೆ 350 ಕೋಟಿ ಅಮೆರಿಕನ್ ಡಾಲರ್‌ನಷ್ಟು (ಅಂದಾಜು ₹25,585 ಕೋಟಿ) ಆದಾಯ ಖೋತಾ ಆಗಿದೆ.

ಉದ್ಯೋಗ ನಷ್ಟ

ಪ್ರವಾಸೋದ್ಯಮ ಕುಸಿದಿರುವ ಕಾರಣ ಈ ಕ್ಷೇತ್ರದಲ್ಲಿ ಇದ್ದವರು ಉದ್ಯೋಗ ಕಳೆದುಕೊಂಡಿದ್ದಾರೆ. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕ್ಯಾಸಿನೋಗಳು ಮತ್ತು ಟೂರ್ ಆಪರೇಟರ್ ಸೇವೆಗಳು ಸ್ಥಗಿತವಾಗಿವೆ. ಈ ಎಲ್ಲಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರು ಉದ್ಯೋಗ ಕಳೆದುಕೊಂಡಿದ್ದಾರೆ. ಈ ಕ್ಷೇತ್ರಗಳನ್ನು ಅವಲಂಬಿಸಿದ್ದ ಇತರೆ ಸೇವೆಗಳೂ ಸ್ಥಗಿತವಾಗಿವೆ. ಇದರಿಂದ ಪರೋಕ್ಷವಾಗಿಯೂ ಹಲವರು ಉದ್ಯೋಗ ಕಳೆದುಕೊಂಡಿದ್ದಾರೆ. ಅಂದಾಜು 40 ಲಕ್ಷ ಮಂದಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉದ್ಯೋಗ ಕಳೆದುಕೊಂಡಿದ್ದಾರೆ. ತಕ್ಷಣಕ್ಕೆ ಈ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆಗಳು ತೀರಾ ಕಡಿಮೆ ಎನ್ನಲಾಗಿದೆ.

ಬಡತನ

ಆದಾಯದ ಪ್ರಧಾನ ಮೂಲವಾದ ಪ್ರವಾಸೋದ್ಯಮದ ಸ್ಥಗಿತ ಮತ್ತು ಉದ್ಯೋಗ ನಷ್ಟದ ಕಾರಣ ದೇಶದಲ್ಲಿ ಬಡತನದ ಪ್ರಮಾಣ ವಿಪರೀತ ಮಟ್ಟದಲ್ಲಿ ಏರಿಕೆಯಾಗಿದೆ. ದೇಶದ ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲದ ಕಾರಣ, ಆಹಾರ ಪದಾರ್ಥಗಳು ಮತ್ತು ದಿನಬಳಕೆ ವಸ್ತು-ಸರಕುಗಳ ವ್ಯಾಪಾರ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಈ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ಜನರ ಕೊಳ್ಳುವ ಶಕ್ತಿಯನ್ನು ಮತ್ತಷ್ಟು ಕುಸಿಯುವಂತೆ ಮಾಡಿದೆ. ಆಹಾರ ಮತ್ತು ದಿನಬಳಕೆ ವಸ್ತುಗಳನ್ನು ಕೊಳ್ಳಲು ಆಗದೇ ಇರುವಂತಹ ಸ್ಥಿತಿ ನಿರ್ಮಾಣವಾಗಿರುವ ಕಾರಣ, ದೇಶದ ಜನರ ಜೀವನಮಟ್ಟವೂ ಕುಸಿದಿದೆ.

ರೂಪಾಯಿ ಮೌಲ್ಯ ಕುಸಿತ

ದೇಶದ ಆರ್ಥಿಕತೆ ಸ್ಥಗಿತವಾಗಿರುವ ಕಾರಣ ವಿದೇಶಿ ವಿನಿಮಯವೂ ಕುಸಿದಿದೆ. ವಿದೇಶಿ ವಿನಿಮಯ ಕುಸಿದಿರುವ ಕಾರಣ ಡಾಲರ್ ಎದುರು ಶ್ರೀಲಂಕಾ ರೂಪಾಯಿಯ ಮೌಲ್ಯ ಕುಸಿಯುತ್ತಲೇ ಇದೆ. 2019ರ ಸ್ಫೋಟದಿಂದ ಈವರೆಗೆ ಶ್ರೀಲಂಕಾ ರೂಪಾಯಿಯ ಮೌಲ್ಯವು, ಅಮೆರಿಕನ್ ಡಾಲರ್ ಎದುರು ಶೇ 20ರಷ್ಟು ಕುಸಿದಿದೆ. ಇದರಿಂದಾಗಿ ಆಮದು ಮಾಡಿಕೊಳ್ಳುವ ವಸ್ತುಗಳ ಮೌಲ್ಯ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಬೆಲೆ ಏರಿಕೆಯಿಂದ ಈ ಸರಕುಗಳನ್ನು ಕೊಳ್ಳುವವರ ಸಂಖ್ಯೆ ಇಳಿಕೆಯಾಗಿದೆ. ಇದರಿಂದ ಮತ್ತೆ ರೂಪಾಯಿ ಮೌಲ್ಯ ಕುಸಿಯುತ್ತಿದೆ.

ಇದರ ಪರಿಣಾಮವಾಗಿ ಶ್ರೀಲಂಕಾದ ವಿದೇಶಿ ವಿನಿಮಯ ಮೀಸಲು ಸಹ ಕುಸಿದಿದೆ. ಖಾಸಗಿ ಬ್ಯಾಂಕ್‌ಗಳ ವಿದೇಶಿ ವಿನಿಮಯ ಮೀಸಲು ಸಂಪೂರ್ಣವಾಗಿ ಖಾಲಿಯಾಗಿದೆ. ಈ ಕಾರಣದಿಂದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ಅಗತ್ಯವಿರುವಷ್ಟು ಆರ್ಥಿಕ ನೆರವು ನೀಡಲು ಖಾಸಗಿ ಬ್ಯಾಂಕ್‌ಗಳ ಬಳಿ ಹಣ ಇಲ್ಲ. ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಆಹಾರ ಪದಾರ್ಥಗಳ ಕೊರತೆ ಉಂಟಾಗಿದೆ.

ಆಧಾರ: ರಾಯಿಟರ್ಸ್, ಏಷ್ಯಾ ಪೆಸಿಫಿಕ್ ಪಾಲಿಸಿ ಸೊಸೈಟಿ

ರೈಲ್ವೆ ಇಲಾಖೆಯಿಂದ ಟೆಂಡರ್
ಬೆಂಗಳೂರಿನಲ್ಲಿ 'ರೈಲ್ ಆರ್ಕೇಡ್'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ 'ರೈಲ್ ಆರ್ಕೇಡ್' ಅನ್ನು ಅಭಿವೃದ್ಧಿಪಡಿಸಲು ರೈಲ್ವೆಯು ಟೆಂಡರ್ ಕರೆದಿದೆ. ರೈಲ್ವೆ ಆರ್ಕೇಡ್‌ನಲ್ಲಿ ವಾಣಿಜ್ಯ ಸಂಕೀರ್ಣ ಮತ್ತು ರೆಸ್ಟೋರೆಂಟ್‌ಗಳು ಇರಲಿವೆ. ರೈಲು ಪ್ರಯಾಣಿಕರು ಮತ್ತು ನಗರವಾಸಿಗಳೂ ರೈಲ್ವೆ ಆರ್ಕೇಡ್ ಅನ್ನು ಬಳಸಬಹುದು.

ರೈಲ್ವೆಯ ನಿಲ್ದಾಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಈ ರೈಲ್ ಆರ್ಕೇಡ್ ಅಭಿವೃದ್ಧಿಪಡಿಸಲಾಗುತ್ತದೆ. ಈ ಕಾರ್ಯಕ್ರಮದ ಅಡಿ ರೈಲು ನಿಲ್ದಾಣಗಳನ್ನು 'ಮಿನಿಸಿಟಿ'ಗಳಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಇದರಲ್ಲಿ ವಸತಿ ಪ್ರದೇಶ, ಮಾರುಕಟ್ಟೆ, ಗೇಮ್‌ಸೆಂಟರ್‌ಗಳು, ಲಾಡ್ಜಿಂಗ್ ಮತ್ತು ಬೋರ್ಡಿಂಗ್ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದು ರೈಲ್ವೆಯು ಮಾಹಿತಿ ನೀಡಿದೆ.

ಭಾರತೀಯ ರೈಲ್ವೆ ನಿಲ್ದಾಣ ಅಭಿವೃದ್ಧಿ ನಿಗಮವು ಈ ಅಭಿವೃದ್ಧಿ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸಲಿದೆ. ಈ ಸಂಸ್ಥೆಯೇ ಈಗ ಸಂಗೊಳ್ಳಿ ರಾಯಣ್ಣ ನಿಲ್ದಾಣ ಅಭಿವೃದ್ಧಿಗಾಗಿ ಟೆಂಡರ್ ಕರೆದಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಸೆಪ್ಟೆಂಬರ್ 9.

ವಿಶೇಷಗಳು

15,500 ಚದರ ಅಡಿ

ರೈಲ್ ಆರ್ಕೇಡ್‌ನ ವಿಸ್ತೀರ್ಣ

- ಪ್ರಯಾಣಿಕರು ಮತ್ತು ಪ್ರಯಾಣಿಕೇತರ ನಾಗರಿಕರಿಗಾಗಿ ವಿಶ್ರಾಂತಿ ಮತ್ತು ಮನೋರಂಜನಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ
- ಟೆಂಡರ್ ಪಡೆಯುವ ಕಂಪನಿಯೇ ರೈಲ್ ಆರ್ಕೇಡ್‌ನಲ್ಲಿ ಪ್ರತಿಷ್ಠಿತ ಬ್ರ್ಯಾಂಡ್‌ಗಳ ರೆಸ್ಟೋರೆಂಟ್‌ಗಳು ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು
- ಪ್ರತಿಷ್ಠಿತ ಬ್ರ್ಯಾಂಡ್‌ಗಳ ಗ್ರಾಹಕ ವಸ್ತುಗಳ ಮಳಿಗೆಗಳನ್ನು ಈ ಆರ್ಕೇಡ್‌ನಲ್ಲಿ ಆರಂಭಿಸಲಾಗುತ್ತದೆ
- ಉಡುಗೊರೆ ಅಂಗಡಿಗಳು, ಕರಕುಶಲ ವಸ್ತುಗಳ ಮಳಿಗೆಗಳು, ದಿನಪತ್ರಿಕೆ-ನಿಯತಕಾಲಿಕಗಳ ಮಳಿಗೆ ಆರಂಭಿಸಲಾಗುತ್ತದೆ
- ಈ ಆರ್ಕೇಡ್ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತವೆ
- ಮೊದಲ ಅವಧಿಯಲ್ಲಿ ಒಂಬತ್ತು ವರ್ಷಗಳವರೆಗೆ ಆರ್ಕೇಡ್ ನಡೆಸಲು ಒಂದು ಕಂಪನಿಗೆ ಗುತ್ತಿಗೆ ನೀಡಲಾಗುತ್ತದೆ

ನಿಷೇಧ

- ಆರ್ಕೇಡ್‌ನಲ್ಲಿನ ರೆಸ್ಟೋರೆಂಟ್‌ಗಳಲ್ಲಿ ದನದ ಮತ್ತು ಹಂದಿಯ ಮಾಂಸದ ತಿನಿಸುಗಳನ್ನು ಮಾರಾಟ ಮಾಡುವಂತಿಲ್ಲ
- ಆರ್ಕೇಡ್‌ನಲ್ಲಿ ಕೋಳಿ, ಮೀನು, ಮಾಂಸದ ಅಂಗಡಿಗಳನ್ನು ಆರಂಭಿಸುವಂತಿಲ್ಲ
- ಯಾವುದೇ ರೀತಿಯ ಮದ್ಯವನ್ನು ಮಾರಾಟ ಮಾಡುವಂತಿಲ್ಲ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕೇಂದ್ರ ಸರ್ಕಾರವು ಬಾಲಕಿಯರ ಶ್ರೇಯೋಭಿವೃದ್ಧಿಗಾಗಿ 'ಲಾಡಲೀ ಲಕ್ಷ್ಮೀ ಯೋಜನೆ' ಎಂಬ ಕಾರ್ಯಕ್ರಮವನ್ನು ಆರಂಭಿಸಿದೆ. ಈ ಯೋಜನೆಯ ಅಡಿ ಬಾಲಕಿಯರಿಗೆ ಕೇಂದ್ರ ಸರ್ಕಾರವು ₹1.60 ಲಕ್ಷವನ್ನು ನೀಡಲಿದೆ. ಈ ಹಣವನ್ನು ಬಾಲಕಿಯರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಿದೆ. ಈ ವಿಡಿಯೊ ಕೆಳಗೆ ನೀಡಲಾದ ಲಿಂಕ್ ಅನ್ನು ಕ್ಲಿಕ್ ಮಾಡಿ, ನೋಂದಾಯಿಸಿಕೊಳ್ಳಿ. ಇದಕ್ಕಾಗಿ ಈ ವಿಡಿಯೊದಲ್ಲಿ ನೀಡಲಾಗಿರುವ ಲಿಂಕ್‌ನಲ್ಲಿ ನಿಮ್ಮ ವೈಯಕ್ತಿಕ ವಿವರ ನೀಡಿ ಮತ್ತು ₹2,000 ನೋಂದಣಿ ಶುಲ್ಕ ಪಾವತಿಸಿ' ಎಂಬ ವಿವರ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೊ ಲಿಂಕ್ ಅನ್ನು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳಲಾಗಿದೆ.

'ಈ ವಿಡಿಯೊದಲ್ಲಿ ಇರುವ ವಿವರ ಸುಳ್ಳು. ಕೇಂದ್ರ ಸರ್ಕಾರವು ಇಂತಹ ಯಾವುದೇ ಕಾರ್ಯಕ್ರಮವನ್ನು ಆರಂಭಿಸಿಲ್ಲ. ಯಾವುದೇ ಯೋಜನೆ ಅಡಿ ಬಾಲಕಿಯರಿಗೆ ₹1.60 ಲಕ್ಷ ನಗದು ವರ್ಗಾವಣೆ ಮಾಡುತ್ತಿಲ್ಲ. ಈ ವಿಡಿಯೊದಲ್ಲಿ ನೀಡಲಾಗಿರುವ ಲಿಂಕ್‌ನಲ್ಲಿ ಯಾವುದೇ ಮಾಹಿತಿ ನೀಡಬೇಡಿ ಮತ್ತು ಹಣ ವರ್ಗಾವಣೆ ಮಾಡಬೇಡಿ. ಇದೊಂದು ಮೋಸದ ಜಾಲವಾಗಿದ್ದು, ಬಲೆಗೆ ಬೀಳಬೇಡಿ. ಈ ವಿಡಿಯೊ ಹಂಚಿಕೊಂಡವರ ಜತೆಯೂ ಈ ಮಾಹಿತಿ ಹಂಚಿಕೊಳ್ಳಿ. ಸುಳ್ಳು ಸುದ್ದಿ ಹರಡುವುದನ್ನು ತಪ್ಪಿಸಿ' ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಹೇಳಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಪಿತಾಮಹನ ಸಂಕಟ

ಕ್ಷಣಕಾಲದ ಮೇಲೆ ಸಾವರಿಸಿಕೊಂಡು ಮಹಾರಾಜ ಮತ್ತೆ ಮುದುಕನನ್ನು ನೋಡಿ ಹೇಳಿದ, 'ಅಯ್ಯಾ, ನೀನು ಹೇಳುವುದರಲ್ಲಿ ನನಗೆ ನಂಬಿಕೆ ಬರುತ್ತಿಲ್ಲ. ಅರಮನೆಯಲ್ಲಿದ್ದಾಗಲೂ ವೆಸ್ಸಂತರನಿಗೆ ದಾನದ ಹುಚ್ಚು ಇತ್ತು. ಆದರೆ ಈಗ ಆತ ಎಲ್ಲವನ್ನೂ ಕಳೆದುಕೊಂಡು, ನಿರ್ವಾಸಿತನಾಗಿ ಕಾಡಿನಲ್ಲಿದ್ದಾನೆ. ಅವನು ಮಕ್ಕಳನ್ನು ಹೇಗೆ ದಾನವಾಗಿ ಕೊಡುತ್ತಾನೆ? ಯಾರಾದರೂ, ಆನೆ, ಕುದುರೆ, ರಥಗಳು, ಹಣವನ್ನು ದಾನಮಾಡಬಹುದು. ಮಕ್ಕಳನ್ನು ಯಾರಾದರೂ ತಂದೆ-ತಾಯಿಯರು ದಾನವಾಗಿ ಕೊಡುವುದನ್ನು ನೀವು ಕೇಳಿದ್ದಿರಾ? ಇದು ಅಸಂಭವ'.

ಈ ಮಾತನ್ನು ಕೇಳುತ್ತಿದ್ದ ಹುಡುಗ ಜಾಲಿಕುಮಾರನಿಗೆ ತಡೆದುಕೊಳ್ಳಲಾಗಲಿಲ್ಲ. ತಂದೆಯ ಬಗ್ಗೆ ಹೀಗೆ ಮಾತನಾಡಿದ್ದು ಆತನಿಗೆ ಇಷ್ಟವಾಗಲಿಲ್ಲ. ತಂದೆಯ ದಾನಶಕ್ತಿಯನ್ನೇ ಸಂದೇಹಿಸುತ್ತಿದ್ದಾನೆ ಈ ರಾಜ! ತಕ್ಷಣ ಹುಡುಗ ಜೋರಾಗಿ ಕೂಗಿದ, 'ಹೇ ಪಿತಾಮಹ, ನನ್ನ ತಂದೆ ಕಾಡಿನಲ್ಲಿರುವುದು ಸತ್ಯ. ಅವರ ಬಳಿ ಏನೇನೂ ಇಲ್ಲದ್ದೂ ಸತ್ಯ. ಹಾಗಾದರೆ ಯಾರ ಬಳಿ ದಾನ ಮಾಡಲು ಆನೆ, ಕುದುರೆ, ಹೇಸರಗತ್ತೆ, ರಥಗಳು, ದಾಸರು ಇಲ್ಲವೋ, ಅವನು ಏನು ದಾನ ಮಾಡಬೇಕು? ಅವನ ಬಳಿ ಅವನದ್ದಾಗಿ ಉಳಿದವರು ನಾವೇ, ಅವನ ಮಕ್ಕಳು. ಆದ್ದರಿಂದ ತನ್ನದಾದ ಎಲ್ಲವನ್ನೂ ದಾನ ಮಾಡಿ ಆತ ಮಹಾತ್ಮನಾಗಿದ್ದಾನೆ'.

ಮಹಾರಾಜ ಹೇಳಿದ, 'ಮಗೂ, ನಾನು ನಿನ್ನ ತಂದೆ ನೀಡಿದ ದಾನವನ್ನು ಹೃದಯ ತುಂಬಿ ಅಭಿನಂದಿಸುತ್ತೇನೆ, ಮೆಚ್ಚುತ್ತೇನೆ. ಈ ದಾನವನ್ನು ನಾನು ನಿಂದಿಸುತ್ತಿಲ್ಲ. ಆದರೆ ಇಂಥ ಹೃದಯವನ್ನು ಕಲುಕುವಂತಹ ದಾನವನ್ನು ಆತ ಹೇಗೆ ಮಾಡಿದ? ನಿಮ್ಮನ್ನು ಈ ಬ್ರಾಹ್ಮಣನಿಗೆ ಕೊಟ್ಟ ಮೇಲೆ ಅವನ ಹೃದಯಕ್ಕೇನು ಆಗಿದ್ದೀತು?'. ಜಾಲಿಕುಮಾರ ನುಡಿದ, 'ಪಿತಾಮಹ, ಇದು ಅವರಿಗೆ ಎಷ್ಟು ಕಷ್ಟವಾಗಿತ್ತೋ ತಿಳಿಯದು. ಅವರು ಅದನ್ನು ಹೊರಗೆ ತೋರಗೊಡಲಿಲ್ಲ. ಆದರೆ ನನಗೆ ತಿಳಿದಂತೆ ಅವರ ಹೃದಯ ದುಃಖಪೂರ್ಣವಾಗಿತ್ತು. ಹೃದಯ ಬಿಸಿಯಾಗಿತ್ತು. ಮುಖ ಕಾದ ತಾಮ್ರದಂತೆ ತೋರುತ್ತಿತ್ತು. ತಂದೆಯ ಕಣ್ಣುಗಳಿಂದ ನೀರಿನ ಹನಿಗಳು ಚಿಮ್ಮಿದವು'.

ಪುಟ್ಟ ಹುಡುಗಿ ಕೃಷ್ಣಾಜಿನ ದುಃಖದಿಂದ, 'ಅಜ್ಜಾ, ಈ ಬ್ರಾಹ್ಮಣ ನನ್ನನ್ನು ಮನೆಯ ದಾಸಿಯಂತೆ ದೊಣ್ಣೆಯಿಂದ ಹೊಡೆಯುತ್ತಾನೆ. ಈತ ಬ್ರಾಹ್ಮಣನಲ್ಲ. ಸಾಮಾನ್ಯವಾಗಿ ಬ್ರಾಹ್ಮಣರು ಸಾತ್ವಿಕರೂ, ಧಾರ್ಮಿಕರೂ ಆಗಿರುತ್ತಾರೆ. ಈತ ಬ್ರಾಹ್ಮಣ ವೇಷದಲ್ಲಿರುವ ಯಕ್ಷ. ನಮ್ಮನ್ನು ಹೊಡೆದು ತಿಂದು ಬಿಡಲು ಕರೆದುಕೊಂಡು ಹೋಗುತ್ತಿದ್ದಾನೆ. ಅಜ್ಜ, ಈತನೊಬ್ಬ ಪಿಶಾಚಿ. ಅವನನ್ನು ನೋಡುತ್ತ ನೀವು ಸುಮ್ಮನೆ ಇದ್ದೀರಲ್ಲ?' ಎಂದು ಕಣ್ಣೀರು ಸುರಿಸಿದಳು. ಅಜ್ಜನ ಕಣ್ಣಲ್ಲೂ ನೀರಿನ ಒರತೆ. 'ಮಕ್ಕಳೇ, ನಿಮ್ಮ ತಾಯಿ ರಾಜಪುತ್ರಿ, ನಿಮ್ಮ ತಂದೆ, ನನ್ನ ಮಗ, ಅವನೂ ರಾಜಪುತ್ರ. ನೀವು ದೂರ ನಿಲ್ಲಬೇಡಿ. ಬೇಗನೆ ಬಂದು ನನ್ನ ಮಡಿಲಲ್ಲಿ ಕುಳಿತುಕೊಳ್ಳಿ' ಎಂದ. ಆದರೆ ಹುಡುಗ ಜಾಲಿಕುಮಾರ ಗಂಭೀರವಾಗಿ ಹೇಳಿದ, 'ಹೌದು ಪಿತಾಮಹ, ನಮ್ಮ ತಾಯಿ ರಾಜಪುತ್ರಿ, ನಮ್ಮ ತಂದೆ ರಾಜಪುತ್ರ. ಆದರೆ ನಮ್ಮ ತಂದೆ ನಮ್ಮನ್ನು ದಾನವಾಗಿ ನೀಡಿದ್ದರಿಂದ ನಾವು ಬ್ರಾಹ್ಮಣನ ದಾಸರು. ಅದಕ್ಕಾಗಿಯೇ ದಾಸರಂತೆ ದೂರ ಸರಿದು ನಿಂತಿದ್ದೇವೆ. ನಾವೀಗ ರಾಜಮನೆತನದವರಲ್ಲ'.

ಈ ಮಾತು ವಯಸ್ಸಾದ ರಾಜ ಸಂಜಯನನ್ನು ತುಂಬ ಗಾಸಿಮಾಡಿತು. ಆತ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ತೀರ್ಮಾನಿಸಿದ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಸೆಪ್ಟೆಂಬರ್ 3, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ದ್ವಾದಶಿ ಗಂ. 59-20 (ಬೆ.ಝಾ 5-59) ಶುಕ್ರವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 22-52 (ಹ. 3-25) ವ್ಯತೀಪಾತ ನಾಮ ಯೋಗ ಗಂ. 9-32 ಕೌಲವ ಕರಣ ಗಂ. 28-2 ವಿಷ ಗಂ. 44-9 ಅಮೃತ ಗಂ. 15-38 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30: ಸೂರ್ಯೋದಯ: 6-12 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 4, 7

ಮೇಷ: ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರದ ಪ್ರಯಾಣ ಮಾಡಬೇಕಾದೀತು. ಪತ್ನಿವರ್ಗದವರಿಂದ ಸಹಾಯ. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆಗಳ ನಿವಾರಣೆ.

ವೃಷಭ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯವನ್ನು ಹೊಂದುವಿರಿ. ಪುಸ್ತಕ ಗ್ರಂಥಗಳ ಖರೀದಿಗಾಗಿ ವೆಚ್ಚವನ್ನು ಭರಿಸಬೇಕಾದೀತು.

ಮಿಥುನ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಕರ್ಕಾಟಕ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯಪೂರ್ವಕ ಪ್ರಸ್ತಾಪಗಳು ಬರಲಿವೆ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.

ಸಿಂಹ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ.

ಕನ್ಯಾ: ಉದ್ಯೋಗಸ್ಥರಿಗೆ ಅತ್ಯಂತ ಆಲಸ್ಯದ ದಿನ. ಬಂಧುಗಳ ಆಗಮನದಿಂದ ಸಂತಸ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತ ಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ತುಲಾ: ತಂದೆ ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ವೃಶ್ಚಿಕ: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಭತ್ಯೆಯಲ್ಲಿ ಹೆಚ್ಚಳ.

ಧನು: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ಒಲ್ಲದ ಮನಸ್ಸಿನಿಂದ ಕಾರ್ಯ ನಿರ್ವಹಿಸಬೇಕಾದ ಅನಿವಾರ್ಯತೆ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ. ಅತಿಯಾದ ಪ್ರಯಾಣದಿಂದಾಗಿ ದೇಹಾಯಾಸ.

ಮಕರ: ಜಮೀನಿನ ಕೆಲಸ-ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ. ಒಂಟಿತನ ಕಾಡಲಿದೆ.

ಕುಂಭ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರೆ ಹೋಗಬೇಕಾದೀತು. ದೂರದ ಪ್ರಯಾಣ ಮಾಡಬೇಕಾದೀತು. ವಾಹನ ಖರೀದಿಯಿಂದ ನೆಮ್ಮದಿ.

ಮೀನ: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ನಿಮ್ಮ ಸಹಾಯ ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.

ನಿಮ್ಮ ಜನ್ಮದಿನ 3-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ನಿಮಗಿರುವ ರಾಜಕೀಯದ ಬಗೆಗಿನ ಆಸಕ್ತಿಗೆ ಪುಷ್ಟಿ ದೊರಕುವಂತಹ ಘಟನಾವಳಿಗಳ ಮತ್ತು ಅವಕಾಶಗಳ ಸರಮಾಲೆಯಿಂದಾಗಿ ಉನ್ನತ ದರ್ಜೆಯ ರಾಜಕಾರಣಕ್ಕೆ ಕಾಲಿಡಲಿದ್ದೀರಿ. ನಿಮ್ಮ ಅತ್ಯಂತ ಪ್ರಿಯವಾದ ಹುದ್ದೆಯನ್ನೇ ಅಲಂಕರಿಸುವ ಸಾಧ್ಯತೆ. ಆರೋಗ್ಯ ಸ್ಥಿತಿಯಲ್ಲಿ ಉತ್ತಮ.

ಪದಬಂಧ 4708 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉರಿಯಲ್ಲಿ ಬಂದಿಹನಲ್ಲಾ ಈ ವಾರಸುದಾರ! (6)
4.ವೇದೋಕ್ತ ಶಾಸ್ತ್ರಗಳನ್ನು ಮಾಡಿಸುವವನು (4)
5.ಸುಲಭವಲ್ಲದುದು ಇದು (3)
7.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
9.ತಾರುಣ್ಯವನ್ನು ಹೊಂದಿದವಳು (3)
11.ಜಗಳಕ್ಕೊಂದು ಪರ್ಯಾಯ ಪದ (3)
13.ಕನ್ನಡಿಗರ ನಾಡಿದು (4)
15.ಚರ್ಚಿಸುವ ವೇದಿಕೆ (6)

ಮೇಲಿಂದ ಕೆಳಕ್ಕೆ

1.ಉರುವಲ ಹತ್ತಿರವಿರುವ ಹಾವು (3)
2.ಪುರಿಯಲ್ಲಿರುವ ಶತ್ರು! (2)
3.ಆತಂಕ ಹುಟ್ಟಿಸಿರುವ ಯಮ! (3)
6.ಅದೇ ತಾನೇ ತೆಗೆದ ಹೊಸಬೆಣ್ಣೆ (4)
7.ಮೆಟ್ಟಿಲುಳ್ಳ ಕೊಳ (3)
8.ಈತ ಲೋಪಗಳನ್ನು ಸರಿಪಡಿಸುವವನು (4)
10.ವಿಕ್ರಯವನ್ನು ಹೀಗೂ ಹೇಳುವರು (3)
12.ಹರನಿಗೆ ಸಲ್ಲಿಸಿದ ಮುಡುಪು (3)
14.ಈತ ಕವಿತೆ ಬರೆಯುವವನು (2)



4707ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಗಸ 3.ಹೊಂಬಣ್ಣ 4.ಮತಿಹೀನ 6.ನಾಂದಿ 7.ಕೆಲಸ 9.ಸೆರೆಮನೆ 10.ಅನುಮತಿ 11.ಗುಲಾಬಿ 13.ಸಿಪ್ಪೆ 14.ರಥೋತ್ಸವ 16.ಮಡಿಲು 17.ಧುರೀಣ

ಮೇಲಿಂದ ಕೆಳಕ್ಕೆ: 1.ಅಣ್ಣ 2.ಸಮ 3.ಹೊಂದಿಕೆ 5.ನಮೂನೆ 8.ಸನ್ಮತಿ 9.ಸೆರಗು 10.ಅಸುರ 12.ಬಿಸಿಲು 15.ವಧು 16.ಮಣ

ಸುಡೊಕು 5094

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5093 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಮಳೆಯಿಂದ ಗುಣಮಟ್ಟ, ಬೆಲೆ ಕುಸಿತ • ಮಾರುಕಟ್ಟೆಯಲ್ಲಿ ಬೇಡಿಕೆ ಕುಂಠಿತ • ಸಾಗಣೆಕೆ ಇಳಿಕೆ

ಟೊಮೆಟೊಗೆ ಉತ್ತರ ಭಾರತದ ಹಾದಿ ಬಂದ್

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಲ್ಲಿ ಸುರಿದ ಉತ್ತಮ ಮಳೆಯು ಟೊಮೆಟೊ ಬೆಳೆಗಾರರನ್ನು ಉಸಿರುಗಟ್ಟಿಸಿದೆ. ಮಳೆಯಿಂದ ಗುಣಮಟ್ಟ ಮತ್ತು ಬೆಲೆ ಕಳೆದುಕೊಂಡಿರುವ ಟೊಮೆಟೊ ಹೊರರಾಜ್ಯಗಳಿಗೆ ಪೂರೈಕೆ ಆಗುತ್ತಿಲ್ಲ. ಜಿಲ್ಲೆಯ ಟೊಮೆಟೊಗಳಿಗೆ ಉತ್ತರ ಭಾರತದ ರಾಜ್ಯಗಳೇ ಪ್ರಮುಖ ಮಾರುಕಟ್ಟೆಗಳಾಗಿವೆ.

ಚಿಂತಾಮಣಿ, ಬಾಗೇಪಲ್ಲಿ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಟೊಮೆಟೊವನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ. ಜೂನ್‌ನಿಂದ ಆರಂಭವಾಗುವ ಟೊಮೆಟೊ ಸುಗ್ಗಿ ಸೆಪ್ಟೆಂಬರ್‌ನಲ್ಲಿ ಕೊನೆಯಲ್ಲಿ ಅಂತ್ಯವಾಗುತ್ತದೆ. ಈ ಅವಧಿಯಲ್ಲಿ ಒಡಿಶಾ, ಗುಜರಾತ್, ನವದೆಹಲಿ, ಹರಿಯಾಣ, ಛತ್ತೀಸಗಡ ಸೇರಿದಂತೆ ಉತ್ತರ ಭಾರತದ ರಾಜ್ಯಗಳಿಗೆ ಜಿಲ್ಲೆಯಿಂದ ನಿತ್ಯ 250ಕ್ಕೂ ಹೆಚ್ಚು ಲಾರಿಗಳಲ್ಲಿ ಟೊಮೆಟೊ ಸಾಗಣೆ ಆಗುತ್ತದೆ.

ಕೋಲಾರ ಹೈಬ್ರಿಡ್ ಟೊಮೆಟೊಗೆ ದೊಡ್ಡ ಮಾರುಕಟ್ಟೆಯಾದರೆ, ಚಿಂತಾಮಣಿ ನಾಟಿ ತಳಿಯ ಟೊಮೆಟೊಗೆ ಪ್ರಸಿದ್ಧಿ. ಉತ್ತರ ಭಾರತದ ರಾಜ್ಯಗಳಲ್ಲಿ ನಾಟಿ ಟೊಮೆಟೊಗೆ ಹೆಚ್ಚು ಬೇಡಿಕೆ ಇದೆ.

ಸುಗ್ಗಿಯಲ್ಲಿ ಚಿಂತಾಮಣಿ ಎಪಿಎಂಸಿಯಿಂದ ನಿತ್ಯ ಸರಾಸರಿ 160, ಬಾಗೇಪಲ್ಲಿಯಿಂದ 60 ಮತ್ತು ಚಿಕ್ಕಬಳ್ಳಾಪುರದಿಂದ 40 ಲಾರಿಗಳಲ್ಲಿ ಟೊಮೆಟೊ ಉತ್ತರ ಭಾರತಕ್ಕೆ ಸಾಗಣೆ ಆಗುತ್ತದೆ. ಜೂನ್ ಮತ್ತು ಜುಲೈನಲ್ಲಿ ಇದೇ ಸರಾಸರಿಯಲ್ಲಿ ಸಾಗಣೆ ಇತ್ತು. ಆದರೆ ಆಗಸ್ಟ್‌ನಲ್ಲಿ ಹಂತ ಹಂತವಾಗಿ ಸಾಗಣೆ ಕುಸಿದಿದೆ. ಈಗ 40ರಿಂದ 50 ಲಾರಿಗಳಲ್ಲಿ ಮಾತ್ರ ಟೊಮೆಟೊ ಉತ್ತರಭಾರತಕ್ಕೆ ಸಾಗಣೆ ಆಗುತ್ತಿದೆ.

ಮಳೆಯ ಕಾರಣಕ್ಕೆ ಟೊಮೆಟೊ ಬೆಳೆ ನಿರ್ವಹಣೆ ಸಹ ಕಷ್ಟವಾಗಿದೆ. ಉತ್ತರಭಾರತದ ರಾಜ್ಯಗಳಲ್ಲಿ ಮಾರುಕಟ್ಟೆ ಇಲ್ಲದ ಕಾರಣ ಜಿಲ್ಲೆಯಲ್ಲಿ ಆವಕ ಹೆಚ್ಚಿದೆ. ಈ ಎಲ್ಲ ಕಾರಣದಿಂದ ಬೆಲೆ ಕುಸಿದಿದೆ. 14 ಕೆ.ಜಿ (ಒಂದು ಕ್ರೇಟ್) ನಾಟಿ ಟೊಮೆಟೊ ಬೆಲೆ ₹ 40ರಿಂದ 120 ಇದೆ. ಹೈಬ್ರಿಡ್ ಟೊಮೆಟೊಗೂ ಇದೇ ಬೆಲೆ ಇದೆ.

'ಜೂನ್, ಜುಲೈನಲ್ಲಿ ನಿತ್ಯ 150ಕ್ಕೂ ಹೆಚ್ಚು ಲೋಡ್ ಟೊಮೆಟೊವನ್ನು ಉತ್ತರಭಾರತಕ್ಕೆ ಕಳುಹಿಸಲಾಗುತ್ತಿತ್ತು. ಸದ್ಯ ತಮಿಳುನಾಡು ಮತ್ತು ಛತ್ತೀಸಗಡಕ್ಕೆ 40 ಲಾರಿಗಳಲ್ಲಿ ಸಾಗಣೆ ಆಗುತ್ತಿದೆ. ಕಳೆದ ವರ್ಷ ಸಮಸ್ಯೆ ಇರಲಿಲ್ಲ. ಈ ಬಾರಿ ಮಳೆ ಕಾರಣದಿಂದ ಈ ಸ್ಥಿತಿ ಎದುರಾಗಿದೆ' ಎಂದು ಚಿಂತಾಮಣಿ ಎಪಿಎಂಸಿ ಕಾರ್ಯದರ್ಶಿ ಉಮಾ 'ಪ್ರಜಾವಾಣಿ'ಗೆ ತಿಳಿಸಿದರು.

'ಉತ್ತಮ ಇಳುವರಿ ಬರುತ್ತಿದೆ. ಆದರೆ ಮಳೆಯ ಕಾರಣ ನಿರ್ವಹಣೆ ಕಷ್ಟವಾಗಿದೆ. ಮಳೆಯಲ್ಲಿ ನೆನೆದ ಟೊಮೆಟೊವನ್ನು ವ್ಯಾಪಾರಿಗಳು ಖರೀದಿಸುತ್ತಿಲ್ಲ. ಬೆಲೆಯೂ ಕುಸಿದಿದೆ' ಎಂದು ರೈತ ಪೆರೇಸಂದ್ರದ ಶಾಮಣ್ಣ ಬೇಸರ ವ್ಯಕ್ತಪಡಿಸಿದರು.

'ಮಳೆಯಲ್ಲಿ ನೆನೆದ ಟೊಮೆಟೊವನ್ನು ಲಾರಿಯಲ್ಲಿ ಎರಡು ಮೂರು ದಿನಗಳ ಕಾಲ ಹೊರರಾಜ್ಯಗಳಿಗೆ ಕಳುಹಿಸಲು ಸಾಧ್ಯವಿಲ್ಲ. ಒಂದು ವೇಳೆ ಕಳುಹಿಸಿದರೆ ಅಲ್ಲಿಗೆ ತಲುಪುವ ವೇಳೆಗೆ ಹಣ್ಣು ಡ್ಯಾಮೇಜ್ ಆಗಿರುತ್ತದೆ. ಮತ್ತೆ ವಾಪಸ್ ಕಳುಹಿಸುವರು' ಎಂದು ಚಿಕ್ಕಬಳ್ಳಾಪುರ ಎಪಿಎಂಸಿ ಟೊಮೆಟೊ ವ್ಯಾಪಾರಿ ಸುರೇಶ್ ತಿಳಿಸುವರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3jK94tb

ಮುಖ್ಯಾಂಶಗಳು
- ಚಿಂತಾಮಣಿಯಿಂದ ಉತ್ತರಭಾರತಕ್ಕೆ ನಾಟಿ ಟೊಮೆಟೊ
- ಮಳೆಯಿಂದ ನಿರ್ವಹಣೆಗೆ ತೊಡಕು
- ಟೊಮೆಟೊ ಬೆಲೆ ಕುಸಿತ

ಚಿಕ್ಕಬಳ್ಳಾಪುರ ಎಪಿಎಂಸಿಯಲ್ಲಿ ಟೊಮೆಟೊ ವಹಿವಾಟು

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಲೈಂಗಿಕ ದೌರ್ಜನ್ಯದ ವಿರುದ್ಧ ಅರಿವು
ಭಾಗವಹಿಸುವವರು: ಹುಬ್ಬಳ್ಳಿಯ 'ಆಸರೆ' ನವ ಜೀವನ ಮನೋರೋಗ ಕೇಂದ್ರದ ಮನೋರೋಗ ತಜ್ಞೆ ಡಾ. ಚೈತ್ರ ಹಿರೇಮಠ
facebook LIVE ಇಂದು 4 ಕ್ಕೆ

ಪಾಡ್‌ಕಾಸ್ಟ್:
ದಿನದ ವಿಶೇಷ: ಸಿನಿ ಮ್ಯಾಟಿನಿ
ಪ್ರತಿ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ
ಕನ್ನಡ ಧ್ವನಿ

ನಾಳೆ
ಮುಖಾಮುಖಿ: ಯಕ್ಷಲೋಕದ ಸವ್ಯಸಾಚಿ ಡಾ.ಎಂ. ಪ್ರಭಾಕರ ಜೋಶಿ ಅವರ ಜೊತೆ ಬೆಳಿಗ್ಗೆ 11 ರಿಂದ 12
ಸೆಲೆಬ್ರಿಟಿ LIVE

ಕೋಣೆಯಲ್ಲಿ 11.4 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿಯಲ್ಲಿ ಸಾಧಾರಣ ಮಳೆ ಮುಂದುವರಿದಿದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಣೆಯಲ್ಲಿ 11.4 ಸೆಂ. ಮೀ., ಸಿದ್ದಾಪುರದಲ್ಲಿ 9.6 ಸೆಂಮೀ ಮಳೆ ದಾಖಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಾಗ ಮಳೆಯಾಗುತ್ತಿದೆ. ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನಲ್ಲಿ ಗರಿಷ್ಠ 3.1 ಸೆಂ.ಮೀ. ಮಳೆಯಾಗಿದ್ದು, ಜಿಲ್ಲೆಯಲ್ಲಿ ಸರಾಸರಿ 1.8 ಸೆಂ.ಮೀ. ಮಳೆ ದಾಖಲಾಗಿದೆ.

ಸುಳ್ಳು ಸುದ್ದಿಗೆ 'ಸುಪ್ರೀಂ' ಗುದ್ದು

ಒಂದನೇ ಪುಟದಿಂದ

ಮಾಧ್ಯಮ ಸ್ವಾತಂತ್ರ್ಯ ಮತ್ತು ಕಟ್ಟಲೆಗಳ ಇಲ್ಲದ ಸುದ್ದಿ ಪ್ರಸಾರದ ನಡುವೆ ಜನರ ಹಕ್ಕುಗಳ ನಡುವೆ ಸಮತೋಲನ ಸಾಧಿಸುವುದೇ ದೊಡ್ಡ ಸವಾಲು ಎಂದು ಹೇಳಿದರು.

ನಿಜಾಮುದ್ದೀನ್ ಮರ್ಕಜ್ ಬಗ್ಗೆ ಸುದ್ದಿಯನ್ನೇ ಪ್ರಕಟಿಸದಂತೆ ತಡೆ ನೀಡುವುದು ಮಾಧ್ಯಮ ಸ್ವಾತಂತ್ರ್ಯವನ್ನು ದಮನ ಮಾಡಿದಂತೆ, ಸಮಾಜಕ್ಕೆ ಸುದ್ದಿ ಕೊಡುವ ಪತ್ರಕರ್ತರ ಹಕ್ಕು ಮೊಟಕುಗೊಳಿಸಿದಂತೆ ಎಂದು ಸುಪ್ರೀಂ ಕೋರ್ಟ್‌ಗೆ ಸರ್ಕಾರ ಈ ಹಿಂದೆ ಹೇಳಿತ್ತು.

ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪ್ರಶ್ನಿಸಿ ವಿವಿಧ ಹೈಕೋರ್ಟ್‌ಗಳಿಗೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಕೇಂದ್ರವು ಮನವಿ ಸಲ್ಲಿಸಿದೆ. ಈ ಅರ್ಜಿಯ ವಿಚಾರಣೆಯನ್ನು ಆರು ವಾರಗಳ ಬಳಿಕ ನಡೆಸುವುದಾಗಿ ಪೀಠವು ಹೇಳಿದೆ.

ತಬ್ಲೀಗ್ ಜಮಾತ್‌ನಲ್ಲಿ ನಡೆದ ದುರದೃಷ್ಟಕರ ಘಟನೆಯನ್ನೇ ಬಳಸಿಕೊಂಡು ಮುಸ್ಲಿಂ ಸಮುದಾಯವನ್ನು ಕೆಟ್ಟದಾಗಿ ಬಿಂಬಿಸಲು ಯತ್ನಿಸಲಾಗುತ್ತಿದೆ ಎಂದು ಜಮೀಯತ್ ಅರ್ಜಿಯಲ್ಲಿ ಹೇಳಲಾಗಿದೆ.

ಕೇಂದ್ರ ದೆಹಲಿಯಲ್ಲಿರುವ ನಿಜಾಮುದ್ದೀನ್ ಮರ್ಕಜ್‌ನಲ್ಲಿ ನಡೆದ ತಬ್ಲೀಗ್ ಸಮಾವೇಶವು ಕೋವಿಡ್ ಇಡೀ ದೇಶಕ್ಕೆ ಹರಡಲು ಕಾರಣವಾಯಿತು. ದೇಶದ ವಿವಿಧ ಭಾಗಗಳ ಜನರು ಸಮಾವೇಶದಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಊರುಗಳಿಗೆ ಹಿಂದಿರುಗುವ ಮೂಲಕ ಕೋವಿಡ್ ಹರಡಿದರು ಎಂಬ ಸುದ್ದಿಗಳು ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದವು.

'3ನೇ ಪೀಠ ಹಿಂದೆ ಯಾರಿದ್ದಾರೆ ಗೊತ್ತಿದೆ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಜಮಖಂಡಿಯಲ್ಲಿ ನಡೆದ ಸಭೆಯ ಹಿಂದೆ ಯಾರಿದ್ದಾರೆ ಎಂಬುದು ಸಮಾಜದ ಎಲ್ಲರಿಗೂ ಗೊತ್ತಿದೆ. ಶೀಘ್ರ ಅದು ಬಹಿರಂಗವಾಗಲಿದೆ. ಮೂರನೇ ಪೀಠದ ನಿರ್ಧಾರದ ಬಗ್ಗೆ ನಾನು ತಲೆಕೆಡಿಸಿಕೊಳ್ಳೊಲ್ಲ. ಆ ಬಗ್ಗೆ ಏನೂ ಮಾತಾಡೊಲ್ಲ' ಎಂದು ಕೂಡಲ ಸಂಗಮ ಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಪ್ರತಿಕ್ರಿಯಿಸಿದರು. '2ಎ ಮೀಸಲಾತಿ ಚಳವಳಿ ಹತ್ತಿಕ್ಕಲು ಬೇರೆ ಬೇರೆ ಬೆಳವಣಿಗೆ ನಡೆಯುತ್ತಿವೆ. ಇದು ಕೂಡ ಅದರ ಭಾಗ. ಸಮಾಜದ ಏಳಿಗೆಗೆ ನಾನು ದುಡಿಯುವುದು ಸಹಿಸಲು ಆಗದೇ ಹೊಟ್ಟೆಕಿಚ್ಚಿನಿಂದ ಹೀಗೆ ಮಾಡಲಾಗುತ್ತಿದೆ' ಎಂದರು.

ಪ್ರತಿಕ್ರಿಯೆಸಲ್ಲ: 'ನಮ್ಮ ಹರಿಹರ ಪೀಠದ ಬಗ್ಗೆ ಏನಾದರೂ ಕೇಳಿ ನಾನು ಉತ್ತರಿಸುವೆ. ಆದರೆ ಬೇರೆ ಸಂಗತಿಗಳ ಬಗ್ಗೆ ನಾನು ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ' ಎಂದು ಹರಿಹರ ಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬೆಲೆ ಏರಿಕೆ; ಹಣಕಾಸು ಸಚಿವರ ಜೊತೆ ಚರ್ಚೆ: ಸಿ.ಎಂ.

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ದಿನನಿತ್ಯ ಬಳಕೆ ವಸ್ತುಗಳ ಬೆಲೆ ಏರಿಕೆ ಕುರಿತಂತೆ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜೊತೆ ಚರ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿಕೆಯಾದ ಕಾರಣ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ದರ ಏರಿಕೆಯಾಗಿದೆ. ಸೆ.5 ರಂದು ನಿರ್ಮಲಾ ಸೀತಾರಾಮನ್ ಅವರು ರಾಜ್ಯಕ್ಕೆ ಬರಲಿದ್ದು, ಅವರೊಂದಿಗೆ ಚರ್ಚಿಸುತ್ತೇನೆ' ಎಂದರು.

'ಕೊರೊನಾ ಸೋಂಕು ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಕೇರಳ ಗಡಿಯಿಂದ ರಾಜ್ಯಕ್ಕೆ ಬರುವವರು ನಕಲಿ ಕೋವಿಡ್ ನೆಗೆಟಿವ್ ವರದಿ ಪಡೆದು ಬರುತ್ತಿರುವುದು ಪತ್ತೆಯಾಗಿದೆ. ಹೀಗಾಗಿ ಎಲ್ಲರನ್ನೂ ಪರೀಕ್ಷಿಸಿ ರಾಜ್ಯದೊಳಗೆ ಬಿಡಲಾಗುತ್ತಿದೆ. ನಿಯಮ ಮೀರಿದವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

ಲಸಿಕೆ ಪಡೆಯದವರಿಗೂ ಪಡಿತರ, ಪಿಂಚಣಿ ಸೌಲಭ್ಯ

ಬೆಂಗಳೂರು: ಕೋವಿಡ್ ಲಸಿಕೆ ಪಡೆಯದವರಿಗೂ ಪಡಿತರ, ಪಿಂಚಣಿ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತದೆ ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

ಲಸಿಕೆ ನೀಡುವುದಕ್ಕೂ ಪಡಿತರ, ಪಿಂಚಣಿ ವಿತರಣೆ ಕಾರ್ಯಕ್ರಮಗಳಿಗೂ ಸಂಬಂಧವಿಲ್ಲ. ಒಂದು ವೇಳೆ ಲಸಿಕಾ ಕಾರ್ಯಕ್ರಮವನ್ನು ಇತರ ಸಾಮಾಜಿಕ ಕಾರ್ಯಕ್ರಮಗಳಿಗೆ ತಪ್ಪಾಗಿ ಜೋಡಿಸಿದ್ದರೆ ಕೈಬಿಡಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ.

ಅಂತರ ಕಾಯ್ದುಕೊಳ್ಳಿ

'ಪೆಟ್ರೋಲ್, ಟೊಮೆಟೊ, ಈರುಳ್ಳಿ ಬಗ್ಗೆ ಮಾತನಾಡಲ್ಲ'

ಒಂದನೇ ಪುಟದಿಂದ

'ನಾವು ಆ ಬಗ್ಗೆ ಕೇಳುತ್ತಿಲ್ಲ, ಬೆಲೆ ಏರಿಕೆ ಬಗ್ಗೆ ಜನರಿಗೆ ಸ್ಪಷ್ಟನೆ ನೀಡಿ' ಎಂಬ ಮರು ಪ್ರಶ್ನೆಗೆ, 'ಆಯುಷ್ಮಾನ್ ಭಾರತ್ ಜಾರಿ ಆಗಿದೆ. ಎಲ್ಲರಿಗೂ ಹಣ ಬೇಕು. ಎಲ್ಲ ಯೋಜನೆಗಳಿಗೂ ಹಣ ಬೇಕು. ತೆರಿಗೆ ಮೂಲಕ ಹಣ ಬರುತ್ತಾ ಇದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ತಾತ್ಕಾಲಿಕವಾಗಿದ್ದು, ಮುಂದೆ ಕಡಿಮೆ ಆಗಬಹುದು. ನೀವು ಮಾಧ್ಯಮದವರು ಚರ್ಚೆ ಮಾಡಬೇಕಾದರೆ ಹಣದುಬ್ಬರ ಆಧರಿಸಿ ಚರ್ಚೆ ಮಾಡಬೇಕು. ಈ ರೀತಿ ಮಾತನಾಡುವುದಲ್ಲ. ಒಂದು ಪೆಟ್ರೋಲ್, ಒಂದು ಟೊಮೆಟೊ , ಒಂದು ಈರುಳ್ಳಿ ವಿಚಾರ ಇಟ್ಟುಕೊಂಡು ಚರ್ಚೆ ಮಾಡಬೇಡಿ' ಎಂದರು.

'ತೈಲ ಬೆಲೆ ಹೆಚ್ಚಳದ ಜೊತೆ ಜೊತೆಗೇ ಹಣದುಬ್ಬರದ ಪರಿಸ್ಥಿತಿಯನ್ನೂ ಗಮನಿಸಿ. ಯುಪಿಎ ಆಡಳಿತದಲ್ಲಿ ಹಣದುಬ್ಬರವು ಶೇ 15 ರಿಂದ 20ರಷ್ಟಿತ್ತು. ಆದರೆ, ಈಗ ನರೇಂದ್ರ ಮೋದಿ ಆಡಳಿತದಲ್ಲಿ ಹಣದುಬ್ಬರ ಮತ್ತು ಬೆಲೆ ಏರಿಕೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಕೇವಲ 100 ದಿನಗಳಲ್ಲಿ ಹಣದುಬ್ಬರವನ್ನು ನಿಯಂತ್ರಿಸಲಾಗುವುದು ಎಂದು ಯುಪಿಎ ಸರ್ಕಾರದ ಹಣಕಾಸು ಸಚಿವರಾಗಿದ್ದ ಚಿದಂಬರಂ ಹಿಂದೊಮ್ಮೆ ಹೇಳಿದ್ದರು ಆದರೆ, ಅದು ಏರುತ್ತಲೇ ಹೋಯಿತು. ಬೆಲೆ ಏರಿಕೆ ನಿಯಂತ್ರಣ ಮಾಡಲಾಗಲಿಲ್ಲ' ಎಂದು ವಿವರಿಸಿದರು.

ಕೇಂದ್ರದಲ್ಲಿ ಮೋದಿ ಮತ್ತು ರಾಜ್ಯದಲ್ಲಿ ಬೊಮ್ಮಾಯಿ ಸರ್ಕಾರಗಳು ಅಭಿವೃದ್ಧಿ ಕೆಲಸ ಮಾಡುತ್ತಿದ್ದು, ಇಬ್ಬರ ಸರ್ಕಾರವೂ ಸೇರಿ ಡಬಲ್ ಎಂಜಿನ್ ಸರ್ಕಾರವಾಗಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ಸ್ಥಳೀಯ ಸಂಸ್ಥೆ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಎಲ್ಲ ರೀತಿಯ ಸಿದ್ಧತೆ ನಡೆಸಿಕೊಳ್ಳಲಾಗುತ್ತಿದೆ ಎಂದು ಅರುಣ್ ಸಿಂಗ್ ಹೇಳಿದರು.

ಬಿಜೆಪಿ ವಿಶೇಷ ಸಭೆಯಲ್ಲಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರನ್ನು ಗೌರವಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಜಿ.ನಾರಾಯಣ್, ಸಂಸದ ಡಿ.ವಿ.ಸದಾನಂದಗೌಡ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್ ಇದ್ದರು

ಕೋಣದ ಮರಿ ಕಡಿದು ಕಿಚ್ಚ ಸುದೀಪ್ ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): ಚಲನಚಿತ್ರ ನಟ ಕಿಚ್ಚ ಸುದೀಪ್ ಅವರ ಅಭಿಮಾನಿ ಬಳಗದ ಸದಸ್ಯರು ತಾಲ್ಲೂಕಿನ ಬಂಡ್ರಿ ಗ್ರಾಮದಲ್ಲಿ ಗುರುವಾರ ಕೋಣದ ಮರಿಯನ್ನು ಸಾರ್ವಜನಿಕವಾಗಿ ಕಡಿದು, ಅದರ ರಕ್ತವನ್ನು ಕಿಚ್ಚ ಸುದೀಪ್ ಅವರ ಭಾವಚಿತ್ರಕ್ಕೆ ಎರಚುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ಸದಾ ಜನನಿಬಿಡ ಸ್ಥಳವಾಗಿರುವ ಗ್ರಾಮದ ಮಧ್ಯದ ವೃತ್ತದಲ್ಲಿ ಈ ರೀತಿ ಕೋಣದ ಮರಿಯನ್ನು ಕಡಿದು ಕೇಕೆ ಹಾಕುತ್ತಿರುವ ದೃಶ್ಯಗಳು ವಿಡಿಯೋದಲ್ಲಿವೆ.

ಕೆಲವು ಕಡೆಗಳಲ್ಲಿ ಸುದೀಪ್ ಅವರ ಹುಟ್ಟು ಹಬ್ಬದ ಅಂಗವಾಗಿ ರಕ್ತ ದಾನದಂತಹ ಉತ್ತಮ ಕಾರ್ಯಗಳನ್ನು ನಡೆಸಲಾಗಿದೆ. ಆದರೆ, ಇಲ್ಲಿ ಪ್ರಾಣಿಯೊಂದನ್ನು ಬಲಿ ನೀಡಿ, ಭಾವಚಿತ್ರಕ್ಕೆ ರಕ್ತವನ್ನು ಎರಚಿದ್ದರ ಬಗ್ಗೆ ಆಕ್ರೋಶ ವ್ಯಕ್ತವಾಗಿದೆ.

'ಘಟನೆ ಕುರಿತು ಕೂಡ್ಲಿಗಿ ಪೊಲೀಸರಿಗೆ ತಿಳಿಸಲಾಗಿದೆ. ಪೊಲೀಸರು ಗ್ರಾಮಕ್ಕೆ ತೆರಳಿ, ವಿಡಿಯೊ ಆಧಾರದ ಮೇಲೆ ಪ್ರಕರಣದಲ್ಲಿ ಭಾಗಿಯಾದವರನ್ನು ಪತ್ತೆ ಹಚ್ಚುವ ಕಾರ್ಯ ನಡೆಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಎಫ್.ಐ. ಆರ್ ದಾಖಲಿಸಲಾಗುವುದು' ಎಂದು ತಹಶೀಲ್ದಾರ್ ಎಚ್.ಜೆ. ರಶ್ಮಿ ತಿಳಿಸಿದರು.

ಈ ಘಟನೆಗೆ ಸಂಬಂಧಪಟ್ಟಂತೆ 25 ಆರೋಪಿಗಳ ವಿರುದ್ಧ ಕೂಡ್ಲಿಗಿ ಠಾಣೆಯ ಪೊಲೀಸರು ಪ್ರಕರಣವನ್ನು ದಾಖಲಿಸಿದ್ದಾರೆ.

ಇ–ಕೆವೈಸಿ ಅವಧಿ ವಿಸ್ತರಣೆ

ಬೆಂಗಳೂರು: ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯು ಇ–ಕೆವೈಸಿ ಅವಧಿಯನ್ನು ಇದೇ 10ರವರೆಗೆ ವಿಸ್ತರಿಸಿದೆ.

ಇನ್ನೂ ಇ–ಕೆವೈಸಿ ಮಾಡಿಕೊಳ್ಳದ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಪಡಿತರ ಚೀಟಿದಾರರು ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಉಚಿತವಾಗಿ ಇ-ಕೆವೈಸಿ ಮಾಡಿಕೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ಜಿಲ್ಲೆಯಲ್ಲಿ ಇದುವರೆಗೂ ಶೇ 66.43ರಷ್ಟು ಇ-ಕೆವೈಸಿ ಆಗಿದ್ದು ಶೇ 33.57 ಫಲಾನುಭವಿಗಳ ನೋಂದಣಿ ಬಾಕಿ ಇದೆ ಎಂದು ಹೇಳಲಾಗಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಯೋಜನಾ ವಿಭಾಗ, ಪಿ.ಡಬ್ಲ್ಯೂಡಿ ಮಿನಿ ಸೌಧ, III ನೇ ಮಹಡಿ, ಮೈದಾನ ರಸ್ತೆ, ಮಂಗಳೂರು –575001. ದೂರವಾಣಿ ಸಂ. 0824 2421544, ಮೊಬೈಲ್: 9449599472
ಫ್ಯಾಕ್ಸ್: 0824–2421544 ಇ–ಮೇಲ್: kn-dkn@pmgsy.nic.in
NO:PD/MNG/FLOOD DAMAGE/KSFD 11-18/KSFD11-19//Tend//2021-22/TCH/559 Date: 01.09.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ರಾಜ್ಯಪಾಲರ ಪರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ರಸ್ತೆಗಳನ್ನು ನಮ್ಮ ಗ್ರಾಮ ನಮ್ಮ ರಸ್ತೆ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅಭಿವೃದ್ಧಿಪಡಿಸಲು ಪ್ಯಾಕೇಜ್ ಸಂಖ್ಯೆ KSFD 11-18 ಹಾಗೂ ಪ್ಯಾಕೇಜ್ ಸಂಖ್ಯೆ KSFD 11-19 ಗಳಿಗೆ ದ್ವಿಲಕೋಟೆ ಪದ್ಧತಿಯಡಿ E-procurement ಮುಖಾಂತರ ಲೋಕೋಪಯೋಗಿ ಇಲಾಖೆ ಹಾಗೂ ಪಂಚಾಯತ್ ಇಂಜಿನಿಯರಿಂಗ್ ಇಲಾಖೆಯಿಂದ 1ನೇ ದರ್ಜೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. E-procurement ನಲ್ಲಿ ತಾಂತ್ರಿಕ Bid ಹಾಗೂ ಹಣಕಾಸು Bidಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 23.09.2021, 16.00 ಗಂಟೆ. ಹೆಚ್ಚಿನ ವಿವರಗಳಿಗೆ https://www.eproc.karnataka.gov.in ವೆಬ್‌ಸೈಟ್‌ಗೆ Log On ಆಗಿ ವಿವರ ಪಡೆಯಬಹುದು. ಅಥವಾ ಈ ಕಚೇರಿಯಿಂದ ಕಚೇರಿ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಯೋಜನಾ ವಿಭಾಗ, ಮಂಗಳೂರು
DIPR/ADM/MCA/414/21-22 dt.02.09.2021

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ–2/ಟೆಂಡರ್/2021–22 ದಿ: 27.08.2021

ಟೆಂಡರ್ ಪ್ರಕಟಣೆ ಸಂಖ್ಯೆ:10/2021–22
(ಇ ಪ್ರೊಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336. ಮಧುಗಿರಿ ತಾಲ್ಲೂಕಿನ 1 ಪ್ಯಾಕೇಜ್ ಕಾಮಗಾರಿ. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.821.24ಲಕ್ಷ ಗಳವರೆಗೆ. ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 01.09.2021 ರಿಂದ 30.09.2021 ಸಂಜೆ 4.00 ಗಂಟೆಯವರೆಗೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ (ಆನ್‌ಲೈನ್ ಮೂಲಕ): 30.09.2021 ರ ಸಂಜೆ 4.00 ಗಂಟೆವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01.10.2021 ಸಂಜೆ 4.00ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 05.10.2021 ರ ಸಂಜೆ 4.00ಗಂಟೆಯ ನಂತರ. **ವಿಚಾರಣೆ:** ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 28.09.2021 ಸಂಜೆ 4.00 ಗಂಟೆವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/263/MCA/2021-22

ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
(ಕರ್ನಾಟಕ ಸರ್ಕಾರದ ಉದ್ಯಮ)
ನಂ 17/5, 2ನೇ ಮಹಡಿ, ಓಬ್ಲಾಂಗ್ ಬ್ಲಾಕ್, ಯೂನಿಟಿ ಕಟ್ಟಡ, ಜೆ.ಸಿ. ರಸ್ತೆ, ಬೆಂಗಳೂರು–560002
ದೂ : 080–22215222 e-mail:adijambava2019@gmail.com

2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಮಾದಿಗ ಮತ್ತು ಸಂಬಂಧಿತ ಸಮುದಾಯದವರ ಆರ್ಥಿಕ ಸಬಲೀಕರಣಕ್ಕಾಗಿ ಅರ್ಜಿಗಳ ಆಹ್ವಾನ

ಯೋಜನೆಗಳು :
1) ಸ್ವಯಂ ಉದ್ಯೋಗ ಯೋಜನೆ
 • ನೇರ ಸಾಲ ಯೋಜನೆ
 • ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ)
2) ಮೈಕ್ರೋ ಕ್ರೆಡಿಟ್ ಫೈನಾನ್ಸ್ (ಕಿರು ಸಾಲ) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)
3) ಗಂಗಾ ಕಲ್ಯಾಣ ಯೋಜನೆ
4) ಭೂ ಒಡೆತನ ಯೋಜನೆ

ಫಲಾಪೇಕ್ಷಿಗಳು: ಅರ್ಜಿಗಳನ್ನು ನಿಗಮದ ಲಿಂಕ್ https://adijambava.online ಮೂಲಕ ಅವಶ್ಯ ದಾಖಲೆಗಳೊಂದಿಗೆ ಅಪ್‌ಲೋಡ್ ಮಾಡಬಹುದು. ಅರ್ಜಿಗಳನ್ನು ಇದೇ ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅವಶ್ಯ ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿಗಳಲ್ಲಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ನಿಗದಿಯಾಗಿದ್ದ ಕೊನೆಯ ದಿನಾಂಕ 02.09.2021 ನ್ನು **ವಿಸ್ತರಿಸಿ ದಿನಾಂಕ: 09.09.2021 ರವರೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿ ನಿಗದಿಪಡಿಸಿದೆ.**

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ/ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ರವರನ್ನು ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂನ/ಜಿಎ/1375/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
ಫೋನ್: 080–22865661/22865747/22860509 ಇ–ಮೇಲ್:mdadcl2011@gmail.com

2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ಜಾತಿ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು :
- ಸ್ವಯಂ ಉದ್ಯೋಗ ಕಾರ್ಯಕ್ರಮಗಳು
 • ಸ್ವಯಂ ಉದ್ಯೋಗ ನೇರಸಾಲ ಯೋಜನೆ
 • ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
- ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)
- ಭೂ ಒಡೆತನ ಯೋಜನೆ
- ಸಮಗ್ರ ಗಂಗಾ ಕಲ್ಯಾಣ ಯೋಜನೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 02.09.2021ನ್ನು ವಿಸ್ತರಿಸಿ ದಿನಾಂಕ: 10.09.2021 ರವರೆಗೆ ನಿಗದಿಪಡಿಸಲಾಗಿದೆ.

ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ www.adcl.karnataka.gov.in ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳಲ್ಲಿನ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂನ/1391/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕನೀನಿನಿ, ಎಚ್.ಬಿ.ಸಿ. ವಿಭಾಗ, ಅಥಣಿ – 591 304, ತಾಲ್ಲೂಕು ಅಥಣಿ, ಜಿಲ್ಲೆ : ಬೆಳಗಾವಿ.
ಸಂಖ್ಯೆ: ಕನೀನಿನಿ/ಎಚ್.ಬಿ.ಸಿ./ಪಿಬಿ/ಟೆಂಡರ್/ಹ.ಏ.ನೀ.ಯೋ./21–22/1320 ದಿನಾಂಕ: 30–08–2021

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಎಚ್.ಬಿ.ಸಿ. ವಿಭಾಗ ಅಥಣಿ, ತಾಲ್ಲೂಕು : ಅಥಣಿ ಜಿಲ್ಲೆ : ಬೆಳಗಾವಿ ಇವರು ಹಲ್ಯಾಳ ಏತ ನೀರಾವರಿ ಯೋಜನೆಯ ಯೋಜನೆಯಡಿಯಲ್ಲಿ ಕಾಮಗಾರಿಗಳು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವರು ಟೆಂಡರ್‌ನ್ನು ಪಿ.ಡಬ್ಲ್ಯೂ.ಡಿ. ಕ್ಲಾಸ್–1 / ಅನುಭವಿತ ಹಾಗೂ ಸಂಪನ್ಮೂಲ ಭರಿತ, ಕರ್ನಾಟಕ ನೀರಾವರಿ ನಿಗಮದಲ್ಲಿ ನೋಂದಾಯಿತ ಕೆಟಗರಿ–3, ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಎರಡು ಕವರ್ ವಿಧಾನವನ್ನು (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದು. ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 133.93 ಲಕ್ಷ ಮತ್ತು ರೂ. 360.09 ಲಕ್ಷ.

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 06–09–2021 ರ 10.30 ಬೆಳಿಗ್ಗೆಯಿಂದ 17–09–2021 ರ ಸಾಯಂಕಾಲ 4.00 ಗಂಟೆವರೆಗೆ. 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ : 07–09–2021 ರ ಸಾಯಂಕಾಲ 4.00 ಗಂಟೆವರೆಗೆ. 3) ಪ್ರೀ ಬಿಡ್ ಮೀಟಿಂಗ್ ದಿನಾಂಕ (ಕಾನಿಇಂ. ಕ.ನೀ.ನಿ.ನಿ., ಎಚ್.ಬಿ.ಸಿ. ವಿಭಾಗ ಅಥಣಿ ಕಛೇರಿಯಲ್ಲಿ) ಕ್ರ.ಸಂ.1 ಮತ್ತು 2 : 07–09–2021 ರ ಬೆಳಿಗ್ಗೆ 11.00 ಗಂಟೆಗೆ. 4) ಪೂರ್ಣವಾಗಿ ತುಂಬಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 17–09–2021 ರ ಸಾಯಂಕಾಲ 4.00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ. ವಿಭಾಗ ಕಛೇರಿ ಅಥಣಿಯಲ್ಲಿ) : 20–09–2021 ರ ಬೆಳಿಗ್ಗೆ 11.00 ಗಂಟೆಗೆ. 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ. ವಿಭಾಗ ಕಛೇರಿ ಅಥಣಿಯಲ್ಲಿ) : 24–09–2021 ರ ಬೆಳಿಗ್ಗೆ 11.00 ಗಂಟೆಗೆ.

ಇನ್ನೂಳಿದ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ–ಸಂಗ್ರಹಣಾ ಕೋಶ ವೆಬ್‌ಸೈಟ್ http://www.eproc.karnataka.gov.in/e-portal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕನೀನಿನಿ, ಎಚ್.ಬಿ.ಸಿ. ವಿಭಾಗ, ಅಥಣಿ.
ಡಿಐಪಿಆರ್/ಬೆಳಗಾವಿ/697/ಮಣಿಪಾಲ್/2021–22

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–09
ಸಂಖ್ಯೆ: ಕೆಆರ್‌ಐಡಿಎಲ್/ಪಿಟಿಆರ್/003/2021–22 ದಿನಾಂಕ: 02.09.2021

ಟೆಂಡರ್ ಪ್ರಕಟಣೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್), ಇವರು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ 72 ಪ್ರಿಂಟರ್‌ಗಳು ಮೋನೊ ಎ3 ಫೋಟೊಕಾಪಿಯರ್, ಮೋನೊ ಎ4 ಲೇಜರ್‌ಜೆಟ್ ಪ್ರಿಂಟರ್, ಕಲರ್ ಎ4 ಇಂಕ್ ಟ್ಯಾಂಕ್, ಕಲರ್ ಎ3 ಫೋಟೊಕಾಪಿಯರ್ ಜೊತೆಗೆ ರೀಫಿಲ್ ಯೂನಿಟ್ ಖರೀದಿಸಲು ಸಂಸ್ಥೆ (ಓಇಎಂ)ಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.
ಆಸಕ್ತಿಯುಳ್ಳ ಬಿಡ್ಡುದಾರರು ಕೇಂದ್ರದ ಇ–ಆಡಳಿತದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಬಳಸಿಕೊಂಡು ಇಎಂಡಿಯನ್ನು ಪಾವತಿಸುವುದು ಮತ್ತು ವಿದ್ಯುನ್ಮಾನವಾಗಿ ತಾಂತ್ರಿಕ ಹಾಗೂ ವಾಣಿಜ್ಯ ಪ್ರಕ್ರಿಯೆಗಳನ್ನು ಸಲ್ಲಿಸಬೇಕು.
ಇ–ಪ್ರೊಕ್ ಪೋರ್ಟಲ್‌ನ ಯುಆರ್‌ಎಲ್: http://www.eproc.karnataka.gov.in
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.09.2021, ಸಂಜೆ 4.00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ: ಮುಖ್ಯ ಅಭಿಯಂತರರು (ಬಿಬಿಎಂಪಿ), 4ನೇ ಮತ್ತು 5ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಕೆಆರ್‌ಐಡಿಎಲ್, ಬೆಂಗಳೂರು–09.
ದೂ.ಸಂಖ್ಯೆ: 080–28015604

ಸಹಿ/– ಮುಖ್ಯ ಅಭಿಯಂತರರು (ಬಿಬಿಎಂಪಿ),
ಕೆಆರ್‌ಐಡಿಎಲ್, ಬೆಂಗಳೂರು.
ವಾಸಾಸಂಇ/ಉನಿ.ನ/1380/ಎಂಸಿಎ/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯಗಳು, ಪೂರ್ವ ವಿಭಾಗ, ಬಿಬಿಎಂಪಿ, 2ನೇ ಮಹಡಿ, ಹೊಸ ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–560 002
ನಂ.: ಕಾಪಾಅ/ರಮೂ/ಪೂರ್ವ/ಟೆಂಡರ್/01/2021–22 ದಿನಾಂಕ: 01.09.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ (ಪೂರ್ವ ವಿಭಾಗ), ಇವರು ಈ ಕೆಳಗಿನ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	ಹೊಸ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ರಕ್ಷಣಾ ಭೂಮಿ ಸಂಪರ್ಕ ಕಲ್ಪಿಸಲು ಬಾಣಸವಾಡಿ ಮುಖ್ಯ ರಸ್ತೆ ಮತ್ತು ಹಳೆಯ ಮದ್ರಾಸ್ ರಸ್ತೆಯನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಸೇರಿದಂತೆ ಬೈಯಪ್ಪನಹಳ್ಳಿಯ ROB LC 136A ನಲ್ಲಿ ಹೆಚ್ಚುವರಿ 4 ವ್ಯಾಪ್ತಿಗಳಿಗಾಗಿ PSC ಸೂಪರ್ ಸ್ಟ್ರಕ್ಚರ್ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು.	1288

ಇಎಂಡಿ (ರೂ. ಲಕ್ಷಗಳಲ್ಲಿ): ಇಎಂಡಿ ಘೋಷಣೆ ನಮೂನೆ

ವೇಳಾ ಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **03.09.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಪೂರ್ವ ಸಭೆಯು **07.09.2021ರ ಸಂಜೆ 4:00 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯ, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಬಿಬಿಎಂಪಿ ಕಛೇರಿಗಳು, ಬೆಂಗಳೂರು–02ರಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **18.09.2021ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯ – ಪೂರ್ವ ವಿಭಾಗ, ಅನೆಕ್ಸ್ ಕಟ್ಟಡ, ನಂ. 3, 1ನೇ ಮಹಡಿ, ಎನ್.ಆರ್. ಚೌಕ, ಬಿಬಿಎಂಪಿ ಇಲ್ಲಿ ವೆಬ್‌ಸೈಟ್ https://eproc.karnataka.gov.in ಮೂಲಕ **21.09.2021ರ ಬೆಳಿಗ್ಗೆ 11:00 ಗಂಟೆಯ** ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/–, ಕಾರ್ಯಪಾಲಕ ಅಭಿಯಂತರರು, ರಮೂ–ಪೂರ್ವ ವಿಭಾಗ, ಬಿಬಿಎಂಪಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಕುಲಸಚಿವರ ಕಚೇರಿ
ನಂದಿನಗರ, ಅಂಚೆ ಪೆಟ್ಟಿಗೆ ಸಂ. 6, ಬೀದರ್ – 585 226, ಕರ್ನಾಟಕ
Phone: 08482 – 245241, Fax: 08482 – 245360,
Email: regkvafsu@gmail.com
ಸಂಖ್ಯೆ : ಕುಸ/ಶೈಕ್ಷಣಿಕ/ಪಸಂ/ಡಿ–ಪ್ರವೇಶ/2021–22/1878 ದಿನಾಂಕ: 02.09.2021

ಅಧಿಸೂಚನೆ

ವಿಷಯ : 2021–22ನೇ ಸಾಲಿನ ಪಶು ಸಂಗೋಪನಾ ಡಿಪ್ಲೋಮಾ ಪ್ರವೇಶ ಕುರಿತು.
ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01.09.2021

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ 2021–22ನೇ ಶೈಕ್ಷಣಿಕ ಸಾಲಿಗೆ ಪಶು ಸಂಗೋಪನಾ ಪಾಲಿಟೆಕ್ನಿಕ್, **ಶಿಗ್ಗಾಂವಿ**, ಹಾವೇರಿ ಜಿಲ್ಲೆ/ **ಕೊನೆಹಳ್ಳಿ**, ತಿಪಟೂರು, ತುಮಕೂರು ಜಿಲ್ಲೆ/ **ಕೊರವಂಗಲ ಕ್ರಾಸ್**, ಹಾಸನ ಜಿಲ್ಲೆ/ **ಬರ್ಗಿ ಫಾರ್ಮ್**, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ / **ಡೋರನಳ್ಳಿ**, ಯಾದಗಿರಿ ಜಿಲ್ಲೆಗಳ ಐದು ಪಾಲಿಟೆಕ್ನಿಕ್‌ಗಳಲ್ಲಿ ಪಶು ಸಂಗೋಪನೆಯಲ್ಲಿ ಎರಡು ವರ್ಷದ ಡಿಪ್ಲೋಮಾ ಕೋರ್ಸಿಗೆ ಎಸ್.ಎಸ್.ಎಲ್.ಸಿ./ತತ್ಸಮಾನ ತೇರ್ಗಡೆಯಾದ ಹಾಗೂ ***1 ರಿಂದ 10ನೇ ತರಗತಿಯ ವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.*** ಅರ್ಜಿಯ ನಮೂನೆ ಹಾಗೂ ಇತರೆ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.kvafsu.edu.in** ನಲ್ಲಿ ದಿನಾಂಕ: **03.09.2021** ರಿಂದ ಪಡೆಯಬಹುದಾಗಿದೆ.

ಅರ್ಜಿಯಲ್ಲಿ ಕೇಳಲಾದ ಎಲ್ಲಾ ಅಗತ್ಯ ಮಾಹಿತಿ ಹಾಗೂ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನಿಗದಿತ ಮೂಲ (Original) ಡಿ.ಡಿ.ಯೊಂದಿಗೆ (ಯಾವುದೇ ರಾಷ್ಟ್ರೀಕೃತ ಬ್ಯಾಂಕ್) ದಿನಾಂಕ: **12.10.2021**ರ ಸಾಯಂಕಾಲ **5.00 ಗಂಟೆ** ಒಳಗಾಗಿ **"ಕುಲಸಚಿವರು, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ.6, ಬೀದರ್–585226"** ಇವರ ಕಚೇರಿಗೆ ಸಲ್ಲಿಸುವುದು. ಸದರಿ ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ
ಸಹಿ/– (ಪ್ರೊ. ಕೆ.ಸಿ.ವೀರಣ್ಣ)
ಕುಲಸಚಿವರು

ಹಲವಾರು ಬಾರಿ ರೂಪಾಂತರಗೊಳ್ಳುವ ಕೊರೊನಾ ವೈರಸ್ ಹೊಸ ತಳಿ

ಲಸಿಕೆ ಪ್ರತಿರೋಧಕ 'ಮ್ಯೂ': ಎಚ್ಚರಿಕೆ

ಜಿನಿವಾ: ಕೊರೊನಾ ವೈರಸ್‌ನ ಹೊಸ ತಳಿ 'ಮ್ಯೂ' ಬಗ್ಗೆ ಎಚ್ಚರಿಕೆ ನೀಡಿರುವ ವಿಶ್ವ ಆರೋಗ್ಯ ಸಂಸ್ಥೆ, ಕೋವಿಡ್ ಲಸಿಕೆಗೆ ಈ ರೂಪಾಂತರ ತಳಿ ಪ್ರತಿರೋಧ ಒಡ್ಡುವ ಸಾಧ್ಯತೆಗಳಿವೆ ಎಂದು ಹೇಳಿದೆ.

'ಮ್ಯೂ' ಅಥವಾ 'ಬಿ.1.621' ಎಂಬ ವೈಜ್ಞಾನಿಕ ಹೆಸರಿನ ಇದನ್ನು 'ಆಸಕ್ತಿದಾಯಕ ತಳಿ' ಎಂದು ವಿಶ್ವ ಆರೋಗ್ಯ ಸಂಸ್ಥೆ ಕರೆದಿದೆ. ಈ ತಳಿಯ ಸೋಂಕಿನ ಪ್ರಸರಣದ ಮೇಲೆ ತೀವ್ರ ನಿಗಾ ಇಡಲಾಗಿದೆ ಎಂದೂ ಸಂಸ್ಥೆ ಹೇಳಿದೆ.

ಕೊರೊನಾ ವೈರಸ್‌ನ 5ನೇ 'ಆಸಕ್ತಿದಾಯಕ ತಳಿ' ಇದಾಗಿದೆ. ಈ ತಳಿ ಹಲವಾರು ಬಾರಿ ರೂಪಾಂತರಗೊಂಡಿರುವುದರಿಂದ ಲಸಿಕೆಗೆ ಪ್ರತಿರೋಧ ಒಡ್ಡುವ ಸಾಧ್ಯತೆಗಳು ಹೆಚ್ಚು. ಈ ವಾದವನ್ನು ದೃಢಪಡಿಸಲು ಇನ್ನಷ್ಟು ಸಂಶೋಧನೆಗಳ ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದೆ.

ಈ ತಳಿಯ ಪ್ರಕರಣಗಳು ಕಳೆದ ಜನವರಿಯಲ್ಲಿ ಕೊಲಂಬಿಯಾದಲ್ಲಿ ಮೊದಲ ಬಾರಿಗೆ ವರದಿಯಾಗಿದ್ದವು. ನಂತರ, ದಕ್ಷಿಣ ಅಮೆರಿಕ ಹಾಗೂ ಯುರೋಪ್‌ನ ಕೆಲವೆಡೆ ಅಧಿಕ ಸಂಖ್ಯೆಯ ಪ್ರಕರಣಗಳು ಕಂಡುಬಂದಿದ್ದವು ಎಂದು ಸಂಸ್ಥೆ ಬಿಡುಗಡೆ ಮಾಡಿರುವ ವಾರದ ವರದಿಯಲ್ಲಿ ಹೇಳಲಾಗಿದೆ.

ಅಮೆರಿಕ ಹಾಗೂ ಹಾಂಗ್‌ಕಾಂಗ್‌ನಲ್ಲಿ ಸಹ ಈ ತಳಿಯ ಪ್ರಕರಣಗಳು ವರದಿಯಾಗಿವೆ. ಜಾಗತಿಕವಾಗಿ ಈ ತಳಿಯ ಸೋಂಕಿನ ಪ್ರಕರಣಗಳ ಪ್ರಮಾಣ ಶೇ 0.1ಕ್ಕಿಂತಲೂ ಕಡಿಮೆ ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಗುಂಪುಗೂಡುವಿಕೆ ತಪ್ಪಿಸಿ ಲಸಿಕೆ ಪಡೆಯಿರಿ –ಕೇಂದ್ರ ಸಲಹೆ

ನವದೆಹಲಿ (ಪಿಟಿಐ): ಕೋವಿಡ್ ಭೀತಿ ಕಾರಣದಿಂದ ಹಬ್ಬಗಳ ಸಂದರ್ಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಗುಂಪುಗೂಡಲು ಅವಕಾಶ ನೀಡಬಾರದು. ಅನಿವಾರ್ಯ ಎನಿಸಿದಲ್ಲಿ ಸಾಮೂಹಿಕವಾಗಿ ಲಸಿಕೆ ಪಡೆಯಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಜನರು ಆದ್ಯತೆ ಮೇರೆಗೆ ಲಸಿಕೆ ಪಡೆಯಬೇಕು, ಕೋವಿಡ್ ಮಾರ್ಗಸೂಚಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಟ್ಟಾರೆಯಾಗಿ ದೇಶದಲ್ಲಿ ವಾರದಿಂದ ವಾರಕ್ಕೆ ಕೋವಿಡ್ ಪ್ರಕರಣಗಳು ಇಳಿಮುಖವಾಗಿದ್ದರೂ ಇನ್ನೂ ಪೂರ್ಣವಾಗಿ ಎರಡನೇ ಅಲೆ ಅಂತ್ಯಗೊಂಡಿಲ್ಲ ಎಂಬುದನ್ನು ಗಮನಿಸಬೇಕು ಎಂದು ಎಚ್ಚರಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ದೇಶದ 39 ಜಿಲ್ಲೆಗಳಲ್ಲಿ ಸೋಂಕು ದೃಢೀಕರಣ ಪ್ರಮಾಣ ಶೇ 10ಕ್ಕಿಂತಲೂ ಹೆಚ್ಚು ಇದೆ. ಹಾಗೆಯೇ, 38 ಜಿಲ್ಲೆಗಳಲ್ಲಿ ದೃಢೀಕರಣ ಪ್ರಮಾಣವು ಶೇ 1 ರಿಂದ 10ರಷ್ಟು ಇದೆ ಎಂದು ತಿಳಿಸಿದರು.

ದೇಶದಾದ್ಯಂತ ವಯಸ್ಕರಲ್ಲಿ ಶೇ 16ರಷ್ಟು ಜನಸಂಖ್ಯೆಗೆ ಲಸಿಕೆಯ ಎರಡೂ ಡೋಸ್ ನೀಡಲಾಗಿದೆ. ಶೇ 54ರಷ್ಟು ಜನಸಂಖ್ಯೆಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ ಎಂದು ಹೇಳಿದರು.

ಮೂರನೇ ಅಲೆ ಆರಂಭವಾಗುವ ಭೀತಿ ಇದೆ. ಹಬ್ಬಗಳ ಋತುವಿನಲ್ಲಿ ಜನರ ಗುಂಪುಗೂಡುವಿಕೆ ತಪ್ಪಿಸುವುದು ಅಗತ್ಯ ಎಂದು ಐಸಿಎಂಆರ್ ಪ್ರಧಾನ ನಿರ್ದೇಶಕ ಡಾ.ಬಲರಾಂ ಭಾರ್ಗವ ಅವರು ಹೇಳಿದರು.

ನಾಗರಿಕರು ಕೂಡಾ ಆದಷ್ಟೂ ಹಬ್ಬಗಳ ಆಚರಣೆಯನ್ನು ಮನೆಗೇ ಸೀಮಿತಗೊಳಿಸಬೇಕು ಹಾಗೂ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಬೇಕು ಎಂದು ನೀತಿ ಆಯೋಗದ ಸದಸ್ಯ ವಿ.ಕೆ.ಪಾಲ್ ಹೇಳಿದರು.

ದೇಶದಾದ್ಯಂತ 47,092 ಹೊಸ ಪ್ರಕರಣ ಪತ್ತೆ

ನವದೆಹಲಿ: ಗುರುವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ ಕಳೆದ 24 ಗಂಟೆಗಳಲ್ಲಿ ದೇಶದಾದ್ಯಂತ ಹೊಸದಾಗಿ 47,092 ಕೊರೊನಾ ಸೋಂಕಿನ ಪ್ರಕರಣಗಳು ವರದಿಯಾಗಿದ್ದು, ಇವು ಎರಡು ತಿಂಗಳಲ್ಲಿ ವರದಿಯಾದ ಅತಿ ಹೆಚ್ಚು ಪ್ರಕರಣಗಳಾಗಿವೆ. ಈ ಮೂಲಕ ಒಟ್ಟು ಸೋಂಕಿನ ಪ್ರಕರಣಗಳ ಸಂಖ್ಯೆ 3,28,57,937ಕ್ಕೆ ಏರಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 11,402 ಹೆಚ್ಚಾಗಿದ್ದು ಈ ಮೂಲಕ ದೇಶದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 3,89,583ಕ್ಕೆ ಏರಿಕೆಯಾಗಿದೆ. ಒಟ್ಟು ಸೋಂಕಿನ ಪ್ರಮಾಣ ಶೇ 1.19ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆ ತಿಳಿಸಿದೆ.

ಕೋವಿಡ್‌ನಿಂದ ಹೊಸದಾಗಿ 509 ಸಾವುಗಳು ಸಂಭವಿಸಿದ್ದು, ಇಲ್ಲಿಯವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 4,39,529ಕ್ಕೆ ಏರಿದೆ. ಶೇಕಡವಾರು ಸಾವಿನ ಪ್ರಮಾಣ 1.34ರಷ್ಟಿದೆ. ಕಾಯಿಲೆಯಿಂದ ಗುಣಮುಖರಾದವರ ಸಂಖ್ಯೆ 3,20,28,825ಕ್ಕೆ ಏರಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 97.48ರಷ್ಟಿದೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಕೊರೊನಾ ಪಾಸಿಟಿವಿಟಿ ದರ ಶೇ 2.62 ರಷ್ಟಿದೆ. ಕಳೆದ 69 ದಿನಗಳಿಂದ ಶೇ 3ಕ್ಕಿಂತ ಕಡಿಮೆ ಪಾಸಿವಿಟಿ ದರ ದಾಖಲಾಗಿದೆ.

ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಬಿಗಿ

ನವದೆಹಲಿ: ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಹರಡುತ್ತಿರುವ ಕಾರಣ ಭಾರತದ ವಿಮಾನ ನಿಲ್ದಾಣಗಳಲ್ಲಿ ತಪಾಸಣೆಯನ್ನು ಬಿಗಿಗೊಳಿಸಲಾಗಿದೆ. ದಕ್ಷಿಣ ಆಫ್ರಿಕಾ ಮತ್ತು ಚೀನಾ ಸೇರಿ ಏಳು ದೇಶಗಳಿಂದ ಬರುವ ಪ್ರಯಾಣಿಕರು ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಬೇಕಿದೆ.

ಬೊಟ್ಸ್ವಾನ, ಬಾಂಗ್ಲಾದೇಶ, ಮಾರಿಷಸ್, ನ್ಯೂಜಿಲ್ಯಾಂಡ್ ಮತ್ತು ಜಿಂಬಾಬ್ವೆ ಈ ಪಟ್ಟಿಯಲ್ಲಿರುವ ಇತರ ದೇಶಗಳು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಗುರುವಾರ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ಮತ್ತು ಇತರ ದೇಶಗಳಲ್ಲಿ ಸಿ.1.2 ರೂಪಾಂತರ ತಳಿ ಕಂಡುಬಂದಿರುವುದು ವರದಿಯಾಗುತ್ತಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ.

ಮೊದಲಿಗೆ ಹೊಸ ತಳಿ ದಕ್ಷಿಣ ಆಫ್ರಿಕಾದ ಎಂಪುಮಲಂಗ ಮತ್ತು ಗೌಟೆಂಗ್ ಪ್ರಾಂತ್ಯದಲ್ಲಿ ಕಂಡುಬಂದಿತ್ತು.

ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಆಕ್ರೋಶ

ಪ್ರಧಾನಿ ಮನೆ ಎದುರು ಪ್ರತಿಭಟನೆ

ನವದೆಹಲಿ (ಪಿಟಿಐ): ಅಡುಗೆ ಅನಿಲ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯಕರ್ತರು ಗುರುವಾರ ಪ್ರಧಾನಿ ನರೇಂದ್ರ ಮೋದಿ ನಿವಾಸದ ಎದುರು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮಹಿಳಾ ಘಟಕದ ಹಂಗಾಮಿ ಅಧ್ಯಕ್ಷೆ ನೆಟ್ಟಾ ಡಿಸೋಜಾ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಲೋಕ ಕಲ್ಯಾಣ ಮಾರ್ಗದಲ್ಲಿನ ಪ್ರಧಾನಿ ನಿವಾಸದ ಎದುರು ಪ್ರತಿಭಟಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರಧಾನಿ ನಿವಾಸದ ರಕ್ಷಣೆಗೆ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿ ಮುನ್ನೆಚ್ಚರಿಕೆ ಕ್ರಮವಾಗಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರನ್ನು ಸುತ್ತುವರಿದರು.

ಅಡುಗೆ ಅನಿಲ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸಿದ್ದಕ್ಕಾಗಿ ಪೊಲೀಸರು ಪಕ್ಷದ ಮಹಿಳಾ ಘಟಕದ ಹಂಗಾಮಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಬಂಧಿಸಿದ್ದಾರೆ ಎಂದು ಕಾಂಗ್ರೆಸ್ ಮಹಿಳಾ ಘಟಕ ಆರೋಪಿಸಿದೆ.

ಪೆಟ್ರೋಲಿಯಂ ಸಚಿವಾಲಯದ ಮುಂದೆ ಪ್ರತಿಭಟನೆ: ಅಡುಗೆ ಅನಿಲ ಸೇರಿದಂತೆ ಇಂಧನ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಯುವ ಘಟಕವು ಪೆಟ್ರೋಲಿಯಂ ಸಚಿವಾಲಯದ ಎದುರು ಗುರುವಾರ ಪ್ರತಿಭಟನೆ ನಡೆಸಿತು.

ರೈಸಿನಾ ರಸ್ತೆಯಲ್ಲಿರುವ ಭಾರತೀಯ ಯುವ ಕಾಂಗ್ರೆಸ್ ಕಚೇರಿಯಿಂದ ಹೊರಟ ಮೆರವಣಿಗೆಯನ್ನು ಪೊಲೀಸರು ಪೆಟ್ರೋಲಿಯಂ ಸಚಿವಾಲಯವು ಇರುವ ಶಾಸ್ತ್ರಿ ಭವನದ ಮುಂದೆ ಬ್ಯಾರಿಕೇಡ್ ಹಾಕಿ ತಡೆದರು.

ನವದೆಹಲಿಯಲ್ಲಿ ಇಂಧನ ಬೆಲೆ ಏರಿಕೆ ಖಂಡಿಸಿ ಪ್ರತಿಭಟಿಸಿದ ಯುವ ಕಾಂಗ್ರೆಸ್ ಘಟಕದ ಕಾರ್ಯಕರ್ತರನ್ನು ಕೇಂದ್ರ ಮೀಸಲು ಪೊಲೀಸ್ ಪಡೆ ಸಿಬ್ಬಂದಿ ಬಂಧಿಸಿದರು – ಎಎಫ್‌ಪಿ ಚಿತ್ರ

ಹೋರಾಟ: ಸಮಿತಿ ರಚನೆ

ನವದೆಹಲಿ: ರಾಷ್ಟ್ರೀಯ ಸಮಸ್ಯೆಗಳ ಕುರಿತು ನಿರಂತರ ಆಂದೋಲನಗಳನ್ನು ನಡೆಸಲು ಕಾಂಗ್ರೆಸ್ ಪಕ್ಷವು ಪ್ರಿಯಾಂಕಾ ಗಾಂಧಿ ಜತೆಗೆ ಉನ್ನತ ಮಟ್ಟದ ಸಮಿತಿ ರಚಿಸಿದೆ. ಬಿಜೆಪಿಯ ಕಟು ಹಿಂದುತ್ವ ರಾಜಕಾರಣದ ಟೀಕಾಕಾರರಾದ ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಪ್ರಿಯಾಂಕಾ ಹೊರತುಪಡಿಸಿ, ಒಂಬತ್ತು ಸದಸ್ಯರ ಸಮಿತಿಯಲ್ಲಿ ಸಂಸದ ಉತ್ತಮ್ ಕುಮಾರ್ ರೆಡ್ಡಿ, ರಾಜ್ಯಸಭಾ ಸಂಸದ ರಿಪುನ್ ಬೋರಾ, ಮನೀಶ್ ಚತ್ರಥ, ಬಿ.ಕೆ ಹರಿಪ್ರಸಾದ್, ಉದಿತ್ ರಾಜ್, ರಾಗಿಣಿ ನಾಯಕ್ ಮತ್ತು ಜುಬೇರ್ ಖಾನ್ ಇದ್ದಾರೆ.

ರಾಷ್ಟ್ರೀಯ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲಿರುವ ಈ ಸಮಿತಿಯಲ್ಲಿ ಪ್ರಿಯಾಂಕಾ ಗಾಂಧಿ ಅವರ ಕರಡು ರಚನೆಯು ಮಹತ್ವ ಪಡೆದುಕೊಂಡಿದೆ.

ಗುರುವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿರುವ ಪ್ರಿಯಾಂಕಾ ಗಾಂಧಿ ವಾದ್ರಾ, ಬಿಜೆಪಿ ಸರ್ಕಾರವು ಪ್ರತಿ ತಿಂಗಳು ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಯನ್ನು ಹೆಚ್ಚಿಸುತ್ತಿದೆ. ಮೂರು-ನಾಲ್ಕು ತಿಂಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 60 ರಿಂದ 70 ಬಾರಿ ಹೆಚ್ಚಿಸಲಾಗಿದೆ ಎಂದು ಕಿಡಿಕಾರಿದರು.

ಸತತ ಪರಿಶ್ರಮ, ಉತ್ತಮ ಸಾಧನೆ

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿರುವ
ಶ್ರೀ ಮಹಾಬಲೇಶ್ವರ ಎಂ.ಎಸ್. ರವರು
ದಿನಾಂಕ 02.09.2021 ರಂದು ನಡೆದ
ಶೇರುದಾರರ 97ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ

ಮಾನ್ಯ ಶೇರುದಾರರೇ,

ಕಳೆದ ಹಣಕಾಸು ವರ್ಷ 2020–2021 ರ ನಿಮ್ಮ ಬ್ಯಾಂಕಿನ ಕಾರ್ಯನಿರ್ವಹಣೆಯ ವರದಿಯನ್ನು ಪ್ರಸ್ತುತಪಡಿಸಲು ನಾನು ಸಂತೋಷಪಡುತ್ತೇನೆ.

ಈ ವರ್ಷವೂ ಸಹ ವಿವಿಧ ಸ್ಥಳಗಳಿಂದ ಬ್ಯಾಂಕಿನ ವಾರ್ಷಿಕ ಮಹಾಸಭೆಗೆ ಭಾಗವಹಿಸುತ್ತಿರುವ (ಆನ್‌ಲೈನ್ ಮೂಲಕ) ನಮ್ಮ ಎಲ್ಲಾ ಶೇರುದಾರರಿಗೆ ಧನ್ಯವಾದಗಳು.

ವಿಶ್ವದಾದ್ಯಂತ ಬಾಧಿಸಿದ ಕೋವಿಡ್–19 ಸಾಂಕ್ರಾಮಿಕ ರೋಗವು ಜಾಗತಿಕ ಮತ್ತು ಭಾರತೀಯ ಹಣಕಾಸು ಮಾರುಕಟ್ಟೆಗಳಲ್ಲಿ ಗಣನೀಯ ತೊಂದರೆ ಮತ್ತು ಏರಿಳಿತಗಳನ್ನು ಉಂಟುಮಾಡಿದೆ. ಮೊದಲನೇ ಅಲೆಯಲ್ಲಿ ನಾವು ಯಶಸ್ವಿಯಾಗಿ ಸಾಗಿ ಮುನ್ನಡೆದ ಅನುಭವವು ಎರಡನೇ ಅಲೆಯ ಸವಾಲುಗಳನ್ನು ಎದುರಿಸುವಲ್ಲಿ ಸಾಕಷ್ಟು ಆತ್ಮವಿಶ್ವಾಸವನ್ನು ತುಂಬಿದೆ. ಅಲ್ಲದೆ, ಈ ಸಾಂಕ್ರಾಮಿಕದ ಮುಂದಿನ ಹಂತದ ಅಲೆಗಳು ಯಾವುದಾದರೂ ಇದ್ದರೆ, ಅವುಗಳನ್ನೂ ಯಶಸ್ವಿಯಾಗಿ ದಾಟಿಕೊಂಡು ಮುಂದೆ ಸಾಗುತ್ತೇವೆ ಎನ್ನುವ ವಿಶ್ವಾಸವಿದೆ. ಈ ಬಿಕ್ಕಟ್ಟಿನ ಪರಿಸ್ಥಿತಿಯು ನಮಗೆ ಹೊಸ ಅವಕಾಶಗಳನ್ನು ತೋರಿಸಿಕೊಟ್ಟಿದೆ. ಸೀಮಿತ ಕ್ಷೇತ್ರಗಳಲ್ಲಿ ನಡೆಯುತ್ತಿದ್ದ ಡಿಜಿಟಲ್ ಕ್ರಾಂತಿ, ಈಗ ಬಹುಪಾಲು ಕ್ಷೇತ್ರಗಳಿಗೆ ವಿಸ್ತರಿಸಿದೆ. ಇದು ವ್ಯಾಪಾರ ವಹಿವಾಟಿನ ವಿಧಾನವನ್ನು ಬದಲಿಸಲು ಮತ್ತು ಹೊಸ (New-normal) ಪರಿಸ್ಥಿತಿಗೆ ಹೊಂದಿಕೊಳ್ಳಲು ನಮಗೆ ಕಲಿಸಿತು. ನಿಮ್ಮ ಬ್ಯಾಂಕ್ ಕೂಡ ಈ ಸಾಂಕ್ರಾಮಿಕ ರೋಗವನ್ನು ಎದುರಿಸಿ ವ್ಯವಹಾರವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಹಲವು ವಿನೂತನ ಕ್ರಮಗಳನ್ನು ಕೈಗೊಂಡಿತು. ಕೋವಿಡ್–19ರ ಹಿನ್ನೆಲೆಯಲ್ಲಿ 'ಸಂರಕ್ಷಿಸು, ಕ್ರೋಢೀಕರಿಸು ಮತ್ತು ಶಕ್ತಿಶಾಲಿಯಾಗಿ ಹೊರಹೊಮ್ಮು' ಎಂಬ ವ್ಯವಹಾರದ ಧ್ಯೇಯ ವಾಕ್ಯವನ್ನು ನಾವು ಅಳವಡಿಸಿಕೊಂಡೆವು. ಕೋವಿಡ್–19 ನಂತರದ ಬಿಕ್ಕಟ್ಟು ಇನ್ನೂ ಮುಗಿದಿಲ್ಲವಾದರೂ, ಮುಂದಿನ ದಿನಗಳಲ್ಲಿ ನಿಮ್ಮ ಬ್ಯಾಂಕ್ ಇನ್ನೂ ಪ್ರಬಲವಾಗಿ ಹೊರಹೊಮ್ಮುತ್ತದೆ ಎಂದು ನನಗೆ ವಿಶ್ವಾಸವಿದೆ.

ಜಾಗತಿಕ ಆರ್ಥಿಕತೆ

2021 ರ ಜಾಗತಿಕ ಜಿಡಿಪಿ ಶೇ. 6.3 ರಷ್ಟು ಬೆಳೆಯುವ ನಿರೀಕ್ಷೆಯಿದ್ದು ಅಭಿವೃದ್ಧಿ ಹೊಂದಿದ ದೇಶಗಳ ಜಿಡಿಪಿಯ ಬೆಳವಣಿಗೆಯಲ್ಲೂ ಸಹ ಹೆಚ್ಚಳವಾಗುವ ನಿರೀಕ್ಷೆ ಇದೆ.

ಭಾರತೀಯ ಆರ್ಥಿಕತೆ

ಜೂನ್ 2021ರ ವಿಶ್ವ ಬ್ಯಾಂಕಿನ ವರದಿಯ ಪ್ರಕಾರ, 2021–22ರ ಆರ್ಥಿಕ ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ. 8.3 ರಷ್ಟು ಬೆಳೆಯುವ ನಿರೀಕ್ಷೆಯಿದೆ. ಭಾರತೀಯ ರಿಸರ್ವ್ ಬ್ಯಾಂಕ್ (RBI) 2021–22 (FY22) ಮುನ್ಸೂಚಿಸಲಾದ ಒಟ್ಟು ದೇಶೀಯ ಉತ್ಪನ್ನ (GDP) ಶೇ. 9.5 ಬೆಳವಣಿಗೆಯ ಪ್ರಮಾಣವನ್ನು ಕಾಯ್ದುಕೊಂಡಿದೆ. ಆರ್ಥಿಕತೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಲು ಆರ್‌ಬಿಐ ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಸಾಂಕ್ರಾಮಿಕದ ಎರಡನೇ ಅಲೆಯ ಹೊಡೆತದಿಂದ ಪಾರಾಗಿ ದೇಶೀಯ ಆರ್ಥಿಕ ಚಟುವಟಿಕೆಯು ಚೇತರಿಸಿಕೊಳ್ಳಲು ಆರಂಭಿಸಿದೆ ಎಂಬುದನ್ನು ಆರ್‌ಬಿಐ ತಿಳಿಸಿದ್ದು, ಇದೊಂದು ಆಶಾದಾಯಕ ಬೆಳವಣಿಗೆ.

ಬ್ಯಾಂಕಿಂಗ್ ಉದ್ಯಮ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಾರ, ಭಾರತದ ಬ್ಯಾಂಕಿಂಗ್ ವಲಯವು ಸಾಕಷ್ಟು ಬಂಡವಾಳವನ್ನು ಹೊಂದಿದೆ ಮತ್ತು ಉತ್ತಮವಾಗಿ ನಿಯಂತ್ರಿಸಲ್ಪಡುತ್ತಿದೆ. ಭಾರತದ ಹಣಕಾಸಿನ ಮತ್ತು ಆರ್ಥಿಕ ಪರಿಸ್ಥಿತಿಗಳು ವಿಶ್ವದ ಹಲವು ದೇಶಗಳಿಗಿಂತ ಉತ್ತಮವಾಗಿವೆ. ಕ್ರೆಡಿಟ್, ಮಾರ್ಕೆಟ್ ಮತ್ತು ಲಿಕ್ವಿಡಿಟಿ ರಿಸ್ಕ್ ಅಧ್ಯಯನಗಳ ಪ್ರಕಾರ ಭಾರತೀಯ ಬ್ಯಾಂಕುಗಳು ಯಾವುದೇ ಒತ್ತಡಗಳನ್ನು ತಡೆದುಕೊಳ್ಳುವ ಗುಣ ಹೊಂದಿವೆ ಮತ್ತು ಜಾಗತಿಕ ಕುಸಿತವನ್ನು ಚೆನ್ನಾಗಿ ತಡೆದುಕೊಂಡಿವೆ ಎಂದು ಹೇಳಿದೆ. ಇದಲ್ಲದೆ, ಆರ್‌ಬಿಐ ಪರಿಚಯಿಸಿದ ವಿವಿಧ ಕ್ರಮಗಳಾದ 50,000 ಕೋಟಿ ರೂ. ಗಳ ವಿಶೇಷ ದೀರ್ಘಾವಧಿಯ ರೆಪೊ ಕಾರ್ಯಾಚರಣೆಗಳು (ಎಸ್‌ಎಲ್‌ಟಿಆರ್‌ಒ), ಎಂಎಸ್‌ಎಂಇ ಉದ್ಯಮಿಗಳಿಗೆ, ಸಣ್ಣ ಉದ್ಯಮಗಳಿಗೆ ಸಾಲ ಸೌಲಭ್ಯ, ಕೋವಿಡ್–19 ರ ಬಿಕ್ಕಟ್ಟಿನಿಂದ ಸಂಕಷ್ಟದಲ್ಲಿರುವವರಿಗೆ ನೆರವು ಮುಂತಾದ ಉಪಕ್ರಮಗಳು ಆರ್ಥಿಕತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿವೆ ಮತ್ತು ಈ ಉಪಕ್ರಮಗಳಿಂದಾಗಿ ಭಾರತೀಯ ಬ್ಯಾಂಕಿಂಗ್ ಕ್ಷೇತ್ರವು ಮುಂಬರುವ ದಿನಗಳಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗಲಿದೆ.

ನಿಮ್ಮ ಬ್ಯಾಂಕಿನ ಕಾರ್ಯಕ್ಷಮತೆ

ಕೋವಿಡ್–19ರ ಸಂಕಷ್ಟದ ಕಾಲದಲ್ಲಿಯೂ ನಿಮ್ಮ ಬ್ಯಾಂಕ್ ವ್ಯವಹಾರವನ್ನು ಯಶಸ್ವಿಯಾಗಿ ಮುನ್ನಡೆಸಿದೆ ಮತ್ತು ಮೂಲಭೂತ ಅಂಶಗಳನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸಿದೆ. ನಿಮ್ಮ ಬ್ಯಾಂಕಿನ ಕಾರ್ಯಕ್ಷಮತೆಯು ಒಟ್ಟಾರೆ ತೃಪ್ತಿದಾಯಕವಾಗಿದ್ದು, ಬ್ಯಾಂಕಿನ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಸಾಕ್ಷಿಯಾಗಿದೆ.

ಬ್ಯಾಂಕಿನ ಕಾರ್ಯಕ್ಷಮತೆಯ ಸಂಕ್ಷಿಪ್ತ ಮುಖ್ಯಾಂಶಗಳು ಹೀಗಿವೆ:

★ ಪ್ರಚಲಿತ ಸವಾಲುಗಳ ಹೊರತಾಗಿಯೂ, 31.03.2021 ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕು ಒಟ್ಟಾರೆ ರೂ. 1,27,348.56 ಕೋಟಿಗಳ ವಹಿವಾಟು ನಡೆಸಿದೆ. ಅದರಲ್ಲಿ ರೂ.75,654.86 ಕೋಟಿ ಠೇವಣಿ ಮತ್ತು ರೂ.51,693.70 ಕೋಟಿಗಳ ಮುಂಗಡ ಸೇರಿದೆ.

★ ಬ್ಯಾಂಕ್ ಚಾಲ್ತಿ ಹಾಗೂ ಉಳಿತಾಯ ಖಾತೆಗಳ (ಕಾಸಾ CASA) ಉತ್ತಮ ಬೆಳವಣಿಗೆಯ ಮೇಲೆ ನಿರಂತರವಾಗಿ ಗಮನವನ್ನು ಕೇಂದ್ರೀಕರಿಸಿದೆ. 31.03.2021 ರಂದು ಒಟ್ಟು ಕಾಸಾ (CASA) ಠೇವಣಿಗಳು ರೂ. 23,823 ಕೋಟಿಗಳಷ್ಟಾಗಿದೆ. ಇದು ಒಟ್ಟು ಠೇವಣಿಯ ಶೇ. 31.49ರಷ್ಟಿದ್ದು, ಹಿಂದಿನ ವರ್ಷ ಇದು ಶೇ. 28.91ರಷ್ಟಿತ್ತು.

★ ನಿರ್ವಹಣಾ ಲಾಭವು (Operating Profit) 31.03.2020 ಕ್ಕೆ ಕೊನೆಗೊಂಡ ವರ್ಷದಲ್ಲಿ ರೂ. 1656.77 ಕೋಟಿಗಳು ಆಗಿದ್ದು, 31.03.2021 ರ ವೇಳೆಗೆ ಅದು ರೂ. 1,999.14 ಕೋಟಿಗೆ ಏರಿಕೆಯಾಗಿದ್ದು, ಶೇ. 20.67ರ ಆರೋಗ್ಯಕರ ಬೆಳವಣಿಗೆಯನ್ನು ದಾಖಲಿಸಿದೆ. ನಿವ್ವಳ ಲಾಭವು ರೂ. 431.78 ಕೋಟಿಗಳಿಂದ ಸಾರ್ವಕಾಲಿಕ ಗರಿಷ್ಠವಾದ ರೂ. 482.57 ಕೋಟಿಗಳನ್ನು ದಾಖಲಿಸಿದೆ ಮತ್ತು ಆ ಮೂಲಕ ಶೇ. 11.76 ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ.

★ ಬ್ಯಾಂಕಿನ ಬಂಡವಾಳದ ನಿಧಿಯು ರೂ. 6,789.35 ಕೋಟಿಯಿಂದ ರೂ. 7,387.05 ಕೋಟಿಗೆ ಏರಿಕೆಯಾಗಿದೆ ಮತ್ತು ಬಂಡವಾಳ ಪರ್ಯಾಪ್ತತಾ ಅನುಪಾತ (Captial Adequacy Ratio) ವು ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ಶೇ. 10.875 ರ ಕನಿಷ್ಠ ಮಟ್ಟಕ್ಕಿಂತ ಹೆಚ್ಚಿದ್ದು, ಅದು ಶೇ. 14.85 ರ ಉತ್ತಮ ಮಟ್ಟದಲ್ಲಿದೆ.

★ ಪ್ರೊವಿಷನ್ ಕವರೇಜ್ ಅನುಪಾತವೂ (PCR) ಕೂಡ ಹಣಕಾಸು ವರ್ಷ 2019–2020ರಲ್ಲಿ ಶೇ. 64.70 ಇದ್ದು, ಪ್ರಸ್ತುತ ಹಣಕಾಸು ವರ್ಷ 2020–2021 ರಲ್ಲಿ ಶೇ. 70.05ಕ್ಕೆ ಏರಿಕೆಯಾಗಿ ಉತ್ತಮ ಸಾಧನೆ ತೋರಿದೆ.

★ 31.03.2021 ಕ್ಕೆ ಪ್ರತಿ ಶೇರಿನ ಬುಕ್ ವ್ಯಾಲ್ಯೂ ರೂ. 213.67 ಆಗಿದೆ. ಹಿಂದಿನ ವರ್ಷದಲ್ಲಿ ಇದು ರೂ. 192.06 ಆಗಿತ್ತು.

★ ಡಿಜಿಟಲ್ ಬ್ಯಾಂಕಿಂಗ್ ವಹಿವಾಟುಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಿವೆ. ಒಂದು ವರ್ಷದ ಹಿಂದೆ ಇದ್ದ ಶೇ. 83 ಕ್ಕೆ ಹೋಲಿಸಿದರೆ ಮಾರ್ಚ್ 31, 2021 ರ ವೇಳೆಗೆ ಇದು ಶೇ. 90ನ್ನು ಮೀರಿದೆ.

★ ಹಿಂದಿನ ವರ್ಷ ಇದ್ದ ರೂ. 2,799.93 ಕೋಟಿಗಳ ಸ್ಥೂಲ ಅನುತ್ಪಾದಕ ಸ್ವತ್ತುಗಳು (GNPA) ರೂ. 211 ಕೋಟಿಯಷ್ಟು ಕಡಿಮೆಯಾಗಿ ರೂ. 2,588.41 ಕೋಟಿಗೆ ಸುಧಾರಿಸಿವೆ. ಅದೇ ರೀತಿ ನಿವ್ವಳ ಅನುತ್ಪಾದಕ ಸ್ವತ್ತುಗಳು (NNPA) ಕೂಡ ರೂ. 1,755.01 ಕೋಟಿಯಿಂದ ರೂ. 1,642.10 ಕೋಟಿಗೆ ಇಳಿದಿದೆ.

ಲಾಭಾಂಶ

ಆರ್‌ಬಿಐ ದಿನಾಂಕ 22.04.2021 ರಂದು, ತನ್ನ ಹಿಂದಿನ ಮಾರ್ಗದರ್ಶಿ ಸೂಚನೆಗಳನ್ನು (ಮೇ 4, 2005 ಮತ್ತು ಡಿಸೆಂಬರ್ 04, 2020) ಭಾಗಶಃ ಮಾರ್ಪಾಡು ಮಾಡಿ ಶೇರುದಾರರಿಗೆ ಕೆಲವು ಮಾನದಂಡಗಳಿಗೆ ಒಳಪಟ್ಟು ಲಾಭಾಂಶವನ್ನು ಪಾವತಿಸಲು ಬ್ಯಾಂಕ್‌ಗಳಿಗೆ ಅನುಮತಿ ನೀಡಿದೆ. ಅದರಂತೆ ನಿರ್ದೇಶಕರ ಮಂಡಳಿಯು 31.03.2021 ಕ್ಕೆ ಕೊನೆಗೊಂಡ ವರ್ಷಕ್ಕೆ ಪ್ರತಿ ಈಕ್ವಿಟಿ ಶೇರುಗಳ ಮೇಲೆ ರೂ. 1.80ರಂತೆ (ಅಂದರೆ ಶೇ. 18) ಡಿವಿಡೆಂಡ್ ಅನ್ನು ಪ್ರಸ್ತಾಪಿಸಿದೆ.

ನಿರ್ದೇಶಕ ಮಂಡಳಿಯ ಸಂಯೋಜನೆ

ನಿಮ್ಮ ಬ್ಯಾಂಕ್ ಕಾಲ ಕಾಲದ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ವೃತ್ತಿಪರವಾಗಿ ಬೆಳೆದ ಬ್ಯಾಂಕ್ ಎಂಬುದು ಹೆಮ್ಮೆಯ ವಿಷಯ. ಇದರಲ್ಲಿ 'ನಿರ್ದೇಶಕ ಮಂಡಳಿ'ಯ ಪಾತ್ರ ಹಿರಿದಾದುದು. ಬ್ಯಾಂಕ್ ಪ್ರಸ್ತುತ ಇಬ್ಬರು ಮಹಿಳಾ ನಿರ್ದೇಶಕರೂ ಸೇರಿದಂತೆ ಒಟ್ಟು 11 ನಿರ್ದೇಶಕರನ್ನು ಹೊಂದಿದೆ. ಅವರಲ್ಲಿ ಎಂಟು ಮಂದಿ ಸ್ವತಂತ್ರ ನಿರ್ದೇಶಕರಿದ್ದು, ಕನಿಷ್ಠ ಅವಶ್ಯಕತೆ ಪ್ರಮಾಣವಾದ 33.33% ಕ್ಕಿಂತ ಹೆಚ್ಚು ಅಂದರೆ 72.72% ರಷ್ಟಿದೆ ಎಂಬುದು ವಿಶೇಷ. 2020–21 ರಲ್ಲಿ ಇಬ್ಬರು ನಿರ್ದೇಶಕರು ಹಾಗೂ ಇನ್ನೊಬ್ಬ ನಿರ್ದೇಶಕರು ಮೇ 2021 ರಲ್ಲಿ ತಮ್ಮ ಪೂರ್ತಿ ಅವಧಿಯನ್ನು ಮುಗಿಸಿ ನಿವೃತ್ತರಾಗಿದ್ದಾರೆ. ನಿರ್ದೇಶಕರ ಮಂಡಳಿಗೆ ಪ್ರತಿಷ್ಠಿತ ಐವರು ಅನುಭವಿ ವ್ಯಕ್ತಿಗಳನ್ನು ಈ ಮಧ್ಯೆ ಹೊಸದಾಗಿ ಹೆಚ್ಚುವರಿ ನಿರ್ದೇಶಕರನ್ನಾಗಿ ಸೇರಿಸಿಕೊಳ್ಳಲಾಗಿದೆ.

ವ್ಯವಹಾರ ಜಾಲ ವಿಸ್ತರಣೆ

2020–21 ರಲ್ಲಿ ಒಟ್ಟು 16 ಹೊಸ ಶಾಖೆಗಳನ್ನು ತೆರೆಯಲಾಯಿತು ಮತ್ತು 6 ಶಾಖೆಗಳನ್ನು ವಿಲೀನಗೊಳಿಸಲಾಯಿತು. ವ್ಯವಹಾರದ ಅನುಕೂಲಕ್ಕಾಗಿ ಮತ್ತು ಉತ್ತಮ ಪರಿಸರಕ್ಕಾಗಿ 16 ಶಾಖೆಗಳನ್ನು ಸ್ಥಳಾಂತರಿಸಲಾಯಿತು. 31.03.2021 ಕ್ಕೆ ಒಟ್ಟು 858 ಶಾಖೆಗಳು ಹಾಗೂ 1478 ಎಟಿಎಂಗಳು / ಕ್ಯಾಶ್ ರಿಸೈಕ್ಲರ್‌ಗಳು ಕಾರ್ಯ ನಿರ್ವಹಿಸುತ್ತಿವೆ. 'ಚಿಕ್ಕ ಸ್ಥಳಾವಕಾಶ; ಹೆಚ್ಚು ವ್ಯಾಪಾರ' ಎಂಬ ಬ್ಯಾಂಕಿನ ದೃಷ್ಟಿಕೋನಕ್ಕೆ ಅನುಗುಣವಾಗಿ ಶಾಖಾ ಕಛೇರಿಗಳ ಮರುವಿನ್ಯಾಸ ಮತ್ತು ಸುಧಾರೀಕರಣವನ್ನು ಬ್ಯಾಂಕ್ ಕೈಗೊಂಡಿದೆ.

ವಿತ್ತೀಯ ಸೇರ್ಪಡೆ

ವಿತ್ತೀಯ ಸೇರ್ಪಡೆ ಯೋಜನೆಯ ಮೂಲಕ, ನಿಮ್ಮ ಬ್ಯಾಂಕ್ ಗ್ರಾಮೀಣ ಜನತೆಯ ಸಣ್ಣ ಸಾಲದ ಅಗತ್ಯಗಳನ್ನು ಪೂರೈಸುವುದು, ಅವರಿಗೆ ಪಾವತಿ ವ್ಯವಸ್ಥೆಯ ಬಗ್ಗೆ ತಿಳಿವಳಿಕೆ ನೀಡುವುದು, ಹಣ ರವಾನೆ ಸೌಲಭ್ಯ ಮತ್ತು ಜೀವ / ಆರೋಗ್ಯ ವಿಮಾ ಉತ್ಪನ್ನಗಳನ್ನು ನೀಡುವುದು ಇತ್ಯಾದಿ ಉಪಕ್ರಮಗಳನ್ನು ಜಾರಿಗೊಳಿಸಿದೆ. ಬ್ಯಾಂಕ್ ಗ್ರಾಮೀಣ ಪ್ರದೇಶಗಳಲ್ಲಿ 192 ಶಾಖೆಗಳನ್ನು ಹೊಂದಿದ್ದು, ಹಳ್ಳಿಗಳಲ್ಲಿ ಗ್ರಾಮೀಣ ಗ್ರಾಹಕರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದೆ ಮತ್ತು ಎಲ್ಲಾ ಗ್ರಾಮೀಣ ಶಾಖೆಗಳು ವಿತ್ತೀಯ ಸಾಕ್ಷರತಾ ಕೇಂದ್ರಗಳಾಗಿ (FLC) ಸಹ ಕಾರ್ಯನಿರ್ವಹಿಸುತ್ತಿವೆ. ಬ್ಯಾಂಕ್ 35 ಅಲ್ಟ್ರಾ ಸ್ಮಾಲ್ ಬ್ರಾಂಚ್ (USB) ಗಳನ್ನು ಹಾಗೂ 120 ಬಿಸಿನೆಸ್ ಕರೆಸ್ಪಾಂಡೆಂಟ್ (BC) ಏಜೆಂಟ್‌ಗಳನ್ನು ಹೊಂದಿದ್ದು, ಅವರು ಕರ್ನಾಟಕ, ಆಂಧ್ರಪ್ರದೇಶ ಮತ್ತು ಛತ್ತೀಸ್‌ಘಢ ರಾಜ್ಯಗಳ ನಿಯೋಜಿತ ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಮ್ಮ ಬ್ಯಾಂಕ್ ಸರಕಾರದ ನೇರ ನಗದು ವರ್ಗಾವಣೆ (ಡಿಬಿಟಿ) ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಕರ್ನಾಟಕ ರಾಜ್ಯದ ಬಿ.ಸಿ. ರೋಡ್, ತಿಪಟೂರು, ಹಾನಗಲ್, ಕುಂದಗೋಳ ಮತ್ತು ಆಲೂರುಗಳಲ್ಲಿ ಒಟ್ಟು ಐದು FLC ಗಳನ್ನು ನಿಮ್ಮ ಬ್ಯಾಂಕ್ ಪ್ರಾಯೋಜಿಸಿದೆ. 2020–21ರ ಆರ್ಥಿಕ ವರ್ಷದಲ್ಲಿ, ಒಟ್ಟು 429 ಹಣಕಾಸು ಸಾಕ್ಷರತಾ ಅಭಿಯಾನಗಳನ್ನು ನಡೆಸಲಾಗಿದೆ ಮತ್ತು 14,159 ಫಲಾನುಭವಿಗಳನ್ನು ತಲುಪಲಾಯಿತು. ಬ್ಯಾಂಕು, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (PMJJBY), ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY), ಅಟಲ್ ಪಿಂಚಣಿ ಯೋಜನೆ (APY), ಪ್ರಧಾನಮಂತ್ರಿ ಸ್ವನಿಧಿ (PM SVANidhi), PMJDY ಇತ್ಯಾದಿ ಸಾಮಾಜಿಕ ಸುರಕ್ಷಾ ಯೋಜನೆಗಳನ್ನು ಎಲ್ಲಾ ಶಾಖೆಗಳಲ್ಲೂ ಜಾರಿಗೊಳಿಸಿದೆ ಮತ್ತು 'ರುಪೇ ಡೆಬಿಟ್ ಕಾರ್ಡ್'ಗಳನ್ನು ನೀಡುತ್ತಿದೆ.

ಆದ್ಯತಾ ವಲಯದ ಮುಂಗಡ

ಬ್ಯಾಂಕಿನ ಆದ್ಯತಾ ವಲಯದ ಮುಂಗಡಗಳು 31 ಮಾರ್ಚ್, 2021 ರ ವೇಳೆಗೆ ರೂ. 28,616.59 ಕೋಟಿಗಳಷ್ಟಿದ್ದು, ಅಡ್ಜೆಸ್ಟೆಡ್ ನೆಟ್ ಬ್ಯಾಂಕ್ ಕ್ರೆಡಿಟ್‌ನ (ANBC) ಶೇ. 46.58 ರಷ್ಟಿದೆ. ಕೃಷಿ ವಲಯದ ಸಾಲವು ರೂ. 9,071.32 ಕೋಟಿಗಳ ಮಟ್ಟವನ್ನು ತಲುಪಿದ್ದು, ಎಎನ್‌ಬಿಸಿಯ ಶೇ. 14.76 ರಷ್ಟಾಗಿದ್ದು, ದುರ್ಬಲ ವರ್ಗ, ಸಣ್ಣ ಮತ್ತು ಅತಿಸಣ್ಣ ರೈತರನ್ನು ವಿಶೇಷವಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಅಪಾಯ ನಿರ್ವಹಣೆ ಮತ್ತು ಅನುಪಾಲನಾ ಸಂಸ್ಕೃತಿ

ಬ್ಯಾಂಕ್ ಸುಭದ್ರವಾದ ಅಪಾಯ ನಿರ್ವಹಣಾ (Risk Management) ವ್ಯವಸ್ಥೆ ಮತ್ತು ಅನುಕರಣೀಯ ಅನುಪಾಲನಾ ಸಂಸ್ಕೃತಿ (Compliance Culture) ಯನ್ನು ಹೊಂದಿದೆ. ಸಾಮಾನ್ಯ ವ್ಯವಹಾರದಲ್ಲಿ ಕಂಡುಬರುವ ಪ್ರಮುಖ ಅಪಾಯಗಳಲ್ಲಿ ಕ್ರೆಡಿಟ್ ರಿಸ್ಕ್, ಮಾರ್ಕೆಟ್ ರಿಸ್ಕ್, ಲಿಕ್ವಿಡಿಟಿ ರಿಸ್ಕ್ ಮತ್ತು ಆಪರೇಶನಲ್ ರಿಸ್ಕ್ ಸೇರಿದಂತೆ ಐಟಿ ರಿಸ್ಕ್, ಬಡ್ಡಿದರದ ರಿಸ್ಕ್, ಕಾನ್‌ಸೆಂಟ್ರೇಷನ್ ರಿಸ್ಕ್, ಸ್ಟ್ರಾಟೆಜಿಕ್ ರಿಸ್ಕ್, ರೆಪ್ಯುಟೇಶನ್ ರಿಸ್ಕ್, ಸೈಬರ್ ರಿಸ್ಕ್ ಇತ್ಯಾದಿ ಸೇರಿದೆ. ಆರ್‌ಬಿಐ ಮಾರ್ಗಸೂಚಿಗಳಿಗೆ ಅನುಸಾರವಾಗಿ, ನಿಮ್ಮ ಬ್ಯಾಂಕ್ ತನ್ನ ನೀತಿಗಳು, ಪರಿಕರಗಳು, ತಂತ್ರಗಳು ಮತ್ತು ಇತರ ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಒಳಗೊಂಡಿರುವ ವಿವಿಧ ಅಪಾಯ ನಿರ್ವಹಣಾ ವ್ಯವಸ್ಥೆಗಳನ್ನು ನಿಯಮಿತವಾಗಿ ಬಲಪಡಿಸುತ್ತಿದೆ. ನಿರ್ದೇಶಕ ಮಂಡಳಿಯ ಸಮಿತಿಯಾದ 'ರಿಸ್ಕ್ ಮತ್ತು ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಕಮಿಟಿ' (RCMC)ಯು ಪರಿಣಾಮಕಾರಿ ನಿರ್ವಹಣೆಗಾಗಿ ಕಾಲಕಾಲಕ್ಕೆ ರಿಸ್ಕ್ ಪ್ರೊಫೈಲ್ ಅನ್ನು ಪರಿಶೀಲಿಸುತ್ತದೆ ಹಾಗೂ ನೀತಿಗಳು ಮತ್ತು ಮಾರ್ಗೋಪಾಯಗಳನ್ನು ವಿಶ್ಲೇಷಿಸಿ ಅಭಿವೃದ್ಧಿಪಡಿಸುತ್ತದೆ. ಇದಲ್ಲದೆ, ನಿಮ್ಮ ಬ್ಯಾಂಕ್ ಎಲ್ಲಾ ಅಂಶಗಳಲ್ಲೂ ಅನುಪಾಲನೆ (Compliance) ಸಂಸ್ಕೃತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಬ್ಯಾಂಕ್ ತನ್ನ ವ್ಯವಹಾರದಲ್ಲಿ 'ನಿಯಮಗಳಿಗೆ ಬದ್ಧರಾಗಿಯೇ ವ್ಯವಹಾರ (Complaince first-Business next)' ಪರಿಕಲ್ಪನೆಯನ್ನು ಅನುಸರಿಸುತ್ತಿದ್ದು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿರುವ ಪ್ರತ್ಯೇಕ ಇಲಾಖೆಯು ಅನುಪಾಲನಾ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಬ್ಯಾಂಕಿನ ಎಲ್ಲಾ ಪ್ರಾದೇಶಿಕ ಕಛೇರಿಗಳು ಮತ್ತು ಶಾಖೆಗಳಲ್ಲಿ ಕಾಂಪ್ಲಯೆನ್ಸ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಹೂಡಿಕೆದಾರರ ಸಂಪರ್ಕ ಕೇಂದ್ರ, (Investor Relation Cell)

ಶೇರುದಾರರೊಂದಿಗೆ ನಿರಂತರವಾಗಿ ತೊಡಗಿಸಿಕೊಳ್ಳಲು ಮತ್ತು ಕಾರ್ಪೊರೇಟ್ ಮಾಹಿತಿಯನ್ನು ಕಾಲ ಕಾಲಕ್ಕೆ ಸ್ವಯಂಪ್ರೇರಿತ ಆಧಾರದ ಮೇಲೆ ತಲುಪಿಸಲು, ಪ್ರತ್ಯೇಕವಾದ 'ಹೂಡಿಕೆದಾರರ ಸಂಪರ್ಕ ಕೇಂದ್ರ'ವು ಪ್ರಧಾನ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. 2020–21ನೇ ವರ್ಷದಲ್ಲಿ, ನಾಲ್ಕೂ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಘೋಷಣೆಯಾದ ತಕ್ಷಣವೇ ಪ್ರಮುಖ ಕ್ಷೇತ್ರಗಳಲ್ಲಿ ಬ್ಯಾಂಕಿನ ಕಾರ್ಯಕ್ಷಮತೆಯನ್ನು ವಿವರಿಸುವ ಸಂವಹನಗಳನ್ನು (Concall) ಪ್ರಸಾರ ಮಾಡಲಾಯಿತು ಹಾಗೂ ಶೇರುದಾರರಿಗೆ ಇ–ಮೇಲ್ ಮೂಲಕ ಒಟ್ಟು 5 ಬಾರಿ ಬ್ಯಾಂಕಿನ ಪ್ರಗತಿ ಹಾಗೂ ಪ್ರಸ್ತುತ ವಿಷಯಗಳ ಮಾಹಿತಿ ನೀಡಲಾಯಿತು. ಈ ಎಲ್ಲಾ ಮಾಹಿತಿಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗಿದೆ.

ಪ್ರಶಸ್ತಿಗಳು ಮತ್ತು ಪುರಸ್ಕಾರಗಳು

- ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿಗೆ ಪ್ರತಿಷ್ಠಿತ ISO 9001:2015 ಪ್ರಮಾಣೀಕರಣದೊಂದಿಗೆ ಮರು ಮಾನ್ಯತೆ ನೀಡಲಾಗಿದೆ.
- ಅಟಲ್ ಪಿಂಚಣಿ ಯೋಜನೆ (APY) ಯ ಸಮರ್ಥ ನಿರ್ವಹಣೆಗಾಗಿ PFRDA ಯಿಂದ 'ಪವರ್ ಟು ಪರ್ಸಿಸ್ಟ್ (ಸೆಪ್ಟೆಂಬರ್ 2020)' ಎಂಬ ಮೆಚ್ಚುಗೆ ಪ್ರಮಾಣಪತ್ರವನ್ನು ಬ್ಯಾಂಕ್ ಪಡೆದುಕೊಂಡಿದೆ.
- ಹೊಸದಿಲ್ಲಿಯ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ APY ಅಡಿಯಲ್ಲಿ ಅನುಕರಣೀಯ ಕಾರ್ಯಕ್ಷಮತೆಗಾಗಿ ಪ್ರಶಂಸನಾ ಪತ್ರ.
- 15ನೇ ವರ್ಲ್ಡ್ ಎಚ್‌ಆರ್‌ಡಿ ಕಾಂಗ್ರೆಸ್‌ನ 2020–2021 ಅಧಿವೇಶನದಲ್ಲಿ 'ಕರ್ನಾಟಕ ಬೆಸ್ಟ್ ಎಂಪ್ಲಾಯರ್ ಬ್ರಾಂಡ್ ಅವಾರ್ಡ್ 2020' ಗೌರವಕ್ಕೆ ಬ್ಯಾಂಕ್ ಪಾತ್ರವಾಗಿದೆ.
- ವರ್ಲ್ಡ್ ಎಚ್‌ಆರ್‌ಡಿ ಕಾಂಗ್ರೆಸ್, ಮುಂಬೈ ಇವರಿಂದ ಈ ಕೆಳಗಿನ ಪ್ರತಿಷ್ಠಿತ ಪ್ರಶಸ್ತಿಗಳನ್ನು ನಮ್ಮ ಬ್ಯಾಂಕ್ ಪಡೆದುಕೊಂಡಿದೆ.
  - ಎ) ಕೆಲಸ ಮಾಡಲು ಬಯಸುವ ಕನಸಿನ ಸಂಸ್ಥೆ (Dream companies to work for)
  - ಬಿ) ಹೊಸತನದ HR ಆಚರಣೆಯನ್ನು ಅನುಸರಿಸುವ ಸಂಸ್ಥೆ (Organisation with innovative HR practices)

ಇದಲ್ಲದೆ, ನಾನು ವಿನೀತನಾಗಿ ನಿವೇದಿಸುವುದೇನೆಂದರೆ, ನಿಮ್ಮ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ ಅವರಿಗೆ ಸಮಾಜದ ಪ್ರತಿಷ್ಠಿತ ಸಂಸ್ಥೆಗಳು ಈ ಕೆಳಗಿನ ಗೌರವಗಳನ್ನು ನೀಡಿ ಪುರಸ್ಕರಿಸಿವೆ.

★ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು (UASB) ಇದರ 'ಅಲುಮ್ನಿ ಅಸೋಸಿಯೇಷನ್' ನಿಂದ 'ಪ್ರತಿಷ್ಠಿತ ಹಳೆಯ ವಿದ್ಯಾರ್ಥಿ ಪುರಸ್ಕಾರ' (Distinguished Alumni Award).

★ 'ವರ್ಲ್ಡ್ ಲೀಡರ್‌ಶಿಪ್ ಕಾಂಗ್ರೆಸ್ ಆ್ಯಂಡ್ ಅವಾರ್ಡ್' ಸಂಸ್ಥೆ ನೀಡುವ 19ನೇ ವರ್ಷದ ಜಾಗತಿಕ ಬಿಸಿನೆಸ್ ಲೀಡರ್ ಪ್ರಶಸ್ತಿಗಳ ಪೈಕಿ ಪ್ರತಿಷ್ಠಿತ 'ವರ್ಷದ ಸಿಇಒ' (CEO of the year) ಪ್ರಶಸ್ತಿ.

★ ಮಂಗಳೂರಿನ ಎ. ಶಾಮರಾವ್ ಪ್ರತಿಷ್ಠಾನದ ವತಿಯಿಂದ ನೀಡುವ ಪ್ರತಿಷ್ಠಿತ 'ಎ. ಶಾಮರಾವ್ ಸ್ಮಾರಕ ಅತ್ಯುತ್ತಮ ಸಾಧನೆ ಪ್ರಶಸ್ತಿ 2021'.

KBL-VIKAAS- ಕೆಬಿಎಲ್ ವಿಕಾಸ : ಸಮಗ್ರ ಪರಿವರ್ತನೆಗಾಗಿ ಮಹತ್ವಾಕಾಂಕ್ಷೆಯ ಪಯಣ

ನವೆಂಬರ್ 2017 ರಲ್ಲಿ ಆರಂಭವಾದ ಬ್ಯಾಂಕಿನ ಸಮಗ್ರ ಹಾಗೂ ಪರಿಪೂರ್ಣ ಪರಿವರ್ತನೆಯ ಪಯಣವು ಈಗ ವೇಗ ಪಡೆದುಕೊಂಡಿದೆ. ಇದು ಸಾಲ ಮಂಜೂರಾತಿ ವ್ಯವಸ್ಥೆಯ ಮಾನವ ಸಂಪನ್ಮೂಲ, ಐಟಿ ಕ್ಷೇತ್ರದ ಪರಿವರ್ತನೆ ಹಾಗೂ ಗ್ರಾಹಕರ ಬ್ಯಾಂಕಿಂಗ್ ಅನುಭವಗಳನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಡಿಜಿಟಲ್ ಸೆಂಟರ್ ಆಫ್ ಎಕ್ಸಲೆನ್ಸ್ (DCoE) ಅನ್ನು ಸ್ಥಾಪಿಸಿರುವ ನಿಮ್ಮ ಬ್ಯಾಂಕ್ ಬೆಂಗಳೂರಿನ ಬಸವನಗುಡಿಯಲ್ಲಿ 'ಡಿಜಿ ಬ್ರಾಂಚ್' ಕೂಡ ಪ್ರಾರಂಭಿಸಿದೆ. ಗ್ರಾಹಕರು 'ಡಿಜಿ ಬ್ರಾಂಚ್'ನಲ್ಲಿ ಎಸ್‌ಬಿ ಖಾತೆಯನ್ನು ತೆರೆದು ಕೆಲವೇ ನಿಮಿಷಗಳಲ್ಲಿ ಡೆಬಿಟ್ ಕಾರ್ಡ್ ಅನ್ನು ಪಡೆಯಬಹುದು. 2020–21 ರಲ್ಲಿ, ಬ್ಯಾಂಕ್ 'DhIRA' (Digital Human Interactive Relationship Assistant) ಎಂಬ 'ಚಾಟ್ ಬಾಟ್' ಪರಿಕಲ್ಪನೆಯನ್ನು ಪರಿಚಯಿಸಿ ಬ್ಯಾಂಕಿನ ಉತ್ಪನ್ನಗಳು ಮತ್ತು ಸೇವೆಗಳು, ಮಾಹಿತಿ ಮತ್ತು ಹೊಸ ವ್ಯವಹಾರಗಳಿಗಾಗಿ ಗ್ರಾಹಕರೊಂದಿಗೆ ಸಂವಹನ ಇತ್ಯಾದಿ ನಡೆಸುತ್ತಿದೆ. ಡಿಜಿಟಲೀಕರಣದ ಭಾಗವಾಗಿ, ಬ್ಯಾಂಕ್ ಹಲವಾರು ಡಿಜಿಟಲ್ ಆಧಾರಿತ ಪ್ರೊಡೆಕ್ಟ್‌ಗಳನ್ನು ಪರಿಚಯಿಸಿದೆ ಮತ್ತು ಬಹುಪಾಲು ರಿಟೇಲ್ ಸಾಲಗಳನ್ನು ಡಿಜಿಟಲ್ ಸಾಲ ಪ್ರಕ್ರಿಯೆಗಳ ಅಡಿಯಲ್ಲಿ ತರಲಾಗಿದೆ ಮತ್ತು In-principle ಮಂಜೂರಾತಿಯನ್ನು ತಕ್ಷಣವೇ ನೀಡಲಾಗುತ್ತದೆ. ಶೇ.90ರಷ್ಟು ಗೃಹ ಸಾಲಗಳು ಮತ್ತು ಕಾರು ಸಾಲಗಳು ಡಿಜಿಟಲ್ ಬ್ಯಾಂಕಿಂಗ್ ಮೂಲಕ ಮಂಜೂರಾಗುತ್ತಲಿವೆ ಮತ್ತು ನಿಮ್ಮ ಬ್ಯಾಂಕ್ ತನ್ನ ಅಂಡರ್‌ರೈಟಿಂಗ್ ಸಾಮರ್ಥ್ಯವನ್ನು TAT ನಲ್ಲಿ ಗಮನಾರ್ಹ ಸುಧಾರಣೆಯೊಂದಿಗೆ (ಮಂಜೂರಾತಿಯ ಸಮಯವನ್ನು ತಗ್ಗಿಸಲು) ಗಣನೀಯವಾಗಿ ಮೇಲ್ದರ್ಜೆಗೇರಿಸಿದೆ. ಈ ಉಪಕ್ರಮದ ಅಡಿಯಲ್ಲಿ ಎಲ್ಲಾ ಉತ್ಪನ್ನಗಳನ್ನು ತರಲು ಮತ್ತು ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಬ್ಯಾಂಕು ಪ್ರಯತ್ನಿಸುತ್ತಿದೆ.

ಅಲ್ಲದೆ, ಪರಿವರ್ತನೆಯ ಎರಡನೇ ಹಂತದಲ್ಲಿ 'ಕೆಬಿಎಲ್ ವಿಕಾಸ 2.0' (KBL VIKAAS 2.0) ಮೂಲಕ ನಿಮ್ಮ ಬ್ಯಾಂಕ್ ಸುಧಾರಿತ ಡಿಜಿಟಲ್ ಉಪಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ. ಡಿಜಿಟಲ್ ಟ್ರಾನ್ಸ್‌ಫಾರ್ಮೇಶನ್‌ನ ಉಪಕ್ರಮವಾಗಿ 'ಕೆಬಿಎಲ್ ನೆಕ್ಸ್ಟ್' (KBL NxT) ಅನ್ನು ಆರಂಭಿಸಿದೆ. ಇದು ನಿಮ್ಮ ಬ್ಯಾಂಕ್ 'ಡಿಜಿಟಲ್ ಬ್ಯಾಂಕ್ ಆಫ್ ಫ್ಯೂಚರ್' ಆಗಿ ಹೊರಹೊಮ್ಮಲು ಸಹಕಾರಿಯಾಗಲಿದೆ. ಗ್ರಾಹಕರ ಡಿಜಿಟಲ್ ಆನ್‌ಬೋರ್ಡಿಂಗ್, ಡಿಜಿ ಬ್ರಾಂಚ್, ವಿಶ್ಲೇಷಣಾತ್ಮಕ ಪರಿಹಾರಗಳು, ಡಿಜಿಟಲ್ ವಿಮೆ, ಹೆಚ್ಚಿದ ಪರ್ಯಾಯ ಸೇವಾ ವಾಹಿನಿಗಳ (ADC) ಅಳವಡಿಕೆ, ಬ್ಯಾಂಕಿನ ಎಲ್ಲಾ ಪ್ರಕ್ರಿಯೆಗಳ ಡಿಜಿಟೈಸೇಶನ್/ ಆಟೊಮೇಷನ್, ಐಟಿ ಮೂಲಸೌಕರ್ಯ ವರ್ಧನೆ, ಸೈಬರ್ ಭದ್ರತೆಗಳನ್ನು ಹೊಂದುವುದಕ್ಕಾಗಿ ತಂತ್ರಜ್ಞಾನ ಪರಿಣತ ಉದ್ಯಮದೊಂದಿಗೆ (Fintech) ಒಪ್ಪಂದ ಮಾಡಿಕೊಂಡಿದೆ.

ಕೆಬಿಎಲ್ ಸರ್ವೀಸಸ್ ಲಿಮಿಟೆಡ್ ಎಂಬ ಅಂಗಸಂಸ್ಥೆಯ ರಚನೆ

ವೆಚ್ಚಗಳನ್ನು ಕಡಿತಗೊಳಿಸಿ ದಕ್ಷತೆಯನ್ನು ಹೆಚ್ಚಿಸುವ ಮತ್ತು ನೇಪಥ್ಯದಲ್ಲಿ (Back Office) ನಲ್ಲಿ ನಡೆಯಬೇಕಾದ ಕೆಲಸಗಳನ್ನು ಸುಗಮಗೊಳಿಸುವ ದೃಷ್ಟಿಯಿಂದ, ನಿಮ್ಮ ಬ್ಯಾಂಕ್ ತನ್ನ ಪ್ರಪ್ರಥಮ ಹಣಕಾಸೇತರ ಅಂಗಸಂಸ್ಥೆ 'ಕೆಬಿಎಲ್ ಸರ್ವೀಸಸ್ ಲಿಮಿಟೆಡ್' ಅನ್ನು ಸ್ಥಾಪಿಸಿದೆ. ಈ ಅಂಗಸಂಸ್ಥೆಯು 30.03.2021ರಿಂದ ಕಾರ್ಯಾರಂಭಿಸಿದೆ. ನಿಗದಿತ ಉದ್ದೇಶಗಳಿಗೆ ಅನುಗುಣವಾಗಿ ಅದರ ಕಾರ್ಯಗಳನ್ನು ತ್ವರಿತಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಅಂಗಸಂಸ್ಥೆಯ 'ಬಿಸಿನೆಸ್ ಎಸೋಸಿಯೇಟ್ಸ್' ತಂಡವು ಬ್ಯಾಂಕಿಗೆ ಹೊಸ ಗ್ರಾಹಕರನ್ನು (NTB) ಪರಿಚಯಿಸಲು 'ಫೀಟ್ ಆನ್ ಸ್ಟ್ರೀಟ್' ಎಂಬ ಪರಿಕಲ್ಪನೆಯಲ್ಲಿ ಸಹಕರಿಸಲಿದ್ದಾರೆ.

ಮಾನವ ಸಂಪನ್ಮೂಲ ನಿರ್ವಹಣೆ

ನಮ್ಮ ಸಿಬ್ಬಂದಿಗಳು ಗ್ರಾಹಕ ಸೇವೆಯ ಮುಂದಾಳುಗಳು. ಉತ್ಕೃಷ್ಟತೆಯ ಮಾನದಂಡಗಳನ್ನು ಮರು ವ್ಯಾಖ್ಯಾನಿಸುವಂತೆ ತಮ್ಮ ಜೀವವನ್ನು ಪಣಕ್ಕಿಟ್ಟು ಸಾಂಕ್ರಾಮಿಕದ ಈ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿಯೂ ಅವರು ನಿಷ್ಠೆಯಿಂದ ಕಾರ್ಯನಿರ್ವಹಿಸಿ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ. ಬ್ಯಾಂಕ್ ತನ್ನ ಸಿಬ್ಬಂದಿಗಳನ್ನು 'ಸಾಮರ್ಥ್ಯ ವೃದ್ಧಿ'ಗಾಗಿ ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತಿದೆ. ELM (ಇ–ಲರ್ನಿಂಗ್ ಮಾಡ್ಯೂಲ್) ಎಂಬ ಡಿಜಿಟಲ್ ಕಲಿಕಾ ವೇದಿಕೆಯನ್ನು ಸಿದ್ಧಪಡಿಸಿದ್ದು, ಇದರಲ್ಲಿ ಉದ್ಯೋಗಿಗಳ ಅನುಕೂಲಕ್ಕಾಗಿ ವಿವಿಧ ವಿಷಯಗಳ ಕುರಿತು ತರಬೇತಿ ಸಾಮಗ್ರಿಗಳನ್ನು ನಿಯಮಿತವಾಗಿ ಒದಗಿಸಲಾಗುತ್ತಿದೆ. ಇದಲ್ಲದೇ, ಬ್ಯಾಂಕಿನ ISO 9001:2015 ಸರ್ಟಿಫೈಡ್ ಸ್ಟಾಫ್ ಟ್ರೈನಿಂಗ್ ಕಾಲೇಜಿನಲ್ಲಿ ತರಬೇತಿ ನೀಡಲಾಗುತ್ತಿದೆ ಮತ್ತು ಇತರ ಪ್ರತಿಷ್ಠಿತ ತರಬೇತಿ ಕೇಂದ್ರಗಳಾದ SBISTC, CAB-RBI, IDBRT, FEDAI, CAFRAL ಇತ್ಯಾದಿಗಳ ಮೂಲಕ 2020–21ರಲ್ಲಿ ಒಟ್ಟು 4,433 ಸಿಬ್ಬಂದಿಗಳು (ಒಟ್ಟು ಸಿಬ್ಬಂದಿಯ ಶೇ. 56.66) ತರಬೇತಿ/ ಕಾರ್ಯಾಗಾರ / ಸೆಮಿನಾರ್‌ಗಳಲ್ಲಿ ಭಾಗವಹಿಸಿದ್ದಾರೆ.

ಉದ್ಯೋಗಿಗಳಿಗೆ ಕೋವಿಡ್ ಪರಿಹಾರ ಕ್ರಮಗಳು

ನಿಗದಿತ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮೃತ ಸಿಬ್ಬಂದಿಯ ಕುಟುಂಬದ ಓರ್ವ ಅರ್ಹ ಸದಸ್ಯರಿಗೆ ಸೂಕ್ತ ಅನುಕಂಪದ ನೇಮಕಾತಿ ಮಾತ್ರವಲ್ಲದೆ ಕೋವಿಡ್–19 ಕ್ಕೆ ಬಲಿಯಾದ ನೌಕರರ ವಾರೀಸುದಾರರಿಗೆ (ನಾಮಿನಿ) ರೂ. 20 ಲಕ್ಷಗಳ ವಿಶೇಷ ಕೋವಿಡ್–19 ವಿಮೆಯನ್ನು ಜಾರಿಗೊಳಿಸಿದ್ದೇವೆ. ಬ್ಯಾಂಕ್ ತನ್ನ ಉದ್ಯೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ಅನುಕೂಲಕ್ಕಾಗಿ ವಿವಿಧ ಕೇಂದ್ರಗಳಲ್ಲಿ ಲಸಿಕೆ ಶಿಬಿರಗಳನ್ನು ಆಯೋಜಿಸಿದೆ. ಸಿಬ್ಬಂದಿಗಳ ಸುರಕ್ಷತೆಯನ್ನು ಕಾಪಾಡಲು ಕೋವಿಡ್–19 ಸುರಕ್ಷತಾ ಕ್ರಮಗಳಾದ ಸ್ಯಾನಿಟೈಸರ್‌ಗಳು, ಮಾಸ್ಕ್‌ಗಳು ಮತ್ತು ಥರ್ಮಲ್ ಸ್ಕ್ರೀನಿಂಗ್, ವರ್ಕ್ ಫ್ರಂ ಹೋಮ್ (ಮನೆಯಿಂದ ಕೆಲಸ ಮಾಡುವುದು), ಸೆಬ್ಯಾಟಿಕಲ್ ರಜೆ, ಇತ್ಯಾದಿಗಳನ್ನು ಪರಿಚಯಿಸಿದೆ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR)

ನಿಮ್ಮ ಬ್ಯಾಂಕ್ ಸಿಎಸ್‌ಆರ್ ಕಾರ್ಯಕ್ರಮದ ಅಡಿಯಲ್ಲಿ ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು, ಪರಂಪರೆಯ ಸಂರಕ್ಷಣೆ, ಕೆರೆಗಳ ಪುನರುಜ್ಜೀವನ, ಹಸಿರು ಉಪಕ್ರಮಗಳು, ಜೀವನೋಪಾಯ ವೃದ್ಧಿ, ಗ್ರಾಮೀಣ ಸರಕಾರಿ ಶಾಲೆಗಳಿಗೆ ಮೂಲಸೌಕರ್ಯ, ಹೀಗೆ ವಿವಿಧ ಚಟುವಟಿಕೆಗಳ ಮೂಲಕ ಸಮಾಜದೊಂದಿಗೆ ಸಕ್ರಿಯ ಸಂಬಂಧವನ್ನು ಹೊಂದಿದೆ. ಹಲವಾರು ವರ್ಷಗಳಿಂದ ಸಿಎಸ್‌ಆರ್ ಅಡಿಯಲ್ಲಿ ನಿಮ್ಮ ಬ್ಯಾಂಕಿನ ಕೊಡುಗೆಗಳು ಸಮಾಜದ ವಿವಿಧ ವಿಭಾಗಗಳಲ್ಲಿ ಸಕಾರಾತ್ಮಕ ಪ್ರಭಾವವನ್ನು ಉಂಟು ಮಾಡಿದೆ. ಇದಲ್ಲದೆ, ಕೋವಿಡ್–19 ಸಂಬಂಧಿತ ಸವಾಲಿನ ಸಮಯದಲ್ಲಿ, ನಿಮ್ಮ ಬ್ಯಾಂಕ್ ಡಿಜಿಟಲ್ ಪಲ್ಸ್ ಆಕ್ಸಿಮೀಟರ್, ಲೈಫ್ ಸಪೋರ್ಟ್ ಆಂಬ್ಯುಲೆನ್ಸ್, ಪಿಪಿಇ ಕಿಟ್‌ಗಳು, ಜೀವರಕ್ಷಕ ವೆಂಟಿಲೇಟರ್‌ಗಳು, ಕಾರ್ಡಿಯಾಕ್ ಮಾನಿಟರ್‌ಗಳನ್ನು ಪೂರೈಸುವ ಮೂಲಕ ಆರೋಗ್ಯವ್ಯವಸ್ಥೆಯ ಸಬಲೀಕರಣಕ್ಕೆ ಕೊಡುಗೆ ನೀಡಿದೆ. 2020–21 ರಲ್ಲಿ ನಿಮ್ಮ ಬ್ಯಾಂಕ್ ತನ್ನ ಸಿಎಸ್‌ಆರ್ ಚಟುವಟಿಕೆಗಳಿಗಾಗಿ ಒಟ್ಟಾರೆ ರೂ. 960 ಲಕ್ಷಗಳ ಬಜೆಟ್ ನಿಗದಿಪಡಿಸಿತ್ತು. ಅದನ್ನು ಮೀರಿ 185 ಯೋಜನೆಗಳಿಗೆ ರೂ. 979.04 ಲಕ್ಷ ಮೊತ್ತವನ್ನು ಮಂಜೂರು ಮಾಡಿದೆ. ನಿರ್ದೇಶಕ ಮಂಡಳಿಯ ಸಮಿತಿಯಾದ ''ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿಯು'' ನಿಮ್ಮ ಬ್ಯಾಂಕಿನ ಸಿಎಸ್‌ಆರ್ ಚಟುವಟಿಕೆಗಳ ಒಟ್ಟಾರೆ ನಿರ್ವಹಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದೆ.

ಸ್ಥಾಪಕರ ಸಂಸ್ಮರಣೆ

ಬ್ಯಾಂಕಿನ ಸ್ಥಾಪಕ ಪಿತಾಮಹರಿಗೆ ಗೌರವ ಸಲ್ಲಿಸಲು ಬ್ಯಾಂಕ್ ಪ್ರತಿ ವರ್ಷ ಫೆಬ್ರವರಿ 18 ರಂದು ಸಂಸ್ಥಾಪಕರ ದಿನಾಚರಣೆಯನ್ನು ಆಯೋಜಿಸುತ್ತಿದೆ. ಈ ವರ್ಷವೂ 18.02.2021 ರಂದು ಬ್ಯಾಂಕ್ ತನ್ನ ಸಂಸ್ಥಾಪಕರ ದಿನವನ್ನು ಆಚರಿಸಿದೆ. ಕೋವಿಡ್–19 ನಿಯಮಗಳಿಗೆ ಅನುಗುಣವಾಗಿ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸ, ಭಾಷಣಕಾರರಾದ ಡಾ.ಗುರುರಾಜ ಕರಜಗಿ ಅವರು ಈ ವರ್ಷದ ಸಂಸ್ಥಾಪಕರ ದಿನದ ಉಪನ್ಯಾಸ ನೀಡಿದರು ಮತ್ತು ಇದೊಂದು ಉತ್ತಮ ಕಾರ್ಯಕ್ರಮವಾಗಿ ಮೂಡಿಬಂತು.

ಶತಮಾನೋತ್ಸವ ವರ್ಷ 2023–2024

ನಿಮ್ಮ ಬ್ಯಾಂಕ್ 18.02.2024 ರಂದು ಸಮಾಜಕ್ಕೆ ತನ್ನ 100 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿ ತನ್ನ ಎರಡನೇ ಶತಮಾನದತ್ತ ಮುನ್ನಡೆಯಲಿದೆ. ಈ ಹಿನ್ನೆಲೆಯಲ್ಲಿ ನಾವು 18.02.2023 ರಿಂದ 18.02.2024 ರವರೆಗೆ ಬ್ಯಾಂಕಿನ ಶತಮಾನೋತ್ಸವದ ಆಚರಣೆಗೆ ಯೋಜಿಸುತ್ತಿದ್ದೇವೆ. ಮಾತ್ರವಲ್ಲ, ಹೊಸ ಮತ್ತು ದೀರ್ಘಾವಧಿಯ ಉಪಕ್ರಮಗಳ ಮೂಲಕ ಬ್ಯಾಂಕಿನ ಎರಡನೇ ಶತಮಾನಕ್ಕೆ ಬಲವಾದ ಅಡಿಪಾಯ ಹಾಕಲಿದ್ದೇವೆ. ನಿಮ್ಮ ಬ್ಯಾಂಕ್ ಈ ವಿಶೇಷ ವರ್ಷದ ಸವಿನೆನಪಿಗಾಗಿ 'ಶತಮಾನೋತ್ಸವ ಭವನ', 'ಸ್ಮರಣ ಸಂಚಿಕೆ', 'KBL NxT' ಇತ್ಯಾದಿ ಉಪಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುದು ಹೆಮ್ಮೆಯ ವಿಚಾರ.

ಕೃತಜ್ಞತಾಪೂರ್ವಕ ಸ್ಮರಣೆಗಳು

ಬ್ಯಾಂಕ್ ಅನ್ನು ಮುನ್ನಡೆಸುವಲ್ಲಿ ಕಾರ್ಪೊರೇಟ್ ಆಡಳಿತ ಮತ್ತು ವೃತ್ತಿಪರತೆಯ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಪ್ರಬುದ್ಧ ಸಲಹೆ ಮತ್ತು ಮಾರ್ಗದರ್ಶನ ನೀಡಿದ ನಮ್ಮ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಪಿ.ಜಯರಾಮ ಭಟ್ ಮತ್ತು ನಿರ್ದೇಶಕರ ಮಂಡಳಿಗೆ, ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಬ್ಯಾಂಕುಗಳ ಸಂಘ, ಸೆಬಿ, ಸ್ಟಾಕ್ ಎಕ್ಸ್‌ಚೇಂಜ್‌ಗಳು, ಐಆರ್‌ಡಿಎಐ ಮತ್ತು ಇತರ ನಿಯಂತ್ರಣ ಶಾಸನಬದ್ಧ ಸಂಸ್ಥೆಗಳು, ವಿವಿಧ ರಾಜ್ಯ ಸರಕಾರಗಳ ನಿರಂತರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ, ಅನೇಕ ಸವಾಲುಗಳ ನಡುವೆಯೂ ತಮ್ಮ ಅತ್ಯುತ್ತಮ ಹಾಗೂ ದಣಿವರಿಯದ ಪ್ರಯತ್ನಗಳಿಗಾಗಿ ಹಿರಿಯ ಅಧಿಕಾರಿಗಳ ತಂಡ ಮತ್ತು ಎಲ್ಲಾ ಸಿಬ್ಬಂದಿಗಳಿಗೆ, AIKBEA ಮತ್ತು KBOO ಸಂಘಟನೆಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಪದಾಧಿಕಾರಿಗಳಿಗೆ, ಬ್ಯಾಂಕಿನ ಬಗ್ಗೆ ಅಚಲ ನಂಬಿಕೆ ಮತ್ತು ಅಮೂಲ್ಯವಾದ ಪ್ರೋತ್ಸಾಹವನ್ನು ನೀಡುತ್ತಿರುವ ಸರ್ವ ಶೇರುದಾರರಿಗೆ ಹಾಗೂ ನಮ್ಮ ಎಲ್ಲ ಗೌರವಾನ್ವಿತ ಗ್ರಾಹಕರು ಹಾಗೂ ಹಿತೈಷಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಮುನ್ನೋಟ

2020–21ರಲ್ಲಿ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಇದೀಗ ನಾವು ಆಶಾವಾದ ಮತ್ತು ಉತ್ಸಾಹದಿಂದ ಮುನ್ನಡೆಯುತ್ತಿದ್ದೇವೆ. ನಮ್ಮ ಗಮನವು ಪ್ರಸ್ತುತ ಆರ್ಥಿಕ ವರ್ಷವನ್ನು ನಮ್ಮ ಬ್ಯಾಂಕಿನ ''ಶ್ರೇಷ್ಠತೆಯ ವರ್ಷ''ವನ್ನಾಗಿ ಮಾಡುವುದರಲ್ಲಿದೆ. ಮುಂಬರುವ ವರ್ಷಗಳಲ್ಲಿ 'ಕೆಬಿಎಲ್ ತಂಡ'ವು ನಿಮ್ಮ ಬ್ಯಾಂಕ್ ಅನ್ನು ಸಮಾನ ಗುಂಪಿನ (Peer Group) ಮೊದಲ ಮೂರು ಸ್ಥಾನಗಳಲ್ಲೊಂದರಲ್ಲಿ ನೋಡಲು ಶ್ರಮಿಸುತ್ತದೆ. ಅದಕ್ಕಾಗಿ ಈ ಕೆಳಗಿನ ಅಂಶಗಳ ಮೇಲೆ ನಾವು ವಿಶೇಷ ಗಮನ ನೀಡಲಿದ್ದೇವೆ.

ಎ) ಆರೋಗ್ಯಕರ, ಸುಸ್ಥಿರ ಮತ್ತು ಲಾಭದಾಯಕ ವ್ಯವಹಾರ.

ಬಿ) ಮುಂಗಡಗಳನ್ನು ಒತ್ತಡ ಮುಕ್ತಗೊಳಿಸಲು ಮತ್ತು ''ಸ್ಲಿಪ್ಪೇಜ್ ರೇಶಿಯೋ''ವನ್ನು ನಿಯಂತ್ರಿಸಲು ದಕ್ಷ ಸಂಗ್ರಹಣಾ ಕಾರ್ಯವಿಧಾನ.

ಸಿ) ಅನುತ್ಪಾದಕ ಆಸ್ತಿಗಳ ಸಮಸ್ಯೆಯ ಪರಿಹಾರಕ್ಕಾಗಿ (ಎನ್‌ಪಿಎ ರೆಸಲ್ಯೂಶನ್) ನಮ್ಮ ಉತ್ತಮ ಪ್ರಯತ್ನಗಳನ್ನು ಮುಂದುವರಿಸಲು ಮತ್ತು ತಾಂತ್ರಿಕವಾಗಿ ಮನ್ನಾ ಮಾಡಲಾದ (ರೈಟ್ ಆಫ್) ಖಾತೆಗಳಿಂದ ಹಣ ವಸೂಲಿ ಮಾಡಲು ವಿಶೇಷ ಗಮನ.

ಡಿ) CASA ಮತ್ತು ಕಡಿಮೆ ವೆಚ್ಚದ RTD-Retail Term Deposit (ಠೇವಣಿ) ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವುದು.

ಇ) ಥರ್ಡ್ ಪಾರ್ಟಿ ಪ್ರಾಡಕ್ಟ್ (TPP) ಸೇರಿದಂತೆ ಗ್ರಾಹಕ ಕೇಂದ್ರಿತ ಉಪಕ್ರಮಗಳ, ಶುಲ್ಕದ ಆದಾಯದ ಹರಿವನ್ನು ವಿಸ್ತರಿಸಲು ಆದ್ಯತೆ.

ಎಫ್) 'ಕೆಬಿಎಲ್ ಸರ್ವೀಸಸ್ ಲಿಮಿಟೆಡ್' ಮೂಲಕ ವ್ಯವಹಾರದ ದಕ್ಷತೆ ಹಾಗೂ ಲಾಭಾದಾಯಕತೆಯನ್ನು ಹೆಚ್ಚಿಸುವುದು.

ಜಿ) ಭವಿಷ್ಯಕ್ಕೆ ಪೂರಕವಾದ ಸಿಬ್ಬಂದಿ ಕಾರ್ಯಪಡೆ ರಚಿಸುವುದು.

ಎಚ್) ಅನುಪಾಲನಾ ಸಂಸ್ಕೃತಿಯನ್ನು ಇನ್ನಷ್ಟು ಜಾಗೃತಗೊಳಿಸುವ ಮೂಲಕ ಬ್ಯಾಂಕಿನ ನಿಯಂತ್ರಣ ಕಾರ್ಯಕ್ಷಮತೆಯನ್ನು ಬಲಗೊಳಿಸುವುದು.

ಐ) PCR, CRAR, NIM, ROA, ROE, ವೆಚ್ಚ ಮತ್ತು ಆದಾಯದ ಅನುಪಾತ ಮುಂತಾದ ಮೂಲಭೂತ ಅಂಶಗಳನ್ನು ಮತ್ತಷ್ಟು ಬಲಪಡಿಸುವುದು.

ಜೆ) ಪಾಲುದಾರರ (stake holders) ಮೌಲ್ಯವನ್ನು ಹೆಚ್ಚಿಸಲು ಶ್ರಮವಹಿಸುವುದು.

ಕೆ) 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗಿ ಹೊರಹೊಮ್ಮಲು "KBL NxT" ಪರಿಕಲ್ಪನೆಯ ಮೂಲಕ ಐಟಿ/ಡಿಜಿಟಲ್/ಭದ್ರತಾ ವಿಶೇಷತೆಗಳನ್ನು ಮತ್ತಷ್ಟು ಬಲಪಡಿಸುವುದು.

ಇದಲ್ಲದೆ, ನಿಮ್ಮ ಬ್ಯಾಂಕ್ ಅನ್ನು ಇತ್ತೀಚೆಗೆ ಆರ್‌ಬಿಐನಿಂದ ಸರ್ಕಾರಿ ವ್ಯವಹಾರ ನಡೆಸಲು 'ಏಜೆನ್ಸಿ ಬ್ಯಾಂಕ್' ಎಂದು ಪರಿಗಣಿಸಲಾಗಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಬ್ಯಾಂಕ್ ತನ್ನ ಉಳಿತಾಯ ಹಾಗೂ ಚಾಲ್ತಿ ಖಾತೆಗಳನ್ನು (ಕಾಸಾ–CASA) ಗಣನೀಯವಾಗಿ ಹೆಚ್ಚಿಸಲು ಸಾಧ್ಯವಾಗುತ್ತದೆ ಹಾಗೂ 'ಏಜೆನ್ಸಿ ಬ್ಯಾಂಕ್' ವ್ಯವಹಾರದಲ್ಲೂ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರದ ವಿಭಾಗಗಳಿಗೆ ನೀಡಿ ಶುಲ್ಕ ಸಂಗ್ರಹಣೆಯ ಮೂಲಕ ಉತ್ತಮ ಆದಾಯವನ್ನು ಗಳಿಸುವ ನಿರೀಕ್ಷೆಯಿದೆ.

ಬ್ಯಾಂಕ್ ಮತ್ತು ಅದರ ಗ್ರಾಹಕರ ನಡುವಿನ ಪರಸ್ಪರ ನಂಬಿಕೆಯಿಂದ ಮತ್ತು ಶೇರುದಾರರ ದೃಢ ಬೆಂಬಲದೊಂದಿಗೆ ನಿಮ್ಮ ಬ್ಯಾಂಕ್ 97ಕ್ಕೂ ಹೆಚ್ಚು ವರ್ಷಗಳಿಂದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತ ಬಂದಿದೆ ಮತ್ತು ಇದು ಇನ್ನಷ್ಟು ವಿಸ್ತಾರಗೊಳ್ಳಲಿದೆ ಎಂಬ ತುಂಬು ಭರವಸೆ ನನಗಿದೆ. ನಮ್ಮ ವ್ಯವಹಾರ ಮುನ್ನೋಟವು ಸಕಾರಾತ್ಮಕವಾಗಿದ್ದು, ಹಲವಾರು ಅವಕಾಶಗಳ ಬಾಗಿಲು ತೆರೆದಿದೆ ಎಂಬುದು ವಾಸ್ತವ. ಒಟ್ಟಾಗಿ, ನಾವು ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುತ್ತ 'ಕೆಬಿಎಲ್' ಅನ್ನು ಸುದೃಢವಾದ 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗಿ ಪರಿವರ್ತಿಸಲು ಶ್ರಮಿಸೋಣ.

(ಟಿಪ್ಪಣಿ : ಇದು ವಾರ್ಷಿಕ ಮಹಾಸಭೆಯ ನಡಾವಳಿಯ ಅಧಿಕೃತ ದಾಖಲೆ ಅಲ್ಲ)

Follow us : / KarnatakaBank

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.com

ಯಡಿಯೂರಪ್ಪ ರಾಜ್ಯ ಪ್ರವಾಸದ ಕುರಿತು ವಿವಿಧ ಪಕ್ಷದ ಮುಖಂಡರ ಅಭಿಪ್ರಾಯ

‘ಬಲ ಪ್ರದರ್ಶನ: ವರಿಷ್ಠರಿಗೆ ಬಿಸಿ ಮುಟ್ಟಿಸಲು ತಂತ್ರ’

ಪ್ರಜಾವಾಣಿ ಸಂವಾದ

ಬೆಂಗಳೂರು: ಪ್ರಬಲ ಲಿಂಗಾಯತ ಸಮುದಾಯ ಈಗಲೂ ತಮ್ಮ ಜೊತೆ ಗಟ್ಟಿಯಾಗಿ ನಿಂತಿದೆಯೊ ಇಲ್ಲವೊ ಎಂಬುದನ್ನು ಪರೀಕ್ಷಿಸಿಕೊಳ್ಳುವುದು. ತಮ್ಮನ್ನು ಕಡೆಗಣಿಸಿದರೆ ಬಿಜೆಪಿ ಎದುರಿಸಬೇಕಾದ ಪರಿಣಾಮಗಳ ಬಗ್ಗೆ ತಮ್ಮ ಪಕ್ಷದ ವರಿಷ್ಠರಿಗೆ ಸಂದೇಶ ರವಾನಿಸುವ ಉದ್ದೇಶ ಬಿ.ಎಸ್.ಯಡಿಯೂರಪ್ಪನವರ ರಾಜ್ಯ ಪ್ರವಾಸದ ಹಿಂದೆ ಅಡಕವಾಗಿವೆ. ತಮ್ಮ ಜೊತೆಗೆ ಕಿರಿಯ ಮಗ ಬಿ.ವೈ. ವಿಜಯೇಂದ್ರಗೂ ಸೂಕ್ತ ಸ್ಥಾನಮಾನ ನೀಡಬೇಕು ಎಂಬ ಬೇಡಿಕೆಯನ್ನು ಪರೋಕ್ಷವಾಗಿ ವರಿಷ್ಠರ ಮುಂದಿಡುವ ಪ್ರಯತ್ನದ ಭಾಗದಂತೆಯೂ ಇದು ಕಾಣುತ್ತದೆ.

‘ಯಡಿಯೂರಪ್ಪ ರಾಜ್ಯ ಪ್ರವಾಸದ ಗುಟ್ಟೇನು’ ವಿಷಯದ ಕುರಿತು ಗುರುವಾರ ನಡೆದ ‘ಪ್ರಜಾವಾಣಿ ಸಂವಾದ’ದಲ್ಲಿ ವ್ಯಕ್ತವಾದ ಅಭಿಪ್ರಾಯಗಳಿವು.

‘ಮೂಲೆ ಗುಂಪಾಗುವ ಭಯ’

‘ಬದುಕಿರುವವರೆಗೂ ಸಕ್ರಿಯ ರಾಜಕಾರಣದಲ್ಲಿ ಇರಬೇಕು. ತಮ್ಮನ್ನು ಕಡೆಗಣಿಸಿದರೆ 2013ರಲ್ಲಿ ಆದ ಗತಿಯೇ ಪಕ್ಷಕ್ಕೆ ಮತ್ತೆ ಬಂದೊದಗಲಿದೆ ಎಂಬ ಸಂದೇಶವನ್ನು ವರಿಷ್ಠರಿಗೆ ರವಾನಿಸುವ ಉದ್ದೇಶದಿಂದ ಈ ಪ್ರವಾಸ ಕೈಗೊಂಡಿರುವುದು ಸ್ಪಷ್ಟ’.

‘ಜನಸಂಘ ಮತ್ತು ಬಿಜೆಪಿಯವರು ಪಕ್ಷಕ್ಕಾಗಿ ದುಡಿದವರನ್ನು ಮೂಲೆಗುಂಪು ಮಾಡಿದ ಅನೇಕ ನಿದರ್ಶನಗಳು ಕಣ್ಣ ಮುಂದೆ ಇವೆ. ತಾವೂ ಅವಗಣನೆಗೆ ಗುರಿಯಾಗಬಹುದು ಎಂಬ ಆತಂಕ ಯಡಿಯೂರಪ್ಪನವರನ್ನು ಕಾಡಿರಬಹುದು. ತಾನು ರಾಜ್ಯದ ಜನತೆಯ ಹತ್ತಿರ ಹೋಗುತ್ತೇನೆ ಎಂದು ಅವರು ಹೇಳುತ್ತಿರುವುದು ಮೂರನೇ ಬಾರಿ. 2011ರಲ್ಲೂ ಇಂತಹ ತೀರ್ಮಾನ ಕೈಗೊಂಡಿದ್ದ ಅವರು ಬಿಜೆಪಿಯನ್ನು ಮುಗಿಸುವುದೇ ನನ್ನ ಜೀವನದ ಗುರಿ ಎಂದಿದ್ದರು’.

‘ದೇಶದಲ್ಲಿ ಈಗ ಬಿಜೆಪಿ ವರ್ಚಸ್ಸು ಕುಂದುತ್ತಿದೆ. ಈ ಸಂದರ್ಭವನ್ನು ಬಳಸಿಕೊಂಡು ಶಕ್ತಿ ಪ್ರದರ್ಶಿಸಲು ಹೊರಟಂತಿದೆ’.

–ವಿ.ಎಸ್.ಉಗ್ರಪ್ಪ, ಕಾಂಗ್ರೆಸ್ ಮುಖಂಡ

‘ಪಕ್ಷವನ್ನು ಅಧಿಕಾರಕ್ಕೆ ತರುವ ಉದ್ದೇಶ’



‘ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನವೇ ಅವರು ರಾಜ್ಯ ಪ್ರವಾಸದ ಇಚ್ಛೆ ವ್ಯಕ್ತಪಡಿಸಿದ್ದರು. ರಾಜೀನಾಮೆ ನೀಡಿದ ಬಳಿಕವೂ ಈ ಮಾತನ್ನು ಪುನರುಚ್ಚರಿಸಿದ್ದರು. 2023ರಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಬೇಕು. ಇದಕ್ಕಾಗಿ ಬೂತ್ ಮಟ್ಟದಿಂದಲೇ ಪಕ್ಷವನ್ನು ಬಲಿಷ್ಠಗೊಳಿಸಬೇಕು ಎಂಬುದೇ ಈ ಪ್ರವಾಸದ ಉದ್ದೇಶ’.

‘ಪ್ರವಾಸವು ವೈಯಕ್ತಿಕ ಶಕ್ತಿ ಪ್ರದರ್ಶನದ ವೇದಿಕೆ ಎಂದು ಬಣ್ಣಿಸುತ್ತಿರುವುದು ಸರಿಯಲ್ಲ. ಸಾಮೂಹಿಕ ನಾಯಕತ್ವದ ಮೂಲಕ ಪಕ್ಷವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಬೇಕು ಎಂಬ ಸಂದೇಶ ನೀಡಲು ಅವರು ಹೊರಟಿದ್ದಾರೆ’.

‘ಬಿಜೆಪಿ ಹೈಕಮಾಂಡ್ 75 ವರ್ಷ ಮೇಲ್ಪಟ್ಟವರನ್ನು ಮುಖ್ಯಮಂತ್ರಿಯಾಗಿ ಮಾಡಿಲ್ಲ. ಪಕ್ಷ ಕಟ್ಟಿದ ಯಡಿಯೂರಪ್ಪನವರಿಗೆ ಸೂಕ್ತ ಗೌರವ ನೀಡಬೇಕು ಎಂಬ ಉದ್ದೇಶದಿಂದ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಅವರನ್ನು ಮೂಲೆಗುಂಪು ಮಾಡುವ ಉದ್ದೇಶ ಪಕ್ಷಕ್ಕಿಲ್ಲ’.

–ಎನ್.ರವಿಕುಮಾರ್, ವಿಧಾನಪರಿಷತ್‌ನ ಬಿಜೆಪಿ ಸದಸ್ಯ

‘ಬಲ ಪ್ರದರ್ಶನದ ತಂತ್ರ’

‘ಮುಂದಿನ ಚುನಾವಣೆಯವರೆಗೂ ಮುಖ್ಯಮಂತ್ರಿ ಗಾದಿಯಲ್ಲಿ ಮುಂದುವರಿಯಬೇಕೆಂಬ ಮಹಾದಾಸೆ ಯಡಿಯೂರಪ್ಪ ಅವರಿಗಿತ್ತು. ಅದಕ್ಕೆ ಅವರ ಪಕ್ಷ ವರಿಷ್ಠರು ಅಡ್ಡಗಾಲು ಹಾಕಿದ್ದರು. ಇದರಿಂದ ಬೇಸರಿಸಿಕೊಂಡಿರುವ ಅವರು ಈಗ ಬಲಪ್ರದರ್ಶನಕ್ಕೆ ಮುಂದಾಗಿದ್ದಾರೆ. ಲಿಂಗಾಯತ ಮತಗಳು ಚದುರಿಹೋಗಬಾರದು, ಅವುಗಳ ಮೇಲೆ ತಮ್ಮ ಹಿಡಿತವೇ ಇರಬೇಕು ಎಂಬುದು ಅವರ ಆಸೆ. ವಿಧಾನಸಭೆಯಲ್ಲಿ ತಮ್ಮ ಬೆಂಬಲಿಗ ಶಾಸಕರ ಸಂಖ್ಯೆ ಹೆಚ್ಚಿದ್ದರೆ ಶಾಸಕಾಂಗ ಪಕ್ಷದ ಮೇಲೆ ಹಿಡಿತ ಸಾಧಿಸಬಹುದು. ಆಗ ತಾವು ಸೂಚಿಸಿದವರೇ ಮುಖ್ಯಮಂತ್ರಿ ಗಾದಿಗೆ ಏರುತ್ತಾರೆ ಎಂಬ ಅಭಿಲಾಷೆಯೂ ಇದ್ದಂತಿದೆ’.

‘ಯಡಿಯೂರಪ್ಪ ಹಾಗೂ ಬಿಜೆಪಿ ನಡುವಣ ಸಂಘರ್ಷದಲ್ಲಿ ಆರ್‌ಎಸ್‌ಎಸ್ ಪಾತ್ರ ಪ್ರಮುಖವಾದುದು. ಉತ್ತರ ಪ್ರದೇಶ ಮಾದರಿಯಲ್ಲಿ ಕರ್ನಾಟಕದಲ್ಲೂ ಆಡಳಿತ ತರಬೇಕು ಎಂಬುದು ಆರ್‌ಎಸ್‌ಎಸ್ ಬಯಕೆ. ಇದಕ್ಕೆ ಯಡಿಯೂರಪ್ಪ ಸೊಪ್ಪು ಹಾಕದಿದ್ದಾಗ ಅಧಿಕಾರದಿಂದ ಕೆಳಗಿಳಿಸಲಾಯಿತು’.

–ಜಿ.ಎನ್.ನಾಗರಾಜ್, ಸಿಪಿಎಂ ರಾಜ್ಯ ಘಟಕದ ಸದಸ್ಯ.

‘ಅಸ್ತಿತ್ವ ಉಳಿಸಿಕೊಳ್ಳಲು ಪ್ರವಾಸ’

‘ಲಿಂಗಾಯತ ಸಮುದಾಯದ ಪ್ರಶ್ನಾತೀತ ನಾಯಕರಾಗಿರುವ ತಮ್ಮನ್ನು ನಿಕೃಷ್ಟವಾಗಿ ನಡೆಸಿಕೊಂಡರೆ ಆಗುವ ಪರಿಣಾಮಗಳೇನು ಎಂಬುದನ್ನು ತೋರಿಸುವುದು. ಇಳಿ ವಯಸ್ಸಿನಲ್ಲೂ ತಮ್ಮ ಪ್ರಭಾವ ಕಡಿಮೆಯಾಗಿಲ್ಲ ಎಂಬ ಸಂದೇಶ ರವಾನಿಸುವ ಉದ್ದೇಶ ಈ ಪ್ರವಾಸದ ಹಿಂದಿದೆ’.

‘ಪಕ್ಷ ಸಂಘಟನೆಯೇ ಪ್ರವಾಸದ ಉದ್ದೇಶವಾಗಿದ್ದರೆ ಇತರ ನಾಯಕರೂ ಅವರ ಜೊತೆಗೂಡಬಹುದಿತ್ತಲ್ಲವೇ. ಜಾತಿ ರಾಜಕಾರಣದ ಅಸ್ತಿತ್ವ ಉಳಿಸಿಕೊಳ್ಳಲು ಅವರು ಈ ಪ್ರವಾಸಕ್ಕೆ ಮುಂದಾಗಿದ್ದಾರೆ’.

–ಎಸ್. ಸುಧಾಕರ ಶೆಟ್ಟಿ, ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷ.

‘ಪಕ್ಷಕ್ಕಿಂತಲೂ ತಾವು ಶಕ್ತಿಶಾಲಿ ಎಂಬುದನ್ನು ತೋರಿಸುವ ಪ್ರಯತ್ನ’

‘ತಮ್ಮ ಇಚ್ಛೆಗೆ ವಿರುದ್ಧವಾಗಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷ ಸಂಘಟನೆ ಎಂಬುದು ನೆಪ ಮಾತ್ರ. ಪಕ್ಷಕ್ಕಿಂತಲೂ ತಾನೇ ಶಕ್ತಿಶಾಲಿ ಎಂಬುದನ್ನು ತೋರಿಸಿಕೊಳ್ಳುವ ಅನಿವಾರ್ಯ ಯಡಿಯೂರಪ್ಪನವರಿಗೆ ಎದುರಾಗಿದೆ’.

‘ಪಂಚಮಸಾಲಿ ಹಾಗೂ ವೀರಶೈವರನ್ನು ಹೊರಗಿಟ್ಟು ಲಿಂಗಾಯತ ಸ್ವತಂತ್ರ ಧರ್ಮ ಸ್ಥಾಪಿಸಬೇಕೆಂಬುದು ಎಂ.ಬಿ. ಪಾಟೀಲರ ಹೋರಾಟದ ಉದ್ದೇಶವಾಗಿತ್ತು. ಈಗ ಆ ಹೋರಾಟದಿಂದ ಹಿಂದಡಿ ಇಟ್ಟಿದ್ದಾರೆ. ವೀರಶೈವರನ್ನೂ ಜೊತೆಗೆ ಕರೆದುಕೊಂಡು ಹೋಗುವ ಮಾತುಗಳನ್ನು ಆಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಹಾಗೂ ಎಂ.ಬಿ. ಪಾಟೀಲರು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಸಬೇಕು ಎಂಬ ಮಾತುಗಳನ್ನು ಆಡಿದ್ದರು. ಅವರನ್ನು ಕಡೆಗಣಿಸಿದರೆ ಲಿಂಗಾಯತ ಸಮುದಾಯವನ್ನು ತಮ್ಮತ್ತ ಸೆಳೆದುಕೊಳ್ಳುತ್ತೇವೆ ಎಂಬ ಸಂದೇಶವನ್ನೂ ಅವರು ಬಿಜೆಪಿ ನಾಯಕರಿಗೆ ರವಾನಿಸುತ್ತಿದ್ದಾರೆ’.

‘ಇನ್ನೂ 15 ವರ್ಷ ಸಕ್ರಿಯ ರಾಜಕಾರಣದಲ್ಲೇ ಮುಂದುವರಿಯುವ ಇಂಗಿತವನ್ನು ಯಡಿಯೂರಪ್ಪ ವ್ಯಕ್ತಪಡಿಸಿದ್ದಾರೆ. ಅವರ ಪ್ರವಾಸದಿಂದ ಬಿಜೆಪಿ ಜೊತೆಗೆ ಕಾಂಗ್ರೆಸ್‌ಗೂ ಭಯ ಶುರುವಾಗಿದೆ’.

–ಎಂ.ಕೆ.ಭಾಸ್ಕರ ರಾವ್, ಪತ್ರಕರ್ತ.

ಪೂರ್ಣ ಸಂವಾದ ವೀಕ್ಷಿಸಲು:
https://bit.ly/3jCeiqA

ಹುಬ್ಬಳ್ಳಿಯಲ್ಲಿ ಗುರುವಾರ ನಡೆದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪುತ್ರಿ ಅರ್ಪಿತಾ ವಿವಾಹದ ಆರತಕ್ಷತೆ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಪಾಲ್ಗೊಂಡಿದ್ದರು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಜನರ ಪೈಕಿ ಹಲವರು ಅಂತರ ಕಾಯ್ದುಕೊಂಡಿರಲಿಲ್ಲ. ಕೆಲವರು ಮಾಸ್ಕ್ ಕೂಡ ಧರಿಸಿರಲಿಲ್ಲ –ಪ್ರಜಾವಾಣಿ ಚಿತ್ರ

‘ಕೇಂದ್ರದಿಂದ ₹ 7,343 ಕೋಟಿ ಬಿಡುಗಡೆ’

ಬೆಂಗಳೂರು: ಈ ಆರ್ಥಿಕ ವರ್ಷದಲ್ಲಿ ಜುಲೈ ಅಂತ್ಯದವರೆಗೆ ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ₹ 7,343 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದ್ದಾರೆ.

‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ‘ಕೈಕೊಟ್ಟ ಕೇಂದ್ರ: ಯೋಜನೆ ಸ್ಥಗಿತ’ ವರದಿಗೆ ಪ್ರತಿಕ್ರಿಯೆ ನೀಡಿರುವ ಅವರು, ‘ಈ ಆರ್ಥಿಕ ವರ್ಷದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರದ ಪಾಲಿನಿಂದ ₹ 17,643 ಕೋಟಿ ನಿಗದಿಪಡಿಸಲಾಗಿದೆ. ಈ ಪೈಕಿ ₹ 7,343 ಕೋಟಿ ಬಿಡುಗಡೆಯಾಗಿದ್ದು, ₹ 6,065 ಕೋಟಿ ರಾಜ್ಯದ ಪಾಲಿನ ಹೊಂದಾಣಿಕೆ ಅನುದಾನವನ್ನೂ ಒದಗಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಜುಲೈ ಅಂತ್ಯದ ವೇಳೆಗೆ 22 ಇಲಾಖೆಗಳಲ್ಲಿ ₹ 13,408 ಕೋಟಿ ಅನುದಾನ ಲಭ್ಯವಿತ್ತು. ₹ 8,815 ಕೋಟಿಯನ್ನು ವೆಚ್ಚ ಮಾಡಿದ್ದು, ಶೇಕಡ 46ರಷ್ಟು ಪ್ರಗತಿ ಸಾಧಿಸಲಾಗಿದೆ. 2020–21ನೇ ಆರ್ಥಿಕ ವರ್ಷದಲ್ಲಿ ಇದೇ ಅವಧಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರದ ಪಾಲಿನಿಂದ ₹ 6,110 ಕೋಟಿ ಬಿಡುಗಡೆಯಾಗಿತ್ತು. ಈ ಬಾರಿ ಶೇ 6ರಷ್ಟು ಹೆಚ್ಚಿನ ಮೊತ್ತ ಬಿಡುಗಡೆಯಾಗಿದೆ ಎಂದು ತಿಳಿಸಿದ್ದಾರೆ.

‘ನೇಮಕಾತಿ ನಿಯಮಗಳಲ್ಲಿ ರಿಯಾಯಿತಿಗೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟತೆಯನ್ನು ಉಳಿಸಿಕೊಳ್ಳಲು ನೇಮಕಾತಿಗಾಗಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ರೂಪಿಸಿರುವ ನಿಯಮಾವಳಿಗಳಲ್ಲಿ ಯಾವುದೇ ರಿಯಾಯಿತಿ ನೀಡಲು ವಿಶ್ವವಿದ್ಯಾಲಯಗಳಿಗೆ ಅವಕಾಶವಿಲ್ಲ’ ಎಂದು ಇಲ್ಲಿನ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಕರ್ನಾಟಕ ವಿಶ್ವವಿದ್ಯಾಲಯದ ನೇಮಕಾತಿ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಈ ಅಭಿಪ್ರಾಯ ಉಲ್ಲೇಖಿಸಿದ್ದು, ನೇಮಕಾತಿಗೆ ನಿಗದಿಪಡಿಸಿದ್ದ ಕನಿಷ್ಠ ಅರ್ಹತೆ ಇರದ ಅಭ್ಯರ್ಥಿಯೊಬ್ಬರ ನೇಮಕಾತಿಯನ್ನು ಅನೂರ್ಜಿತಗೊಳಿಸಿದೆ.

ಏನಿದು ಪ್ರಕರಣ?: ಕರ್ನಾಟಕ ವಿಶ್ವವಿದ್ಯಾಲಯ 2014ರ ಜನವರಿ 11ರಂದು ಇಂಗ್ಲಿಷ್ ವಿಷಯದ ಸಹಾಯಕ ಪ್ರಾಧ್ಯಾಪಕ ಹುದ್ದೆ ನೇಮಕಾತಿಗೆ ಅಧಿಸೂಚನೆ ಹೊರಡಿಸಿತ್ತು. ಅದರನ್ವಯ ಒಟ್ಟು 35 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಹುದ್ದೆಗೆ ಅಗತ್ಯ ಅರ್ಹತೆ ಹೊಂದಿರದಿದ್ದರೂ ಪಿ.ಜಿ. ಶ್ರೀದೇವಿ ಎಂಬುವವರನ್ನು ವಿಶ್ವವಿದ್ಯಾಲಯ ನೇಮಕಗೊಳಿಸಿತ್ತು. ಈ ಕ್ರಮವನ್ನು ಪ್ರಶ್ನಿಸಿ ಅರ್ಹತಾ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದ ಮಂಜುನಾಥ ಹಿರೇಮಠ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

‘2009ರ ನಂತರ ಪಿಎಚ್‌ಡಿ ಪದವಿ ಪಡೆದವರು ಕೋರ್ಸ್ ಚಟುವಟಿಕೆ ಜತೆಗೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ನೇಮಕಗೊಂಡ ಅಭ್ಯರ್ಥಿ ಈ ಅರ್ಹತೆಯನ್ನೇ ಹೊಂದಿಲ್ಲ. ಹೀಗಿದ್ದರೂ ವಿಶ್ವವಿದ್ಯಾಲಯ ನಿಯಮಗಳಿಗೆ ರಿಯಾಯಿತಿ ನೀಡಿ ಅರ್ಹತೆ ಇಲ್ಲದ ಅಭ್ಯರ್ಥಿಯನ್ನು ನೇಮಕ ಮಾಡಿಕೊಂಡಿದೆ’ ಎಂದು ಅರ್ಜಿದಾರರು ದೂರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯಪೀಠ, ‘ನೇಮಕಗೊಂಡಿರುವ ಅಭ್ಯರ್ಥಿ ಯುಜಿಸಿ ಅಥವಾ ಸಿಎಸ್‌ಐಆರ್ ನಡೆಸುವ ನೆಟ್ ಅಥವಾ ಸೆಟ್ ಪರೀಕ್ಷೆ ಪಾಸಾಗಿಲ್ಲ. ಅಭ್ಯರ್ಥಿ ಪಿಎಚ್.ಡಿ ಪದವಿ ಹೊಂದಿದ್ದರೂ, ಅದು 2009ರ ನಿಯಮಗಳನ್ವಯ ನೀಡಿಲ್ಲ. ಅಲ್ಲದೇ ಶೈಕ್ಷಣಿಕ ಉತ್ಕೃಷ್ಟ ಗುಣಮಟ್ಟ ಕಾಪಾಡುವ ಉದ್ದೇಶದಿಂದ ಕಾಲೇಜು ಉಪನ್ಯಾಸಕರು ಮತ್ತು ವಿಶ್ವವಿದ್ಯಾಲಯಗಳ ವಿವಿಧ ಹುದ್ದೆಗಳಿಗೆ ನೇಮಕಾತಿ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳು ಮತ್ತು ಕನಿಷ್ಠ ಅರ್ಹತೆಯನ್ನು ಯುಜಿಸಿ ನಿಗದಿಪಡಿಸಿದೆ. ಇದರಲ್ಲಿ ರಿಯಾಯಿತಿ ನೀಡುವುದರಿಂದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ’ ಎಂದು ಅಭಿಪ್ರಾಯಪಟ್ಟಿತು. ಆ ಮೂಲಕ 2ನೇ ಎದುರುಗಾರ ವಿ.ಜಿ. ಶ್ರೀದೇವಿ ಅವರ ನೇಮಕಾತಿಯನ್ನು ಅನೂರ್ಜಿತಗೊಳಿಸಿದೆ.

ಜತೆಗೆ, ಈ ಪ್ರಕರಣದಲ್ಲಿ ಅರ್ಜಿದಾರರಾಗಿರುವ ಮಂಜುನಾಥ ಹಿರೇಮಠ ಅವರನ್ನು ಸೇರಿ ಸಹಾಯಕ ಪ್ರಾಧ್ಯಾಪಕ ಇಂಗ್ಲಿಷ್ (ಪಿಜಿ) ಹುದ್ದೆಗೆ ನೇಮಕಾತಿ ಕೋರಿ ಸಲ್ಲಿಸಿರುವ ಇತರ ಅಭ್ಯರ್ಥಿಗಳ ಅರ್ಜಿಗಳನ್ನು ನಿಯಮಾನುಸಾರ ಪರಿಗಣಿಸಿ, ಆದಷ್ಟು ಶೀಘ್ರ ಅಗತ್ಯ ಆದೇಶ ಹೊರಡಿಸುವಂತೆ ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೇಂದ್ರ– ರಾಜ್ಯ ಸರ್ಕಾರದ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ

‘ತೆರಿಗೆಯಿಂದ ಸುಲಿಗೆ, ಬೆಲೆ ಏರಿಕೆಯಿಂದ ಲೂಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೆರಿಗೆ ಮೂಲಕ ಸುಲಿಗೆ, ಬೆಲೆ ಏರಿಕೆ ಮೂಲಕ ಲೂಟಿ ಮಾಡುತ್ತಿರುವ ಕೇಂದ್ರ– ರಾಜ್ಯ ಬಿಜೆಪಿ ಸರ್ಕಾರಗಳು ಜನರ ರಕ್ತ ಹೀರುತ್ತಿವೆ. ಆಕರ್ಷಕ ಘೋಷಣೆಗಳಲ್ಲೇ ಮರಳು ಮಾಡಬಹುದು ಎನ್ನುವ ನಂಬಿಕೆ ಬಿಜೆಪಿಯವರದ್ದು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ವಿಪರೀತ ಬೆಲೆ ಏರಿಕೆ ಮತ್ತು ಪರೋಕ್ಷ ಹಾಗೂ ಪ್ರತ್ಯಕ್ಷ ತೆರಿಗೆಗಳ ಭಾರಕ್ಕೆ ನಗರ ಪ್ರದೇಶಗಳಲ್ಲಿರುವವರು, ಮಧ್ಯಮ ವರ್ಗದ ಮಂದಿ ಕೂಡ ಇತರೆ ಸಮುದಾಯಗಳ ರೀತಿಯಲ್ಲಿಯೇ ಹೈರಾಣಾಗಿ, ಬೇಸತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ವಿದ್ಯುಚ್ಛಕ್ತಿ ಬಿಲ್‌ಗಳು ಶೇ 30ರಷ್ಟು ಹೆಚ್ಚಾಗಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಏರಿಕೆ ಮೋದಿ ಅವರು ಪ್ರಧಾನಿ ಪಟ್ಟದಲ್ಲಿ ಇರುವವರೆಗೂ ಇಳಿಯುವಂತೆ ಕಾಣುತ್ತಿಲ್ಲ. ಅನಿಲ ಸಿಲಿಂಡರ್ ಬೆಲೆ ಒಂದು ವಾರದಲ್ಲಿ ₹ 50ರಷ್ಟು ಹೆಚ್ಚಿದೆ. ಮನೆಗಳ ಆಸ್ತಿ ತೆರಿಗೆ ಹೆಚ್ಚಾಗಿರುವುದು ಮಾತ್ರವಲ್ಲದೆ ಖಾಲಿ ಜಾಗಗಳಿಗೂ ತೆರಿಗೆ ವಿಧಿಸುತ್ತಿದ್ದಾರೆ. ಕಬ್ಬಿಣ, ಸಿಮೆಂಟ್ ಸೇರಿದಂತೆ ಎಲ್ಲ ವಸ್ತುಗಳ ಬೆಲೆಯೂ ಆಕಾಶ ಮುಟ್ಟುತ್ತಿದೆ. ಅಚ್ಛೆ ದಿನ್ ಅಂದರೆ ಇದೇನಾ’ ಎಂದು ಪ್ರಶ್ನಿಸಿದರು.

‘ಅಂಬಾನಿ ಮಾಡಿದ್ದ ₹ 4.5 ಲಕ್ಷ ಕೋಟಿ ಬ್ಯಾಂಕ್ ಸಾಲವನ್ನು ವಸೂಲಾಗದ ಸಾಲ ಎಂದು ತೀರ್ಮಾನಿಸಿ ಕೇಂದ್ರ ಸರ್ಕಾರ ಮನ್ನಾ ಮಾಡಿದೆ. ರೈತರು ಸಾಲ ತೀರಿಸಿಲ್ಲ ಎಂದು ಅವರ ಟ್ರ್ಯಾಕ್ಟರ್ ಜಪ್ತಿ ಮಾಡುವ ಬಿಜೆಪಿ ಸರ್ಕಾರ, ಮೋದಿ ಪ್ರಧಾನಿ ಆದ 7 ವರ್ಷಗಳಲ್ಲಿ ₹ 7 ಲಕ್ಷ ಕೋಟಿಯಷ್ಟು ಕಾರ್ಪೊರೇಟ್ ಶ್ರೀಮಂತರ ಸಾಲ ಮನ್ನಾ ಮಾಡಿದೆ. ಇದರಲ್ಲಿ ಅಂಬಾನಿ ಒಬ್ಬರದ್ದೇ ₹ 4.5 ಲಕ್ಷ ಕೋಟಿ ಸೇರಿದೆ’ ಎಂದರು.

‘ಆಸ್ತಿ ನಗದೀಕರಣ ಹೆಸರಿನಲ್ಲಿ ರಸ್ತೆಗಳು, ವಿಮಾನ ನಿಲ್ದಾಣಗಳು, ರೈಲು ನಿಲ್ದಾಣಗಳು ಸೇರಿ ಪ್ರತಿಯೊಂದನ್ನೂ ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ. ಕಳೆದ 70 ವರ್ಷಗಳಲ್ಲಿ ಕಾಂಗ್ರೆಸ್ ಏನು ಮಾಡಿದೆ ಎಂದು ಪ್ರಶ್ನಿಸುವ ಮೋದಿ ಅವರು ಈಗ ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದೆಲ್ಲಾ ಯಾರ ಅವಧಿಯಲ್ಲಿ ಆಗಿದ್ದು’ ಎಂದೂ ಪ್ರಶ್ನಿಸಿದರು.

‘ಸಂಕಷ್ಟ ತಂದಿಟ್ಟಿರುವ, ನರಕ ಸೃಷ್ಟಿ ಮಾಡಿರುವ ಬಿಜೆಪಿಯನ್ನು ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರ್ಗಿ ಮಹಾನಗರಪಾಲಿಕೆ ಚುನಾವಣೆಗಳಲ್ಲಿ ನಗರವಾಸಿಗಳು ತಿರಸ್ಕರಿಸಬೇಕು‘ ಎಂದೂ ಮನವಿ ಮಾಡಿದರು.

ದೇಶದ ಜನ ಕಳೆದ 70 ವರ್ಷಗಳಲ್ಲಿ ಸೃಷ್ಟಿಸಿದ 6 ಲಕ್ಷ ಕೋಟಿ ಆಸ್ತಿಯನ್ನು ಮಾರಾಟ ಮಾಡುತ್ತಿರುವ ಪ್ರಧಾನಿ ಮೋದಿ, ಈ ದೇಶದ ಜನರ ಅನುಮತಿ ಪಡೆದಿದ್ದಾರಾ?

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಆರೋಪಿ ಅರ್ಜುನ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಪರಿಶಿಷ್ಟ ಜಾತಿಯ ಯುವಕರೊಬ್ಬರಿಗೆ ಮೂತ್ರ ನೆಕ್ಕಿಸಿದ ಆರೋಪ ಎದುರಿಸುತ್ತಿರುವ ಪಿಎಸ್‌ಐ ಅರ್ಜುನ್ ಅವರನ್ನು ನಗರದ ಒಂದನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಿಐಡಿ ತಂಡವು ಅರ್ಜುನ್ ಅವರನ್ನು ಒಂದನೇ ಹೆಚ್ಚುವರಿ ಸೆಷನ್ಸ್ ಕೋರ್ಟ್‌ನ ನ್ಯಾಯಾಧೀಶರಾದ ಪುಷ್ಪಾಂಜಲಿ ಅವರ ಮುಂದೆ ಗುರುವಾರ ಹಾಜರುಪಡಿಸಿತ್ತು.

ಮೂಡಿಗೆರೆ ತಾಲ್ಲೂಕಿನ ಕಿರಗುಂದ ಗ್ರಾಮದ ಪುನೀತ್‌ಗೆ ಗೋಣಿಬೀಡು ಠಾಣೆಯಲ್ಲಿ ಮೂತ್ರ ನೆಕ್ಕಿಸಿದ ಪ್ರಕರಣದ ಆರೋಪಿ ಅರ್ಜುನ್ ಅವರನ್ನು ಬೆಂಗಳೂರಿನಲ್ಲಿ ಸಿಐಡಿ ಪೊಲೀಸರು ಬುಧವಾರ ಬಂಧಿಸಿದ್ದರು. ಅರ್ಜುನ್ ಅವರನ್ನು ವಶಕ್ಕೆ ನೀಡುವಂತೆ ಸಿಐಡಿ ಪೊಲೀಸರು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾಲಿಟೆಕ್ನಿಕ್ ಪ್ರವೇಶಕ್ಕೆ 20ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021-22ನೇ ಸಾಲಿನ ಡಿಪ್ಲೊಮಾ ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಮೊದಲ ಬಂದವರಿಗೆ ಆದ್ಯತೆ ನೀಡಲಾಗುತ್ತಿದ್ದು, ಇದೇ 20ರವರೆಗೆ ಪ್ರವೇಶ ಅವಕಾಶ ವಿಸ್ತರಿಸಲಾಗಿದೆ.

‘ರಾಜ್ಯದ 62 ಸರ್ಕಾರಿ, 34 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶಾವಕಾಶವನ್ನು ಸೆ. 20ರ ಸಂಜೆ ಕಚೇರಿ ಅವಧಿವರೆಗೂ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಈ ಅವಕಾಶ ಪಡೆದುಕೊಂಡು ದಾಖಲಾಗಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳ ದಾಖಲಾತಿ ಅವಧಿ ವಿಸ್ತರಿಸುವಂತೆ ಎಲ್ಲ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಕೋರಿಕೆ ಸಲ್ಲಿಸಿದ್ದರು. ಹೀಗಾಗಿ, ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಅವರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಮಲಾಪುರ: ಶಿಕ್ಷಕ ಶ್ರಮದಿಂದ ತಾಂಡಾದಲ್ಲಿ ಸುಸಜ್ಜಿತ ಶಾಲೆ

ಪಾಲಕನಿಂದ ಶಿಕ್ಷಕನಿಗೆ ವಾಹನ ಕೊಡುಗೆ

• ತೀರ್ಥಕುಮಾರ ಬೆಳಕೋಟಾ

ಕಮಲಾಪುರ (ಕಲಬುರ್ಗಿ ಜಿಲ್ಲೆ): ಕರ್ತವ್ಯ ನಿಷ್ಠೆ ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಿದರೆ ಕುಗ್ರಾಮ, ತಾಂಡಾಗಳಲ್ಲೂ ಸರ್ಕಾರಿ ಶಾಲೆಗಳ ಸುಧಾರಣೆ ಜತೆಗೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ ಶಂಕರನಾಯಕ ತಾಂಡಾ ಶಾಲೆಯ ಶಿಕ್ಷಕ ಶಂಕರಲಿಂಗ ಬ. ಹಿಪ್ಪರಗಿ.

ಶಂಕರಲಿಂಗ ಹಿಪ್ಪರಗಿ

ಕಮಲಾಪುರ ತಾಲ್ಲೂಕಿನ ಶಂಕರನಾಯಕ ತಾಂಡಾದ ಪಾಲಕರೊಬ್ಬರು ಕೊಡುಗೆಯಾಗಿ ನೀಡಿದ ಮೊಪೆಡ್ ನೊಂದಿಗೆ ಶಿಕ್ಷಕ ಶಂಕರಲಿಂಗ ಹಾಗೂ ಮಕ್ಕಳು

ಇದು ಕಿರಿಯ ಪ್ರಾಥಮಿಕ ಶಾಲೆ. 1ರಿಂದ 5ನೇ ತರಗತಿ ವರೆಗೆ 45 ಮಕ್ಕಳು ಇದ್ದು, ಕೊರೊನಾ ಕಾರಣಕ್ಕೆ ಭೌತಿಕ ತರಗತಿ ಇಲ್ಲದಿದ್ದರೂ ಈ ಶಾಲೆಗೆ ಮಕ್ಕಳು ತಂಡಗಳಲ್ಲಿ ಸರದಿಯಂತೆ ಬರುತ್ತಿದ್ದಾರೆ. ಈ ಶಾಲೆಯಲ್ಲಿ ಒಬ್ಬ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

‘ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಶಾಲೆಯಲ್ಲಿ ವಿಶೇಷ ತರಗತಿ ನಡೆಸುತ್ತೇನೆ. ಓದು ಅಷ್ಟೇ ಅಲ್ಲ. ನಾಟಕ–ಜನಪದ ಕಲೆಗಳ ಅಭಿನಯಕ್ಕೆ ಪ್ರೋತ್ಸಾಹಿಸುತ್ತಿದ್ದು, ಅದಕ್ಕಾಗಿ ಮೈಕ್ ಸೆಟ್ ಹಾಗೂ ಪೋಷಾಕುಗಳನ್ನು ಖರೀದಿಸಿದ್ದೇವೆ’ ಎನ್ನುತ್ತಾರೆ ಶಂಕರಲಿಂಗ.

‘ಈ ಶಾಲೆಗೆ ಸಹ ಶಿಕ್ಷಕರಾಗಿ 2008 ರಲ್ಲಿ ಶಂಕರಲಿಂಗ ನೇಮಕವಾದರು. ಉದ್ಯೋಗ ಖಾತರಿ ಅಡಿ ಕಾಂಪೌಂಡ್ ನಿರ್ಮಿಸಿಕೊಂಡರು. ಸದ್ಯ ಸ್ವಂತ ಖರ್ಚಿನಲ್ಲೇ ಗೇಟ್ ಅಳವಡಿಸಿದ್ದಾರೆ. ಆವರಣದಲ್ಲಿ ಹೂ, ಹಣ್ಣಿನ ಸಸಿಗಳನ್ನು ನೆಟ್ಟಿದ್ದಾರೆ. ಕೂರಲು ಆಸನಗಳನ್ನು ಹಾಕಿದ್ದಾರೆ. ವ್ಯವಸ್ಥಿತ ಶೌಚಾಲಯವಿದೆ. ಇದಕ್ಕೆಲ್ಲ ಈ ಶಿಕ್ಷಕರ ಪರಿಶ್ರಮವೇ ಕಾರಣ’ ಎಂದು ಗ್ರಾಮ ಪಂಚಾಯಿತಿ ಸದಸ್ಯ ರಾಜಕುಮಾರ ರಾಠೋಡ ತಿಳಿಸಿದರು.

‘ಕೋವಿಡ್ ಸಂದರ್ಭದಲ್ಲಿ ಪ್ರತಿದಿನ ಮನೆ ಮನೆಗೆ ಬಂದು ಪಾಠ ಮಾಡಿದ್ದಾರೆ. ಮಕ್ಕಳಿಗೆ ತರಬೇತಿ ನೀಡಿ ವಸತಿ ಶಾಲೆಗಳಲ್ಲಿ ಪ್ರವೇಶ ಕೊಡಿಸಲು ಪ್ರಯತ್ನಿಸುತ್ತಾರೆ’ ಎಂದು ಎಸ್‌ಡಿಎಂಸಿ ಅಧ್ಯಕ್ಷ ಶಿವಾಜಿ ರಾಠೋಡ ಹೇಳಿದರು.

ಉಡುಗೊರೆ: ಶಂಕರಲಿಂಗ ತಾಂಡಾ ರಾಷ್ಟ್ರೀಯ ಹೆದ್ದಾರಿಯಿಂದ 3 ಕಿ.ಮೀ ದೂರದಲ್ಲಿದೆ. ಪಕ್ಕಾ ರಸ್ತೆ ಇಲ್ಲ. ಇಲ್ಲಿ ಸುಮಾರು 300 ಜನಸಂಖ್ಯೆ ಇದೆ. ಕಮಲಾಪುರದಲ್ಲಿ ಮನೆ ಮಾಡಿರುವ ಶಂಕರಲಿಂಗ ಸಿಂದಿಬಸವ ಕ್ರಾಸ್‌ವರೆಗೆ ಬಸ್‌ಗಳಲ್ಲಿ ಬಂದು, ಅಲ್ಲಿಂದ ಶಾಲೆಗೆ ನಡೆದುಕೊಂಡು ಬರುತ್ತಿದ್ದರು. ಪಾಲಕ ಅರುಣಕುಮಾರ ರಾಠೋಡ ಅವರು ₹44 ಸಾವಿರ ನೀಡಿ ಎರಡು ವರ್ಷಗಳ ಹಿಂದೆ ದ್ವಿಚಕ್ರವಾಹನ (ಟಿವಿಎಸ್ ಮೊಪೆಡ್)ವನ್ನು ಈ ಶಿಕ್ಷಕರಿಗೆ ಉಡುಗೊರೆಯಾಗಿ ನೀಡಿದ್ದಾರೆ. ‘ನಮ್ಮ ಶಾಲೆ ಹಾಗೂ ಮಕ್ಕಳಿಗೆ ಅವರು ಮಾಡಿದ ಸೇವೆಗೆ ಇದೊಂದು ಚಿಕ್ಕ ಕಾಣಿಕೆ’ ಎನ್ನುತ್ತಾರೆ ಅರುಣಕುಮಾರ ರಾಠೋಡ.

ಶಾಲೆಯ ಅಭಿವೃದ್ಧಿಗೆ ಶ್ರಮ

ಒಂದೇ ಕೊಠಡಿಯಲ್ಲಿ 5 ನೇ ತರಗತಿವರೆಗೆ ಶಾಲೆ ನಡೆಯುತ್ತಿತ್ತು. ಶಂಕರಲಿಂಗರಿಗೆ ಸುಧಾರಣೆ ಮಾಡಬೇಕೆಂಬ ಹಂಬಲ ಶುರುವಾಯಿತು. ಸರ್ವ ಶಿಕ್ಷಣ ಯೋಜನೆಯಡಿ ಇನ್ನೊಂದು ಕೊಠಡಿ ಮಂಜೂರು ಮಾಡಿಸಿಕೊಂಡರು. ಶಾಲೆಯ ಅಂದ ಹೆಚ್ಚಿಸಲು ವೈಯಕ್ತಿಕವಾಗಿ ₹ 20 ಸಾವಿರ ಖರ್ಚುಮಾಡಿದ್ದಾರೆ. ನಂತರ ಸಮುದಾಯದ ಸಹಭಾಗಿತ್ವದೊಂದಿಗೆ ಶಾಲಾ ಆವರಣದಲ್ಲಿ ತಲಾ 25 ಟ್ರ್ಯಾಕ್ಟರ್ ಲೋಡ್ ಕಲ್ಲು, ಮರುಮ್ ಹಾಕಿ ಆವರಣ ಸಮತಟ್ಟುಗೊಳಿಸಿದ್ದಾರೆ.

ಶಾಲೆಗೆ ಸೌಲಭ್ಯ ಕಲ್ಪಿಸಲು ತಾಂಡಾ ನಿವಾಸಿಗಳು ಸಹಕರಿಸಿದ್ದಾರೆ. ಸಮುದಾಯದೊಂದಿಗೆ ಬೆರೆತು ಕೆಲಸ ಮಾಡಿದ್ದರ ಪ್ರತಿಫಲ ಇದು

ಶಂಕರಲಿಂಗ ಬ. ಹಿಪ್ಪರಗಿ, ಶಿಕ್ಷಕ

ನಮ್ಮ ತಾಂಡಾ ಶಾಲೆಯ ಶೈಕ್ಷಣಿಕ ಗುಣಮಟ್ಟ ಮನಗಂಡು ಸುತ್ತಲಿನ ತಾಂಡಾಗಳ ಮಕ್ಕಳೂ ಇಲ್ಲಿ ದಾಖಲಾಗಿದ್ದಾರೆ. ಇದು ನಮಗೆ ಹೆಮ್ಮೆಯ ವಿಷಯ

ಶಿವಾಜಿ ರಾಠೋಡ, ಎಸ್‌ಡಿಎಂಸಿ ಅಧ್ಯಕ್ಷ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಕಾಲೇಜು ಶುಲ್ಕ ಪಾವತಿಸಿದೆ

‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿ ವೇತನದಿಂದ ಕಲಿಕೆಗೆ ಸಹಕಾರಿ ಆಯಿತು. ಕಾಲೇಜು ಶುಲ್ಕ ಪಾವತಿಸಲು ಹಾಗೂ ಲೇಖನ ಸಾಮಗ್ರಿಗಳ ಖರೀದಿಗೆ ಹಣ ಬಳಸಿಕೊಂಡೆ. ಚನ್ನರಾಯಪಟ್ಟಣದ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದೇನೆ.

ರೇಷ್ಮಾ, ಚನ್ನರಾಯಪಟ್ಟಣ, ಹಾಸನ

ಸಿಇಟಿ ಪುಸ್ತಕಗಳನ್ನು ಕೊಂಡುಕೊಂಡೆ

‘ಪ್ರಜಾವಾಣಿ’ ಸ್ಕಾಲರ್‌ಶಿಪ್ ಅನ್ನು ಸಿಇಟಿಗಾಗಿ ಮೆಟೀರಿಯಲ್ಸ್ ಖರೀದಿಸಿದೆ. ಮುಂದೆ ಕೃಷಿ ವಿಷಯದಲ್ಲಿ ಪದವಿ ಪಡೆಯಬೇಕು ಎಂಬ ಇಚ್ಛೆ ಇದೆ. ಅದಕ್ಕಾಗಿ ತಯಾರಿ ನಡೆಸುತ್ತಿದ್ದೇನೆ. ಕಷ್ಟ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿರುವುದು ಶ್ಲಾಘನೀಯ.

ಪ್ರಕೃತಿ, ಎಸ್‌ಪಿಎಸ್ ನಗರ, ದಾವಣಗೆರೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.67	5,331	9,609
ಹಾರಂಗಿ	2,859	2,858.12	2,229	2,350
ಕಬಿನಿ	2,284	2,280.48	3,710	5,000
ಹೇಮಾವತಿ	2,922	2,916.46	2,442	5,267
ಲಿಂಗನಮಕ್ಕಿ	1,819	1,812.80	9,229	-
ಸೂಪಾ (ಮೀ)	564	554.77	3,919	489
ಮಾಣಿ	594.36	586.4	1,289	-
ತುಂಗಭದ್ರಾ	1,633	1,632.82	13,635	12,150
ಮಲಪ್ರಭಾ	2,079.50	2,078.70	1,182	1,294
ಘಟಪ್ರಭಾ	2,175	2,175	384	384
ಭದ್ರಾ	186	185.50	4,570	3,668
ಆಲಮಟ್ಟಿ (ಮೀ)	519.60	519.60	5,166	5,166
ನಾರಾಯಣಪುರ (ಮೀ)	492.25	492.03	4,900	4,200

* ನೆಲಮಟ್ಟದಿಂದ

‘ಮಿನಿ ವಿಧಾನಸೌಧ’ ಹೆಸರು ಬದಲಾವಣೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಿನಿ ವಿಧಾನಸೌಧ ಎಂಬ ಹೆಸರಿನಲ್ಲಿ ‘ಮಿನಿ’ ಎಂಬ ಇಂಗ್ಲಿಷ್ ಪದವಿದೆ. ಇದಕ್ಕೆ ಸಾಹಿತ್ಯ ವಲಯದಿಂದ ಆಕ್ಷೇಪ ವ್ಯಕ್ತವಾಗಿದೆ. ಈ ಹೆಸರಿನ ಬದಲಾವಣೆಯ ಬಗ್ಗೆ ಸರ್ಕಾರ ಶೀಘ್ರ ತೀರ್ಮಾನ ಕೈಗೊಳ್ಳಲಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತಾಲ್ಲೂಕು ಕಚೇರಿಯ ಕಟ್ಟಡಗಳಿಗೆ ಮಿನಿ ವಿಧಾನಸೌಧ ಎಂಬ ನಾಮಕರಣ ಮಾಡಲಾಗಿದೆ. ಅನೇಕ ಸಾಹಿತಿಗಳು ಇಂಗ್ಲಿಷ್ ಪದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದನ್ನು ತಾಲ್ಲೂಕು ಆಡಳಿತ ಸೌಧ ಎಂಬ ಕನ್ನಡ ಹೆಸರು ಇಡುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಬಗ್ಗೆ ಶೀಘ್ರ ಆದೇಶ ಹೊರಬೀಳಲಿದೆ’ ಎಂದು ಮಾಹಿತಿ ನೀಡಿದರು.

‘ರಾಜ್ಯದ 9 ಲಕ್ಷ ಹೆಕ್ಟೇರ್ ಭೂಮಿಗೆ ಸಂಬಂಧಿಸಿ ಕಂದಾಯ ಹಾಗೂ ಅರಣ್ಯ ಇಲಾಖೆ ನಡುವೆ ವ್ಯಾಜ್ಯ ನಡೆಯುತ್ತಿದೆ. ಈ ಸಂಬಂಧ ಅರಣ್ಯ ಸಚಿವರೊಂದಿಗೆ ಚರ್ಚಿಸಲಾಗಿದ್ದು, ಆರು ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯವನ್ನು ಕಂದಾಯ ಇಲಾಖೆಗೆ ಒಪ್ಪಿಸುವ ಒಡಂಬಡಿಕೆ ಆಗಿದೆ. ಬಗರ್‌ಹುಕುಂ ಸಾಗುವಳಿದಾರರಿಗೆ ಭೂಮಿ ನೀಡಲು ಅನುಕೂಲವಾಗಲಿದೆ. ಉಳುಮೆ ಮಾಡುವವರಿಗೆ ಭೂಮಿ ಸಿಗಲಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.



ಆರ್.ಅಶೋಕ

‘ಹಕ್ಕುಪತ್ರ ವಿತರಣೆಗೆ ಸಂಬಂಧಿಸಿ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವಂತೆ ಸೂಚನೆ ನೀಡಲಾಗುವುದು. ಸಮಿತಿಯ ತೀರ್ಮಾನದಂತೆ ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು. ಲಂಬಾಣಿ ತಾಂಡಾ, ಕುರುಬರ ಹಟ್ಟಿಗೆ ಕಂದಾಯ ಗ್ರಾಮದ ಮಾನ್ಯತೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಎಲ್ಲೆಡೆ ಇರುವ ಹಟ್ಟಿ, ಹಾಡಿ, ತಾಂಡಾಗಳಿಗೆ ಗ್ರಾಮದ ಮಾನ್ಯತೆ ಸಿಗಲಿದೆ’ ಎಂದರು.

‘ಉಪನೋಂದಣಾಧಿಕಾರಿ ಕಚೇರಿಯ ತಂತ್ರಾಂಶವನ್ನು 2014ರಲ್ಲಿ ಮೇಲ್ದರ್ಜೆಗೆ ಏರಿಸಬೇಕಿತ್ತು. ಆ ಸಂದರ್ಭದಲ್ಲಿ ಇದರ ಕಡೆ ಗಮನ ಹರಿಸಿಲ್ಲ. ಹೀಗಾಗಿ, ಆಸ್ತಿ ನೋಂದಣಿ ಸಂದರ್ಭದಲ್ಲಿ ಸರ್ವರ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಹೊಸ ತಂತ್ರಜ್ಞಾನ ಒದಗಿಸಲು ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಒಪ್ಪಿಕೊಂಡಿದೆ. ಬ್ಯಾಟರಿ ಹಾಗೂ ಇತರ ಪರಿಕರಗಳ ನಿರ್ವಹಣೆಗೆ ₹ 12 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದು ಹೇಳಿದರು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪೃಥ್ವಿ ಅಂಬರ್ ಹಾಗೂ ಮಾನ್ವಿತಾ ಕಾಮತ್

‘ಲೂಸ್ ಮಾದ’ ಖ್ಯಾತಿಯ ನಟ ಯೋಗೇಶ್ ಸ್ವಲ್ಪ ಬಿಡುವಿನ ಬಳಿಕ ಚಂದನವನದಲ್ಲಿ ಮತ್ತೆ ಸಕ್ರಿಯರಾಗಿದ್ದಾರೆ. ಅವರ ನಟನೆಯ ‘ಲಂಕೆ’ ಇದೇ 10ರಂದು ಬಿಡುಗಡೆಯಾಗುತ್ತಿದ್ದು, ಪ್ರಸ್ತುತ ಭೂಗತಲೋಕದ ಕಥಾಹಂದರ ಹೊಂದಿರುವ ‘ಹೆಡ್‌ಬುಷ್’ನ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರಕ್ಕಾಗಿ ತೂಕ ಹೆಚ್ಚಿಸಿಕೊಂಡಿರುವ ಅವರು ಹಲವು ಬಿಗ್ ಪ್ರೊಜೆಕ್ಟ್‌ಗಳನ್ನು ಒಪ್ಪಿಕೊಂಡಿದ್ದಾರೆ. ಇದರಲ್ಲಿ ‘ಸಿದ್ಲಿಂಗು–2’ ಕೂಡಾ ಸೇರಿದೆ. ಈ ಪಯಣದ ಬಗ್ಗೆ ‘ಸಿನಿಮಾ ಪುರವಣಿ’ ಜೊತೆ ಯೋಗೇಶ್ ಮಾತಿಗಿಳಿದಿದ್ದು ಹೀಗೆ...

ಲಂಕೆಯ ಗುಂಗಿನಲ್ಲಿ ‘ಲೂಸ್ ಮಾದ’!

ಯೋಗೇಶ್

ಅಭಿಲಾಷ್ ಪಿ.ಎಸ್.

● ಚಂದನವನದಿಂದ ಯೋಗೇಶ್ ಸ್ವಲ್ಪ ಸಮಯ ದೂರ ಉಳಿದಿದ್ದರ ಹಿಂದಿನ ಕಾರಣವೇನು?

ನನಗೂ ಸಾಕಾಗಿತ್ತು. ಸಾಲು ಸಾಲು ಸಿನಿಮಾಗಳನ್ನು ನಾನು ಮಾಡಿದ್ದೆ. ಕೆಲವೊಮ್ಮೆ ವರ್ಷಕ್ಕೆ ನಾಲ್ಕೈದು ಸಿನಿಮಾ ಮಾಡಿದ್ದೇನೆ. ಒಂದೇ ರೀತಿಯ ಸಿನಿಮಾಗಳನ್ನು ಮಾಡಿದರೆ ಪ್ರೇಕ್ಷಕರಿಗೂ ಇಷ್ಟವಾಗುವುದಿಲ್ಲ. ಹೀಗಾಗಿ ಸ್ವಲ್ಪ ಬಿಡುವು ತೆಗೆದುಕೊಂಡು ‘ಲಂಕೆ’ ಚಿತ್ರ ಒಪ್ಪಿಕೊಂಡಿದ್ದೆ. ಇನ್ನು ಮುಂದೆ ಸಮಯ ತೆಗೆದುಕೊಂಡು ಸಿನಿಮಾ ಮಾಡಬೇಕು ಎಂದು ನಿರ್ಧರಿಸಿದ್ದೇನೆ. ನಾನು ಎಲ್ಲ ರೀತಿಯ ಪಾತ್ರಗಳನ್ನೂ ಮಾಡಿದೆ. ಖಳನಾಯಕನಾಗಿ, ಹೀರೋ ಆಗಿ, ಕಾಮಿಡಿ ಪಾತ್ರಕ್ಕೂ ಬಣ್ಣಹಚ್ಚಿದೆ. ಎಲ್ಲ ರೀತಿಯ ಪಾತ್ರ ಮಾಡಿದ್ದೇನೆ, ಇನ್ನೇನು ಬಾಕಿ ಇದೆ ಎನ್ನುವ ಪ್ರಶ್ನೆ ನನಗೇ ಹುಟ್ಟಿಕೊಂಡಿತ್ತು. ಈ ಗೊಂದಲದಲ್ಲಿದ್ದಾಗ ಕಮರ್ಷಿಯಲ್ ಸಿನಿಮಾ ಮಾಡಬೇಕು ಎಂದು ನಿರ್ಧರಿಸಿದೆ.

ಈ ಸಂದರ್ಭದಲ್ಲಿ ನಿರ್ದೇಶಕ ರಾಮ್‌ಪ್ರಸಾದ್ ಅವರು ‘ಒಂದು ಕಥೆ ಇದೆ. ನಿಮಗೆ ಹೇಳಬೇಕು’ ಎಂದರು. ಅವರು ಬಂದು ಕಥೆ ಹೇಳಿದರು. ನನಗೂ ಕಥೆ ಇಷ್ಟವಾಯಿತು. ನಾನೂ ಕಮರ್ಷಿಯಲ್ ಸಿನಿಮಾ ಮಾಡಿ ಬಹಳ ವರ್ಷಗಳಾಗಿತ್ತು. ಹೀಗಾಗಿ ‘ಲಂಕೆ’ಯನ್ನು ಒಪ್ಪಿಕೊಂಡೆ. ಇಂಪಾದ ಹಾಡು, ಫೈಟ್ಸ್, ಕಾಮಿಡಿ, ಭಾವನೆಗಳಿಂದ ತುಂಬಿಕೊಂಡಿರುವ ಕಂಪ್ಲೀಟ್ ಪ್ಯಾಕೇಜ್ ಸಿನಿಮಾ ಇದು.

ಪ್ರಜಾವಾಣಿ ನೋಡಿಯೊ

ಪೂರ್ಣ ಸಂದರ್ಶನದ ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

● ಚಿತ್ರಮಂದಿರಗಳಲ್ಲಿ ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶವಿರುವಾಗ ಚಿತ್ರ ಬಿಡುಗಡೆಗೆ ನಿರ್ಧರಿಸಿದ್ದೇಕೆ?

ಇದು ಸಂಪೂರ್ಣವಾಗಿ ನಮ್ಮ ನಿರ್ಮಾಪಕರ ನಿರ್ಧಾರ. ನಾನೂ ಅವರ ಧೈರ್ಯದ ಮೇಲೆ ನಿಂತಿದ್ದೇನೆ. ಏಕೆಂದರೆ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುತ್ತಾರೆ. ಹೀಗಿದ್ದರೂ ಚಿತ್ರಮಂದಿರಗಳಲ್ಲಿ ಕೇವಲ ಶೇ 50 ಪ್ರೇಕ್ಷಕರ ಭರ್ತಿಗೆ ಅವಕಾಶವಿದ್ದರೂ ನಾವು ಚಿತ್ರ ಬಿಡುಗಡೆ ಮಾಡುತ್ತೇವೆ ಎಂದು ಅವರು ನಿರ್ಧರಿಸಿದರೆ ಅವರ ಧೈರ್ಯ ಮೆಚ್ಚಬೇಕು. ಅವರ ನಂಬಿಕೆಯಲ್ಲಿ ನಾವು ವಿಶ್ವಾಸವಿಟ್ಟಿದ್ದೇವೆ. ‘ಈ ಸಂದರ್ಭದಲ್ಲಿ ಚಿತ್ರ ಬಿಡುಗಡೆ ಬೇಡ. ಸ್ವಲ್ಪ ಯೋಚನೆ ಮಾಡಿ’ ಎಂದಷ್ಟೇ ನಾವು ಹೇಳಬಹುದು. ಆದರೆ ಆದೇಶಿಸಲು ಸಾಧ್ಯವಿಲ್ಲ. ಅವರ ನಿರ್ಧಾರಕ್ಕೆ ನನ್ನ ಅಭ್ಯಂತರವೇನಿಲ್ಲ. ವಾರಾಂತ್ಯದ ಲಾಕ್‌ಡೌನ್ ಹಾಗೂ ರಾತ್ರಿ ಕರ್ಫ್ಯೂ ಇಲ್ಲದೇ ಹೋಗಿದ್ದರೆ ಆಗಸ್ಟ್ 20ಕ್ಕೇ ಚಿತ್ರ ಬಿಡುಗಡೆಯಾಗುತ್ತಿತ್ತು.

● ‘ಲಂಕೆ’ಯಲ್ಲಿನ ನಿಮ್ಮ ಪಾತ್ರದ ಬಗ್ಗೆ?

ಪ್ರತಿಯೊಬ್ಬ ಮನುಷ್ಯನಲ್ಲೂ ರಾಮನ ಗುಣ ಇದ್ದೇ ಇರುತ್ತದೆ. ಅದೇ ರೀತಿ ರಾವಣನ ಗುಣವೂ ಇರುತ್ತದೆ. ಏಕೆ ಎಂದರೆ ಪ್ರತಿಯೊಬ್ಬರಿಗೂ ಕೋಪ ಬರುತ್ತದೆ, ಆತನೂ ಮೌನವಾಗಿರುತ್ತಾನೆ. ಆತ ಪ್ರೀತಿ ಮಾಡುವುದೂ ಸಹಜ. ಈ ಅಂಶವನ್ನೇ ಚಿತ್ರದಲ್ಲಿ ನನ್ನ ಪಾತ್ರ ಹೊಂದಿದೆ.

● ‘ಹೆಡ್‌ಬುಷ್’ ಚಿತ್ರತಂಡಕ್ಕೆ ಸೇರಿಕೊಂಡಿದ್ದೀರಿ. ಇಲ್ಲಿ ಹೊಸ ಯೋಗೇಶ್ ಕಾಣಿಸಿಕೊಳ್ಳುವರೇ?

‘ಹೆಡ್‌ಬುಷ್’ ಚಿತ್ರದಲ್ಲಿ ಮುಖ್ಯ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ನಾನು ಹೇಳಿದರೆ ಯಾರೂ ನಂಬುವುದಿಲ್ಲ. ಈ ಸಿನಿಮಾಗಾಗಿಯೇ ನಾನು 6–7 ಕೆ.ಜಿ.ತೂಕ ಹೆಚ್ಚಿಸಿಕೊಂಡಿದ್ದೇನೆ. ತೆರೆಯ ಮೇಲೆ ನೋಡಿದಾಗ ಅದು ಜನರ ಅನುಭವಕ್ಕೆ ಬರುತ್ತದೆ. ಪಾತ್ರದ ಬಗ್ಗೆ ಹೆಚ್ಚೇನೂ ಹೇಳುವುದಿಲ್ಲ. ಈಗಷ್ಟೇ ಇದರ ಚಿತ್ರೀಕರಣ ಆರಂಭವಾಗಿದೆ. ‘ಈ ಯೋಗಿಯನ್ನು ಇಷ್ಟು ವರ್ಷ ಮಿಸ್ ಮಾಡ್ಕೊಂಡಿದ್ವಿ ಗುರೂ’ ಎಂದು ಪ್ರೇಕ್ಷಕರು ಹೇಳಬೇಕು. ಆ ರೀತಿ ಈ ಚಿತ್ರದಲ್ಲಿ ನನ್ನ ಪಾತ್ರವಿದೆ. ‘ಈ ರೀತಿ ಪಾತ್ರಗಳನ್ನು ಯೋಗಿ ಮಾಡಬೇಕು’ ಎಂದು ಜನ ಹೇಳಬೇಕು. ಹಾಗಿದೆ ಈ ಪಾತ್ರ. ‘ಯೋಗಿಗೆ ತುಂಬಾ ಸಾಮರ್ಥ್ಯವಿದೆ. ಆದರೆ ಯಾರೂ ಇದನ್ನು ಉಪಯೋಗಿಸಿಕೊಂಡಿಲ್ಲ’ ಎಂದು ಎಲ್ಲರೂ ಹೇಳುತ್ತಾರೆ. ಈ ಸಿನಿಮಾದಲ್ಲಿ ನನ್ನ ಸಾಮರ್ಥ್ಯವನ್ನು ಶೇ 100ಕ್ಕೆ ನೂರು ಉಪಯೋಗಿಸಿಕೊಂಡಿದ್ದಾರೆ. ‘ಯೋಗಿ ಈ ಪಾತ್ರ ಮಾಡಿದರೆ ಹೈಲೈಟ್ ಆಗುತ್ತೆ’ ಎಂದು ನಿರ್ದೇಶಕ ಶೂನ್ಯ ಹಾಗೂ ಚಿತ್ರಕಥೆ ಬರೆದ ಅಗ್ನಿ ಶ್ರೀಧರ್ ಅವರ ಮನಸ್ಸಿಗೆ ಬಂದಿದ್ದು ನನಗೆ ಖುಷಿ ನೀಡಿದೆ. ‘ಹೆಡ್‌ಬುಷ್’ ದೊಡ್ಡ ಪ್ರೊಜೆಕ್ಟ್. ಧನಂಜಯ್ ಅವರೇ ಇದರ ನಿರ್ಮಾಣ ಮಾಡುತ್ತಿದ್ದಾರೆ.

‘ದುನಿಯಾ’ದ ಲೂಸ್ ಮಾದನಿಗೂ ಈಗಿನ ಯೋಗೇಶ್‌ಗೂ ಬಹಳ ವ್ಯತ್ಯಾಸವಿದೆ. ಆಗಿನ್ನೂ ನನಗೆ 16 ವರ್ಷ. ಬಹಳ ಬಾಲಿಶವಾಗಿ ನಾನು ನಟನೆ ಮಾಡಿದ್ದೆ. ಆದರೆ ಇದೇ ಜನಕ್ಕೆ ಇಷ್ಟವಾಗಿತ್ತು. ಇದೀಗ ಹೆಡ್‌ಬುಷ್‌ನಲ್ಲಿ ನನ್ನ ನಟನೆಯ ಸಾಮರ್ಥ್ಯ ಬಹಳ ಹೆಚ್ಚಿದೆ. ಪ್ರತಿಯೊಂದು ಸಿನಿಮಾ ಮಾಡುತ್ತಾ ನಾನು ಬೆಳೆದಿದ್ದೇನೆ, ಕಲಿತಿದ್ದೇನೆ.

● ಯೋಗೇಶ್ ಅವರ ಮುಂದಿನ ಪ್ರೊಜೆಕ್ಟ್‌ಗಳು?

‘ಲಂಕೆ’ ಬಿಟ್ಟು ಮೂರು ಸಿನಿಮಾಗಳು ಬಿಡುಗಡೆಗೆ ಸಿದ್ಧ ಇವೆ. ‘ಕಿರಿಕ್ ಶಂಕರ್’, ‘ನಾನು ಅದು ಮತ್ತು ಸರೋಜ’ ಹಾಗೂ ದಯಾಳ್ ಅವರ ‘ಒಂಬತ್ತನೇ ದಿಕ್ಕು’ ಚಿತ್ರೀಕರಣ ಪೂರ್ಣಗೊಂಡಿದೆ. ವಿನೋದ್ ಪ್ರಭಾಕರ್ ಅವರ ಜೊತೆಗೆ ‘ಲಂಕಾಸುರ’ ಎನ್ನುವ ಸಿನಿಮಾ ಮಾಡುತ್ತಿದ್ದೇನೆ. ಜೊತೆಗೆ ‘ಕಂಸ’ ಎನ್ನುವ ಸಿನಿಮಾ ಒಪ್ಪಿಕೊಂಡಿದ್ದು, ಅದು ಮುಂದಿನ ವರ್ಷ ಪೂರ್ಣಗೊಳ್ಳಲಿದೆ. ಇದು ದೊಡ್ಡ ಪ್ರೊಜೆಕ್ಟ್. ಇದಲ್ಲದೇ ‘ಸಿದ್ಲಿಂಗು–2’ ಪ್ಲ್ಯಾನಿಂಗ್ ನಡೆಯುತ್ತಿದೆ. ಇದು ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಸೆಟ್ಟೇರಬಹುದು. ಆ ‘ಸಿದ್ಲಿಂಗು’ ಈ ‘ಸಿದ್ಲಿಂಗು’ ಬೇರೆಯೇ ರೀತಿ ಇರಲಿದ್ದಾನೆ.

‘ಹ್ಯಾಪಿಲಿ ಮ್ಯಾರೀಡ್’ ಎನ್ನುತ್ತಿದ್ದಾರೆ ಮಾನ್ವಿತಾ!

‘ಟಗರು ಪುಟ್ಟಿ’ ಎಂದೇ ಖ್ಯಾತಿ ಪಡೆದಿರುವ ನಟಿ ಮಾನ್ವಿತಾ ಕಾಮತ್ ಹಾಗೂ ‘ದಿಯಾ’ ಖ್ಯಾತಿಯ ಪೃಥ್ವಿ ಅಂಬರ್ ಅವರು ‘ಹ್ಯಾಪಿಲಿ ಮ್ಯಾರೀಡ್’ ಚಿತ್ರದಲ್ಲಿ ಮೊದಲ ಬಾರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ.

ಕೇವಲ 12 ದಿನಗಳಲ್ಲಿ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ‘ಲೈಫ್ ಈಸ್ ಬ್ಯೂಟಿಫುಲ್’ ನಿರ್ದೇಶನ ಮಾಡಿರುವ ಅರುಣ್‌ಕುಮಾರ್ ಎಂ. ಮತ್ತು ಸಾಬು ಅಲೋಷಿಯಸ್ ಜಂಟಿಯಾಗಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಬಿಜಿ ಅರುಣ್, ಜೋಸ್‌ಕುಟ್ಟಿ ಮಾಡತ್ತಿಲ್ ಹಾಗೂ ರಂಜಿತ್ ಮಣಂಬರಕ್ಕಾಟ್ ಚಿತ್ರದ ನಿರ್ಮಾಪಕರಾಗಿದ್ದಾರೆ. ಚಿತ್ರದ ಮೋಷನ್ ಪೋಸ್ಟರ್ ಅನ್ನು ನಟ ರವಿಚಂದ್ರನ್ ಅನಾವರಣಗೊಳಿಸಿದರು. ತಾರಾಗಣದಲ್ಲಿ ಧರ್ಮಣ್ಣ ಕಡೂರ್, ಮಲಯಾಳಂನ ಶ್ರೀಜಿತ್‌ರವಿ ಮುಂತಾದವರು ನಟಿಸಿದ್ದಾರೆ. ಜಿತಿನ್‌ದಾಸ್ ಅವರ ಛಾಯಾಗ್ರಹಣ ಹಾಗೂ ಎಂ.ಜೆ.ವಿನಯನ್ ಅವರ ಸಂಕಲನ ಚಿತ್ರಕ್ಕಿದೆ.

ಚಿತ್ರದಲ್ಲಿ ಹಾಡುಗಳಿಲ್ಲ ಎನ್ನುವುದು ವಿಶೇಷ. ಥ್ರಿಲ್ಲರ್ ಕಥೆ ಹೊಂದಿರುವ ಈ ಚಿತ್ರದಲ್ಲಿ ಅತಿಯಾಗಿ ಪ್ರೀತಿಸಿದ ಪ್ರೇಮಿಗಳು, ಮದುವೆಯಾದ ನಂತರ ಇಬ್ಬರ ಧೋರಣೆ ಗುಣಗಳಿಂದ ಸಂಬಂಧ ಒಡೆದು ಹೋಗುತ್ತವೆ. ಇದರ ಜೊತೆಗೆ ನಾನಾ ತರಹದ ಪಾತ್ರಗಳಿಂದ ಕಥೆ ತಿರುವುಗಳನ್ನು ಪಡೆದುಕೊಳ್ಳುತ್ತದೆ. ಒಂದು ಮಾಮೂಲಿ ಜಗಳ ತಾರಕಕ್ಕೆ ಹೋದಾಗ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ ಎಂದು ಚಿತ್ರತಂಡವು ಹೇಳಿದೆ.

‘ಟಗರು’, ‘ಇಂಡಿಯಾ ವರ್ಸಸ್ ಇಂಗ್ಲೆಂಡ್’ ಚಿತ್ರದ ಬಳಿಕ ‘ಶಿವ 143’ ಚಿತ್ರದಲ್ಲಿ ರಾಜ್‌ಕುಮಾರ್ ಅವರ ಮೊಮ್ಮಗ ಧೀರೇನ್ ಅವರಿಗೆ ಜೋಡಿಯಾಗಿ ಮಾನ್ವಿತಾ ಅವರು ನಟಿಸಿದ್ದಾರೆ. ಈ ಚಿತ್ರದ ಚಿತ್ರೀಕರಣ, ಡಬ್ಬಿಂಗ್ ಎಲ್ಲವೂ ಮುಗಿದಿದೆ. ಚಿತ್ರಮಂದಿರದಲ್ಲೇ ಈ ಚಿತ್ರ ಬಿಡುಗಡೆಗೆ ಚಿತ್ರತಂಡ ಕಾಯುತ್ತಿದೆ. ಮಾನ್ವಿತಾ ನಟನೆಯ ದ್ವಿಭಾಷಾ ಚಿತ್ರ ‘ರಾಜಸ್ಥಾನ್ ಡೈರೀಸ್’ ಕೂಡಾ ಬಿಡುಗಡೆಗೆ ಸಜ್ಜಾಗಿದೆ. ‘ದಿಯಾ’ ಚಿತ್ರದ ಬಳಿಕ ಪೃಥ್ವಿ ಅಂಬರ್ ಅವರೂ ಚಂದನವನದಲ್ಲಿ ಬ್ಯುಸಿಯಾಗಿದ್ದು, ಶಿವರಾಜ್‌ಕುಮಾರ್ ನಟನೆಯ ‘ಬೈರಾಗಿ’ಯಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

24ರಂದು ‘ಕರ್ಮಣ್ಯೇವಾಧಿಕಾರಸ್ತೇ’ ತೆರೆಗೆ

ಪ್ರತೀಕ್ ಸುಬ್ರಮಣಿ

ಭಗವದ್ಗೀತೆಯ ಮಾತು ‘ಕರ್ಮಣ್ಯೇವಾಧಿಕಾರಸ್ತೆ’ ಇಲ್ಲಿ ಚಿತ್ರದ ಶೀರ್ಷಿಕೆಯಾಗಿದೆ. ಚಿತ್ರದ ನಿರ್ಮಾಣ ಕಾರ್ಯ ಬಹುತೇಕ ಮುಗಿದಿದೆ. ಸೆ. 24ರಂದು ಚಿತ್ರ ತೆರೆಗೆ ಬರಲಿದೆ. ಟ್ರೇಲರ್ ಶೀಘ್ರ ಬಿಡುಗಡೆ ಆಗಲಿದೆ ಎಂದು ಚಿತ್ರತಂಡ ಹೇಳಿದೆ.

ಕೊಲೆ ರಹಸ್ಯ ಬೇಧಿಸುವ ಕಥಾಹಂದರ ಹೊಂದಿದೆ ಈ ಚಿತ್ರ. ಚಿತ್ರವನ್ನು ಶ್ರೀಹರಿ ಆನಂದ್ ನಿರ್ದೇಶಿಸಿದ್ದಾರೆ. 45 ದಿನಗಳ ಕಾಲ ಚಿತ್ರೀಕರಣ ನಡೆದಿದೆ. ಬೆಂಗಳೂರು, ಆಗುಂಬೆ, ತೀರ್ಥಹಳ್ಳಿ, ದಾಂಡೇಲಿ ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ.

ಅಮೆರಿಕದ ವೈದ್ಯ ರಮೇಶ್ ರಾಮಯ್ಯ ಚಿತ್ರ ನಿರ್ಮಿಸಿದ್ದಾರೆ. ಎರಡು ಹಾಡುಗಳಿವೆ. ರಿತ್ವಿಕ್ ಮುರಳೀಧರ್ ಸಂಗೀತ ನೀಡಿದ್ದಾರೆ. ಸಂಜಿತ್ ಹೆಗ್ಡೆ, ಅಶ್ವಿನಿ, ರಿತ್ವಿಕ್ ಮುರಳೀಧರ್, ಅನನ್ಯಾ ಭಟ್ ಹಾಡಿದ್ದಾರೆ. ಮಾಸ್ ಅಶೋಕ್ ಸಾಹಸ ನಿರ್ದೇಶನ ಮಾಡಿದ್ದಾರೆ.

ಉದಯಲೀಲಾ ಛಾಯಾಗ್ರಹಣ ಹಾಗೂ ವಿಜೇತ್ ಚಂದ್ರ ಸಂಕಲನ ಈ ಚಿತ್ರಕ್ಕಿದೆ. ಪ್ರತೀಕ್ ಸುಬ್ರಮಣಿ ಈ ಚಿತ್ರದ ನಾಯಕ. ದಿವ್ಯ ಹಾಗೂ ನೇಪಾಳದ ಡೋಲ್ಮ ನಾಯಕಿಯರು. ನಾಟ್ಯ ರಂಗ, ಉಗ್ರಂ ಮಂಜು, ನಟನ ಪ್ರಶಾಂತ್ ತಾರಾಗಣದಲ್ಲಿದ್ದಾರೆ.

ಸಿನಿ ಸಂಕ್ಷಿಪ್ತ

ವಿಜಯ್ ನೆನಪಿನಲ್ಲಿ ‘ಪುಕ್ಸಟ್ಟೆ ಲೈಫು...’

‘ಪುಗ್ಸಟ್ಟೆ ಲೈಫ್...’ನಲ್ಲಿ ಸಂಚಾರಿ ವಿಜಯ್

ಸಂಚಾರಿ ವಿಜಯ್ ನೆನಪಿನಲ್ಲಿ ಅವರ ನಟನೆಯ ‘ಪುಕ್ಸಟ್ಟೆ ಲೈಫು ಪುರುಸೊತ್ತೇ ಇಲ್ಲ’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ವಿಜಯ್ ಅವರ ನಿಧನದ ನಂತರ ಅವರ ಚಿತ್ರಗಳು ಸಾಲಾಗಿ ಬಿಡುಗಡೆ ಕಾಣುತ್ತಿವೆ. ವಿಜಯ್ ಇಲ್ಲದ ಸಂಕಟದ ಸಹಿತ ಭಾವುಕ ಸನ್ನಿವೇಶ ‘ಪುಗ್ಸಟ್ಟೆ ಲೈಫು...’ ಚಿತ್ರ ತಂಡದ್ದು.

‘ಪುಕ್ಸಟ್ಟೆ ಲೈಫು...’ ಅರವಿಂದ್ ಕುಪ್ಲೀಕರ್ ನಿರ್ದೇಶನದ ಚಿತ್ರ. ಸಂಚಾರಿ ವಿಜಯ್ ಬಹುವಾಗಿ ಮೆಚ್ಚಿಕೊಂಡು, ಪ್ರಧಾನ ಪಾತ್ರದಲ್ಲಿ ನಟಿಸಿದ್ದ ಸಿನಿಮಾ.

ಮುಖ್ಯಮಂತ್ರಿ ಚಂದ್ರು, ಬಿ ಜಯಶ್ರೀ, ಚಿತ್ರದ ಪಾತ್ರಧಾರಿಗಳಾದ ರಂಗಾಯಣ ರಘು, ಅಚ್ಯುತ್ ಕುಮಾರ್ ಈ ಸಮಾರಂಭದಲ್ಲಿ ವಿಜಯ್ ನೆನಪುಗಳನ್ನು ಮೆಲುಕು ಹಾಕಿದರು. ವಿಜಯ್ ಹೆಸರಿನಲ್ಲಿ ವೇದಿಕೆಯಲ್ಲಿ ಒಂದು ಖಾಲಿ ಆಸನವನ್ನು ಇರಿಸಲಾಗಿತ್ತು.

‘ಈ ಚಿತ್ರದಲ್ಲಿ ಸಂಚಾರಿ ವಿಜಯ್‌ಗೆ ಬೀಗ ರಿಪೇರಿ ಮಾಡುವ ಕಾಯಕದ ಶಹಜಹಾನ್ ಎಂಬ ಪಾತ್ರ. ಬೀಗ ರಿಪೇರಿಯಿಂದ ಬರುವ ಸಂಪಾದನೆ ಸಾಲದಾದಾಗ ಶಹಜಹಾನ್ ಈ ವ್ಯವಸ್ಥೆಯ ಚಕ್ರಸುಳಿಗೆ ಸಿಕ್ಕು ನಲುಗುವ ಅಪರೂಪದ ಕಥೆ ಇದು’ ಎಂದಿದೆ ಚಿತ್ರ ತಂಡ. ಸಂಚಾರಿ ವಿಜಯ್‌ಗೆ ಜೋಡಿಯಾಗಿ ಮಾತಂಗಿ ಪ್ರಸನ್ನ ನಟಿಸಿದ್ದಾರೆ.

ಸುರೇಶ್ ಆರ್ಮುಗಂ ಸಂಕಲನ, ವಾಸು ದೀಕ್ಷಿತ್ ಸಂಗೀತ ನಿರ್ದೇಶನ, ಪೂರ್ಣಚಂದ್ರ ತೇಜಸ್ವಿಯವರ ಹಿನ್ನೆಲೆ ಸಂಗೀತ ಮತ್ತು ಅದ್ವೈತ್ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ನಾಗರಾಜ್ ಸೋಮಯಾಜಿ ಚಿತ್ರದ ನಿರ್ಮಾಪಕರು.

ಶೀಘ್ರದಲ್ಲೇ ‘ಡಿಯರ್ ಸತ್ಯ’ ತೆರೆಗೆ

ಆರ್ಯನ್ ಸಂತೋಷ್ ಹಾಗೂ ಅರ್ಚನಾ ಕೊಟ್ಟಿಗೆ

ಆರ್ಯನ್ ಸಂತೋಷ್ ನಾಯಕನಾಗಿ ನಟಿಸಿರುವ ‘ಡಿಯರ್ ಸತ್ಯ’ ಚಿತ್ರ ಶೀಘ್ರದಲ್ಲೇ ತೆರೆಗೆ ಬರಲಿದೆ. ಆರ್ಯನ್ ಜನ್ಮದಿನದಂದೇ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಈ ಚಿತ್ರದಲ್ಲಿ ನಾಯಕನಿಗೆ ಡೆಲಿವರಿ ಬಾಯ್ ಪಾತ್ರ. ಹೀಗಾಗಿ ಚಿತ್ರದ ಟ್ರೇಲರ್ ಅನ್ನು ಆಹಾರ ತಲುಪಿಸುವ ಡೆಲಿವರಿ ಬಾಯ್ಸ್ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. ಚಿತ್ರದ ಕುರಿತು ಮಾತನಾಡಿದ ಆರ್ಯನ್, ‘ನಾನು ಚಿತ್ರರಂಗಕ್ಕೆ ಬಂದು ಹತ್ತು ವರ್ಷಗಳಾಗಿವೆ. ‘ಕಲ್ಲರಳಿ ಹೂವಾಗಿ’ ಚಿತ್ರದ ಮೂಲಕ ಪೋಷಕ ಕಲಾವಿದನಾಗಿ ಚಿತ್ರರಂಗ ಪ್ರವೇಶಿಸಿದ ನಾನು, ‘ನೂರುಜನ್ಮಕು’ ಚಿತ್ರದಿಂದ ನಾಯಕನಾದೆ. ಈ ಚಿತ್ರದ ಕಥೆ ಹಿಡಿದು ಸಾಕಷ್ಟು ಜನರನ್ನು ಸಂಪರ್ಕಿಸಿದೆ. ಯಾರೂ ಮುಂದೆ ಬರಲಿಲ್ಲ. ಗಣೇಶ್ ಪಾಪಣ್ಣ, ಯತೀಶ್ ವೆಂಕಟೇಶ್ (ರಾಕ್ ಲೈನ್), ಶ್ರೀನಿವಾಸ್ ಶ್ರೀಭಕ್ತ ಹಾಗೂ ಅಜಯ್ ಅಪರೂಪ ಅವರು ಈ ಚಿತ್ರ ನಿರ್ಮಾಣಕ್ಕೆ ಮುಂದಾದರು. ನಾನು ಕೂಡ ಈ ಚಿತ್ರದ ನಿರ್ಮಾಪಕರಲ್ಲಿ ಒಬ್ಬ. ನಿರ್ದೇಶಕ ಶಿವಗಣೇಶ್ ಸೇರಿದಂತೆ ಎಲ್ಲಾ ತಂತ್ರಜ್ಞರ ಶ್ರಮದಿಂದ ಚಿತ್ರ ಉತ್ತಮವಾಗಿ ಮೂಡಿಬಂದಿದೆ’ ಎಂದರು.

ಡಾರ್ಲಿಂಗ್ ಕೃಷ್ಣಗೆ ಶೇಖರ್ ಆ್ಯಕ್ಷನ್ ಕಟ್



ಡಾರ್ಲಿಂಗ್ ಕೃಷ್ಣ ಹಾಗೂ ಪಿ.ಸಿ.ಶೇಖರ್

‘ಲವ್ ಮಾಕ್ಟೆಲ್’ ಚಿತ್ರದ ಯಶಸ್ಸಿನ ಬಳಿಕ ನಟ ಡಾರ್ಲಿಂಗ್ ಕೃಷ್ಣ ಅವರನ್ನು ರೊಮ್ಯಾಂಟಿಕ್ ಸಿನಿಮಾಗಳೇ ಅರಸಿಕೊಂಡು ಬರುತ್ತಿವೆ. ಇದೀಗ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ ಪಿ.ಸಿ.ಶೇಖರ್ ನಿರ್ದೇಶನದ ಹೊಸ ಚಿತ್ರದಲ್ಲಿ ಕೃಷ್ಣ ಅವರು ನಾಯಕರಾಗಿ ನಟಿಸುತ್ತಿದ್ದಾರೆ.

‘ರೋಮಿಯೋ’, ‘ಚಡ್ಡಿದೋಸ್ತ್’, ‘ಅರ್ಜುನ’,‘ಸ್ಟೈಲ್ ಕಿಂಗ್’, ‘ದಿ ಟೆರರಿಸ್ಟ್’ ಮುಂತಾದ ಚಿತ್ರಗಳನ್ನು ನಿರ್ದೇಶಿಸಿರುವ ಶೇಖರ್ ತಮ್ಮ ಮುಂದಿನ ಪ್ರೊಜೆಕ್ಟ್ ಬಗ್ಗೆ ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದಾರೆ. ಹೊಸ ಚಿತ್ರವನ್ನು ಕಡ್ಡಿಪುಡಿ ಚಂದ್ರು ಅವರು ನಿರ್ಮಾಣ ಮಾಡುತ್ತಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ ‘ರೋಮಿಯೋ’ ಬಳಿಕ ರೊಮ್ಯಾಂಟಿಕ್ ಕಾಮಿಡಿ ಸಿನಿಮಾಗಳಿಂದ ಶೇಖರ್ ದೂರಸರಿದಿದ್ದರು. ಇದೀಗ ಹಲವು ವರ್ಷಗಳ ಬಳಿಕ ಮತ್ತೆ ರೊಮ್ಯಾಂಟಿಕ್ ವಿಷಯಾಧಾರಿದ ಚಿತ್ರ ನಿರ್ದೇಶನಕ್ಕೆ ಶೇಖರ್ ಇಳಿದಿದ್ದಾರೆ. ಚಿತ್ರದ ಚಿತ್ರೀಕರಣ ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ.

ಡಾರ್ಲಿಂಗ್ ಕೃಷ್ಣ ಅವರ ‘ಶುಗರ್ ಫ್ಯಾಕ್ಟರಿ’, ‘‘srikrishna@gmail.com’, ‘ಮಿ.ಬ್ಯಾಚುಲರ್’ ಚಿತ್ರಗಳ ಚಿತ್ರೀಕರಣ ಪೂರ್ಣಗೊಂಡಿದೆ. ‘ಲವ್ ಮಾಕ್ಟೆಲ್–2’ ಚಿತ್ರವನ್ನೂ ಈ ವರ್ಷವೇ ತೆರೆಗೆ ತರಲು ಅವರು ಸಿದ್ಧತೆ ನಡೆಸಿದ್ದಾರೆ. ಜೊತೆಗೆ ರಚಿತಾ ರಾಮ್ ಜೊತೆಗೆ ನಟಿಸುತ್ತಿರುವ ‘ಲವ್ ಮಿ OR ಹೇಟ್ ಮಿ’ ಚಿತ್ರವೂ ಸೆಟ್ಟೇರಿದೆ.

ಚಿತ್ರಮಂದಿರದ ಅರ್ಥ ವ್ಯವಸ್ಥೆ

- **630** ರಾಜ್ಯದಲ್ಲಿ ಏಕತೆರೆಯ ಚಿತ್ರಮಂದಿರಗಳು
- **260** ಮಲ್ಟಿಪ್ಲೆಕ್ಸ್ ತೆರೆಗಳು (150 ಮಾತ್ರ ಚಾಲನೆಯಲ್ಲಿ)
- **₹ 2 ಕೋಟಿ** ಪ್ರತಿ ಚಿತ್ರಮಂದಿರದ ವಾರ್ಷಿಕ ಕನಿಷ್ಠ ವಹಿವಾಟು
- **₹1,200 ಕೋಟಿ** ಪ್ರದರ್ಶನ ಕ್ಷೇತ್ರದ ವಾರ್ಷಿಕ ವಹಿವಾಟು
- **₹216 ಕೋಟಿ** ವಾರ್ಷಿಕ ಜಿಎಸ್‌ಟಿ ಪಾವತಿ
- **12,000** ಚಿತ್ರಮಂದಿರದ ಉದ್ಯೋಗಿಗಳು

ಮಾಹಿತಿ: ಕರ್ನಾಟಕ ಚಿತ್ರ ಪ್ರದರ್ಶಕರ ಸಂಘ

ಪರದೆಯ ತುಂಬಾ ಕತ್ತಲು

ಈ ಸಾಲು ಮತ್ತೆ ಕಾಣವುದೆಂದು?

ಹೊಸ ಚಿತ್ರಗಳು ಬಿಡುಗಡೆ ಆಗದಿರುವುದು, ಕೆಲವೆಡೆ ಇನ್ನೂ ವಾರಾಂತ್ಯದ ಲಾಕ್‌ಡೌನ್, ರಾತ್ರಿಯ ಪ್ರದರ್ಶನ ರದ್ದು, ಆಸನ ಮಿತಿ, ಪ್ರೇಕ್ಷಕರ ಹಿಂಜರಿಕೆ... ಹೀಗೆ ಬೆಳ್ಳಿಪರದೆಗಳಲ್ಲಿ ಕತ್ತಲು ಆವರಿಸಲು ಹಲವು ಕಾರಣಗಳು. ಹೌದು, ಜೀವನ ಅನ್‌ಲಾಕ್ ಆದರೂ ಚಿತ್ರಮಂದಿರಗಳು ಲಾಕ್‌ಡೌನ್ ಸ್ಥಿತಿಯಲ್ಲೇ ಇವೆ.

ತೆರೆ, ಆಸನ ಎರಡೂ ಖಾಲಿ. ಆದರೂ ನಿರ್ವಹಣೆ ಬೇಕಲ್ಲಾ

ಶರತ್ ಹೆಗ್ಡೆ

‘ಚುರುಮುರಿ, ಕಡಲೆಕಾಳು... ಮಾರಿಕೊಂಡು ಹಾಗೂ ಹೀಗೂ ಬದುಕು ಕಟ್ಟಿಕೊಂಡಿದ್ದೆ. ಲಾಭದಲ್ಲಿದ್ದೆ ಎಂದು ಹೇಳಲಾರೆ. ಆದರೆ ಬದುಕಿಗೇನೂ ಚಿಂತೆ ಇರಲಿಲ್ಲ. ಸಿನಿಮಾ ಪ್ರದರ್ಶನಕ್ಕೆ ಮುನ್ನ ಚಿತ್ರಮಂದಿರದ ಆವರಣದಲ್ಲಿ ಸೇರುವ ಜನರೇ ನಮ್ಮ ಅನ್ನದಾತರು. ಈಗ ಚಿತ್ರಮಂದಿರವೂ ಬಂದ್. ಬರುವ ಅರ್ಧಾಂಶದಷ್ಟು ಜನರಲ್ಲಿ ನಮ್ಮ ಗ್ರಾಹಕರೂ ಇಲ್ಲವೇ ಇಲ್ಲ ಎನ್ನಬಹುದು’.

– ಇದು ಬೆಂಗಳೂರಿನ ವಿಜಯನಗರದ ಚಿತ್ರಮಂದಿರದ ಮುಂದೆ ಚುರುಮುರಿ ಮಾರುತ್ತಿದ್ದ ಚಿತ್ರದುರ್ಗದ ಮಂಜುನಾಥ ಮತ್ತು ಅವರ ಸ್ನೇಹಿತರ ಮಾತು.

‘ಅರ್ಧದಷ್ಟು ಆಸನ ಭರ್ತಿಗೆ ಅವಕಾಶ ಎನ್ನುವ ಕಾರಣಕ್ಕೆ ಚಿತ್ರಮಂದಿರದ ಒಳಗಿನ ಸ್ಟಾಲ್‌ಗಳನ್ನು ಕೆಲಕಾಲದ ಮಟ್ಟಿಗೆ ಬಂದ್ ಮಾಡಿದ್ದರು. ಹಾಗಾಗಿ ಪ್ರೇಕ್ಷಕರು ನಮ್ಮಿಂದ ತಿನಿಸು ಒಯ್ಯುತ್ತಿದ್ದರು. ಈಗ ಆ ಗ್ರಾಹಕರೂ ಇಲ್ಲವಾಗಿದ್ದಾರೆ’ ಎಂದರು ಮಂಜುನಾಥ.

ಹೌದು, ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಏಕತೆರೆಯ ಬಹುತೇಕ ಚಿತ್ರಮಂದಿರಗಳು ತೆರೆದಿಲ್ಲ. ಕೆಲವಂತೂ ಶಾಶ್ವತವಾಗಿ ಮುಚ್ಚಿಬಿಟ್ಟಿವೆ. ಪೂರ್ಣ ಪ್ರಮಾಣದ ಆಸನ ಭರ್ತಿಗೆ ಅವಕಾಶ ನೀಡದೇ ನಿರ್ಮಾಪಕರೂ ಚಿತ್ರಗಳ ಬಿಡುಗಡೆಗೆ ಮುಂದಾಗುತ್ತಿಲ್ಲ. ಹೀಗಾಗಿ ಚಿತ್ರಮಂದಿರಗಳ ವೈಭವವು ಪೂರ್ಣ ಮಂಕಾಗಿಬಿಟ್ಟಿದೆ. ಕೆಲವು ಚಿತ್ರಮಂದಿರಗಳ ಆವರಣಗಳಂತೂ ಸ್ಮಶಾನ ಸದೃಶವಾಗಿಬಿಟ್ಟಿವೆ. ಪಾರ್ಕಿಂಗ್ ಸಿಬ್ಬಂದಿ, ಪಾಪ್‌ಕಾರ್ನ್, ಚಹಾ ಮಾರುವವ, ಮ್ಯಾನೇಜರ್, ಗೇಟ್‌ಕೀಪರ್, ಪ್ರೊಜೆಕ್ಟರ್ ಆಪರೇಟರ್... ಎಲ್ಲರೂ ಖಾಲಿ ಕುಳಿತಿದ್ದಾರೆ. ಚಿತ್ರಮಂದಿರದ ಆವರಣದಲ್ಲೊಬ್ಬ ಕಾವಲುಗಾರ ಬಿಟ್ಟರೆ ಅಲ್ಲಿ ಮನುಷ್ಯರ ಸುಳಿವಿಲ್ಲ. ಒಂದು ಚಿತ್ರಮಂದಿರದಲ್ಲಿ ಕನಿಷ್ಠ 6ರಿಂದ 10 ಮಂದಿಯಾದರೂ ಕಾರ್ಮಿಕರು ಇರುತ್ತಿದ್ದರು. ರಾಜ್ಯದಲ್ಲಿ ಚಿತ್ರಮಂದಿರಗಳ ಸಿಬ್ಬಂದಿ 12 ಸಾವಿರದಷ್ಟು ಇದ್ದಾರೆ. ಅವರ ಪೈಕಿ ಸುಮಾರು 5 ಸಾವಿರ ಮಂದಿ ಬೇರೆ ಉದ್ಯೋಗದತ್ತ ಮುಖಮಾಡಿದ್ದಾರೆ. ಅವರಿಗೆ ಇಲ್ಲಿನ ಭವಿಷ್ಯದ ಬಗ್ಗೆ ಆತಂಕವಾಗಿಬಿಟ್ಟಿದೆ ಎಂದರು ಕರ್ನಾಟಕ ಚಲನಚಿತ್ರ ಪ್ರದರ್ಶಕರ ಒಕ್ಕೂಟದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್.

ಪ್ರದರ್ಶನ ಇಲ್ಲ; ಬಂದ್ ಅನಿವಾರ್ಯ

‘ಅರ್ಧಾಂಶ ಆಸನ ಭರ್ತಿಗೆ ಅವಕಾಶ ಇದ್ದರೂ ನಮಗೆ ವರ್ಕೌಟ್ ಆಗುವುದಿಲ್ಲ. ಏಕೆಂದರೆ ಪ್ರತಿದಿನ ನಾಲ್ಕು ಪ್ರದರ್ಶನ ಮಾಡುತ್ತಿದ್ದೆವು. ಈಗ 9 ಗಂಟೆ ನಂತರ ಪ್ರದರ್ಶನ ಇರುವುದಿಲ್ಲ. ಅಂದರೆ ಒಂದು ಪ್ರದರ್ಶನವೇ ಇಲ್ಲವಾಯಿತು. ಅರ್ಧಾಂಶದ ಆದಾಯವೂ ಖೋತಾ ಆಗುತ್ತದೆ. ಮಾತ್ರವಲ್ಲ, ಈಗ ನಾಲ್ಕು ಜಿಲ್ಲೆಗಳಲ್ಲಿ ವಾರಾಂತ್ಯದ ಲಾಕ್‌ಡೌನ್ ಇದೆ. ಅಲ್ಲಿ ಚಿತ್ರಮಂದಿರ ಬಂದ್ ಅನಿವಾರ್ಯ. ಇಂಥ ಸ್ಥಿತಿಯಲ್ಲಿ ನಿರ್ಮಾಪಕರೂ ಚಿತ್ರ ಪ್ರದರ್ಶಿಸಲು ಕೊಡುವುದಿಲ್ಲ’ ಎಂದರು ಚಂದ್ರಶೇಖರ್.

ಚಿತ್ರಮಂದಿರದ ಗೇಟು ಮತ್ತೆ ತೆರೆದೀತೇ?

ಮಲ್ಟಿಪ್ಲೆಕ್ಸ್‌ಗಳೂ ಸಂಕಷ್ಟದಲ್ಲಿ...

ಚಂದ್ರಶೇಖರ್ ವಿಶ್ಲೇಷಿಸುವ ಪ್ರಕಾರ, ‘ಏಕತೆರೆಯ ಚಿತ್ರಮಂದಿರಗಳದ್ದು ಒಂದು ಕಥೆಯಾದರೆ ಮಲ್ಟಿಪ್ಲೆಕ್ಸ್‌ಗಳದ್ದು ಇನ್ನೂ ಕಷ್ಟ. ಈ ಇತಿಮಿತಿಯಿಂದಾಗಿ ಪ್ರದರ್ಶನ ಕಂಪನಿಗಳು ಷೇರುದಾರರನ್ನು ಕಳೆದುಕೊಳ್ಳುವ ಭೀತಿ ಎದುರಿಸುತ್ತಿವೆ. ಅಲ್ಲಿಯೂ ಪ್ರೇಕ್ಷಕರ ಕೊರತೆ ಇದೆ’ ಎಂದರು ಅವರು.

ಸರ್ಕಾರ ಕಲ್ಯಾಣಮಂಟಪ, ಪಾರ್ಟಿ ಹಾಲ್, ಗಣೇಶೋತ್ಸವ ಸಂಬಂಧಿಸಿದಂತೆ ಈಗಾಗಲೇ ಮಾರ್ಗಸೂಚಿ ಹೊರಡಿಸಿದೆ. ಆದರೆ, ಚಿತ್ರಮಂದಿರಗಳಲ್ಲಿ ಪೂರ್ಣ ಪ್ರಮಾಣದ ಆಸನ ಭರ್ತಿ ಸಂಬಂಧಿಸಿದಂತೆ ಇನ್ನೂ ಸ್ಪಷ್ಟಪಡಿಸಿಲ್ಲ.

ಈ ಅತಂತ್ರತೆಯ ಕಾರಣಕ್ಕಾಗಿಯೇ ‘ಭಜರಂಗಿ–2’, ‘ಸಲಗ’ ಚಿತ್ರಗಳ ಬಿಡುಗಡೆ ಮುಂದಕ್ಕೆ ಹೋಗಿವೆ. ‘ಕೆಜಿಎಫ್ ಚಾಪ್ಟರ್ –2’ ಬಿಡುಗಡೆಯನ್ನೂ 2022ಕ್ಕೆ ಮುಂದೂಡಲಾಗಿದೆ. ರಮೇಶ್ ಅರವಿಂದ್ ಅವರ ‘100’ ಚಿತ್ರವೂ ಬಿಡುಗಡೆ ಮುಂದಕ್ಕೆ ಹೋಗಿದೆ. ಮರುಬಿಡುಗಡೆ ಆದ ‘ಕೃಷ್ಣ ಟಾಕೀಸ್’ ಕೂಡಾ ರಾಜ್ಯದ 40 ಚಿತ್ರಮಂದಿರಗಳಲ್ಲಿ ಮಾತ್ರ ಪ್ರದರ್ಶನ ಕಾಣುತ್ತಿದೆ.

‘ಈ ಬಗ್ಗೆ ಸರ್ಕಾರದ ಜೊತೆ ಚರ್ಚಿಸಬೇಕು. ಮುಖ್ಯಮಂತ್ರಿ ಜೊತೆ ಮಾತುಕತೆಗೆ ಸಮಯ ನಿಗದಿಯೂ ಆಗುತ್ತಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್.

ಹೈದರಾಬಾದ್–ಕರ್ನಾಟಕ: ತೆಲುಗು ಚಿತ್ರ ಪ್ರದರ್ಶನ

‘ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕನಿಷ್ಠ ಸಂಖ್ಯೆಯ ಚಿತ್ರಮಂದಿರಗಳು ತೆರೆದಿವೆ. ಆದರೆ, ಸದ್ಯ ಕನ್ನಡ ಚಿತ್ರಗಳು ಬಿಡುಗಡೆ ಆಗುತ್ತಿಲ್ಲ. ಹಾಗಾಗಿ ಇಲ್ಲಿ ತೆಲುಗು ಚಿತ್ರಗಳನ್ನು ಪ್ರದರ್ಶಿಸುತ್ತೇವೆ. ದೊಡ್ಡನಟರ ಚಿತ್ರಗಳು ಬಿಡುಗಡೆ ಆದರೆ ಪ್ರದರ್ಶನ ಮುಂದುವರಿಸಬಹುದು. ಚಿತ್ರಮಂದಿರಗಳನ್ನು ಹೇಗೋ ನಿಭಾಯಿಸುತ್ತೇವೆ. ಆದರೆ, ಚಿತ್ರ ಬಿಡುಗಡೆಗೆ ನಿರ್ಮಾಪಕರು, ವಿತರಣೆಗೆ ವಿತರಕರು ಮನಸ್ಸು ಮಾಡಬೇಕು ಅಷ್ಟೇ’ ಎಂದರು ಕೊಪ್ಪಳದ ಶಿವ ಮತ್ತು ಲಕ್ಷ್ಮೀ ಚಿತ್ರಮಂದಿರದ ಮಾಲೀಕರಾದ ವೀರೇಶ್ ಮಹಾಂತಯ್ಯನಮಠ.

ಪರಿಹಾರಧನ ಖೋತಾ

ಚಿತ್ರಮಂದಿರಗಳ ಕಾರ್ಮಿಕರಿಗೆ ₹ 3 ಸಾವಿರ ಪರಿಹಾರ ಕೊಡುವುದಾಗಿ ರಾಜ್ಯ ಸರ್ಕಾರ ಘೋಷಿಸಿತು. ಆದರೆ, ಅವರು ಭವಿಷ್ಯ ನಿಧಿ ಹೊಂದಿರಬೇಕಾದದ್ದು ಕಡ್ಡಾಯ ಎಂಬ ನಿಯಮ ಹಾಕಿತ್ತು. ಇದೇ ವೇಳೆ ತುರ್ತು ಬಳಕೆಗೆ ಭವಿಷ್ಯ ನಿಧಿಯನ್ನು ತೆಗೆಯಬಹುದು ಎಂದು ಕೇಂದ್ರ ಸರ್ಕಾರ ಅವಕಾಶ ನೀಡಿತು. ಹಾಗೆ ಬೇರೆ ಉದ್ಯೋಗ ಮಾಡಲೆಂದು ಕಾರ್ಮಿಕರು ಭವಿಷ್ಯನಿಧಿಯ ಹಣ ತೆಗೆದರು. ಆ ನೋಂದಣಿ ಸಂಖ್ಯೆ ರದ್ದಾಯಿತು. ಇವರು ಪರಿಹಾರ ಮೊತ್ತ ಘೋಷಣೆ ಮಾಡುವ ವೇಳೆ ಚಿತ್ರಮಂದಿರದ ಕಾರ್ಮಿಕರಲ್ಲಿ ಭವಿಷ್ಯ ನಿಧಿ ಸಂಬಂಧಿಸಿದ ಚಾಲ್ತಿಯಲ್ಲಿರುವ ಯಾವುದೇ ದಾಖಲೆ ಇರಲಿಲ್ಲ. ಹಾಗಾಗಿ ಯಾವ ಕಾರ್ಮಿಕರಿಗೂ ಆ ಸೌಲಭ್ಯ ಸಿಗಲಿಲ್ಲ ಎಂದು ಕೆ.ವಿ. ಚಂದ್ರಶೇಖರ್ ಹೇಳಿದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹಸ್ತಲಾಘವ ಮಾಡಬೇಡಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,076
ಇಂದಿನ ಅಂತ್ಯ	17,234
▲	158
ದಿನದ ಗರಿಷ್ಠ	17,245

ವಿನಿಮಯ ದರ

$ ಡಾಲರ್	73.06
£ ಪೌಂಡ್	100.79
€ ಯುರೊ	86.59
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹420
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1580 (1570)
ಸೋಯಾ (ರಿಫೈಂಡ್)	₹1390(1390)
ಸೂರ್ಯಕಾಂತಿ (ರಿಫೈಂಡ್)	₹1460(1460)
ಪಾಮೋಲಿನ್	₹1255 (1250)

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠಸಮಾರಾಧನೆ

ಶ್ರೀಮಾನ್ ರಾಮಚಂದ್ರಪ್ಪ
ಇವರ ವೈಕುಂಠಸಮಾರಾಧನೆಯನ್ನು
Mob:9108938180 / 9820332045

ಚಿರಸ್മರಣೆ

ಶ್ರೀ ಎ. ರಾಮಣ್ಣ
ನಿಧನ: 03-09-1989

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಸ್‌ಬಿಐನ ಎಕೊವ್ರ್ಯಾಪ್ ವರದಿ: 3,700 ಕಂಪನಿಗಳ ಹಣಕಾಸಿನ ಫಲಿತಾಂಶ ಪರಿಶೀಲನೆ

ಕುಸಿಯುತ್ತಿದೆ ಸಣ್ಣ ಕಂಪನಿಗಳ ಆದಾಯ

• ವಿಜಯ್ ಜೋಷಿ

ಬೆಂಗಳೂರು: ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇಕಡ 20.1ರಷ್ಟು ಬೆಳವಣಿಗೆ ಸಾಧಿಸಿದ್ದರೂ, ಸಣ್ಣ ಕಂಪನಿಗಳ ಪಾಲಿಗೆ ಎಲ್ಲವೂ ಹಿತಕರವಾಗಿ ಇಲ್ಲ ಎಂಬುದನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

'ವಾರ್ಷಿಕ ₹ 500 ಕೋಟಿವರೆಗೆ ವಹಿವಾಟು ಹೊಂದಿರುವ ಸಣ್ಣ ಪ್ರಮಾಣದ ಕಂಪನಿಗಳು ತಮ್ಮ ವೆಚ್ಚಗಳನ್ನು ನಿರಂತರವಾಗಿ ತಗ್ಗಿಸುತ್ತಿವೆ. ಈ ಕಂಪನಿಗಳು ತಮ್ಮ ನೌಕರರ ಮೇಲೆ ಮಾಡುವ ವೆಚ್ಚವನ್ನೂ ಕಡಿಮೆ ಮಾಡುತ್ತಿವೆ' ಎಂದು ಎಸ್‌ಬಿಐನ ಎಕೊವ್ರ್ಯಾಪ್ ವರದಿಯಲ್ಲಿ ಹೇಳಲಾಗಿದೆ.

ಕಂಪನಿಗಳ ಆದಾಯ ಹಾಗೂ ನೌಕರರ ಮೇಲಿನ ವೆಚ್ಚದಲ್ಲಿ ಏರಿಕೆ, ಇಳಿಕೆ

ವಾರ್ಷಿಕ ವಹಿವಾಟು	ಕಂಪನಿಗಳ ಸಂಖ್ಯೆ	ಆದಾಯ	ನೌಕರರ ಮೇಲಿನ ವೆಚ್ಚ
₹ 50 ಕೋಟಿವರೆಗೆ	2258	-13.6%	-5%
₹ 50 ಕೋಟಿಯಿಂದ ₹ 100 ಕೋಟಿ	339	-10.4%	-1.3%
₹ 100 ಕೋಟಿಯಿಂದ ₹ 250 ಕೋಟಿ	380	-13.9%	-1%
₹ 250 ಕೋಟಿಯಿಂದ ₹ 500 ಕೋಟಿ	244	-10.1%	-1%
₹500 ಕೋಟಿಯಿಂದ ₹1000 ಕೋಟಿ	206	-13.3%	3.4%
₹ 1000 ಕೋಟಿಗಿಂತ ಹೆಚ್ಚು	274	-7.9%	2.3%

* ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಜೂನ್ ತ್ರೈಮಾಸಿಕದ ಆದಾಯ ಮತ್ತು ವೆಚ್ಚವನ್ನು ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದ ಜೊತೆ ಹೋಲಿಕೆ ಮಾಡಲಾಗಿದೆ. (ಮಾಹಿತಿ ಮೂಲ: ಎಸ್‌ಬಿಐ ಎಕೊವ್ರ್ಯಾಪ್ ವರದಿ)

ದೇಶದ ಷೇರುಪೇಟೆಗಳಲ್ಲಿ ನೋಂದಾಯಿತ ಆಗಿರುವ ಒಟ್ಟು 3,700ಕ್ಕೂ ಹೆಚ್ಚಿನ ಕಂಪನಿಗಳ ಹಣಕಾಸಿನ ಫಲಿತಾಂಶವನ್ನು ಪರಿಶೀಲಿಸಿರುವ ಎಸ್‌ಬಿಐ, '₹ 50 ಕೋಟಿವರೆಗೆ ವಹಿವಾಟು ನಡೆಸುವ ಕಂಪನಿಗಳು ನೌಕರರಿಗಾಗಿ ಮಾಡುವ ವೆಚ್ಚದಲ್ಲಿ ಗರಿಷ್ಠ ಶೇಕಡ 5ರಷ್ಟು ಇಳಿಕೆ ಕಂಡುಬಂದಿದೆ. ಇದೇ ವೇಳೆ ದೊಡ್ಡ ಕಾರ್ಪೊರೇಟ್ ಕಂಪನಿಗಳು ನೌಕರರಿಗೆ ಮಾಡುವ ವೆಚ್ಚದಲ್ಲಿ ಶೇ 2ರಿಂದ ಶೇ 3ರವರೆಗೆ ಹೆಚ್ಚಳ ಆಗಿದೆ' ಎಂದು ಹೇಳಿದೆ.

ಈ ವರ್ಷದ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಗಳು ನೌಕರರಿಗಾಗಿ ಮಾಡಿದ್ದ ವೆಚ್ಚದೊಂದಿಗೆ ಜೂನ್ ತ್ರೈಮಾಸಿಕದ ವೆಚ್ಚವನ್ನು ಹೋಲಿಸಲಾಗಿದೆ. ಒಟ್ಟಾರೆಯಾಗಿ, ಎಲ್ಲ ವರ್ಗಗಳಿಗೆ ಸೇರಿದ ಕಂಪನಿಗಳನ್ನು ಪರಿಗಣಿಸಿದರೆ ಆದಾಯದಲ್ಲಿ ಶೇಕಡ 9ರಷ್ಟು ಇಳಿಕೆ ಆಗಿದೆ, ನೌಕರರಿಗಾಗಿ ಮಾಡುವ ವೆಚ್ಚದಲ್ಲಿ ಶೇ 2ರಷ್ಟು ಏರಿಕೆ ಆಗಿದೆ.

'ಜಿಡಿಪಿ ಬೆಳವಣಿಗೆಯು ದಾಖಲೆಯ ಮಟ್ಟದಲ್ಲಿ ಇದ್ದಿರಬಹುದು. ಆದರೆ ಎಲ್ಲ ಉದ್ಯಮ ವಲಯಗಳೂ ಚೇತರಿಕೆ ಕಂಡುಕೊಂಡಿಲ್ಲ. ಲಾಕ್‌ಡೌನ್ ನಂತರದಲ್ಲಿ ಉದ್ಯಮ ಚಟುವಟಿಕೆಗಳು ಹೆಚ್ಚಾದವು. ಆದರೆ, ಜನರ ಬಳಿ ಹಾಗೂ ವ್ಯಾಪಾರಿಗಳ ಬಳಿ ಯಾವೆಲ್ಲ ಉತ್ಪನ್ನಗಳು ಹೆಚ್ಚಿನ ಪ್ರಮಾಣದಲ್ಲಿ ಇರಲಿಲ್ಲವೋ ಅಂತಹ ಉತ್ಪನ್ನಗಳಿಗೆ ಮಾತ್ರ ಬೇಡಿಕೆ ಬಂದಿದೆ. ಇನ್ನುಳಿದ ಉತ್ಪನ್ನಗಳಿಗೆ ಬೇಡಿಕೆ ಸೃಷ್ಟಿಯಾಗಿಲ್ಲ, ಆ ವಲಯಗಳ ಉದ್ಯಮಗಳು ಚೇತರಿಕೆ ಕಂಡುಕೊಂಡಿಲ್ಲ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

'ನಾವು ಕೋವಿಡ್‌ಗೂ ಮೊದಲಿನ ಸ್ಥಿತಿಯನ್ನು ಇನ್ನೂ ತಲುಪಿಲ್ಲ. ಹಿಂದಿನ ವರ್ಷದ ಕುಸಿತಕ್ಕೆ ಹೋಲಿಸಿದರೆ ಈ ಬಾರಿ ಬೆಳವಣಿಗೆ ದಾಖಲಾಗಿದೆ. ಸೇವಾ ವಲಯದ ಎಲ್ಲ ಉದ್ಯಮಗಳು ಚೇತರಿಸಿಕೊಂಡಿಲ್ಲ. ಉದಾಹರಣೆಗೆ ಹೇಳುವುದಾದರೆ ಹೋಟೆಲ್, ಪ್ರವಾಸ, ಟ್ಯಾಕ್ಸಿ ಸೇವೆಗಳಗಳನ್ನು ಒಳಗೊಂಡಿರುವ ಆತಿಥ್ಯ ಉದ್ಯಮ, ಶಿಕ್ಷಣ ಉದ್ಯಮ, ಸಿನಿಮಾ ಮಂದಿರಗಳನ್ನು ಒಳಗೊಂಡ ಮನರಂಜನಾ ಉದ್ಯಮ ಬೆಳವಣಿಗೆ ಕಂಡಿಲ್ಲ' ಎಂದು ಹೇಳಿದರು. ಕೋವಿಡ್ ಮೂರನೆಯ ಅಲೆಯ ಭೀತಿ ಇರುವ ಕಾರಣದಿಂದಾಗಿ ಹೊಸ ಹೂಡಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿಲ್ಲ ಎಂದು ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

2-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1580)
ಒಂದು ವಾರದ ಡೆಲಿವರಿ	1585 (1575)
ಸೋಯಾ ಕಚ್ಚಾ	1345 (1350)
ಪಾಮ್ ವಾರದ ಡೆಲಿವರಿ	1253 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,050 (47,150)
ಬೆಳ್ಳಿ ಕೆ.ಜಿ 63,550 (63,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ರಫ್ತು ಶೇ 45.17ರಷ್ಟು ಏರಿಕೆ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಲ್ಲಿ ಭಾರತದ ರಫ್ತು ವಹಿವಾಟಿನಲ್ಲಿ ಶೇಕಡ 45.17ರಷ್ಟು ಹೆಚ್ಚಳ ಆಗಿದ್ದು, 33.14 ಅಮೆರಿಕನ್ ಡಾಲರ್‌ಗೆ (₹ 2.41 ಲಕ್ಷ ಕೋಟಿ) ತಲುಪಿದೆ. ಹಿಂದಿನ ವರ್ಷದ ಆಗಸ್ಟ್ ತಿಂಗಳಲ್ಲಿ ಭಾರತದಿಂದ ಆದ ರಫ್ತು ಮೌಲ್ಯ 22.83 ಬಿಲಿಯನ್ ಡಾಲರ್ (₹ 1.6 ಲಕ್ಷ ಕೋಟಿ) ಆಗಿತ್ತು.

ಆಗಸ್ಟ್‌ನಲ್ಲಿ ಆಗಿರುವ ಆಮದಿನ ಮೌಲ್ಯದಲ್ಲಿ ಶೇ 51.47ರಷ್ಟು ಹೆಚ್ಚಳ ಆಗಿದ್ದು, 47.01 ಬಿಲಿಯನ್ ಡಾಲರ್‌ಗೆ (₹ 2.99 ಲಕ್ಷ ಕೋಟಿ) ತಲುಪಿದೆ.

ಸೆಪ್ಟೆಂಬರ್‌ನಲ್ಲಿ ಶೇ 25 ತಯಾರಿಕೆ ಕಡಿತ: ಮಹೀಂದ್ರ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಕೊರತೆಯಿಂದಾಗಿ ಸೆಪ್ಟೆಂಬರ್‌ನಲ್ಲಿ ಏಳು ದಿನಗಳವರೆಗೆ ತಯಾರಿಕೆ ಮಾಡದೇ ಇರಲು ಮಹೀಂದ್ರ ಆ್ಯಂಡ್ ಮಹೀಂದ್ರ ನಿರ್ಧರಿಸಿದ್ದು, ಒಟ್ಟು ಉತ್ಪಾದನೆಯಲ್ಲಿ ಶೇ 25ರವರೆಗೂ ಕಡಿತ ಮಾಡುವುದಾಗಿ ಗುರುವಾರ ತಿಳಿಸಿದೆ.

ತನ್ನ ವಾಹನ ವಿಭಾಗವು ಸೆಮಿಕಂಡಕ್ಟರ್ ಕೊರತೆಯನ್ನು ನಿರಂತರವಾಗಿ ಎದುರಿಸುತ್ತಿದ್ದು, ವಿಶ್ವದ ಕೆಲವು ಭಾಗಗಳಲ್ಲಿ ಕೋವಿಡ್ ನಿಯಂತ್ರಿಸಲು ಹೇರಿದ ಲಾಕ್‌ಡೌನ್‌ನಿಂದಾಗಿ ಪೂರೈಕೆಯು ಕೊರತೆಯೂ ಎದುರಾಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ಆಗಸ್ಟ್‌ನಲ್ಲಿ ಕಂಪನಿಯು 15,973 ಪ್ರಯಾಣಿಕ ವಾಹನಗಳನ್ನು ಮಾರಾಟ ಮಾಡಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ 13,651 ವಾಹನಗಳನ್ನು ಮಾರಾಟ ಮಾಡಿತ್ತು.

ಸೆಮಿಕಂಡಕ್ಟರ್ ಕೊರತೆಯಿಂದಾಗಿ ಸೆಪ್ಟೆಂಬರ್‌ನಲ್ಲಿ ವಾಹನಗಳ ಒಟ್ಟಾರೆ ತಯಾರಿಕೆಯು ಎಲ್ಲಾ ಘಟಕಗಳಲ್ಲಿ ಕೇವಲ ಶೇ 40ರಷ್ಟು ಇರುವ ನಿರೀಕ್ಷೆ ಮಾಡಲಾಗಿದೆ ಎಂದು ಹೇಳಿದೆ.

ಹುಂಡೈ ಐ20 ಎನ್ ಲೈನ್ ಬಿಡುಗಡೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯು 'ಐ20 ಎನ್ ಲೈನ್' ಕಾರನ್ನು ಗುರುವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆಯು ₹ 9.84 ಲಕ್ಷದಿಂದ ₹ 11.76 ಲಕ್ಷದವರೆಗೆ ಇದೆ.

ಈ ಕಾರು 1 ಲೀಟರ್ ಟರ್ಬೊ ಪೆಟ್ರೋಲ್ ಎಂಜಿನ್ ಹೊಂದಿದ್ದು, 88.3 ಕಿಲೋವಾಟ್ ಶಕ್ತಿ ಉತ್ಪಾದಿಸಬಲ್ಲದು. ಎನ್6 ಮತ್ತು ಎನ್8 ಆವೃತ್ತಿಗಳಲ್ಲಿ ಐ20 ಎನ್ ಲೈನ್ ಪರಿಚಯಿಸಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮೋಟಾರ್‌ಸ್ಪೋರ್ಟ್ಸ್‌ನಿಂದ ಸ್ಫೂರ್ತಿ ಪಡೆದು ಈ ಕಾರನ್ನು ವಿನ್ಯಾಸಗೊಳಿಸಲಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್. ಕಿಮ್ ತಿಳಿಸಿದ್ದಾರೆ.

ಎಲೆಕ್ಟ್ರಿಕ್ ಸ್ಟೆಬಿಲಿಟಿ ಕಂಟ್ರೋಲ್ (ಇಎಸ್‌ಸಿ), ಹಿಲ್ ಅಸಿಸ್ಟ್ ಕಂಟ್ರೋಲ್‌ನಂತಹ (ಎಚ್‌ಎಸಿ) ಸುರಕ್ಷತಾ ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ ಎಂದು ಕಂಪನಿಯು ಹೇಳಿದೆ.

ಸ್ಮಾರ್ಟ್ ಎಲೆಕ್ಟ್ರಿಕ್ ಸನ್‌ರೂಫ್ ಇದ್ದು, ಚಾಲಕನ ಧ್ವನಿಯನ್ನು ಆಧರಿಸಿ ಕಾರ್ಯನಿರ್ವಹಿಸುತ್ತದೆ.ಅಲ್ಲದೆ, ಡ್ರೈವರ್ ವಿಂಡೊ ಅನ್ನೂ ನಿರ್ವಹಿಸುವ ಜೊತೆಗೆ ಹಲವು ಕೆಲಸಗಳನ್ನು ಮಾಡಲಿದೆ ಎಂದು ಕಂಪನಿ ತಿಳಿಸಿದೆ.

ಪಿ.ಎಫ್. ತೆರಿಗೆ: ನಿಯಮ ಪ್ರಕಟಿಸಿದ ಕೇಂದ್ರ

ನವದೆಹಲಿ (ಪಿಟಿಐ): ಕಾರ್ಮಿಕರ ಭವಿಷ್ಯನಿಧಿಗೆ (ಪಿ.ಎಫ್) ನೌಕರರ ಕಡೆಯಿಂದ ಜಮಾ ಆಗುವ ವಾರ್ಷಿಕ ₹ 2.5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಮೇಲಿನ ಬಡ್ಡಿಗೆ ತೆರಿಗೆ ಲೆಕ್ಕ ಹೇಗೆ ಎಂಬ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯವು ನಿಯಮಗಳನ್ನು ಪ್ರಕಟಿಸಿದೆ.

2021–22ನೇ ಸಾಲಿನ ಬಜೆಟ್ ಭಾಷಣದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪಿ.ಎಫ್.ನಲ್ಲಿ ತೆರಿಗೆಯಿಂದ ವಿನಾಯಿತಿ ಇರುವ ಬಡ್ಡಿಗೆ ಮಿತಿ ಹಾಕುವುದಾಗಿ ಹೇಳಿದ್ದರು. ತೆರಿಗೆ ವ್ಯಾಪ್ತಿಗೆ ಬರುವ ಬಡ್ಡಿ ಲೆಕ್ಕಹಾಕುವುದು ಹೇಗೆ ಎಂಬ ಬಗ್ಗೆ ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಬುಧವಾರ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ತೆರಿಗೆ ಲೆಕ್ಕಹಾಕುವ ಉದ್ದೇಶಕ್ಕೆ ಪಿ.ಎಫ್. ಖಾತೆಯಲ್ಲಿ ಪ್ರತ್ಯೇಕ ಖಾತೆಯೊಂದನ್ನು ಮಾಡಿ, ನೌಕರರ ಕಡೆಯಿಂದ ಬರುವ ತೆರಿಗೆ ವ್ಯಾಪ್ತಿಗೆ ಒಳಪಡುವ ಹಾಗೂ ತೆರಿಗೆ ವ್ಯಾಪ್ತಿಗೆ ಒಳಪಡದ ಕೊಡುಗೆ ಮೊತ್ತವನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕು ಎಂದು ನಿಯಮಗಳಲ್ಲಿ ಹೇಳಲಾಗಿದೆ.

ಕಂಪನಿಗಳ ಕಡೆಯಿಂದ ಪಿ.ಎಫ್. ಖಾತೆಗೆ ಹಣ ಜಮಾ ಆಗುತ್ತಿದ್ದರೆ, ಅಂತಹ ಕಂಪನಿಗಳ ನೌಕರರ ₹ 2.5 ಲಕ್ಷದವರೆಗಿನ ಮೊತ್ತದ ಮೇಲಿನ ಬಡ್ಡಿಗೆ ತೆರಿಗೆ ಇಲ್ಲ. ನೌಕರಿ ನೀಡಿದವರಿಂದ ಪಿ.ಎಫ್. ಖಾತೆಗೆ ಹಣ ಜಮಾ ಆಗುತ್ತಿಲ್ಲವಾದರೆ, ಅಂತಹ ಕಂಪನಿಗಳ ನೌಕರರ ₹ 5 ಲಕ್ಷದವರೆಗಿನ ಕೊಡುಗೆಯ ಮೇಲಿನ ಬಡ್ಡಿಗೆ ತೆರಿಗೆ ವಿನಾಯಿತಿ ಇರಲಿದೆ ಎಂದು ತೆರಿಗೆ ಸಲಹಾ ಸಂಸ್ಥೆ ನಂಗಿಯಾ ಆ್ಯಂಡ್ ಕಂಪನಿಯ ಪಾಲುದಾರ ಶೈಲೇಶ್ ಕುಮಾರ್ ತಿಳಿಸಿದರು.

ನಿಫ್ಟಿ, ಸೆನ್ಸೆಕ್ಸ್: ದಾಖಲೆಯ ಓಟ ಮುಂದುವರಿಕೆ

ಮುಂಬೈ (ಪಿಟಿಐ): ದೇಶದ ಷೇರು ಮಾರುಕಟ್ಟೆಗಳಲ್ಲಿ ಗುರುವಾರ ಗೂಳಿಯ ಓಟ ಕಂಡುಬಂತು. ಬುಧವಾರ ಇಳಿಕೆಯ ಹಾದಿಯಲ್ಲಿ ಸಾಗಿದ್ದ ಷೇರುಪೇಟೆಗಳು ಗುರುವಾರ ಮತ್ತೆ ಏರುಗತಿಯನ್ನು ಹಿಡಿದವು.

ಐ.ಟಿ., ಎಫ್‌ಎಂಸಿಜಿ ಮತ್ತು ಬ್ಯಾಂಕ್ ಷೇರುಗಳ ಖರೀದಿಯು ಜೋರಾಗಿ ನಡೆದ ಪರಿಣಾಮವಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 514 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 157 ಅಂಶ ಏರಿಕೆ ಕಂಡಿತು.

ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 57,852 ಅಂಶಗಳಲ್ಲಿ, ನಿಫ್ಟಿಯು ಇದುವರೆಗಿನ ಗರಿಷ್ಠ ಮಟ್ಟವಾದ 17,234 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದವು. ಬಿಎಸ್‌ಇ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕೂಡ ಏರಿಕೆ ಕಂಡವು.

ಗುರುವಾರದ ವಹಿವಾಟಿನ ಕೊನೆಯಲ್ಲಿ, ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಇದುವರೆಗಿನ ಗರಿಷ್ಠ ಮಟ್ಟವಾದ ₹ 252.68 ಲಕ್ಷ ಕೋಟಿಗೆ ಏರಿಕೆ ಆಗಿದೆ. ಹೂಡಿಕೆದಾರರ ಸಂಪತ್ತು ₹ 2.53 ಲಕ್ಷ ಕೋಟಿಯಷ್ಟು ಜಾಸ್ತಿ ಆಗಿದೆ.

'ಬುಧವಾರ ತುಸು ಕುಸಿತ ಕಂಡಿದ್ದ ಮಾರುಕಟ್ಟೆಗಳು ಗುರುವಾರ ಮತ್ತೆ ಏರಿಕೆಯ ಹಾದಿಗೆ ಮರಳಿವೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಅಮೆಜಾನ್: 8 ಸಾವಿರ ಜನರ ನೇಮಕ

ಮುಂಬೈ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ 35 ನಗರಗಳಲ್ಲಿ ಒಟ್ಟು ಎಂಟು ಸಾವಿರ ಜನರನ್ನು ನೇಮಕ ಮಾಡಿಕೊಳ್ಳುವ ಆಲೋಚನೆಯನ್ನು ಅಮೆಜಾನ್ ಹೊಂದಿದೆ ಎಂದು ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಹೈದರಾಬಾದ್, ಚೆನ್ನೈ, ಗುರುಗ್ರಾಮ, ಮುಂಬೈ, ಕೋಲ್ಕತ್ತ, ನೊಯಿಡಾ, ಅಮೃತಸರ, ಅಹಮದಾಬಾದ್, ಕೊಯಮತ್ತೂರು, ಜೈಪುರ, ಕಾನ್ಪುರ, ಲುಧಿಯಾನಾ ಸೇರಿದಂತೆ ಒಟ್ಟು 35 ನಗರಗಳಲ್ಲಿ ಈ ನೇಮಕಾತಿಗಳು ನಡೆಯಲಿವೆ' ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿ ದೀಪ್ತಿ ವರ್ಮಾ ತಿಳಿಸಿದ್ದಾರೆ.

ಅಮೆಜಾನ್ ಕಂಪನಿಯು ದೇಶದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈಗಾಗಲೇ 10 ಲಕ್ಷ ಉದ್ಯೋಗ ಸೃಷ್ಟಿಸಿದೆ. 2025ರ ವೇಳೆಗೆ ನೇರವಾಗಿ ಹಾಗೂ ಪರೋಕ್ಷವಾಗಿ ಒಟ್ಟು 20 ಲಕ್ಷ ಉದ್ಯೋಗ ಸೃಷ್ಟಿಸುವ ಉದ್ದೇಶವನ್ನು ಹೊಂದಿದೆ. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿಯೂ ಕಂಪನಿಯು ಒಟ್ಟು ಮೂರು ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಸಿದೆ ಎಂದು ಅವರು ವಿವರಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	405
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46500
ಹಳತು	42500-50500
ಕುಮಟ	
ಚಿಪ್ಪು	31199-37256
ಕೋಕ	21509-35291
ಹಳೆಚಾಲಿ	42200-43189
ಹೊಸಚಾಲಿ	38689-41899
ಪುತ್ತೂರು	
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	33499-36409
ಚಾಲಿ	40859-42099
ಕೋಕ	33012-35012
ಕೆಂಪುಗೋಟು	28012-34099
ರಾಶಿ	43279-48509
ತಟ್ಟಿಬೆಟ್ಟೆ	37590-44009
ಶಿರಸಿ	
ಬೆಟ್ಟೆ	20669-47858
ಬಿಳಿಗೋಟು	29555-38286
ಚಾಲಿ	39599-42518
ರಾಶಿ	41699-48599
ಯಲ್ಲಾಪುರ	
ಬಿಳಿಗೋಟು	34216-35899
ಚಾಲಿ	37091-42369
ಕೋಕ	24899-33829
ಕೆಂಪುಗೋಟು	33405-33869
ರಾಶಿ	44899-49561
ತಟ್ಟಿಬೆಟ್ಟೆ	38599-44390
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	51069-57099
ಗೊರಬಲು	31021-40569
ರಾಶಿ	49120-57099
ಸರಕು	53069-77451
ಸಾಗರ	
ಬಿಳಿಗೋಟು	20699-37800
ಚಾಲಿ	39001-41899
ಕೋಕ	30099-40409
ಕೆಂಪುಗೋಟು	30299-43899
ರಾಶಿ	40199-55599
ಸಿಪ್ಪೆಗೋಟು	6889-24409
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	239-428
ದ್ವಿತಳಿ (ಬಿ.ವಿ)	256-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14100	13000	13100	195.65 ಸೆಂಟ್ಸ್
ಎಸಿ	6300	4800	5275	
ಆರ್‌ಪಿ	6250	5700	6250	ಲಂಡನ್
ಆರ್‌ಸಿ	3560	3500	3630	2060 ಡಾಲರ್ಸ್

ಮುಂದಿನ ವರ್ಷ 'ಇನ್ವೆಸ್ಟ್ ಕರ್ನಾಟಕ'

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯಕ್ಕೆ ಉದ್ಯಮಿಗಳನ್ನು ಆಕರ್ಷಿಸಲು ಮುಂದಿನ ವರ್ಷ 'ಇನ್ವೆಸ್ಟ್ ಕರ್ನಾಟಕ' ನಡೆಸಲಾಗುವುದು. ಮುಖ್ಯಮಂತ್ರಿ ಜತೆ ಚರ್ಚಿಸಿ ಶೀಘ್ರವೇ ದಿನಾಂಕ ನಿಗದಿಪಡಿಸಲಾಗುವುದು ಎಂದು ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಹೇಳಿದರು.

ನಗರದ ಹೊರ ವಲಯದ ವಸಂತನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಗುರುವಾರ ಭೇಟಿ ನೀಡಿ, ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಇನ್ವೆಸ್ಟ್ ಕರ್ನಾಟಕ' ನಡೆಸಿದರೆ ರಾಜ್ಯಕ್ಕೆ ಬಂಡವಾಳ ಹರಿದು ಬರಲಿದ್ದು, ಉದ್ಯಮಗಳು ಆರಂಭವಾಗಲಿವೆ. ಇದರಿಂದ ಉದ್ಯೋಗ ಅವಕಾಶಗಳೂ ಹೆಚ್ಚಾಗಲಿದ್ದು, ಆ ಮೂಲಕ 5 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ಸಾಕಷ್ಟು ಸಂಖ್ಯೆಯ ಕೈಗಾರಿಕೆಗಳು ಬರಬೇಕು. ಉದ್ಯೋಗ ಸೃಷ್ಟಿಯಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ದಾಖಲೆಯ ಉತ್ಪಾದನೆ: ಎನ್‌ಎಂಡಿಸಿ

ಪ್ರಜಾವಾಣಿ ವಾರ್ತೆ

ಸುಮಿತ್ ದೇಬ್

ಬೆಂಗಳೂರು: ಕಬ್ಬಿಣದ ಅದಿರು ಉತ್ಪದನೆ ಮತ್ತು ಮಾರಾಟದಲ್ಲಿ ಆಗಸ್ಟ್ ತಿಂಗಳಿನಲ್ಲಿಯೂ ದಾಖಲೆ ಆಗಿದೆ ಎಂದು ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ತಿಳಿಸಿದೆ. ಆಗಸ್ಟ್‌ನಲ್ಲಿ 30.6 ಲಕ್ಷ ಟನ್ ಕಬ್ಬಿಣದ ಅದಿರು ಉತ್ಪಾದನೆ ಮಾಡಲಾಗಿದೆ. ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಶೇಕಡ 89ರಷ್ಟು ಏರಿಕೆ ಆಗಿದೆ.

ಕಂಪನಿಯ ಆರು ದಶಕಗಳ ಇತಿಹಾಸದಲ್ಲಿನ ದಾಖಲೆಯ ಉತ್ಪಾದನೆ ಇದಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಕಬ್ಬಿಣದ ಅದಿರು ಮಾರಾಟವು 17.9 ಲಕ್ಷ ಟನ್‌ಗಳಿಂದ 29.1 ಲಕ್ಷ ಟನ್‌ಗಳಿಗೆ, ಅಂದರೆ ಶೇ 63ರಷ್ಟು, ಏರಿಕೆ ಆಗಿದೆ ಎಂದು ಅದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಆಗಸ್ಟ್‌ವರೆಗೆ ಉತ್ಪಾದನೆಯು ಶೇ 44ರಷ್ಟು ಹಾಗೂ ಮಾರಾಟವು ಶೇ 45ರಷ್ಟು ಹೆಚ್ಚಾಗಿದೆ.

'ಪ್ರಸಕ್ತ ಹಣಕಾಸು ವರ್ಷದ ಮೊದಲ ಐದು ತಿಂಗಳುಗಳಲ್ಲಿ ನಮ್ಮ ಸಾಧನೆಯು ಉತ್ತೇಜನಕಾರಿ ಆಗಿದೆ. ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇದು ವಿಶ್ವಾಸ ಹೆಚ್ಚಿಸಲಿದೆ' ಎಂದು ಕಂಪನಿಯ ಸಿಎಂಡಿ ಸುಮಿತ್ ದೇಬ್ ಹೇಳಿದ್ದಾರೆ.

ಪಿಯಾಜಿಯೊದಿಂದ ಹೊಸ ಸೂಪರ್‌ಬೈಕ್ಸ್

ಬೆಂಗಳೂರು: ಪಿಯಾಜಿಯೊ ಕಂಪನಿಯು ಹೊಸ ಶ್ರೇಣಿಯ ಸೂಪರ್‌ಬೈಕ್‌ಗಳನ್ನು ಭಾರತದ ಮಾರುಕಟ್ಟೆಗೆ ಗುರುವಾರ ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಏಪ್ರಿಲಿಯಾ ಆರ್660, ಟ್ಯೂನೊ660 ಏಪ್ರಿಲಿಯಾ ಆರ್‌ಎಸ್‌ವಿ4, ಟ್ಯೂನೊ ವಿ4 ಹಾಗೂ ಮೊಟೊ ಗುಜ್ ವಿ85ಟಿಟಿ ಸೂಪರ್ ಬೈಕ್‌ಗಳನ್ನು ಬಿಡುಗಡೆ ಮಾಡಲಾಯಿತು. ಎಕ್ಸ್‌ಷೋರೂಂ ಬೆಲೆ ₹ 13.09 ಲಕ್ಷದಿಂದ ಆರಂಭವಾಗುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503
ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956
Wanted
ನೇರನೇಮಕಾತಿ 7TH,SSLC, PUC, Degree,ITI ನವರು TOYOTA, TATA ಮೋಟಾರ್ಸ್, ಬಿಗ್‌ಬಜಾರ್ಸ್, TVS ಗಳಿಗೆ 18,000-60,000/- ವಸತಿಯೂಟವಿದೆ. 7795837319, 9901312461
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337
ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.
General
ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010
ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂಪರ್ಕಿಸಿರಿ 9980814578, 9980812378
ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/-ದವರೆಗೆ. 7829256781, 7829215432
TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856
ಮನೆ ಕೆಲಸಕ್ಕೆ, ಅಡುಗೆಗೆ, ಮಕ್ಕಳನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಬಳ: 15,000-20,000 ಸಾವಿರ ಸಂಪರ್ಕಿಸಿ: 9326447402, 9892396441
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ.ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444
ಶಿಕ್ಷಣ
Admission
ಪ್ರವೇಶ ಪ್ರಕಟಣೆ D. PHARMA Qualification : PUC Science MANASA EDUCATION TRUST L.K.Complex, 1st Floor, Ashoka Road, 1st Cross, Davanagere. 9740258276
ಸಮಾಜಸೇವೆ
Old Age Home
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222
ಪ್ರವಾಸ
Travel
ಅಂಡಮಾನ್ ಹವಳದ್ವೀಪ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. Royal Package. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429.
★ಶ್ರೇಯಸ್ ಟೂರ್ಸ್★ 18.09.2021 15ದಿನಗಳು 32,000 ಅಖಂಡ ಮಧ್ಯಪ್ರದೇಶ, ಉಜ್ಜಯನಿ,ಓಂಕಾರೇಶ್ವರ, ಇಂದೋರ್,ಮಾಂಡು, ಮಹೇಶ್ವರ,ಪಚಮಾಡಿ, ಭೂಪಾಲ್,ಸಾಂಚಿ,ಜಬಲ್‌ಪುರ, ಬೇಡಾಗಾಟ್,ಅಮರಕಂಟಕ, ಚಿತ್ರಕೂಟ,ಖಜಾರಾಹೋ, ಓರ್ಛಾ,ಗ್ವಾಲಿಯರ್. 21.09.2021 10ದಿನಗಳು 22,000 ಕಾಶಿ,ನೈಮಿಷಾರಣ್ಯ, ಅಯೋಧ್ಯ,ಚಿತ್ರಕೂಟ,ಪ್ರಯಾಗ್ ರಾಜ್,ಗಯಾ,ಬುದ್ಧಗಯಾ, ದೇವಘರ್,ರಾಜಗಿರ್. 06.11.2021 ಅಖಂಡ ಗುಜರಾತ್ ರಾಜ್ಯ ಪ್ರವಾಸ, 06.11.2021 ಅಖಂಡ ರಾಜಸ್ಥಾನ್ ರಾಜ್ಯ ಪ್ರವಾಸ. 8073824856/ 9902050065/ 9206979202
ಭವಿಷ್ಯ
Astrology
★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008''
★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್ ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623
★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.
CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable
SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ತಾಲಿಬಾನ್ ಸಚಿವ ಸಂಪುಟದಲ್ಲಿ ಸ್ತ್ರೀ ಪ್ರಾತಿನಿಧ್ಯ ಅನುಮಾನ ● ಹೆರಾತ್ ನಗರದಲ್ಲಿ ಪ್ರತಿಭಟನೆ ● ಇನ್ನೂ ನಿಂತಿಲ್ಲ ದೇಶ ತೊರೆಯುವ ಧಾವಂತ

ಹಕ್ಕಿಗಾಗಿ ಬೀದಿಗಿಳಿದ ಅಫ್ಗಾನಿಸ್ತಾನ ಮಹಿಳೆ

ಕಾಬೂಲ್ (ಎಎಫ್‌ಪಿ): ಹೊಸ ಸರ್ಕಾರದಲ್ಲಿ ಮಹಿಳೆಯರಿಗೆ ಸ್ಥಾನ ನೀಡುವ ವಿಚಾರದಲ್ಲಿ ತಾಲಿಬಾನ್‌ಗೆ ಸ್ಪಷ್ಟತೆ ಇಲ್ಲ.

ಮಹಿಳೆಯರಿಗೆ ಹೊಸ ಸರ್ಕಾರದಲ್ಲಿ ಸ್ಥಾನ ಇರಲಿದೆ. ಹಾಗೆಯೇ, ಅಫ್ಗಾನಿಸ್ತಾನದ ಎಲ್ಲ ಬುಡಕಟ್ಟುಗಳಿಗೂ ಪ್ರಾತಿನಿಧ್ಯ ಸಿಗಲಿದೆ ಎಂದು ತಾಲಿಬಾನ್‌ನ ಉಪನಾಯಕ ಶೇರ್ ಮೊಹಮ್ಮದ್ ಅಬ್ಬಾಸ್ ಸ್ಟಾನಿಕ್‌ಜೈ ವಿದೇಶಿ ಮಾಧ್ಯಮಗಳ ಜತೆಗೆ ಮಾತನಾಡುತ್ತಾ ದೋಹಾದಲ್ಲಿ ಹೇಳಿದ್ದರು. ಬಿಬಿಸಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಈ ಹೇಳಿಕೆಯನ್ನು ಅವರು ಅಲ್ಲಗಳೆದಿದ್ದಾರೆ.

ಮಹಿಳೆಯರು ಕೆಲಸ ಮುಂದುವರಿಸಲು ಅವಕಾಶ ದೊರೆಯಲಿದೆ. ಆದರೆ, ಸಚಿವ ಸಂಪುಟದಲ್ಲಿ ಅವರಿಗೆ ಸ್ಥಾನ ದೊರೆಯದು. ಈಗ ಮಾತ್ರವಲ್ಲ, ಮುಂದೆಯೂ ಸರ್ಕಾರದ ಯಾವುದೇ ಉನ್ನತ ಹುದ್ದೆಗೆ ಏರಲು ಮಹಿಳೆಯರಿಗೆ ಅವಕಾಶ ಇಲ್ಲ ಎಂದು ಅವರು ಹೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಕಳೆದ 20 ವರ್ಷಗಳಲ್ಲಿ ಇದ್ದ ಸರ್ಕಾರಗಳ ಭಾಗವಾಗಿದ್ದ ಯಾರನ್ನೂ ಹೊಸ ಸರ್ಕಾರಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ತಾಲಿಬಾನ್ ನೀತಿಗಳ ವಿರುದ್ಧ ಮಹಿಳೆಯರೇ ಬೀದಿಗಿಳಿದು ಪ್ರತಿಭಟನೆ ನಡೆಸಿದ ಅಚ್ಚರಿಯ ವಿದ್ಯಮಾನಕ್ಕೂ ಅಫ್ಗಾನಿಸ್ತಾನ ಸಾಕ್ಷಿಯಾಗಿದೆ. ದೇಶದ ಪಶ್ಚಿಮ ಭಾಗದಲ್ಲಿರುವ ನಗರ ಹೆರಾತ್‌ನಲ್ಲಿ ಸುಮಾರು 50 ಮಹಿಳೆಯರು ಬೀದಿಗಿಳಿದು ಕೆಲಸ ಮಾಡುವ ಹಕ್ಕು ಕಸಿದುಕೊಳ್ಳಬಾರದು ಎಂದು ಪ್ರತಿಭಟನೆ ನಡೆಸಿದರು. ಸರ್ಕಾರದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಇರಬೇಕು ಎಂಬ ಬೇಡಿಕೆಯನ್ನೂ ಅವರು ಮುಂದಿರಿಸಿದ್ದಾರೆ.

ಹೆರಾತ್ ನಗರದಲ್ಲಿ ಮಹಿಳೆಯರ ಪ್ರತಿಭಟನೆ ಎಎಫ್‌ಪಿ ಚಿತ್ರ

‘ಶಿಕ್ಷಣ ಪಡೆಯುವುದು, ಕೆಲಸ ಮಾಡುವುದು ನಮ್ಮ ಹಕ್ಕು. ನಮಗೂ ಬೇಕು ಭದ್ರತೆ’ ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಕೂಗಿದ್ದಾರೆ. ‘ನಾವು ಒಗ್ಗಟ್ಟಾಗಿದ್ದೇವೆ, ನಮಗೆ ಭಯ ಇಲ್ಲ’ ಎಂದೂ ಅವರು ಹೇಳಿದ್ದಾರೆ.

ಹೆರಾತ್, ಇತರ ನಗರಗಳಿಗೆ ಹೋಲಿಸಿದರೆ ಹೆಚ್ಚು ಮುಂದುವರಿದ ಪ್ರದೇಶ. ಇದು ಇರಾನ್ ಗಡಿ ಸಮೀಪದಲ್ಲಿ ಪ್ರಾಚೀನ ರೇಷ್ಮೆ ಮಾರ್ಗದಲ್ಲಿರುವ ನಗರವಾಗಿದೆ. ಇಲ್ಲಿ, ಹೆಣ್ಣು ಮಕ್ಕಳು ಆಗಲೇ ಶಾಲೆಗಳಿಗೆ ಮರಳಿದ್ದಾರೆ.

ತಾಲಿಬಾನ್ ಆಡಳಿತದಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಭಾರಿ ಕಳವಳ ವ್ಯಕ್ತವಾಗಿದೆ.

ಮಹಿಳೆಯರ ಪರಿಸ್ಥಿತಿ ಕೆಟ್ಟದಾಗಿದೆ. ಮಹಿಳೆಯರಿಗಾಗಿ ಏನನ್ನಾದರೂ ಮಾಡಿ ಎಂಬುದು ಜಾಗತಿಕ ಸಮುದಾಯಕ್ಕೆ ನನ್ನ ಮೊರೆ
ಬೆಹೆಷ್ತಾ ಅರ್ಘಂಡ್, ತಾಲಿಬಾನ್ ಅಧಿಕಾರಿಯ ಸಂದರ್ಶನ ಮಾಡಿದ ಅಫ್ಗಾನಿಸ್ತಾನದ ಮೊದಲ ಪತ್ರಕರ್ತೆ

ತಾಲಿಬಾನ್ ಸಭೆ, ಸಮಾವೇಶಗಳಲ್ಲಿ ಮಹಿಳೆಯರೇ ಕಾಣಿಸುತ್ತಿಲ್ಲ. ತಾಲಿಬಾನ್‌ನವರು ನಮ್ಮ ಜತೆ ಸಮಾಲೋಚನೆ ನಡೆಸಬೇಕು
ಬಶೀರಾ ತಹೇರಿ, ಪ್ರತಿಭಟನಕಾರ್ತಿ

ತಾಲಿಬಾನ್ ಸರ್ಕಾರ ಇಂದಿನಿಂದ?
ಧಾರ್ಮಿಕ ಮುಖಂಡ ಹೈಬತ್‌ಉಲ್ಲಾ ಸರ್ವೋಚ್ಚ ನಾಯಕ

ಕಾಬೂಲ್, ಪೆಶಾವರ (ರಾಯಿಟರ್ಸ್/ ಪಿಟಿಐ): ಅಫ್ಗಾನಿಸ್ತಾನದ ತಾಲಿಬಾನ್ ನೇತೃತ್ವದ ಸರ್ಕಾರ ರಚನೆಯ ಸಿದ್ಧತೆಯ ಬಹುತೇಕ ಪೂರ್ಣಗೊಂಡಿದೆ. ಇರಾನ್ ನಾಯಕತ್ವದ ಮಾದರಿಯನ್ನು ತಾಲಿಬಾನ್ ಕೂಡ ಅನುಸರಿಸಲಿದೆ ಎಂದು ತಿಳಿದು ಬಂದಿದೆ. ತಾಲಿಬಾನ್‌ನ ಅತ್ಯುನ್ನತ ಧಾರ್ಮಿಕ ನಾಯಕ ಹೈಬತ್‌ಉಲ್ಲಾ ಅಖುಂಜಾದಾ, ಅಫ್ಗಾನಿಸ್ತಾನದ ಸರ್ವೋಚ್ಚ ನಾಯಕ ಎನಿಸಿಕೊಳ್ಳಲಿದ್ದಾರೆ ಎಂದು ತಾಲಿಬಾನ್ ಮುಖಂಡರೊಬ್ಬರು ತಿಳಿಸಿದ್ದಾರೆ.

ಹೈಬತ್‌ಉಲ್ಲಾ ಕೈಕೆಳಗೆ ಮೂವರು ನಾಯಕರು ಇರಲಿದ್ದಾರೆ. ಅವರೆಂದರೆ, ಮೌಲವಿ ಯಾಕೂಬ್ (ತಾಲಿಬಾನ್‌ನ ಸ್ಥಾಪಕ ಮುಲ್ಲಾ ಒಮರ್‌ನ ಮಗ), ಸಿರಾಜುದ್ದೀನ್ ಹಕ್ಕಾನಿ (ಪ್ರಭಾವಿ ಹಕ್ಕಾನಿ ಗುಂಪಿನ ನಾಯಕ) ಮತ್ತು ಅಬ್ದುಲ್ ಘನಿ ಬರದರ್ (ತಾಲಿಬಾನ್‌ನ ಸ್ಥಾಪಕ ಸದಸ್ಯ).

‘ಸಮಾಲೋಚನೆಗಳು ಬಹುತೇಕ ಪೂರ್ಣಗೊಂಡಿವೆ. ಸಚಿವ ಸಂಪುಟದ ಬಗೆಗಿನ ಚರ್ಚೆಯೂ ಮುಗಿದಿದೆ’ ಎಂದು ತಾಲಿಬಾನ್‌ನ ವಾರ್ತಾ ಮತ್ತು ಸಂಸ್ಕೃತಿ ಆಯೋಗದ ಹಿರಿಯ ಅಧಿಕಾರಿ ಮುಫ್ತಿ ಇನಾಮುಲ್ಲಾ ಸಮಂಗನಿ ಹೇಳಿದ್ದಾರೆ.

ಹೊಸ ಸರ್ಕಾರ ರಚನೆಯ ಬಗ್ಗೆ ಮೂರು ದಿನಗಳಲ್ಲಿ ಕಾಬೂಲ್‌ನಲ್ಲಿ ಘೋಷಣೆ ಪ್ರಕಟವಾಗಲಿದೆ. ಶುಕ್ರವಾರ ಮಧ್ಯಾಹ್ನ ನಂತರವೇ ಪ್ರಕಟವಾಗುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ.

ಏನಿದು ಇರಾನ್ ಮಾದರಿ?

ಸರ್ವೋಚ್ಚ ನಾಯಕ ಎಂದು ಪರಿಗಣಿಸಲಾಗುವ ವ್ಯಕ್ತಿಯು ದೇಶದ ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರದ ಅತ್ಯುನ್ನತ ನಾಯಕ ಆಗಿರುತ್ತಾನೆ. ದೇಶದ ಅಧ್ಯಕ್ಷರಿಗಿಂತಲೂ ಈತನಿಗೆ ಮೇಲಿನ ಸ್ಥಾನ ಇರುತ್ತದೆ. ಸೇನೆ, ಸರ್ಕಾರ, ನ್ಯಾಯಾಂಗ ಎಲ್ಲದರ ಮುಖ್ಯಸ್ಥರನ್ನು ಈತ ನೇಮಿಸುತ್ತಾನೆ. ರಾಜಕೀಯ, ಧಾರ್ಮಿಕ, ಸೇನೆಗೆ ಸಂಬಂಧಿಸಿದ ಎಲ್ಲ ವ್ಯವಹಾರಗಳಲ್ಲಿ ಸರ್ವೋಚ್ಚ ನಾಯಕನ ಮಾತೇ ಅಂತಿಮ.

ಆಡಳಿತ ವ್ಯವಸ್ಥೆ ಹೇಗೆ?

ಪ್ರಾಂತ್ಯಗಳ ಆಳ್ವಿಕೆಯನ್ನು ಗವರ್ನರ್‌ಗಳು ನೋಡಿಕೊಳ್ಳಲಿದ್ದಾರೆ. ಜಿಲ್ಲೆಗಳಿಗೆ ಜಿಲ್ಲಾ ಗವರ್ನರ್‌ಗಳು ಆಡಳಿತಾಧಿಕಾರಿಗಳಾಗಿರುತ್ತಾರೆ. ಬಹುತೇಕ ಪ್ರಾಂತ್ಯಗಳ ಗವರ್ನರ್‌ಗಳ ನೇಮಕವನ್ನು ತಾಲಿಬಾನ್ ಪೂರ್ಣಗೊಳಿಸಿದೆ. ಪ್ರಾಂತ್ಯ ಮತ್ತು ಜಿಲ್ಲೆಗಳ ಪೊಲೀಸ್ ಮುಖ್ಯಸ್ಥ ಹುದ್ದೆಗಳ ನೇಮಕವೂ ಆಗಿದೆ. ಹೊಸ ಆಡಳಿತ ವ್ಯವಸ್ಥೆಯ ಹೆಸರು, ರಾಷ್ಟ್ರಧ್ವಜ ಮತ್ತು ರಾಷ್ಟ್ರ ಗೀತೆ ಇನ್ನಷ್ಟೇ ಅಂತಿಮ ಆಗಬೇಕಿದೆ.

ಭಾರತದ ಜತೆ ಗೆಳೆತನ

- ಭಾರತ, ಐರೋಪ್ಯ ಒಕ್ಕೂಟ ಮತ್ತು ಅಮೆರಿಕದ ಜತೆಗೆ ಗೆಳೆತನ ಹೊಂದಲಾಗುವುದು ಎಂದು ಉಪನಾಯಕ ಶೇರ್ ಮೊಹಮ್ಮದ್ ಹೇಳಿದ್ದಾರೆ
- ತಾಲಿಬಾನ್ ದೋಹಾದಲ್ಲಿ ಹೊಂದಿರುವ ರಾಜಕೀಯ ಕಚೇರಿಯು ಭಾರತ ಸೇರಿ ವಿವಿಧ ದೇಶಗಳ ಜತೆಗೆ ಸಂಪರ್ಕದಲ್ಲಿದೆ
- ಸರ್ವೋಚ್ಚ ನಾಯಕ ಹೈಬತ್‌ಉಲ್ಲಾ ಅವರು ತಾಲಿಬಾನ್‌ನ ಭದ್ರಕೋಟೆ ಕಂದಹಾರ್‌ನಿಂದಲೇ ಕಾರ್ಯಾಚರಣೆ ನಡೆಸಲಿದ್ದಾರೆ
- ಕಾಬೂಲ್‌ನಲ್ಲಿರುವ ಅಧ್ಯಕ್ಷರ ಅರಮನೆಯಲ್ಲಿ ಅಧಿಕಾರ ಸ್ವೀಕಾರ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಯುತ್ತಿದೆ ಎಂದು ತಾಲಿಬಾನ್ ಪದಾಧಿಕಾರಿ ಅಹ್ಮದುಲ್ಲಾ ಮುತ್ತಕಿ ಹೇಳಿದ್ದಾರೆ

ನಿರಾಶ್ರಿತರಿಗೆ ತಡೆ: ಗಡಿ ಮುಚ್ಚಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ನಂತರ ಪಾಕಿಸ್ತಾನಕ್ಕೆ ವಲಸೆ ಬರುತ್ತಿರುವ ಅಫ್ಗನ್ ನಿರಾಶ್ರಿತರನ್ನು ತಡೆಯಲು ಗಡಿಯ ಪ್ರಮುಖ ರಸ್ತೆಯನ್ನು ಪಾಕಿಸ್ತಾನ ಗುರುವಾರ ಮುಚ್ಚಿತು.

ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದ ನಡುವಿನ ಎರಡನೇ ದೊಡ್ಡ ವಾಣಿಜ್ಯ ಗಡಿ ಆದ ಚಮನ್ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಜಿಯೋ ನ್ಯೂಸ್ ವರದಿ ಮಾಡಿದೆ.

ಭದ್ರತೆ ದೃಷ್ಟಿಯಿಂದ ಚಮನ್ ಗಡಿ ರಸ್ತೆಯನ್ನು ಸ್ವಲ್ಪ ದಿನಗಳ ಕಾಲ ಮುಚ್ಚಲಾಗುತ್ತದೆ ಎಂದು ಪಾಕಿಸ್ತಾನ ಆಂತರಿಕ ಸಚಿವ ಶೇಖ್ ರಶೀದ್ ಅಹಮದ್ ಹೇಳಿದ ಬೆನ್ನಲ್ಲೇ ಈ ವರದಿ ಬಂದಿದೆ.

ನಮ್ಮ ಸೇನೆಯನ್ನು ಗಡಿಯಲ್ಲಿ ನಿಯೋಜಿಸಲಾಗಿದೆ. ಅಫ್ಗಾನಿಸ್ತಾನದಲ್ಲಿ ಶಾಂತಿ ಮತ್ತು ಸ್ಥಿರತೆ ಸ್ಥಾಪನೆಯಾಗಬೇಕು ಎಂದು ಪಾಕಿಸ್ತಾನ ಬಯಸುತ್ತದೆ ಎಂದು ಅವರು ಹೇಳಿದ್ದರು.

ಅಫ್ಗಾನಿಸ್ತಾನದ ಕಂದಹಾರ್ ಪ್ರಾಂತ್ಯದಿಂದ ಚಮನ್ ಗಡಿ ದಾಟಿ ಸಾವಿರಾರು ಅಫ್ಗನ್ ನಿರಾಶ್ರಿತರು ಪಾಕಿಸ್ತಾನಕ್ಕೆ ಬಂದಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಿರಾಶ್ರಿತರನ್ನು ದೇಶದ ಒಳಗೆ ಬಿಟ್ಟುಕೊಳ್ಳಲು ಸಾಧ್ಯವಿಲ್ಲ. 1979ರಲ್ಲಿ ಅಫ್ಗಾನಿಸ್ತಾನದ ಮೇಲೆ ರಷ್ಯಾ ದಾಳಿ ನಡೆಸಿದಾಗಿನಿಂದ ಈವರೆಗೆ ಸುಮಾರು 30 ಲಕ್ಷ ಅಫ್ಗನ್ ನಿರಾಶ್ರಿತರು ಪಾಕಿಸ್ತಾನದಲ್ಲಿ ಇದ್ದಾರೆ ಎಂದು ಭದ್ರತಾ ಅಧಿಕಾರಿಗಳು ಹೇಳಿದ್ದಾರೆ.

ನಾಸಿರುದ್ದೀನ್ ಶಾ ಆಕ್ರೋಶ

ಮುಂಬೈ (ಪಿಟಿಐ): ಅಫ್ಗಾನಿಸ್ತಾನದಲ್ಲಿ ತಾಲಿಬಾನರ ವಿಜಯವನ್ನು ಸಂಭ್ರಮಿಸುತ್ತಿರುವ ಭಾರತದ ಒಂದು ವರ್ಗದ ಮುಸ್ಲಿಮರನ್ನು ನಟ ನಾಸಿರುದ್ದೀನ್ ಶಾ ಟೀಕಿಸಿದ್ದು, ಇಂತಹ ಬೆಳವಣಿಗೆ ಆತಂಕಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ.

‘ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಮರಳಿ ಅಧಿಕಾರ ಹಿಡಿದಿರುವುದು ಇಡೀ ಜಗತ್ತಿಗೆ ಕಳವಳಕಾರಿಯಾಗಿದೆ. ಆದರೆ ಭಾರತದ ಮುಸ್ಲಿಮರಲ್ಲಿ ಕೆಲವರ ಅನಾಗರಿಕ ಆಚರಣೆಗಳು ಕಡಿಮೆ ಅಪಾಯಕಾರಿಯಂತೂ ಅಲ್ಲ. ಇಸ್ಲಾಂನಲ್ಲಿ ಸುಧಾರಣೆ ಮತ್ತು ಆಧುನಿಕತೆ ಬೇಕೋ ಅಥವಾ ಕಳೆದ ಕೆಲವು ಶತಮಾನಗಳ ಅನಾಗರಿಕ ಮೌಲ್ಯಗಳ ಆಚರಣೆ ಬೇಕೋ ಎಂದು ಭಾರತದ ಮುಸ್ಲಿಮರು ತಮ್ಮಲ್ಲಿ ಕೇಳಿಕೊಳ್ಳಬೇಕು’ ಎಂದು ಶಾ ಹೇಳಿದ್ದಾರೆ. ‘ಭಾರತದಲ್ಲಿನ ಇಸ್ಲಾಂ ಪ್ರಪಂಚದ ಇತರ ದೇಶಗಳಿಗಿಂತ ಭಿನ್ನವಾಗಿದೆ. ಅದು ಎಂದೂ ಬದಲಾಗಬಾರದು ಎಂದು ಬಯಸುತ್ತೇನೆ’ ಎಂದಿದ್ದಾರೆ

ಇಂದಿನಿಂದ ವಿಮಾನ ಸೇವೆ

ದುಬೈ (ರಾಯಿಟರ್ಸ್): ಕಾಬೂಲ್ ವಿಮಾನ ನಿಲ್ದಾಣದಿಂದ ದೇಶೀಯ ವಿಮಾನಗಳ ಸೇವೆ ಶುಕ್ರವಾರದಿಂದ ಪುನರಾರಂಭಗೊಳ್ಳಲಿದೆ ಎಂದು ಅಲ್ ಜಜೀರಾ ವಾಹಿನಿ ಗುರುವಾರ ವರದಿ ಮಾಡಿದೆ. ಅಂತರರಾಷ್ಟ್ರೀಯ ವಿಮಾನಗಳ ಸೇವೆ ಇನ್ನೂ ಸಮಯ ತೆಗೆದುಕೊಳ್ಳುತ್ತದೆ ಎಂದು ಅಫ್ಗನ್ ನಾಗರಿಕ ವಿಮಾನಯಾನ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ವಾಹಿನಿ ಹೇಳಿದೆ. ಕತಾರ್ ತಾಂತ್ರಿಕ ತಂಡವು ಕಾಬೂಲ್ ವಿಮಾನನಿಲ್ದಾಣಕ್ಕೆ ಆಗಿರುವ ಹಾನಿಯನ್ನು ಸರಿಪಡಿಸಿ ಶೀಘ್ರ ಕಾರ್ಯಾಚರಣೆಗೆ ಅಣಿಗೊಳಿಸುವ ಯೋಜನೆ ಹೊಂದಿದೆ ಎಂದು ಅಲ್ ಜಜೀರಾ ವರದಿ ಮಾಡಿತ್ತು.

‘ಭಾರತ ವಿರುದ್ಧ ಪಾಕ್‌ಗೆ ಬಲ ತುಂಬಲು ಚೀನಾ ಯತ್ನ’

ವಾಷಿಂಗ್ಟನ್ (ಪಿಟಿಐ): ತಾಲಿಬಾನ್ ವಶದಲ್ಲಿರುವ ಅಫ್ಗಾನಿಸ್ತಾನದ ಬಗ್ರಾಮ್ ವಾಯುನೆಲೆಯನ್ನು ಚೀನಾ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿದ್ದು, ಅಮೆರಿಕ ಈ ಬಗ್ಗೆ ತೀವ್ರ ನಿಗಾ ವಹಿಸಬೇಕು ಎಂದು ಅಮೆರಿಕ ಮಾಜಿ ರಾಜತಾಂತ್ರಿಕ ಅಧಿಕಾರಿ ನಿಕ್ಕಿ ಹ್ಯಾಲೆ ಎಚ್ಚರಿಸಿದ್ದಾರೆ. ಪಾಕಿಸ್ತಾನವನ್ನು ಬಲಪಡಿಸಿ, ಅದನ್ನು ಭಾರತದ ವಿರುದ್ಧ ಎತ್ತಿಕಟ್ಟಲೂ ಚೀನಾ ಮುಂದಾಗಬಹುದು ಎಂದು ಅವರು ಹೇಳಿದ್ದಾರೆ.

ಅಮೆರಿಕದ ಸಾವಿರಾರು ಸೈನಿಕರಿಗೆ ನೆಲೆಯಾಗಿದ್ದ ಬಗ್ರಾಮ್ ವಾಯುನೆಲೆಯನ್ನು 20 ವರ್ಷಗಳ ಬಳಿಕ ಅಮೆರಿಕವು ಜುಲೈನಲ್ಲಿ ತೆರವು ಮಾಡಿತ್ತು.

ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿಯಾಗಿದ್ದ ನಿಕ್ಕಿ ಹ್ಯಾಲೆ ಅವರು ಅಧ್ಯಕ್ಷ ಜೋ ಬೈಡನ್ ಅವರ ನಡೆಯನ್ನು ಟೀಕಿಸಿದ್ದಾರೆ. ಅಫ್ಗಾನಿಸ್ತಾನದಿಂದ ಸೈನ್ಯವನ್ನು ಹಿಂತೆಗೆದುಕೊಳ್ಳುವ ಆತುರದ ನಿರ್ಧಾರದ ನಂತರ ಅಮೆರಿಕದ ಮಿತ್ರರಾಷ್ಟ್ರಗಳ ವಿಶ್ವಾಸವನ್ನು ಬೈಡನ್ ಕಳೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಈ ಸಮಯದಲ್ಲಿ ಭಾರತ, ಜಪಾನ್, ಆಸ್ಟ್ರೇಲಿಯಾದಂತಹ ಮಿತ್ರರನ್ನು ಸಂಪರ್ಕಿಸಿ, ಅವರ ಬೆನ್ನಿಗಿದ್ದೇವೆ ಎಂದು ಬೈಡನ್ ಪ್ರಕಟಿಸಬೇಕಿದೆ
ನಿಕ್ಕಿ ಹ್ಯಾಲೆ, ಅಮೆರಿಕದ ಮಾಜಿ ರಾಜತಾಂತ್ರಿಕ ಅಧಿಕಾರಿ

ಅಮೆರಿಕದ ಮುಂದೆ ಈಗ ಹಲವು ಸವಾಲುಗಳು ಇವೆ. ಅಮೆರಿಕನ್ನರ ರಕ್ಷಣೆ ಹಾಗೂ ಸೈಬರ್ ಭದ್ರತೆ ಅತಿಮುಖ್ಯ. ಏಕೆಂದರೆ ರಷ್ಯಾದಂತಹ ದೇಶಗಳು ಹ್ಯಾಕ್ ಮಾಡುವ ಯತ್ನವನ್ನು ಮುಂದುವರಿಸುವ ಸಾಧ್ಯತೆಯಿದೆ. ನಾವು ಮತ್ತೆ ಹೋರಾಡುವ ಮನಸ್ಥಿತಿಯಲ್ಲಿಲ್ಲ ಎಂಬ ಮನೋಭಾವ ಅವರಲ್ಲಿ ಬೆಳೆಯುವ ಸಾಧ್ಯತೆಯಿದೆ ಎಂದು ಹ್ಯಾಲೆ ವಿವರಿಸಿದ್ದಾರೆ.

‘ಬೈಡನ್ ಅವರು ಮಾಡಬೇಕಾದ ಮುಖ್ಯ ಕೆಲಸವೆಂದರೆ, ನಮ್ಮ ಮಿತ್ರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಬಂಧಗಳನ್ನು ಬಲಪಡಿಸಬೇಕು. ನಮ್ಮ ಸೇನೆಯನ್ನು ಆಧುನೀಕರಣಗೊಳಸಬೇಕು. ಸೈಬರ್ ಅಪರಾಧಗಳು ಮತ್ತು ಭಯೋತ್ಪಾದಕ ಅಪರಾಧ ತಡೆಗೆ ನಾವು ಸಿದ್ಧರಾಗಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ಹ್ಯಾಲೆ ಹೇಳಿದ್ದಾರೆ.

‘ನಾವು ವಿಶ್ವದಾದ್ಯಂತ ಭಯೋತ್ಪಾದನಾ ವಿರೋಧಿ ಹೋರಾಟ ಮುಂದುವರಿಸುವುದನ್ನು ಸಾರಿ ಹೇಳಬೇಕು. ಜಿಹಾದಿಗಳಿಗೆ ಈಗ ಸಿಕ್ಕಿರುವ ನೈತಿಕ ವಿಜಯವು ಅವರನ್ನು ಭಯೋತ್ಪಾದನಾ ಕೃತ್ಯ ಎಸಗಲು ಭಾರಿ ನೇಮಕಾತಿಗೆ ಪ್ರೇರೇಪಣೆ ನೀಡಬಹುದು’ ಎಂದು ಅವರು ಎಚ್ಚರಿಸಿದ್ದಾರೆ.

ಕಾಶ್ಮೀರ ವಿಮೋಚನೆ ಪ್ರಸ್ತಾಪಿಸಿದ ಅಲ್‌ಕೈದಾ

‘ಅಫ್ಗಾನಿಸ್ತಾನದವು ಅಮೆರಿಕದ ನಿಯಂತ್ರಣದಿಂದ ಹೊರಬಂದಿದೆ. ಮುಂದಿನ ಗುರಿ ಕಾಶ್ಮೀರದ ವಿಮೋಚನೆ’ – ಹೀಗೆಂದು ಅಲ್‌ಕೈದಾ ಉಗ್ರ ಸಂಘಟನೆ ಹೇಳಿದೆ ಎಂದು ಅನೇಕ ಮಾಧ್ಯಮಗಳು ವರದಿ ಮಾಡಿವೆ.

ತಾಲಿಬಾನ್‌ಗೆ ಬರೆದ ಶುಭಾಶಯ ಪತ್ರದಲ್ಲಿ ಕಾಶ್ಮೀರ ವಿಚಾರವನ್ನು ಅಲ್‌ಕೈದಾ ಪ್ರಸ್ತಾಪ ಮಾಡಿದೆ ಎನ್ನಲಾಗಿದೆ. ಜಿಹಾದ್‌ನ ಮುಂದಿನ ಗುರಿಗಳ ಪಟ್ಟಿಯಲ್ಲಿ ಕಾಶ್ಮೀರವನ್ನು ಸೇರಿಸಿಕೊಳ್ಳಲು ಜಾಗತಿಕ ಮುಸ್ಲಿಂ ಸಮುದಾಯಗಳಿಗೆ ಅಲ್‌ಕೈದಾ ಕರೆ ನೀಡಿದ್ದು, ಇತರೆ ಮುಸ್ಲಿಂ ಪ್ರದೇಶಗಳನ್ನು ನಿಯಂತ್ರಣಮುಕ್ತಗೊಳಿಸುವಂತೆ ಸೂಚಿಸಿದೆ.

ಕಾಶ್ಮೀರದ ಜೊತೆಗೆ, ಇರಾಕ್, ಸಿರಿಯಾ, ಜೋರ್ಡನ್ ಮತ್ತು ಲೆಬನಾನ್ ಅನ್ನು ಒಳಗೊಂಡ ಮೆಡಿಟರೇನಿಯನ್ ಸ್ವಾತ್ ಎಂದು ಕರೆಯಲಾಗುವ ಲೆವೆಂಟ್ ಪ್ರದೇಶವನ್ನು ಮುಕ್ತಗೊಳಿಸಲು ಕರೆ ನೀಡಿದೆ. ಲಿಬಿಯಾ, ಮೊರಾಕ್ಕೊ, ಅಲ್ಜೀರಿಯಾ, ಟ್ಯುನಿಷಿಯಾ ಮತ್ತು ಸೋಮಾಲಿಯಾವನ್ನು ಒಳಗೊಂಡ ಇಸ್ಲಾಮಿಕ್ ಮಾಗ್ರೇಬ್ ವಿಮೋಚನೆಯನ್ನು ಪ್ರಸ್ತಾಪಿಸಿದೆ. ಎಂದಿನಂತೆ ಯಮನ್ ತನ್ನ ಆದ್ಯತೆ ಎಂದು ಹೇಳಿದೆ.

ಆದರೆ ಚೀನಾದ ಕ್ಸಿನ್‌ಜಿಯಾಂಗ್ ಮತ್ತು ರಷ್ಯಾದ ಚೆಚೆನ್ಯಾಗಳನ್ನು ಕೈಬಿಟ್ಟಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ. ಮುಸ್ಲಿಮರ ಮೇಲಿನ ದೌರ್ಜನ್ಯಗಳಿಗೆ ಈ ಎರಡೂ ಜಾಗಗಳು ಸುದ್ದಿಯಲ್ಲಿವೆ. ಆದರೆ, ತಾಲಿಬಾನ್ ಅನ್ನು ಚೀನಾ ಮತ್ತು ರಷ್ಯಾ ಬೆಂಬಲಿಸಿವೆ.

‘ಇಸ್ಲಾಮಿಕ್ ಪ್ರಪಂಚದ ಮೇಲೆ ಪಾಶ್ಚಿಮಾತ್ಯರಿಂದ ಹೇರಲ್ಪಟ್ಟ ನಿರಂಕುಶಾಧಿಕಾರ ಕೊನೆಗೊಳಿಸುವ ನಿಟ್ಟಿನಲ್ಲಿ ತಾಲಿಬಾನ್ ವಿಜಯ ಒಂದು ದಾರಿಯಾಗಿದೆ’ ಎಂದು ಅಲ್‌ಕೈದಾ ಅಧಿಕೃತ ಮಾಧ್ಯಮ ಸಂಸ್ಥೆಯಾದ ಅಲ್–ಸಹಬ್ ತಿಳಿಸಿದೆ. ಅಲ್‌ಕೈದಾ ತನ್ನ ಜಮ್ಮು ಕಾಶ್ಮೀರದ ವಿಭಾಗವಾದ ಅನ್ಸಾರ್ ಗಜ್ವಾತುಲ್ ಹಿಂದ್ ಆರಂಭಿಸುವ ವೇಳೆ ಕಾಶ್ಮೀರ ವಿಮೋಚನೆಯನ್ನು ಉಲ್ಲೇಖಿಸಿತ್ತು.

ಅಮೆರಿಕ ಮೋಸ ಮಾಡಿತು: ಅಫ್ಗನ್ ತೊರೆಯಲಾಗದವರ ನೋವು

ಕಾಬೂಲ್ (ಎಪಿ): ಆ.31ಕ್ಕೆ ಅಮೆರಿಕದ ಕಡೆಯ ವಿಮಾನ ಅಫ್ಗಾನಿಸ್ತಾನದಿಂದ ಹೊರಟ ಬಳಿಕವೂ ಅಮೆರಿಕದ ಪೌರತ್ವ ಇರುವ ನೂರಾರು ಮಂದಿ ಮತ್ತು ಗ್ರೀನ್ ಕಾರ್ಡ್ ಹೊಂದಿರುವವರು ಅಫ್ಗಾನಿಸ್ತಾನದಲ್ಲೇ ಸಿಲುಕಿದ್ದಾರೆ. ಅಮೆರಿಕ ತಮಗೆ ಮೋಸ ಮಾಡಿತು ಎಂದು ನೊಂದುಕೊಳ್ಳುತ್ತಿದ್ದಾರೆ.

‘ನಾನು, ನನ್ನ ಪತ್ನಿ ಮತ್ತು ನಾಲ್ವರು ಮಕ್ಕಳನ್ನು ಅಮೆರಿಕಕ್ಕೆ ಕರೆಸಿಕೊಳ್ಳುವುದಾಗಿ ಅಮೆರಿಕ ಸರ್ಕಾರ ಈ–ಮೇಲ್ ಮೂಲಕ ಭರವಸೆ ನೀಡುತ್ತಲೇ ಇತ್ತು. ಜೊತೆಗೆ, ಮನೆಯಲ್ಲೇ ಸುರಕ್ಷಿತವಾಗಿ ಇರಲು ಹೇಳಿತ್ತು. ಆದರೆ ಸೋಮವಾರ ಅಮೆರಿಕದ ಕಡೆಯ ವಿಮಾನ ಕಾಬೂಲ್‌ನಿಂದ ಹೊರಟಿತು. ತಾಲಿಬಾನ್ ವಿಜಯೋತ್ಸವ ನಡೆಸಿದ ಸದ್ದು ಕೇಳಿದಾಗಲೇ ಅಮೆರಿಕ ಸುಳ್ಳು ಹೇಳಿರುವುದು ನಮಗೆ ತಿಳಿಯಿತು’ ಎಂದು ಅಮೆರಿಕದ ಪ್ರಜೆ ಜಾವೇದ್ ಹಬೀಬಿ ಹೇಳಿದ್ದಾರೆ.

ಹಬೀಬಿ 2015ರಿಂದ ಅಮೆರಿಕದ ರಿಚ್‌ಮಂಡ್‌ನಲ್ಲಿ ನೆಲೆಸಿದ್ದಾರೆ. ಅವರು ಜೂನ್ 22ರಂದು ಕುಟುಂಬದ ಜೊತೆ ಅಫ್ಗಾನಿಸ್ತಾನಕ್ಕೆ ಬಂದಿದ್ದರು. ‘ನಮ್ಮ ಕುಟುಂಬವನ್ನು ತೆರವುಗೊಳಿಸುವುದಾಗಿ ಆ.18ರಂದು ಅಮೆರಿಕ ಸರ್ಕಾರ ಈ–ಮೇಲ್ ಮಾಡಿತ್ತು. ಬಳಿಕ ಎರಡು ಬಾರಿ ಕುಟುಂಬದ ಎಲ್ಲರೂ ಕಾಬೂಲ್ ವಿಮಾನ ನಿಲ್ದಾಣಕ್ಕೆ ಹೋದೆವು. ನಿಲ್ದಾಣದಲ್ಲಿ ನೂಕುನುಗ್ಗಲು ಇದ್ದ ಕಾರಣ ನಿಲ್ದಾಣದ ಗೇಟ್ ಬಳಿ ಹೋಗಲು ಸಾಧ್ಯವಾಗಲಿಲ್ಲ. ಈ ಕುರಿತು ಸರ್ಕಾರಕ್ಕೆ ನಾವು ಈ–ಮೇಲ್ ಮಾಡಿದ್ದೆವು. ಆ.25ರಿಂದ ಈಚೆಗೆ ಈ–ಮೇಲ್ ಬದಲಾಗಿ ಫೋನ್ ಕರೆಗಳು ಬಂದವು. ಸರ್ಕಾರಕ್ಕೆ ನೀವಿರುವ ಜಾಗ ತಿಳಿದಿದೆ. ಮನೆಯಲ್ಲಿಯೇ ಸುರಕ್ಷಿತವಾಗಿ ಇರಿ ನಿಮ್ಮನ್ನು ಸುರಕ್ಷಿತವಾಗಿ ಕರೆದೊಯ್ಯಲಾಗುವುದು ಎಂದು ಹೇಳಲಾಯಿತು. ಆದರೆ ಈ ವರೆಗೆ ಯಾರೂ ನಮ್ಮನ್ನು ಸಂಪರ್ಕಿಸಿಲ್ಲ’ ಎಂದು ಹಬೀಬಿ ಮಗಳು ಮದೀನಾ ಹೇಳಿದ್ದಾರೆ.

ಅಜ್ಮಲ್ ಎಂಬುವವರು ಕೂಡ ಇಂಥದ್ದೇ ಪರಿಸ್ಥಿತಿಯಲ್ಲಿ ಸಿಲುಕಿದ್ದಾರೆ. ಅವರು ಸೇರಿ ಅವರ ಕುಟುಂಬದ 16 ಜನರಿಗೆ ತುರ್ತು ವಲಸಿಗ ವೀಸಾವನ್ನು ನೀಡಲಾಗಿದೆ. ಅವರ ಮತ್ತೊಬ್ಬ ಸಹೋದರ ವರ್ಜೀನಿಯಾದಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದಾರೆ. ಆದರೂ ಅವರಿನ್ನೂ ಅಫ್ಗಾನಿಸ್ತಾನದಲ್ಲೇ ಸಿಲುಕಿದ್ದಾರೆ.

ಕಾಬೂಲ್ ವಿಮಾನ ನಿಲ್ದಾಣಕ್ಕೆ ಬರುವಂತೆ ಅಮೆರಿಕ ಸರ್ಕಾರದಿಂದ ನಮಗೆ ಈ–ಮೇಲ್ ದೊರಕಿತ್ತು. ಅದರಂತೆ ವಿಮಾನ ನಿಲ್ದಾಣಕ್ಕೆ ಹೋದರೆ ತಾಲಿಬಾನ್ ಗುಂಡು ಹಾರಿಸುತ್ತಿತ್ತು. ಒಳಗೆ ಹೋಗಲಾರದೇ ವಾಪಸ್ ಬಂದೆವು ಎಂದರು.

ಕಳೆದ 24 ಗಂಟೆಗಳಲ್ಲಿ ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಹಲವಾರು ಅಮೆರಿಕನ್ನರು ನಮ್ಮನ್ನು ಸಂಪರ್ಕಿಸುತ್ತಿದ್ದಾರೆ. ಮುಂದೆ ಮಾಡಲಿರುವ ವ್ಯವಸ್ಥೆಗಳನ್ನು ನೋಡಿಕೊಂಡು ಅವರಿಗೆ ಮಾಹಿತಿ ನೀಡಲಾಗುವುದು ಎಂದು ಅಮೆರಿಕದ ರಾಜಕೀಯ ವ್ಯವಹಾರಗಳ ಉಪ ಕಾರ್ಯದರ್ಶಿ ವಿಕ್ಟೋರಿಯಾ ನುಲ್ಯಾಂಡ್ ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ತುರ್ತು ಪರಿಸ್ಥಿತಿ ಘೋಷಣೆ
ಪ್ರವಾಹ: ಎಂಟು ಮಂದಿ ಸಾವು

ನ್ಯೂಯಾರ್ಕ್: ಐಡಾ ಚಂಡಮಾರುತ ತಂದೊಡ್ಡಿದ ಮಹಾಮಳೆಗೆ ನ್ಯೂಯಾರ್ಕ್ ನಗರದಲ್ಲಿ ಪ್ರವಾಹ ಉಂಟಾಗಿದ್ದು, ಇಡೀ ನಗರ ಅಕ್ಷರಶಃ ತತ್ತರಗೊಂಡಿದೆ. ಭಾರೀ ಮಳೆಯಿಂದ ಈ ವರೆಗೆ 8 ಮಂದಿ ಸಾವಿಗೀಡಾಗಿದ್ದು, ನ್ಯೂಯಾರ್ಕ್ ಮತ್ತು ನ್ಯೂಜೆರ್ಸಿಯಲ್ಲಿ ತುರ್ತುಪರಿಸ್ಥಿತಿ ಘೋಷಿಸಲಾಗಿದೆ.

ಬಿರುಗಾಳಿಯು ನ್ಯೂಜೆರ್ಸಿಯಲ್ಲಿ ಮನೆಗಳನ್ನು ನಾಶಪಡಿಸಿದೆ. ರಸ್ತೆಗಳಲ್ಲಿ ನೀರು ಉಕ್ಕಿ ಹರಿಯುತ್ತಿದ್ದು, ಸಬ್‌ವೇ ರೈಲು ಮಾರ್ಗಗಳ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ವಿಮಾನಗಳ ಸಂಚಾರದಲ್ಲೂ ವ್ಯತ್ಯಯ ಉಂಟಾಗಿದೆ.

ನ್ಯೂಯಾರ್ಕ್ ನಗರದಲ್ಲಿ ಏಳು ಮಂದಿ ಮತ್ತು ನ್ಯೂಜೆರ್ಸಿಯ ಪಾಸ್ಸೈಕ್‌ನಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ನ್ಯೂಯಾರ್ಕ್ ನಗರದ ಕ್ವೀನ್ಸ್ ಬರೋದ ಹೆದ್ದಾರಿಯಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ಪ್ರವಾಹದಲ್ಲಿ ಬಸ್ ಮತ್ತು ಕಾರುಗಳು ಪ್ರಯಾಸದಿಂದ ಪ್ರಯಾಣಿಸಿದವು –ರಾಯಿಟರ್ಸ್ ಚಿತ್ರ

ನ್ಯಾಷನಲ್ ವೆದರ್ ಸರ್ವೀಸ್ ಪ್ರಕಾರ, ನ್ಯೂಯಾರ್ಕ್ ನಗರದಲ್ಲಿ ಸಾಮಾನ್ಯವಾಗಿ ಒಂದು ತಿಂಗಳ ಅವಧಿಯಲ್ಲಿ ಸುರಿಯುವ ಮಳೆ ಬುಧವಾರ ಒಂದೇ ದಿನ ಸುರಿದಿದೆ.

ಈ ಗ್ರಾ.ಪಂನಲ್ಲಿ ‘ಸರ್, ಮೇಡಂ’ ಪದ ನಿಷೇಧ!

ಪಾಲಕ್ಕಾಡ್: ಉತ್ತರ ಕೇರಳದ ಪಾಲಕ್ಕಾಡ್ ಜಿಲ್ಲೆಯ ಮಾತ್ತೂರ್ ಗ್ರಾಮ ಪಂಚಾಯ್ತಿಗೆ ಹೋಗುವ ಗ್ರಾಮಸ್ಥರು, ಫಲಾನುಭವಿಗಳು ಇನ್ನು ಮುಂದೆ ಪಂಚಾಯ್ತಿಯ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ‘ಸರ್’, ಮೇಡಂ ಎಂದು ಕರೆಯುವ ಅಗತ್ಯವಿಲ್ಲ. ಅವರ ಹೆಸರು, ಪದನಾಮದಿಂದ (ಹುದ್ದೆ) ಕರೆದರೆ ಸಾಕು!

ಜನಸಾಮಾನ್ಯರು, ಜನಪ್ರತಿನಿಧಿಗಳು ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳ ನಡುವೆ ಪರಸ್ಪರ ಪ್ರೀತಿ, ವಿಶ್ವಾಸದ ಬಾಂಧವ್ಯ ವೃದ್ಧಿಸುವುದಕ್ಕಾಗಿ ಮಾತ್ತೂರ್ ಗ್ರಾಮ ಪಂಚಾಯ್ತಿಯಲ್ಲಿ ಇಂಥದ್ದೊಂದು ನಿಯಮವನ್ನು ಜಾರಿಗೆ ತರುವ ನಿರ್ಣಯ ಕೈಗೊಳ್ಳಲಾಗಿದೆ.

ವಸಾಹತುಶಾಹಿ ಕಾಲದಿಂದಲೂ ‘ಗೌರವ’ವದ ಹೆಸರಲ್ಲಿ ಬಳಸುತ್ತಿರುವ ಸರ್, ಮೇಡಂ ಪದಗಳ ಬಳಕೆಯನ್ನು ನಿಷೇಧಿಸಲಾಗಿದೆ. ಈ ಮೂಲಕ ಇಂಥ ಪದಗಳ ಬಳಕೆ ನಿಷೇಧಿಸಿದ ದೇಶದ ಮೊದಲ ಗ್ರಾಮ ಪಂಚಾಯ್ತಿ ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ಮಂಗಳವಾರ ನಡೆದ ಪಂಚಾಯ್ತಿಯ ವಿಶೇಷ ಸಭೆಯಲ್ಲಿ ಸದಸ್ಯರೆಲ್ಲರೂ ಅವಿರೋಧವಾಗಿ ಇಂಥದ್ದೊಂದು ಐತಿಹಾಸಿಕ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಅಷ್ಟೇ ಅಲ್ಲದೆ ಈ ಹೊಸ ನಿಯಮವನ್ನು ಅನುಷ್ಠಾನಗೊಳಿಸಲು ಆರಂಭಿಸಿದ್ದಾರೆ.

ಅಸ್ಸಾಂ: ರಾಜೀವ್‌ಗಾಂಧಿ ನ್ಯಾಷನಲ್ ಪಾರ್ಕ್ ಹೆಸರು ಬದಲಾವಣೆ

ಗುವಾಹಟಿ (ಪಿಟಿಐ): ಅಸ್ಸಾಂನ ರಾಜೀವ್‌ಗಾಂಧಿ ನ್ಯಾಷನಲ್ ಪಾರ್ಕ್‌ನ ಹೆಸರನ್ನು ಒರಂಗ್ ನ್ಯಾಷನಲ್ ಪಾರ್ಕ್ ಎಂದು ಬದಲಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ಜಲಸಂಪನ್ಮೂಲ ಸಚಿವ ಪೀಯೂಷ್ ಹಜಾರಿಕಾ ಅವರು ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ್ದಾರೆ.

‘ಎಕ್ಸ್ ಗ್ರೇಷಿಯಾ ಪರಿಷ್ಕರಣೆಗೆ ಸಮಿತಿ

ನವದೆಹಲಿ (ಪಿಟಿಐ): ಪತ್ರಕರ್ತರ ಕಲ್ಯಾಣ ಯೋಜನೆಯಡಿ (ಜೆಡಬ್ಲ್ಯುಎಸ್) ಚಾಲ್ತಿಯಲ್ಲಿರುವ ಪ್ರಸಕ್ತ ಮಾರ್ಗಸೂಚಿಗಳನ್ನು ಪರಿಶೀಲಿಸಲು ಮಾಹಿತಿ ಮತ್ತು ಪ್ರಸಾರ ಸಚಿವಾಲಯವು 12 ಸದಸ್ಯರ ಸಮಿತಿಯನ್ನು ರಚಿಸಿದೆ.

ಪ್ರಸಾರ ಭಾರತಿ ಮಂಡಳಿಯ ಸದಸ್ಯರಾದ ಅಶೋಕ್ ಕುಮಾರ್ ಟಂಡನ್ ಅವರು ಈ ಸಮಿತಿಗೆ ಅಧ್ಯಕ್ಷರಾಗಿದ್ದಾರೆ.

ಈ ಸಮಿತಿಯು ಎರಡು ತಿಂಗಳಲ್ಲಿ ತನ್ನ ಶಿಫಾರಸುಗಳನ್ನು ನೀಡಲಿದೆ. ಅಲ್ಲದೇ ಸಮಿತಿಯ ಸಭೆಗಳನ್ನು ಕರೆಯಲು ಸಚಿವಾಲಯದ ನೆರವನ್ನು ಪ್ರೆಸ್ ಇನ್‌ಫಾರ್ಮೇಷನ್ ಬ್ಯೂರೊ (ಪಿಐಬಿ) ಒದಗಿಸಲಿದೆ ಎಂದು ಸಚಿವಾಲಯ ತಿಳಿಸಿದೆ.

ಇ.ಡಿ ಸಮನ್ಸ್ ವಜಾ ಕೋರಿ ದೇಶಮುಖ್ ಮೊರೆ

ಮುಂಬೈ (ಪಿಟಿಐ): ತಮ್ಮ ವಿರುದ್ಧ ದಾಖಲಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ನೀಡಿರುವ ಸಮನ್ಸ್‌ಗಳನ್ನು ವಜಾಮಾಡಬೇಕುಎಂದುಕೋರಿಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಬಾಂಬೆ ಹೈಕೋರ್ಟ್‌ನಲ್ಲಿ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ರೇವತಿ ಮೋಹಿತೆ ಡೇರೆ ಅವರಿರುವ ಏಕಸದಸ್ಯ ಪೀಠದ ಮುಂದೆ ದೇಶಮುಖ್ ಅವರ ಅರ್ಜಿ ವಿಚಾರಣೆಗೆ ಬಂತು. ಆದರೆ, ಈ ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ನ್ಯಾಯಮೂರ್ತಿ ರೇವತಿ ಹೇಳಿದರು. ಈ ನಿರ್ಧಾರಕ್ಕೆ ಅವರು ಯಾವುದೇ ಕಾರಣ ನೀಡಲಿಲ್ಲ. ಹೀಗಾಗಿ ಈ ಅರ್ಜಿಯನ್ನು ಮತ್ತೊಂದು ನ್ಯಾಯಪೀಠಕ್ಕೆ ವರ್ಗಾಯಿಸಲಾಯಿತು.

ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ದೇಶಮುಖ್ ಹಾಗೂ ಅವರ ಆಪ್ತರ ವಿರುದ್ಧ ಏಪ್ರಿಲ್‌ನಲ್ಲಿ ಸಿಬಿಐ ಎಫ್‌ಐಆರ್ ದಾಖಲಿಸಿದೆ. ಇದರ ಬೆನ್ನಲ್ಲೇ, ಜಾರಿ ನಿರ್ದೇಶನಾಲಯ ಅವರ ವಿರುದ್ಧ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದೆ.

ದೇಶಮುಖ್ ಪರ ವಕೀಲನ ಬಂಧನ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ವಕೀಲ ಆನಂದ್ ಡಾಗಾ ಅವರನ್ನು ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ‘ದೇಶಮುಖ್ ಅವರ ವಿರುದ್ಧ ಬಾಂಬೆ ಹೈಕೋರ್ಟ್‌ನ ನಿರ್ದೇಶನದಂತೆ ಕೈಗೊಂಡಿದ್ದ ತನಿಖೆಯನ್ನು ಬುಡಮೇಲು ಮಾಡಲು ಯತ್ನಿಸಿದ ಆರೋಪದ ಮೇಲೆ ವಕೀಲ ಡಾಗಾ ಅವರನ್ನು ಮುಂಬೈನಲ್ಲಿ ಬಂಧಿಸಿ, ನವದೆಹಲಿಯಲ್ಲಿರುವ ಸಿಬಿಐ ಕಚೇರಿಗೆ ಕರೆತರಲಾಗಿದೆ’ ಎಂದು ಅವರು ತಿಳಿಸಿದ್ದಾರೆ. ‘ಡಾಗಾ ಅವರಿಂದ ಲಂಚ ಪಡೆದ ಆರೋಪದ ಮೇಲೆ ಸಿಬಿಐ ಸಬ್‌ಇನ್‌ಸ್ಪೆಕ್ಟರ್ ಅಭಿಷೇಕ್ ತಿವಾರಿ ಎಂಬುವವನ್ನು ಬುಧವಾರ ರಾತ್ರಿ ವಶಕ್ಕೆ ಪಡೆಯಲಾಗಿದೆ. ಇಬ್ಬರನ್ನೂ ಕೋರ್ಟ್‌ಗೆ ಹಾಜರುಪಡಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಪತ್ರಕರ್ತ ಚಂದನ್ ಮಿತ್ರಾ

ನವದೆಹಲಿ: ರಾಜ್ಯಸಭೆಯ ಮಾಜಿ ಸದಸ್ಯ, ಖ್ಯಾತ ಪತ್ರಕರ್ತ ಚಂದನ್ ಮಿತ್ರಾ (65) ಬುಧವಾರ ತಡರಾತ್ರಿ ಅನಾರೋಗ್ಯದಿಂದಾಗಿ ನಿಧನರಾಗಿದ್ದು ಅವರ ಪುತ್ರ ಕುಶನ್ ಮಿತ್ರಾ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಬಿಜೆಪಿಯಿಂದ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದ ಚಂದನ್ ಮಿತ್ರಾ, ಆ ಪಕ್ಷದ ಹಿರಿಯ ನಾಯಕರಾದ ದಿವಂಗತ ಎ.ಬಿ. ವಾಜಪೇಯಿ ಮತ್ತು ಎಲ್.ಕೆ. ಅಡ್ವಾಣಿ ಅವರಿಗೆ ಆಪ್ತರಾಗಿದ್ದರು. ಹಲವು ವರ್ಷಗಳ ಕಾಲ ‘ಪಯೋನಿರ್’ ಪತ್ರಿಕೆಯ ಸಂಪಾದಕರಾಗಿದ್ದರು.

2018ರಲ್ಲಿ ಬಿಜೆಪಿಗೆ ರಾಜೀನಾಮೆ ನೀಡಿದ್ದ ಅವರು, ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.

ನಟ ಸಿದ್ಧಾರ್ಥ ಶುಕ್ಲ

ಮುಂಬೈ: ಹಿಂದಿಯ ಬಿಗ್ ಬಾಸ್ 13 ನೇ ಆವೃತ್ತಿಯ ವಿಜೇತ ಹಾಗೂ 'ಬಾಲಿಕಾ ವಧು‘ ಧಾರಾವಾಹಿ ಖ್ಯಾತಿಯ ಸಿದ್ಧಾರ್ಥ ಶುಕ್ಲಾ (40) ತೀವ್ರ ಹೃದಯಾಘಾತದಿಂದ ಗುರುವಾರ ನಿಧನರಾಗಿದ್ದಾರೆ. ‘ಎದೆ ನೋವಿನಿಂದ ಅವರು ಇಂದು ಮುಂಬೈನ ಕೂಪರ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಅವರು ಚಿಕಿತ್ಸೆ ಫಲಿಸದೇ ಮೃತರಾಗಿದ್ದಾರೆ’ ಎಂದು ವೈದ್ಯರು ತಿಳಿಸಿದ್ದಾರೆ.

ಮೃತ ಸಿದ್ಧಾರ್ಥ್‌ಗೆ ತಾಯಿ ಹಾಗೂ ಇಬ್ಬರು ಸಹೋದರಿಯರಿದ್ದಾರೆ.

ಆರಂಭದಲ್ಲಿ ರೂಪದರ್ಶಿಯಾಗಿದ್ದ ಶುಕ್ಲಾ ಅವರು, ದೂರದರ್ಶನದ ಪ್ರಮುಖ ಧಾರಾವಾಹಿ ‘ಬಾಬುಲ್ ಕಾ ಆಂಗನ್ ಛೂಟೆ ನಾ‘ ಮೂಲಕ ನಟನಾ ರಂಗಕ್ಕೆ ಪದಾರ್ಪಣೆ ಮಾಡಿದರು. ನಂತರ ‘ಜಾನೆ ಪೆಹಚಾನೆ ಸೆ ... ಯೆ ಅಜ್ನಬಿ", ‘ಲವ್ ಯು ಜಿಂದಗಿ‘ ನಂತಹ ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿದ್ದರೂ, ಅವರು ದೂರದರ್ಶನದಲ್ಲಿ ದೀರ್ಘಕಾಲ ಪ್ರಸಾರವಾದ ‘ಬಾಲಿಕಾ ವಧು‘ ಧಾರಾವಾಹಿ ಮೂಲಕ ದೇಶದಾದ್ಯಂತ ಮನೆಮಾತಾಗಿದ್ದರು.

ಹಿಂದಿಯಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ನಡೆಸಿ ಕೊಡುವ ಜನಪ್ರಿಯ ರಿಯಾಲಿಟಿ ಶೋ ‘ಬಿಗ್ ಬಾಸ್‘ನ 13 ನೇ ಆವೃತ್ತಿಯಲ್ಲಿ ಭಾಗವಹಿಸಿ ವಿಜೇತರಾಗಿದ್ದ ಅವರು 2014ರಲ್ಲಿ ಕರಣ್ ಜೋಹರ್ ನಿರ್ಮಾಣದ 'ಹಂಪ್ಟಿ ಶರ್ಮಾ ಕಿ ದುಲ್ಹನಿಯಾ' ಸಿನಿಮಾದಲ್ಲೂ ನಟಿಸಿದ್ದರು. ಧಾರಾವಾಹಿ ಮತ್ತು ಸಿನಿಮಾದ ಜೊತೆಗೆ, ‘ಝಲಕ್ ದಿಕಲಾಜಾ 6’, ‘ಫಿಯರ್ ಫ್ಯಾಕ್ಟರ್: ಖತ್ರೊಂಕಾ ಕಿಲಾಡಿ 7’, 'ಡ್ಯಾನ್ಸ್ ದಿವಾನೇ 3' ರಲ್ಲಿ ಸೇರಿದಂತೆ ಅನೇಕ ಹಿಂದಿಯ ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಂಡಿದ್ದರು.

ಭಾರತ–ಇಂಗ್ಲೆಂಡ್ ನಾಲ್ಕನೇ ಟೆಸ್ಟ್: ಕ್ರಿಸ್ ವೋಕ್ಸ್‌ಗೆ ನಾಲ್ಕು ವಿಕೆಟ್: ವಿರಾಟ್ ಕೊಹ್ಲಿ ಅರ್ಧಶತಕ

ವೇಗಿಗಳಿಗೆ ಶಾರ್ದೂಲ್ ದಿಟ್ಟ ಉತ್ತರ

ಶಾರ್ದೂಲ್ ಠಾಕೂರ್ ಬ್ಯಾಟಿಂಗ್ ವೈಖರಿ– ಎಪಿ ಚಿತ್ರ

ಲಂಡನ್: ಕ್ರಿಸ್ ವೋಕ್ಸ್ ಮತ್ತು ಒಲಿ ರಾಬಿನ್ಸನ್ ಅವರ ಸ್ವಿಂಗ್ ದಾಳಿಗೆ ಭಾರತದ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ನೆಲಕಚ್ಚಿದರು. ಆದರೆ ಅದೇ ಬಿರುಗಾಳಿಗೆ ಎದೆಯೊಡ್ಡಿ ನಿಂತ ಶಾರ್ದೂಲ್ ಠಾಕೂರ್ ಮಿಂಚಿನ ಬ್ಯಾಟಿಂಗ್ ಮಾಡಿದರು.

ದ ಓವಲ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ನಾಲ್ಕನೇ ಟೆಸ್ಟ್‌ನಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ತಮ್ಮ ನಾಯಕ ಜೋ ರೂಟ್ ನಿರ್ಧಾರವನ್ನು ಬೌಲರ್‌ಗಳು ಸಮರ್ಥಿಸಿಕೊಂಡರು. ಪ್ರವಾಸಿ ಬಳಗವು ಮೊದಲ ದಿನವೇ ಆಲೌಟ್ ಆಯಿತು. ಆದರೆ ಕೊನೆಯ ಹಂತದಲ್ಲಿ ಅಬ್ಬರಿಸಿದ ಶಾರ್ದೂಲ್ ಠಾಕೂರ್ (57; 36ಎ, 7ಬೌಂ, 3ಸಿ) ಅವರಿಂದಾಗಿ ತಂಡಕ್ಕೆ 61.3 ಓವರ್‌ಗಳಲ್ಲಿ 191 ರನ್‌ಗಳಿಸಲು ಸಾಧ್ಯವಾಯಿತು.

ದಿನದಾಟದ ಅಂತ್ಯಕ್ಕೆ ಇಂಗ್ಲೆಂಡ್ 53ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತ್ತು.

ಡೇವಿಡ್ ಮಲಾನ್ (ಬ್ಯಾಟಿಂಗ್ 26) ಮತ್ತು ಕ್ರೇಗ್ ಓವರ್ಟನ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದರು.

ಇಂಗ್ಲೆಂಡ್ ಬೌಲರ್‌ಗಳಾದ ಆ್ಯಂಡರ್ಸನ್, ರಾಬಿನ್ಸನ್ ಮತ್ತು ವೋಕ್ಸ್ ದಾಳಿಗೆ ರೋಹಿತ್ ಶರ್ಮಾ, ಕೆ.ಎಲ್. ರಾಹುಲ್ ಮತ್ತು ಚೇತೇಶ್ವರ್ ಪೂಜಾರ ಪೆವಿಲಿಯನ್‌ಗೆ ಮರಳಿದರು. ಆಗ ತಂಡದ ಮೊತ್ತ 39 ರನ್‌ಗಳಾಗಿದ್ದವು. ಮೂರನೇ ಪಂದ್ಯದ ಮೊದಲ ಇನಿಂಗ್ಸ್ ಆಟ ಮತ್ತೆ ಮರುಕಳಿಸುವ ಭೀತಿ ಎದುರಾಗಿತ್ತು. ಈ ಹಂತದಲ್ಲಿ ವಿರಾಟ್ ಕೊಹ್ಲಿ (50; 96ಎಸೆತ) ವಿಕೆಟ್ ಪತನ ತಡೆಯಲು ಪ್ರಯತ್ನಿಸಿದರು. ಸರಣಿಯಲ್ಲಿ ಸತತ ಎರಡನೇ ಅರ್ಧಶತಕ ಬಾರಿಸಿದರು.

ವಿರಾಟ್ ಕೊಹ್ಲಿ– ಎಎಫ್‌ಪಿ ಚಿತ್ರ

ಆದರೆ, ಕ್ರಮಾಂಕ ಬದಲಿಸಿ ಬಂದ ರವೀಂದ್ರ ಜಡೇಜ, ಮತ್ತೊಂದು ಅವಕಾಶ ಗಿಟ್ಟಿಸಿರುವ ಅಜಿಂಕ್ಯ ರಹಾನೆ ಮತ್ತು ರಿಷಭ್ ಪಂತ್ ಅವರು ಮತ್ತೆ ವಿಫಲರಾದರು. ತಂಡವು ಚಹಾ ವಿರಾಮಕ್ಕೆ 122 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತ್ತು.

ನಂತರದ ಅವಧಿಯಲ್ಲಿ ಬೌಲರ್‌ಗಳ ಲೆಕ್ಕಾಚಾರವನ್ನು ಹುಸಿಗೊಳಿಸಿದ 'ಮುಂಬೈಕರ್' ಠಾಕೂರ್ ತಾವು ಆಲ್‌ರೌಂಡರ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದರು. ಅನುಭವಿ ವೇಗಿ ಇಶಾಂತ್ ಶರ್ಮಾ ಬದಲು ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಂಡರು. ಲಭಿಸಿದ ಒಂದು ಜೀವದಾನವನ್ನೂ ಉಪಯೋಗಿಸಿಕೊಂಡ ಅವರು ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಮೂರು ಸಿಕ್ಸರ್ ಬಾರಿಸಿ ಮಿಂಚಿದರು. ಟಿ20 ಮಾದರಿಯ ಬ್ಯಾಟಿಂಗ್ ಮಾಡಿದ ಶಾರ್ದೂಲ್ ತಂಡದಲ್ಲಿ ಭರವಸೆ ಮಿಂಚು ಹರಿಸಿದರು. ಮೊಹಮ್ಮದ್ ಶಮಿ ಬದಲು ಸ್ಥಾನ ಪಡೆದಿರುವ ಉಮೇಶ್ ಯಾದವ್ ಅವರು ಠಾಕೂರ್ ಜೊತೆ ಇನಿಂಗ್ಸ್ ಕಟ್ಟಲು ನೆರವಾದರು. ಎಂಟನೇ ವಿಕೆಟ್ ಜೊತೆಯಾಟದಲ್ಲಿ 63 ರನ್‌ಗಳು ಸೇರಿದವು.ಆದರೆ 61ನೇ ಓವರ್‌ನಲ್ಲಿ ವೋಕ್ಸ್ ಬೀಸಿದ ಎಲ್‌ಬಿ ಬಲೆಗೆ ಶಾರ್ದೂಲ್ ಬಿದ್ದರು. ಅದರೊಂದಿಗೆ ತಂಡವು 200 ರನ್‌ಗಳ ಗಡಿ ದಾಟಲು ಸಾಧ್ಯವಾಗಲಿಲ್ಲ. ಈ ಪಂದ್ಯದಲ್ಲಿಯೂ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗಲಿಲ್ಲ.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 191 (61.3ಓವರ್)

ರೋಹಿತ್ ಸಿ ಬೇಸ್ಟೊ ಬಿ ವೋಕ್ಸ್ 11 (27ಎ, 4X1), ರಾಹುಲ್ ಎಲ್‌ಬಿಡಬ್ಲ್ಯು ರಾಬಿನ್ಸನ್ 17 (44 ಎ, 4X3), ಚೇತೇಶ್ವರ್ ಸಿ ಬೇಸ್ಟೊ ಬಿ ಆ್ಯಂಡರ್ಸನ್ 4 (31ಎ, 4X1), ವಿರಾಟ್ ಸಿ ಬೇಸ್ಟೊ ಬಿ ರಾಬಿನ್ಸನ್ 50 (96ಎ, 4X8) ಜಡೇಜ ಸಿ ರೂಟ್ ಬಿ ವೋಕ್ಸ್ 10 (34ಎ, 4X2), ರಹಾನೆ ಸಿ ಅಲಿ ಬಿ ಓವರ್ಟನ್ 14 (47ಎ, 4X1), ರಿಷಭ್ ಸಿ ಅಲಿ ಬಿ ವೋಕ್ಸ್ 9 (33ಎ, 4X1), ಶಾರ್ದೂಲ್ ಎಲ್‌ಬಿಡಬ್ಲ್ಯು ವೋಕ್ಸ್ 57 (36ಎ, 4X7, 6X3), ಉಮೇಶ್ ಸಿ ಬೇಸ್ಟೊ ಬಿ ರಾಬಿನ್ಸನ್ 10 (20ಎ, 4X1), ಬೂಮ್ರಾ ರನೌಟ್ (ಬರ್ನ್ಸ್) 0, ಸಿರಾಜ್ ಔಟಾಗದೆ 1 (1ಎ)

ಇತರೆ (ಲೆಗ್ ಬೈ 8) 8

ವಿಕೆಟ್ ಪತನ: 1–28 (ರೋಹಿತ್ ಶರ್ಮಾ, 8.6), 2–28 (ಕೆ.ಎಲ್. ರಾಹುಲ್, 13.5), 3–39 (ಚೇತೇಶ್ವರ್ ಪೂಜಾರ, 19.4), 4–69 (ರವೀಂದ್ರ ಜಡೇಜ, 29.6), 5-105 (ವಿರಾಟ್ ಕೊಹ್ಲಿ, 42.5), 6–117 (ಅಜಿಂಕ್ಯ ರಹಾನೆ, 49.5), 7–127 (ರಿಷಭ್ ಪಂತ್, 52.6), 8–190 (ಶಾರ್ದೂಲ್ ಠಾಕೂರ್, 60.6), 9–190 (ಜಸ್‌ಪ್ರೀತ್ ಬೂಮ್ರಾ, 61.1), 10–191 (ಉಮೇಶ್ ಯಾದವ್, 61.3)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 14–3–41–1, ಒಲಿ ರಾಬಿನ್ಸನ್ 17.3–9–38–3, ಕ್ರಿಸ್ ವೋಕ್ಸ್ 15–6–55–4 ಕ್ರೇಗ್ ಓವರ್ಟನ್ 15–2–49–1

ಇಂಗ್ಲೆಂಡ್ (ಮೊದಲ ಇನಿಂಗ್ಸ್) 3ವಿಕೆಟ್‌ಗೆ 53 (17 ಓವರ್)

ರೋರಿ ಬಿ ಬೂಮ್ರಾ 5 (11ಎ), ಹಸೀಬ್ ಸಿ ಪಂತ್ ಬಿ ಬೂಮ್ರಾ 0 (12ಎ), ಡೇವಿಡ್ ಬ್ಯಾಟಿಂಗ್ 26 (46ಎ, 4X4), ರೂಟ್ ಬಿ ಉಮೇಶ್ 21 (25ಎ, 4X4), ಕ್ರೇಗ್ ಬ್ಯಾಟಿಂಗ್1 (8ಎ).

ವಿಕೆಟ್ ಪತನ: 1–5 (ರೋರಿ ಬರ್ನ್ಸ್, 3.2), 2–6 (ಹಸೀಬ್ ಹಮೀದ್, 3.6), 3–52 (ಜೋ ರೂಟ್, 15.3)

ಬೌಲಿಂಗ್: ಉಮೇಶ್ ಯಾದವ್ 6–1–15–1, ಜಸ್‌ಪ್ರೀತ್ ಬೂಮ್ರಾ 6–2–15–2, ಶಾರ್ದೂಲ್ ಠಾಕೂರ್ 3–1–11–0, ಮೊಹಮ್ಮದ್ ಶಮಿ 2–0–12–0

ಸಚಿನ್ ದಾಖಲೆ ಮೀರಿದ ವಿರಾಟ್

ಲಂಡನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ವೇಗವಾಗಿ 23 ಸಾವಿರ ರನ್ ಗಳ ಗಡಿ ದಾಟಿದವರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರು.ಕ್ರಿಕೆಟ್‌ನ ಮೂರು ಮಾದರಿಗಳಲ್ಲಿ ಒಟ್ಟು 490 ಇನಿಂಗ್ಸ್ ಆಡಿ ಈ ಸಾಧನೆ ಮಾಡಿದ್ದಾರೆ. ಅವರು ಸಚಿನ್ ತೆಂಡೂಲ್ಕರ್ ಅವರ ಸಾಧನೆಯನ್ನು ಮೀರಿನಿಂತರು. ಓವಲ್ ಟೆಸ್ಟ್‌ನಲ್ಲಿ ಕೊಹ್ಲಿ ಈ ಸಾಧನೆ ಮಾಡಿದರು.

ವೇಗವಾಗಿ 23 ಸಾವಿರ ರನ್ ಗಳಿಸಿದವರು

ಆಟಗಾರ	ದೇಶ	ಇನಿಂಗ್ಸ್
ವಿರಾಟ್ ಕೊಹ್ಲಿ	ಭಾರತ	490
ಸಚಿನ್ ತೆಂಡೂಲ್ಕರ್	ಭಾರತ	522
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	544
ಜಾಕ್ ಕಾಲಿಸ್	ದಕ್ಷಿಣ ಆಫ್ರಿಕಾ	551
ಕುಮಾರ ಸಂಗಕ್ಕಾರ	ಶ್ರೀಲಂಕಾ	568
ರಾಹುಲ್ ದ್ರಾವಿಡ್	ಭಾರತ	576
ಮಹೇಲಾ ಜಯವರ್ಧನೆ	ಶ್ರೀಲಂಕಾ	645

ಟೋಕಿಯೊ ಪ್ಯಾರಾಲಿಂಪಿಕ್ಸ್: ಪಲಕ್ ಕೊಹ್ಲಿ ಜಯಭೇರಿ

ಬ್ಯಾಡ್ಮಿಂಟನ್: ಸೆಮಿಫೈನಲ್‌ಗೆ ಭಗತ್

ಪ್ರಮೋದ್ ಭಗತ್– ಟ್ವಿಟರ್ ಚಿತ್ರ

ಟೋಕಿಯೊ (ಪಿಟಿಐ): ತಮ್ಮ ರ‍್ಯಾಂಕಿಂಗ್‌ಗೆ ತಕ್ಕ ಸಾಮರ್ಥ್ಯ ತೋರುತ್ತಿರುವ ವಿಶ್ವದ ಅಗ್ರ ಕ್ರಮಾಂಕದ ಬ್ಯಾಡ್ಮಿಂಟನ್ ಆಟಗಾರ, ಭಾರತದ ಪ್ರಮೋದ್ ಭಗತ್ ಪ್ಯಾರಾಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದು, ಪದಕದ ಭರವಸೆ ಮೂಡಿಸಿದ್ದಾರೆ.

'ಎ' ಗುಂಪಿನ ಎಸ್‌ಎಲ್3 ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಗುರುವಾರ 21-12 21-9ರಿಂದ ಉಕ್ರೇನ್‌ನ ಅಲೆಕ್ಸಾಂಡರ್ ಚಿರ್ಕೋವ್ ಅವರನ್ನು ಮಣಿಸಿದ ಪ್ರಮೋದ್ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು.

ಪೋಲಿಯೊದಿಂದಾಗಿ ಬಾಲ್ಯದಲ್ಲಿಯೇ ಪ್ರಮೋದ್ ಅವರು ಎಡಗಾಲು ಊನವಾಗಿದೆ. ಆದರೆ ಅದನ್ನು ಮೀರಿದ ಅವರ ಛಲ ಮಾದರಿಯಾಗಿದೆ. ವಿಶ್ವ ಚಾಂಪಿಯನ್‌ಷಿಪ್‌ನ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದಲ್ಲಿ ತಲಾ ಎರಡು ಬಾರಿ ಅವರು ಚಿನ್ನದ ಪದಕಗಳು ಸೇರಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಟ್ರೋಫಿಗಳು ಅವರಿಗೆ ಒಲಿದಿವೆ.

ಭಾರತದ ಇನ್ನುಳಿದ ಬ್ಯಾಡ್ಮಿಂಟನ್ ಪಟುಗಳಾದ ಸುಹಾಸ್ ಯತಿರಾಜ್, ತರುಣ್ ದಿಲ್ಲೋನ್, ಕೃಷ್ಣ ನಗರ್ ಮತ್ತು ಪಲಕ್ ಕೊಹ್ಲಿ ಕೂಡ ಸಿಂಗಲ್ಸ್ ವಿಭಾಗಗಳಲ್ಲಿ ಸುಲಭ ಜಯ ಸಾಧಿಸಿ ಎರಡನೇ ಸುತ್ತಿಗೆ ಕಾಲಿಟ್ಟರು.

ಎಸ್‌ಎಲ್4 ವಿಭಾಗದಲ್ಲಿ 38 ವರ್ಷದ ಸುಹಾಸ್ 21-9, 21-3ರಿಂದ ಜರ್ಮನಿಯ ಜಾನ್ ನಿಕ್ಲಾಸ್ ಪೊಟ್ ಎದುರು, ತರುಣ್ 21-7, 21-13ರಿಂದ ಥಾಯ್ಲೆಂಡ್‌ನ ಸಿರಿಪೊಂಗ್ ಟೀಮ್‌ರೊಮ್ ಸವಾಲು ಮೀರಿದರು. ಎಸ್‌ಎಚ್6 ವಿಭಾಗದಲ್ಲಿ ಕೃಷ್ಣ 22-20, 21-10ರಿಂದ ಮಲೇಷ್ಯಾದ ತರೆಷೋ ದಿದಿನ್ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನ ಹಣಾಹಣಿಯಲ್ಲಿ ಪಲಕ್ ಕೊಹ್ಲಿ 21-12, 21-18ರಿಂದ ಟರ್ಕಿಯ ಜೆಹ್ರಾ ಬಾಗ್ಲರ್ ಅವರನ್ನು ಮಣಿಸಿದರು. ಪಲಕ್ ಅವರು ಮೊದಲ ಸುತ್ತಿನಲ್ಲಿ ಜಪಾನ್‌ನ ಆಟಗಾರ್ತಿಯ ಎದುರು ಸೋತಿದ್ದರು.

ಹಿಂದೆ ಸರಿದ ಅರುಣಾ: ಮಹಿಳೆಯರ ಟೇಕ್ವಾಂಡೊ ಕೆ44–49 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಅರುಣಾ ತನ್ವರ್ ಅವರು ಗಂಭೀರ ಗಾಯದಿಂದಾಗ ರಿಪೇಜ್ ಸುತ್ತಿನಿಂದ ಹಿಂದೆ ಸರಿದರು.

ಪುರುಷರ ಶಾಟ್‌ಪಟ್ ಎಫ್35 ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಅರವಿಂದ್ ಏಳನೇ ಸ್ಥಾನ ಗಳಿಸಿದರು. ಕೂಟದಲ್ಲಿ ಅವರು 13.48 ಮೀಟರ್ಸ್ ದೂರ ಎಸೆದರು.

25 ಮೀಟರ್ಸ್ ಪಿ3 ಮಿಶ್ರ ಏರ್ ರೈಫಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ರಾಹುಲ್ ಜಾಕಡ್ ಐದನೇ ಸ್ಥಾನ ಗಳಿಸಿದರು. ಫೈನಲ್‌ನಲ್ಲಿ ಅವರು 12 ಸ್ಕೋರ್ ದಾಖಲಿಸಿದರು.

ಭಾರತದ ಇನ್ನೊಬ್ಬ ಶೂಟರ್ ಆಕಾಶ್ ಫೈನಲ್‌ಗೆ ಅರ್ಹತೆ ಗಳಿಸಲು ವಿಫಲರಾದರು.

ಕ್ಯಾನೊಯ್ : ನಾಲ್ಕರ ಘಟ್ಟಕ್ಕೆ ಪ್ರಾಚಿ ಯಾದವ್

ಭಾರತದ ಪ್ರಾಚಿ ಯಾದವ್ ಮಹಿಳೆಯರ ಕ್ಯಾನೊಯ್ ಸ್ಪ್ರಿಂಟ್ ವಾ 200 ಮೀಟರ್ಸ್ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದಾರೆ. ವಿಎಲ್2 ಕ್ಲಾಸ್ ವಿಭಾಗದ ಮೊದಲ ಹೀಟ್‌ನಲ್ಲಿ ಅವರು 1 ನಿಮಿಷ 11.098 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಪ್ರಾಚಿ ಅವರ ಸೊಂಟದಿಂದ ಕೆಳಗಿನ ಭಾಗಕ್ಕೆ ಪಾರ್ಶ್ವವಾಯು ಬಾಧಿಸಿದೆ. ರಾಷ್ಟ್ರೀಯ ಮಟ್ಟದಲ್ಲಿ ಅವರು ಈಜುಪಟುವಾಗಿದ್ದರು. ಕೋಚ್ ವೀರೇಂದ್ರ ಕುಮಾರ್ ಸಲಹೆಯ ಮೇರೆಗೆ ಕ್ಯಾನೊಯಿಂಗ್ ಆಯ್ಕೆ ಮಾಡಿಕೊಂಡಿದ್ದಾರೆ.

New Store in HSR Layout
Safe Shopping Experience
Shop on call 1800 266 0123
ಸ್ಯಾರೀಸ್, ಲೆಹಂಗಾಸ್, ಸೂಟ್ ಸೆಟ್ಸ್, ಬ್ಲೌಸಸ್, ಫ್ಯಾಬ್ರಿಕ್ಸ್

HSR Layout 27th Main Road, 1st Sector, Ph: 080-41711715, **Jayanagar** 3rd Block, 11th Main Road, Jayanagar East, Ph: 080-48528312, **Indiranagar** No. 283, 100 Feet Road, HAL 2nd Stage, Defence Colony, Ph: 080-4854 0026, **Orion Mall** No. 116, 2nd Floor, 26/1, Brigade Gateway, Dr. Rajkumar Road, Ph: 080-2268 2310, **Phoenix Market City Mall**, G-28 Lower Ground Floor, Mahadevpura, Ph: 080-49626263.